ಶುಕ್ರವಾರ, ಮೇ 2, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 121 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಜ್ಯದಲ್ಲಿ ಹೆಚ್ಚಿದ ಜಿಎಸ್‌ಟಿ ಸಂಗ್ರಹ

₹17,815 ಕೋಟಿ — 2025ರ ಏಪ್ರಿಲ್‌ನಲ್ಲಿ ಕರ್ನಾಟಕದಲ್ಲಿ ಸಂಗ್ರಹವಾದ ಜಿಎಸ್‌ಟಿ

₹15,978 ಕೋಟಿ — 2024ರ ಏಪ್ರಿಲ್‌ನಲ್ಲಿ ಸಂಗ್ರಹವಾಗಿದ್ದ ಜಿಎಸ್‌ಟಿ

ಆಳ-ಅಗಲ
ಜಾತಿ ಗಣತಿ ಶತಮಾನದ ಹಾದಿ
'ಹಂಪನಾ ಅವಧಿಯಲ್ಲೇ ಹಣ ದುರುಪಯೋಗ' 4A
'₹575 ಕೋಟಿ ಎಲ್ಲಿ ಸಾಲುತ್ತದೆ?' 5
ರಂಗದ ಮೇಲೆ 'ಎದೆಗೆ ಬಿದ್ದ ಅಕ್ಷರ' 4B
256 ಲಕ್ಷ ಟನ್ ಗೋಧಿ ಖರೀದಿ 8
ಈ ವರ್ಷ ಜಿಎಸ್‌ಟಿ ಸಂಗ್ರಹದಲ್ಲಿ ಶೇ 11ರಷ್ಟು ಹೆಚ್ಚಳ
ಜಿಎಸ್‌ಟಿ ಸಂಗ್ರಹದಲ್ಲಿ ಮಹಾರಾಷ್ಟ್ರ, ಕರ್ನಾಟಕ ರಾಜ್ಯಗಳು ಮೊದಲ ಎರಡು ಸ್ಥಾನಗಳಲ್ಲಿ ಇವೆ

ನಿವೃತ್ತಿ ವೇಳೆ ₹10 ಲಕ್ಷ ಇಡುಗಂಟು, ₹6,000 ಪಿಂಚಣಿ: ಸರ್ಕಾರದ ನಿರ್ಧಾರ

ಪೌರಕಾರ್ಮಿಕರ ವೇತನ ₹39,000

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಯಂ ನೇಮಕಾತಿ ಸೌಲಭ್ಯ ಪಡೆದಿರುವ 12,692 ಪೌರಕಾರ್ಮಿಕರಿಗೆ ಇನ್ನು ಮುಂದೆ ತಿಂಗಳಿಗೆ ₹39,000 ವೇತನ, ನಿವೃತ್ತಿಯ ವೇಳೆ ₹10 ಲಕ್ಷ ಇಡುಗಂಟು ಮತ್ತು ₹6,000 ಪಿಂಚಣಿ ಸಿಗಲಿದೆ.

ಬಿಬಿಎಂಪಿಯು ಗುರುವಾರ ಆಯೋಜಿಸಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ 12,692 ಪೌರ ಕಾರ್ಮಿಕರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾಯಂ ನೇಮಕಾತಿ ಪತ್ರ ವಿತರಿಸಿದರು.

ಬಳಿಕ ಮಾತನಾಡಿದ ಅವರು, 'ಸ್ವಚ್ಛತಾ ಕೆಲಸ ಕೀಳಲ್ಲ. ಅದು ಗೌರವಯುತವಾದ ಕೆಲಸ. ಪಾಲಿಕೆ ಆಯುಕ್ತರಿಗೆ ಸಿಗುವ ಗೌರವ, ಪೌರಕಾರ್ಮಿಕರಿಗೂ ಸಿಗಬೇಕು. ಅವರು ಗೌರವಯುತವಾದ ಜೀವನ ನಡೆಸುವಂತಾಗಲಿ ಎಂದು ಕಾಯಂ ಆದ ಪೌರಕಾರ್ಮಿಕರಿಗೆ ತಿಂಗಳಿಗೆ ₹39,000 ವೇತನ ನಿಗದಿ ಮಾಡಲಾಗಿದೆ' ಎಂದರು.

'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ಕಾರ್ಯನಿರ್ವಹಿಸುತ್ತಿರುವ 'ಡಿ' ದರ್ಜೆ ನೌಕರರಿಗೆ ಸಿಗುವ ಸಂಬಳ, ಇತರ ಎಲ್ಲ ಸವಲತ್ತುಗಳು ಪೌರಕಾರ್ಮಿಕರಿಗೂ ಸಿಗಲಿವೆ' ಎಂದರು.

'ನಾನು ವಿರೋಧ ಪಕ್ಷದಲ್ಲಿ ಇದ್ದಾಗ ಸೇವೆ ಕಾಯಂಗೆ ಆಗ್ರಹಿಸಿ ಪೌರಕಾರ್ಮಿಕರು ಹೋರಾಟ ನಡೆಸಿದ್ದರು. ಹೋರಾಟದ ಸ್ಥಳಕ್ಕೆ ತೆರಳಿದ್ದ ನಾನು, 'ಈ ಬಗ್ಗೆ ಸರ್ಕಾರದ ಗಮನ ಸೆಳೆಯುತ್ತೇವೆ. ಬಿಜೆಪಿ ಸರ್ಕಾರ ಆ ಕೆಲಸ ಮಾಡದೇ ಇದ್ದರೆ, ನಾವು ಅಧಿಕಾರಕ್ಕೆ ಬಂದಾಗ ಕಾಯಂ ಮಾಡುತ್ತೇವೆ' ಎಂದು ಮಾತುಕೊಟ್ಟಿದ್ದೆ. ಆ ಮಾತನ್ನು ಉಳಿಸಿ ಕೊಂಡಿದ್ದೇವೆ' ಎಂದರು.

8ನೇ ಪುಟ ನೋಡಿ



ಕಾಯಂ ನೇಮಕಾತಿ ಪತ್ರ ವಿತರಿಸಿದ ಸಿದ್ದರಾಮಯ್ಯ ಅವರು ಪೌರಕಾರ್ಮಿಕರ ಜತೆ ಸಂತಸ ಹಂಚಿಕೊಂಡರು. ಬೈರತಿ ಸುರೇಶ್, ಡಿ.ಕೆ. ಶಿವಕುಮಾರ್, ರಣದೀಪ್ ಸಿಂಗ್ ಸುರ್ಜೇವಾಲಾ, ಮಲ್ಲಿಕಾರ್ಜುನ ಖರ್ಗೆ, ಕೆ.ಎಚ್. ಮುನಿಯಪ್ಪ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ರಾಜ್ಯದ ಎಲ್ಲೆಡೆ ಕಾಯಂ ಮಾಡಿ: ಖರ್ಗೆ

'ಬಿಬಿಎಂಪಿ ವ್ಯಾಪ್ತಿಯಲ್ಲಿ ಪೌರಕಾರ್ಮಿಕರನ್ನು ಕಾಯಂ ಮಾಡಿರುವ ರಾಜ್ಯ ಸರ್ಕಾರದ ಕ್ರಮ ಸ್ವಾಗತಾರ್ಹ. ರಾಜ್ಯದ ಎಲ್ಲ ಪಾಲಿಕೆ, ನಗರಸಭೆ, ಪುರಸಭೆಗಳಲ್ಲಿ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಇರುವ ಪೌರಕಾರ್ಮಿಕರನ್ನು ಕಾಯಂ ಮಾಡಬೇಕು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಕಾರ್ಯಕ್ರಮದಲ್ಲಿ ತಮ್ಮ ಮಾತಿನ ವೇಳೆ ಈ ಬಗ್ಗೆ ಪ್ರಸ್ತಾಪಿಸಿದ ಮುಖ್ಯಮಂತ್ರಿ ಸಿದ್ದರಾಮಯ್ಯ, 'ರಾಜ್ಯದಲ್ಲಿ 38,000 ಪೌರ ಕಾರ್ಮಿಕರು ಇದ್ದಾರೆ. ಅವರೆಲ್ಲರನ್ನೂ ಕಾಯಂಗೊಳಿಸುವ ಇಚ್ಛೆ ಇದೆ. ಪರಿಶೀಲನೆ ನಡೆಸಿ, ಹಂತಹಂತವಾಗಿ ಕ್ರಮ ತೆಗೆದು-ಕೊಳ್ಳಲಾಗುತ್ತದೆ' ಎಂದರು.

'ಸ್ವಚ್ಛತಾ ಕಾರ್ಯದಲ್ಲಿ ತೊಡಗಿರುವ ಚಾಲಕರು, ವಾಹನ ಸಹಾಯಕರು ಮತ್ತು ಆಪರೇಟರ್‌ಗಳನ್ನು ಪೌರಕಾರ್ಮಿಕರು ಕಾಯಂ ನೇಮಕಾತಿಯಲ್ಲಿ ಸೇರಿಲ್ಲ. ಇಂತಹ 9,000 ಪೌರ ಕಾರ್ಮಿಕರು ಇದ್ದಾರೆ. ಆ ಬಗ್ಗೆ ಪರಿಶೀಲನೆ ನಡೆಸಿ, ಎಲ್ಲರಿಗೂ ಕಾಯಂ ನೇಮಕಾತಿ ಸಿಗುವಂತೆ ಮಾಡುತ್ತೇವೆ' ಎಂದರು.

8ನೇ ಪುಟ ನೋಡಿ

'ಕಾರ್ಮಿಕರ ಹಕ್ಕು ಕಸಿಯುತ್ತಿರುವ ಮೋದಿ'

'ಕಾರ್ಮಿಕರ ಸಬಲೀಕರಣಕ್ಕಾಗಿ ಹಿಂದಿನ ಕೇಂದ್ರ ಸರ್ಕಾರಗಳು ರೂಪಿಸಿದ್ದ 44 ಕಾರ್ಮಿಕ ಕಾನೂನುಗಳನ್ನು ರದ್ದುಪಡಿಸಿ, 4 ಕಾನೂನುಗಳನ್ನು ನರೇಂದ್ರ ಮೋದಿ ಸರ್ಕಾರ ಜಾರಿಗೆ ತಂದಿದೆ. ಕಾರ್ಮಿಕರ ಹಕ್ಕುಗಳನ್ನು ಕಿತ್ತುಕೊಂಡಿದೆ' ಎಂದು ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

'ಬ್ರಿಟಿಷರ ಆಳ್ವಿಕೆಯಲ್ಲಿ ಭಾರತೀಯ ಕಾರ್ಮಿಕರಿಗೆ 12 ತಾಸು ಮತ್ತು ಬ್ರಿಟನ್‌ನ ಕಾರ್ಮಿಕರಿಗೆ 8 ತಾಸು ದುಡಿಮೆಯ ಅವಧಿ ನಿಗದಿ ಮಾಡಲಾಗಿತ್ತು. ಬಿ.ಆರ್. ಅಂಬೇಡ್ಕರ್ ಅವರು 1930ರ ದಶಕದಲ್ಲಿ ವೈಸ್‌ರಾಯ್ ಸಮಿತಿ ಮುಂದೆ ಈ ತಾರತಮ್ಯವನ್ನು ಹಲವು ಬಾರಿ ಖಂಡಿಸಿದ್ದರು. ಪರಿಣಾಮವಾಗಿ ಭಾರತೀಯ ಕಾರ್ಮಿಕರ ದುಡಿಮೆಯ ಅವಧಿಯನ್ನೂ 8 ಗಂಟೆಗೆ ಇಳಿಸಲಾಗಿತ್ತು. ಈಗ 10 ತಾಸಿನವರೆಗೂ ಕೆಲಸ ಮಾಡಿಸಬಹುದು ಎಂದು ಮೋದಿ ಸರ್ಕಾರ ಕಾನೂನು ರೂಪಿಸಿದೆ. ಸರ್ಕಾರದ ಈ ಕ್ರಮದಿಂದ ಮೋದಿ ಅವರ ಕಾರ್ಪೊರೇಟ್ ಗೆಳೆಯರಿಗೆ, ಶ್ರೀಮಂತರಿಗೆ ಲಾಭವಾಗುತ್ತದೆ' ಎಂದು ಅವರು ಹೇಳಿದರು.




ರಸ್ತೆಯಲ್ಲಿ ನೀರು ಬೆಂಗಳೂರಿನಲ್ಲಿ ಗುರುವಾರ ರಾತ್ರಿ ಸುರಿದ ಧಾರಾಕಾರ ಮಳೆಗೆ ನೀರಿನಿಂದ ಆವೃತವಾದ ಎಸ್‌ಜೆಪಿ ರಸ್ತೆಯಲ್ಲಿ ವಾಹನಗಳು ಸಾಗಿದವು ಚಿತ್ರ: ಪ್ರಶಾಂತ ಎಚ್. ಜಿ.

5B ಪುಟ ನೋಡಿ

ಹಮ್‌ದರ್ದ್ ವಿರುದ್ಧದ ಮಾತು ಅಳಿಸಲು ತಾಕೀತು

ನವದೆಹಲಿ (ಪಿಟಿಐ): 'ರೂಹ್ ಅಫ್ಜಾ' ಪಾನೀಯ ತಯಾರಿಕಾ ಕಂಪನಿ ಹಮ್‌ದರ್ದ್ ಅನ್ನು ಗುರಿಯಾಗಿಸಿಕೊಂಡಿರುವ ನಿಂದನಾತ್ಮಕ ವಿಡಿಯೊವನ್ನು ಸಾಮಾಜಿಕ ತಾಲತಾಣಗಳಿಂದ 24 ಗಂಟೆಗಳಲ್ಲಿ ತೆಗೆಯಬೇಕು ಎಂದು ಯೋಗ ಗುರು ಬಾಬಾ ರಾಮದೇವಅವರಿಗೆದೆಹಲಿಹೈಕೋರ್ಟ್ ಗುರುವಾರ ತಾಕೀತು ಮಾಡಿದೆ.



ರಾಮ್‌ದೇವ

ಈ ಪಾನೀಯವನ್ನು ಉದ್ದೇಶಿಸಿ ರಾಮದೇವ ಅವರು 'ಶರಬತ್ ಜಿಹಾದ್' ಎನ್ನುವ ಮಾತು ಆಡಿರುವುದು ವಿವಾದಕ್ಕೆ ಗುರಿಯಾಗಿದೆ. ಈ ಮಾತು ನ್ಯಾಯಾಂಗ ನಿಂದನೆಯೂ ಹೌದು ಎಂದು ಆರೋಪಿಸಲಾಗಿದೆ.

ಹಮ್‌ದರ್ದ್ ಸೇರಿದಂತೆ ಎದುರಾಳಿ ಕಂಪನಿಗಳ ಉತ್ಪನ್ನಗಳ ಬಗ್ಗೆ ಯಾವುದೇ ಹೇಳಿಕೆ ನೀಡಬಾರದು, ವಿಡಿಯೊಗಳನ್ನು ಹಂಚಿಕೊಳ್ಳಬಾರದು ಎಂದು ರಾಮದೇವ ಅವರಿಗೆ ಕೋರ್ಟ್ ಈ ಹಿಂದೆಯೇ ಸೂಚನೆ ನೀಡಿತ್ತು. ಆದರೆ, ರಾಮದೇವ ಅವರು ಅಪಮಾನಕಾರಿ ಆಗಿರುವ ವಿಡಿಯೊ ಒಂದನ್ನು ಮತ್ತೆ ಹಂಚಿಕೊಂಡಿದ್ದಾರೆ ಎಂದು ಹಮ್‌ದರ್ದ್ ಪರ ವಕೀಲರು ನ್ಯಾಯಾಲಯಕ್ಕೆ ಗುರುವಾರ ತಿಳಿಸಿದರು.

> **ರಾಮದೇವ ಅವರು ಯಾರ ನಿಯಂತ್ರಣದಲ್ಲಿಯೂ ಇಲ್ಲ. ಅವರು ತಮ್ಮದೇ ಆದ ಜಗತ್ತಿನಲ್ಲಿ ಇದ್ದಾರೆ**
> **ಅಮಿತ್ ಬನ್ಸಲ್,** ನ್ಯಾಯಮೂರ್ತಿ, ದೆಹಲಿ ಹೈಕೋರ್ಟ್

ಇದನ್ನು ಆಲಿಸಿದ ನ್ಯಾಯಾಲಯವು, ಹಮ್‌ದರ್ದ್ ಉತ್ಪನ್ನಗಳ ಬಗ್ಗೆ ಉಲ್ಲೇಖವಿರುವ ವಿಡಿಯೊವನ್ನು 24 ಗಂಟೆಗಳಲ್ಲಿ ತೆಗೆದುಹಾಕಬೇಕು ಎಂದು ರಾಮದೇವ ಅವರಿಗೆ ತಾಕೀತು ಮಾಡಿತು.



'ಹಿಂದಿನ ಆದೇಶದ ಹಿನ್ನೆಲೆಯಲ್ಲಿ ಗಮನಿಸಿದಾಗ, ನೀವು ಸಲ್ಲಿಸಿರುವ ಪ್ರಮಾಣಪತ್ರ ಹಾಗೂ ವಿಡಿಯೊ ನ್ಯಾಯಾಂಗ ನಿಂದನೆಯಂತೆ ಇದೆ ಎಂಬುದು ಮೇಲ್ನೋಟಕ್ಕೆ ಅನ್ನಿಸುತ್ತಿದೆ. ನಾನು ಈಗ ನ್ಯಾಯಾಂಗ ನಿಂದನೆ ನೋಟಿಸ್ ಹೊರಡಿಸಲಿದ್ದೇನೆ. ನಾವು ಅವರನ್ನು ಇಲ್ಲಿಗೆ ಬರಹೇಳಲಿದ್ದೇವೆ' ಎಂದು ನ್ಯಾಯಮೂರ್ತಿ ಅಮಿತ್ ಬನ್ಸಲ್ ಹೇಳಿದರು.

ವಿವಾದಾತ್ಮಕ ಹೇಳಿಕೆಯ ಕಾರಣಕ್ಕಾಗಿ ಹಮ್‌ದರ್ದ್ ನ್ಯಾಷನಲ್ ಫೌಂಡೇಷನ್ ಇಂಡಿಯಾ ಸಂಸ್ಥೆಯು ರಾಮದೇವ ಮತ್ತು ಅವರ ಪತಂಜಲಿ ಫುಡ್ಸ್ ಲಿಮಿಟೆಡ್ ಕಂಪನಿಯ ವಿರುದ್ಧ ಅರ್ಜಿ ಸಲ್ಲಿಸಿದೆ.

8ನೇ ಪುಟ ನೋಡಿ

ಎಸ್‌ಎಸ್‌ಎಲ್‌ಸಿ ಫಲಿತಾಂಶ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ ಫಲಿತಾಂಶ ಶುಕ್ರವಾರ (ಮೇ 2) ಬೆಳಿಗ್ಗೆ 11.30ಕ್ಕೆ ಪ್ರಕಟವಾಗಲಿದೆ. ಮಧ್ಯಾಹ್ನ 12.30ರ ಬಳಿಕ karresults.nic.in ನಲ್ಲಿ ಫಲಿತಾಂಶ ವೀಕ್ಷಿಸಬಹುದು.



ಮಾರ್ಚ್ 21ರಿಂದ ಏಪ್ರಿಲ್ 4ರವರೆಗೆ ಪರೀಕ್ಷೆ ನಡೆದಿತ್ತು. ಈ ಬಾರಿ 2,818 ಕೇಂದ್ರಗಳಲ್ಲಿ 4.34 ಲಕ್ಷ ಬಾಲಕಿಯರು ಸೇರಿ ಒಟ್ಟು 8.95 ಲಕ್ಷ ವಿದ್ಯಾರ್ಥಿಗಳು ಪರೀಕ್ಷೆ ಬರೆದಿದ್ದಾರೆ.

'ಬೆಳಿಗ್ಗೆ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರು ಸುದ್ದಿಗೋಷ್ಠಿಯಲ್ಲಿ ಫಲಿತಾಂಶದ ವಿವರ ಪ್ರಕಟಿಸುವರು' ಎಂದು ಪ್ರಕಟಣೆ ತಿಳಿಸಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಕುಡುಪುವಿನಲ್ಲಿ ನಡೆದ ಸಾವು ಪ್ರಕರಣ; ಮತ್ತೊಬ್ಬ ಆರೋಪಿ ಬಂಧನ

ಹಲ್ಲೆ: ಮೂವರ ಅಮಾನತು

ಪ್ರಜಾವಾಣಿ ವಾರ್ತೆ

ಮಂಗಳೂರು: ಕುಡುಪುವಿನಲ್ಲಿ ಈಚೆಗೆ ಗುಂಪು ಹಲ್ಲೆಯಿಂದ ಕೇರಳದ ಯುವಕ ಮೊಹಮ್ಮದ್ ಅಶ್ರಫ್ ಮೃತಪಟ್ಟ ಪ್ರಕರಣ ಸಂಬಂಧ ಮಂಗಳೂರು ಗ್ರಾಮಾಂತರ ಪೊಲೀಸ್ ಠಾಣೆಯ ಇನ್‌ಸ್ಪೆಕ್ಟರ್ ಶಿವಕುಮಾರ್ ಕೆ.ಆರ್., ಹೆಡ್ ಕಾನ್‌ಸ್ಟೆಬಲ್ ಚಂದ್ರ ಪಿ. ಹಾಗೂ ಕಾನ್‌ಸ್ಟೆಬಲ್ ಯಲ್ಲಾಲಿಂಗ ಅವರನ್ನು ಅಮಾನತು ಮಾಡಲಾಗಿದೆ.

'ಪ್ರಕರಣದ ತನಿಖೆ ಚುರುಕಿನಿಂದ ನಡೆಯುತ್ತಿದೆ. 20 ಆರೋಪಿಗಳನ್ನು ಈಗಾಗಲೇ ಬಂಧಿಸಿದ್ದು, ಈಗ ಇನ್ನೊಬ್ಬ ಆರೋಪಿ ಅನಿಲ್ ಎಂಬಾತನನ್ನು ಬಂಧಿಸಿದ್ದೇವೆ' ಎಂದು ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ತಿಳಿಸಿದರು.

'ಈ ಕೃತ್ಯದಲ್ಲಿ ಭಾಗಿಯಾಗಿರುವ ಇನ್ನಷ್ಟು ಮಂದಿ ತಲೆ ಮರೆಸಿಕೊಂಡಿದ್ದು, ಅವರ ಪತ್ತೆಗೆ ಪೊಲೀಸರ ತಂಡಗಳು ಹುಡುಕಾಟ ನಡೆಸುತ್ತಿವೆ. ಇನ್ನು ಕೆಲವರು ಈ ಕೃತ್ಯದಲ್ಲಿ ನಿಜವಾಗಿಯೂ ಶಾಮೀಲಾಗಿದ್ದಾರೆಯೇ ಇಲ್ಲವೇ ಎಂಬ ಬಗ್ಗೆ ಸಂದೇಹಗಳಿವೆ. ಕೃತ್ಯ ನಡೆದಾಗ ಸ್ಥಳ-ದಲ್ಲಿದ್ದ ಇನ್ನೂ 15 ಮಂದಿಗೆ ನೋಟಿಸ್ ನೀಡಿ ವಿಚಾರಣೆಗೆ ಹಾಜರಾಗಲು ಸೂಚಿಸಿದ್ದೇವೆ. ಸಿಸಿಟಿವಿ ಕ್ಯಾಮೆರಾಗಳಲ್ಲಿ ದಾಖಲಾದ ದೃಶ್ಯಗಳು ಹಾಗೂ ಪ್ರತ್ಯಕ್ಷ-ದರ್ಶಿಗಳ ಹೇಳಿಕೆಗಳನ್ನು ಆಧರಿಸಿ ಈ ಪ್ರಕರಣದಲ್ಲಿ ಶಾಮೀಲಾಗಿರುವವರ ಪತ್ತೆಗೆ ಕ್ರಮವಹಿಸಿದ್ದೇವೆ' ಎಂದರು.

'ಏ. 27ರಂದು ಆರಂಭದಲ್ಲಿ ದೇವಸ್ಥಾನದ ಹತ್ತಿರ ಶವ ಬಿದ್ದ ಮಾಹಿತಿ ಮಾತ್ರ ಗ್ರಾಮಾಂತರ ಪೊಲೀಸ್ ಠಾಣೆಗೆ ಸಿಕ್ಕಿತ್ತು' ಎಂದರು.

8ನೇ ಪುಟ ನೋಡಿ

ಪಾಕ್ ಪರ ಘೋಷಣೆ, ಸಾಕ್ಷ್ಯ ಸಿಕ್ಕಿಲ್ಲ: ಕಮಿಷನರ್

'ಆರೋಪಿಗಳು ಹಾಗೂ ಪ್ರತ್ಯಕ್ಷದರ್ಶಿ ಸಾಕ್ಷಿಗಳು ನೀಡಿರುವ ಹೇಳಿಕೆಗಳ ಪ್ರಕಾರ, ಅಶ್ರಫ್‌ಗೆ ಸಚಿನ್ ಹೊಡೆಯುತ್ತಿದ್ದನ್ನು ಮಾತ್ರ ಅವರು ನೋಡಿದ್ದಾರೆ. ಗುಂಪುಗೂಡಿದ್ದ ಜನರು ಅದನ್ನು ನೋಡಿ, ಅವರೂ ಹಲ್ಲೆ ನಡೆಸಿದ್ದಾರೆ. ಸಚಿನ್ ಏಕೆ ಹೊಡೆಯುತ್ತಿದ್ದ ಎಂಬುದು ಅವರಿಗೆ ಗೊತ್ತಿಲ್ಲ. ಪಾಕ್ ಪರ ಘೋಷಣೆ ಕೂಗಿದ್ದ ಎಂಬುದಕ್ಕೆ ಸಾಕ್ಷ್ಯ ಇನ್ನೂ ಸಿಕ್ಕಿಲ್ಲ' ಎಂದು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಪ್ರತಿಕ್ರಿಯಿಸಿದರು.

8ನೇ ಪುಟ ನೋಡಿ

'ಅಮಾಯಕರ ಬಂಧನ'

'ಈ ಗುಂಪು ಹಲ್ಲೆ ಮತ್ತು ಹತ್ಯೆಯ ರಾಜಕೀಯ ಲಾಭ ಪಡೆಯಲು ಕಾಂಗ್ರೆಸ್ ಹಾಗೂ ಎಸ್‌ಡಿಪಿಐನವರು ಪ್ರಯತ್ನಿಸುತ್ತಿದ್ದು ತಮಗೆ ಆಗದವರನ್ನು ಬೊಟ್ಟು ಮಾಡಿ ಆರೋಪಿಗಳೆಂದು ಬಿಂಬಿಸುತ್ತಿದ್ದಾರೆ. ಇದಕ್ಕೆ ಮಣಿದು ಅಮಾಯಕರನ್ನು ಬಂಧಿಸುವುದನ್ನು ನಿಲ್ಲಿಸದಿದ್ದರೆ ಪೊಲೀಸ್ ಠಾಣೆಗೆ ಮುತ್ತಿಗೆ ಹಾಕಲಾಗುವುದು' ಎಂದು ಮಂಗಳೂರು ಉತ್ತರ ಕ್ಷೇತ್ರದ ಶಾಸಕ, ಬಿಜೆಪಿಯ ಡಾ.ವೈ.ಭರತ್ ಶೆಟ್ಟಿ ಎಚ್ಚರಿಕೆ ನೀಡಿದರು.

8ನೇ ಪುಟ ನೋಡಿ

> **ಕುಡುಪು ಬಳಿ ನಡೆದ ಹತ್ಯೆಗೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಮಾಹಿತಿ ಹಂಚಿಕೊಂಡವರ ವಿರುದ್ಧ ಮೂರು ಪ್ರಕರಣ ದಾಖಲಿಸಿಕೊಳ್ಳಲಾಗಿದೆ**
> **ಅನುಪಮ್ ಅಗ್ರವಾಲ್,** ಮಂಗಳೂರು ಪೊಲೀಸ್ ಕಮಿಷನರ್

ರೆವೆನ್ಯೂ ಕಾರ್ಯದರ್ಶಿಯಾಗಿ ಶ್ರೀವಾಸ್ತವ

ನವದೆಹಲಿ: ಹಣಕಾಸು ಸಚಿವಾಲಯದ ರೆವೆನ್ಯೂ ಕಾರ್ಯದರ್ಶಿಯಾಗಿ ಕರ್ನಾಟಕ ಕೇಡರ್‌ನ ಹಿರಿಯ ಐಎಎಸ್ ಅಧಿಕಾರಿ ಅರವಿಂದ ಶ್ರೀವಾಸ್ತವ ಗುರುವಾರ ಅಧಿಕಾರ ಸ್ವೀಕರಿಸಿದರು.



1994ನೇ ಸಾಲಿನ ಐಎಎಸ್ ಅಧಿಕಾರಿಯಾದ ಅವರು ಪ್ರಧಾನಮಂತ್ರಿ ಕಚೇರಿಯಲ್ಲಿ ಜಂಟಿ ಕಾರ್ಯದರ್ಶಿ ಹಾಗೂ ಹೆಚ್ಚುವರಿ ಕಾರ್ಯದರ್ಶಿಯಾಗಿ ಕಾರ್ಯನಿರ್ವಹಿಸಿದ್ದರು.

ಇದಕ್ಕೂ ಮೊದಲು, ಶ್ರೀವಾಸ್ತವ ಅವರು ಹಣಕಾಸು ಸಚಿವಾಲಯದ ಆರ್ಥಿಕ ವ್ಯವಹಾರಗಳ ಇಲಾಖೆಯ ಬಜೆಟ್ ವಿಭಾಗದಲ್ಲಿ ಜಂಟಿ ಕಾರ್ಯದರ್ಶಿ ಆಗಿ, ಏಷ್ಯನ್ ಅಭಿವೃದ್ಧಿ ಬ್ಯಾಂಕಿನಲ್ಲಿ ಅಭಿವೃದ್ಧಿ ಅಧಿಕಾರಿ, ಕರ್ನಾಟಕ ಹಣಕಾಸು ಇಲಾಖೆಯ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಮತ್ತು ಕರ್ನಾಟಕದ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮದ ವ್ಯವಸ್ಥಾಪಕ ನಿರ್ದೇಶಕರಾಗಿ ಕೆಲಸ ಮಾಡಿದ್ದರು.

ಅಟ್ಟಾರಿ– ವಾಘಾ ಗಡಿ ಸಂಪೂರ್ಣ ಬಂದ್

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ನಡುವಣ ಸಂಪರ್ಕದ ಕೊಂಡಿಯಾಗಿದ್ದ ಅಟ್ಟಾರಿ– ವಾಘಾ ಗಡಿಯನ್ನು ಗುರುವಾರ ಸಂಪೂರ್ಣ ಮುಚ್ಚಲಾಗಿದೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರದ ಕ್ರಮ ಕೈಗೊಂಡಿದ್ದ ಭಾರತ, ಪಾಕಿಸ್ತಾನದ ಪ್ರಜೆಗಳಿಗೆ ನೀಡಿದ್ದ ವೀಸಾ ರದ್ದುಗೊಳಿಸಿತ್ತು. ಏ.29ರ ಒಳಗಾಗಿ ದೇಶ ತೊರೆಯುವಂತೆಯೂ ಸೂಚಿಸಿತ್ತು. ಆ ಬಳಿಕ ಎರಡೂ ಕಡೆಯ ಜನರು ಈ ಗಡಿ ಮೂಲಕ ಸ್ವದೇಶಕ್ಕೆ ಮರಳಲು ಮುಂದಾದ ಕಾರಣ ಒಂದು ವಾರ ಗಡಿಯಲ್ಲಿ ನೂಕುನುಗ್ಗಲು ಉಂಟಾಗಿತ್ತು.

4A ಪುಟ ನೋಡಿ

ಪಿಒಕೆ: ಮದರಸಾ ಮುಚ್ಚಲು ನಿರ್ಧಾರ

ಮುಜಫ್ಫರಾಬಾದ್ (ರಾಯಿಟರ್ಸ್): ಭಾರತದಿಂದ ಪ್ರತೀಕಾರದ ದಾಳಿ ನಡೆಯುವ ಆತಂಕದ ಕಾರಣ ಪಾಕಿಸ್ತಾನ ಆಕ್ರಮಿತ ಕಾಶ್ಮೀರದ (ಪಿಒಕೆ) ಎಲ್ಲ ಮದರಸಾಗಳನ್ನು 10 ದಿನ ಮುಚ್ಚಲು ಸ್ಥಳೀಯ ಸರ್ಕಾರ ನಿರ್ಧರಿಸಿದೆ.

ಭಾರತವು ತನ್ನ ವಿರುದ್ಧ ಶೀಘ್ರದಲ್ಲೇ ಸೇನಾ ಕಾರ್ಯಾಚರಣೆ ಆರಂಭಿಸಲಿದೆ ಎಂಬುದು ಗುಪ್ತಚರ ಮಾಹಿತಿಯಿಂದ ತಿಳಿದು ಬಂದಿರುವುದಾಗಿ ಪಾಕಿಸ್ತಾನ ಹೇಳಿತ್ತು. 'ಮದರಸಾಗಳನ್ನು ಭಯೋತ್ಪಾದಕ ತರಬೇತಿ ಕೇಂದ್ರಗಳು ಎಂದು ಹೇಳಿ ಭಾರತದ ಸೇನೆಯು ಗುರಿಯಾಗಿಸುವ ಆತಂಕವಿರುವುದರಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಪಿಒಕೆ ಧಾರ್ಮಿಕ ವ್ಯವಹಾರಗಳ ಇಲಾಖೆಯ ನಿರ್ದೇಶಕ ಹಫೀಜ್ ನಜೀರ್ ಅಹ್ಮದ್ ತಿಳಿಸಿದ್ದಾರೆ.

4A ಪುಟ ನೋಡಿ

ಕಾರು ಬೆನ್ನಟ್ಟಿ ಬಜಪೆ ಬಳಿ ದುಷ್ಕರ್ಮಿಗಳಿಂದ ಕೃತ್ಯ

ರೌಡಿಶೀಟರ್ ಸುಹಾಸ್ ಶೆಟ್ಟಿ ಹತ್ಯೆ

ಪ್ರಜಾವಾಣಿ ವಾರ್ತೆ

ಮಂಗಳೂರು: ಹಿಂದುತ್ವಪರ ಕಾರ್ಯಕರ್ತ, ರೌಡಿ ಶೀಟರ್ ಸುಹಾಸ್ ಶೆಟ್ಟಿಯನ್ನು ದುಷ್ಕರ್ಮಿಗಳ ತಂಡವು ಬಜಪೆಯ ಕಿನ್ನಿಪದವಿನಲ್ಲಿ ತಲವಾರಿನಿಂದ ಬರ್ಬರವಾಗಿ ಕೊಚ್ಚಿ ಗುರುವಾರ ಹತ್ಯೆ ಮಾಡಿದೆ.



ಸುಹಾಸ್ ಶೆಟ್ಟಿ

ಬಜಪೆಯ ಸುಹಾಸ್ ಶೆಟ್ಟಿ ವಿರುದ್ಧ ಎರಡು ಕೊಲೆ ಪ್ರಕರಣಗಳೂ ಸೇರಿದಂತೆ ಐದು ಪ್ರಕರಣಗಳು ದಾಖಲಾಗಿದ್ದವು.

ಬಿಜೆಪಿ ಮುಖಂಡ ಪ್ರವೀಣ್ ನೆಟ್ಟಾರು ಹತ್ಯೆಯಾದ ಬೆನ್ನಲ್ಲೇ ಸುರತ್ಕಲ್‌ನಲ್ಲಿ 2022ರ ಜುಲೈ 28ರಂದು ನಡೆದಿದ್ದ ಕಾಟಿಪಳ್ಳ ಮಂಗಳಪೇಟೆಯ ಮಹಮ್ಮದ್ ಫಾಝಿಲ್ ಹತ್ಯೆ ಪ್ರಕರಣದಲ್ಲಿ ಸುಹಾಸ್ ಶೆಟ್ಟಿ ಪ್ರಮುಖ ಆರೋಪಿಯಾಗಿದ್ದ. ಕಳೆದ ವರ್ಷ ಜಾಮೀನಿನ ಮೇಲೆ ಹೊರಗೆ ಬಂದಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

'ಸುಹಾಸ್ ಶೆಟ್ಟಿ ಇನ್ನೊವಾ ಕಾರಿನಲ್ಲಿ ಸಹಚರರಾದ ಸಂಜಯ್, ಪ್ರಜ್ವಲ್, ಅನ್ವಿತ್, ಲತೀಶ್ ಹಾಗೂ ಶಶಾಂಕ್ ಜೊತೆ ತೆರಳುತ್ತಿದ್ದಾಗ ಐದಾರು ಮಂದಿ ದುಷ್ಕರ್ಮಿಗಳ ತಂಡ ಸ್ವಿಫ್ಟ್ ಕಾರು ಹಾಗೂ ಪಿಕಪ್ ವಾಹನದಲ್ಲಿ ಹಿಂಬಾಲಿಸಿತ್ತು. ಬಜಪೆ ಠಾಣೆ ವ್ಯಾಪ್ತಿಯ ಕಿನ್ನಿಪದವಿನಲ್ಲಿ ರಾತ್ರಿ 8.27ಕ್ಕೆ ಕಾರನ್ನು ಏಕಾಏಕಿ ಅಡ್ಡಗಟ್ಟಿ ಸುಹಾಸ್ ಶೆಟ್ಟಿ ಮೇಲೆ ಹಲ್ಲೆ ನಡೆಸಿತ್ತು. ತೀವ್ರವಾಗಿ ಗಾಯಗೊಂಡಿದ್ದ ಆತನನ್ನು ಎ.ಜೆ. ಆಸ್ಪತ್ರೆಗೆ ಕರೆತರಲಾಗಿತ್ತು. ಆದರೆ, ಅಷ್ಟರಲ್ಲೇ ಆತ ಅಸುನೀಗಿದ್ದ' ಎಂದು ಮಂಗಳೂರು ಪೊಲೀಸ್ ಕಮಿಷನರ್ ಅನುಪಮ್ ಅಗ್ರವಾಲ್ ಅವರು ಸುದ್ದಿಗಾರರಿಗೆ ತಿಳಿಸಿದರು.

'ದಾಳಿಯ ವೇಳೆ ಸುಹಾಸ್ ಶೆಟ್ಟಿಯ ಸಹಚರನೊಬ್ಬ ಗಾಯಗೊಂಡಿದ್ದಾನೆ. ಆತ ಎ.ಜೆ.ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ. ಬಜಪೆ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ. ಎಸಿಪಿ ನೇತೃತ್ವದಲ್ಲಿ ನಾಲ್ಕು ವಿಶೇಷ ತಂಡಗಳನ್ನು ರಚಿಸಿದ್ದೇವೆ' ಎಂದು ತಿಳಿಸಿದರು.

ಮೃತದೇಹ ಇರುವ ನಗರದ ಎ.ಜೆ. ಆಸ್ಪತ್ರೆಯ ಬಳಿ ಹಿಂದೂ ಸಂಘಟನೆಗಳ ಕಾರ್ಯಕರ್ತರು ಭಾರಿ ಸಂಖ್ಯೆಯಲ್ಲಿ ಸೇರಿದ್ದರು. ಶಾಸಕರಾದ ಡಾ.ವೈ.ಭರತ್ ಶೆಟ್ಟಿ, ಡಿ.ವೇದವ್ಯಾಸ ಕಾಮತ್, ಮಾಜಿ ಸಂಸದ ನಳಿನ್ ಕುಮಾರ್ ಕಟೀಲ್ ಎ.ಜೆ. ಆಸ್ಪತ್ರೆಗೆ ಭೇಟಿ ನೀಡಿದರು. ಆಸ್ಪತ್ರೆಯಲ್ಲೂ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ತನಿಖೆ ಎನ್‌ಐಎಗೆ ವಹಿಸಿ: 'ತಂಡವಾಗಿ ಬಂದು ಹಿಂದೂ ಕಾರ್ಯಕರ್ತನನ್ನು ನಿರ್ದಿಷ್ಟವಾಗಿ ಗುರುತಿಸಿ ಹತ್ಯೆ ಮಾಡಲಾಗಿದೆ. ಇದು ಪೂರ್ವ ಯೋಜಿತ ಕೃತ್ಯ. ಸರ್ಕಾರ ಆರೋಪಿಗಳನ್ನು ಬಂಧಿಸಬೇಕು. ಸಂತ್ರಸ್ತ ಕುಟುಂಬಕ್ಕೆ ಪರಿಹಾರ ನೀಡಬೇಕು. ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ)ಗೆ ವಹಿಸಬೇಕು' ಎಂದು ನಳಿನ್ ಕುಮಾರ್ ಕಟೀಲ್ ಒತ್ತಾಯಿಸಿದರು.

'ಈ ರೀತಿಯಲ್ಲಿ ನಮ್ಮ ಕಾರ್ಯಕರ್ತರನ್ನು ಗುರಿಯಾಗಿಸಿ ಹತ್ಯೆ ಮಾಡುವುದು ಬಹಳ ವರ್ಷಗಳಿಂದ ನಡೆದಿದೆ. ಉತ್ತರ ಕೊಡಲು ನಾವು ಸಮರ್ಥರಿದ್ದೇವೆ' ಎಂದರು.

'ಹಿಂದೂ ಕಾರ್ಯಕರ್ತನ ಬರ್ಬರ ಹತ್ಯೆ ಆಗಿದೆ. ರಾಜ್ಯದಲ್ಲಿ ಹಿಂದೂಗಳಿಗೆ ಉಳಿಗಾಲ ಇಲ್ಲದ ಸ್ಥಿತಿ ಇದೆ' ಎಂದು ಶಾಸಕ ಡಾ.ಭರತ್ ಶೆಟ್ಟಿ ಹೇಳಿದರು.

ಪ್ರತೀಕಾರದ ಹತ್ಯೆ?

ಕುಡುಪುವಿನಲ್ಲಿ ವಯನಾಡಿನ ಅಶ್ರಫ್ ಎಂಬಾತ ಗುಂಪು ಹಲ್ಲೆಗೆ ಒಳಗಾಗಿ ಹತ್ಯೆಗೀಡಾದ ಬೆನ್ನಲ್ಲೇ ಸುಹಾಸ್ ಶೆಟ್ಟಿ ಕೊಲೆ ನಡೆದಿದೆ. ಹಾಗಾಗಿ ಇದು ಪ್ರತೀಕಾರದ ಹತ್ಯೆ ಆಗಿರಬಹುದು ಎಂಬ ಚರ್ಚೆ ಎಲ್ಲೆಡೆ ನಡೆದಿದೆ.

ಈ ಕುರಿತ ಪ್ರಶ್ನೆಗೆ ಉತ್ತರಿಸಿದ ಪೊಲೀಸ್ ಕಮಿಷನರ್, 'ಇದನ್ನು ಪ್ರತೀಕಾರದ ಹತ್ಯೆ ಎಂದು ಈಗಲೇ ಹೇಳಲಾಗದು. ಕೊಲೆಯಾದ ಸ್ಥಳದಲ್ಲಿ ಸಿ.ಸಿ.ಟಿವಿ ಕ್ಯಾಮೆರಾಗಳಲ್ಲಿ ದಾಖಲಾದ ವಿಡಿಯೊ ದೃಶ್ಯ ಸಂಗ್ರಹಿಸುತ್ತಿದ್ದೇವೆ. ಅವುಗಳನ್ನು ನೋಡಿ, ಆರೋಪಿಗಳ ಗುರುತು ಪತ್ತೆ ಹಚ್ಚಿದ ಬಳಿಕವಷ್ಟೇ ಇದು ಪ್ರತೀಕಾರದ ಹತ್ಯೆ ಹೌದೋ ಅಲ್ಲವೋ ಎಂದು ತಿಳಿಯಲಿದೆ' ಎಂದರು.

₹80 ಕೋಟಿ ಖರ್ಚು • ವ್ಯರ್ಥವಾದ ಕಟ್ಟಡ, • ಎಪಿಎಂಸಿ ಆವರಣದಲ್ಲಿ ವಾಹನ ನಿಲುಗಡೆ ಸಮಸ್ಯೆ ತೀವ್ರ

ಬಹುಮಹಡಿ ಕಟ್ಟಡವಿದ್ದರೂ ತಪ್ಪದ ಸಂಕಟ

• ಆದಿತ್ಯ ಕೆ.ಎ.

ಬೆಂಗಳೂರು: ಇಲ್ಲಿನ ಯಶವಂತಪುರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ (ಎಪಿಎಂಸಿ) ಆವರಣದಲ್ಲಿ ನಿರ್ಮಿಸಿರುವ ಬಹುಮಹಡಿ ಪಾರ್ಕಿಂಗ್ ಕಟ್ಟಡದ ಕಾಮಗಾರಿ ಮುಕ್ತಾಯವಾಗಿ ಮೂರು ವರ್ಷ ಕಳೆದರೂ ಉದ್ಘಾಟನೆಗೆ ಕಾಲ ಕೂಡಿ ಬಂದಿಲ್ಲ. ಇದರಿಂದ ಎಪಿಎಂಸಿ ಆವರಣದಲ್ಲಿ ವಾಹನ ನಿಲುಗಡೆಯ ಸಮಸ್ಯೆ ದಿನದಿಂದ ದಿನಕ್ಕೆ ತೀವ್ರಗೊಳ್ಳುತ್ತಿದೆ.

ಮಧ್ಯವರ್ತಿಗಳು, ವರ್ತಕರು, ಕಾರ್ಮಿಕರು, ಮಳಿಗೆ ಮಾಲೀಕರು ಹಾಗೂ ರೈತರು ತಮ್ಮ ವಾಹನಗಳನ್ನು ಎಪಿಎಂಸಿ ಆವರಣದ ರಸ್ತೆಯ ಬದಿಯಲ್ಲೇ ನಿಲುಗಡೆ ಮಾಡುತ್ತಿದ್ದಾರೆ.

'ಈರುಳ್ಳಿ, ಬೆಳ್ಳುಳ್ಳಿ, ತೆಂಗಿನಕಾಯಿ ಹೊತ್ತು ತರುವ ಬೃಹತ್ ಲಾರಿಗಳು ಮಳಿಗೆಗಳ ಎದುರು ನಿಂತಿರುತ್ತವೆ. ಭಾರಿ ವಾಹನಗಳ ಮಧ್ಯೆ ಸಿಗುವ ಅಲ್ಪ ಜಾಗದಲ್ಲಿ ಲಘು ವಾಹನಗಳನ್ನು ನಿಲುಗಡೆ ಮಾಡುವ ಪರಿಸ್ಥಿತಿಯಿದೆ. ಒಂದು ವೇಳೆ ವಾಹನವನ್ನು ಬೆಳಿಗ್ಗೆಯೇ ಕೊಂಡೊಯ್ದು ನಿಲುಗಡೆ ಮಾಡಿದ್ದರೆ ವಾಪಸ್ ತೆಗೆದುಕೊಂಡು ಬರುವುದಕ್ಕೆ ಹರಸಾಹಸ ಮಾಡಬೇಕಿದೆ. ಕಟ್ಟಡ ಇದ್ದರೂ ನಮಗೆ ಸಂಕಟ ತಪ್ಪುತ್ತಿಲ್ಲ' ಎಂದು ತೆಂಗಿನಕಾಯಿ ವರ್ತಕ ಅಬ್ದುಲ್ ಲತೀಫ್ ನೋವು ತೋಡಿಕೊಂಡರು.

ಮಾರುಕಟ್ಟೆಯಲ್ಲಿ ಬುಧವಾರ ಸುತ್ತಾಟ ನಡೆಸಿದಾಗ ವಾಹನ ನಿಲುಗಡೆಗೆ ಕಾರು ಚಾಲಕರು ಹಾಗೂ ದ್ವಿಚಕ್ರ ವಾಹನ ಸವಾರರು ಪರದಾಡುತ್ತಿರುವ ದೃಶ್ಯ ಕಾಣಿಸಿತು. ಬಹುಮಹಡಿ ಕಟ್ಟಡದಲ್ಲಿ ಪಾರ್ಕಿಂಗ್‌ಗೆ ಅವಕಾಶ ಕಲ್ಪಿಸಿದ್ದರೆ ಸರಾಗವಾಗಿ ವಾಹನವನ್ನು ಕೊಂಡೊಯ್ಯಲು ಸಾಧ್ಯವಾಗುತ್ತಿತ್ತು ಎಂದು ಹಲವು ವರ್ತಕರು ಹೇಳಿದರು.



ಎಲ್ಲೆಂದರಲ್ಲಿ ನಿಂತಿರುವ ದ್ವಿಚಕ್ರ ವಾಹನಗಳು

'ಮತ್ತೊಮ್ಮೆ ಟೆಂಡರ್ ಆಹ್ವಾನ'

ಬಿಡ್ ಮೊತ್ತ ಕಡಿಮೆ ಮಾಡಿ ಮೂರನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗಿತ್ತು. ಸ್ವಾತಂತ್ರ್ಯ ಉದ್ಯಾನದಲ್ಲಿರುವ ಪಾರ್ಕಿಂಗ್ ಕಟ್ಟಡಕ್ಕೆ ಅನ್ವಯಿಸಿದ್ದ ಷರತ್ತುಗಳನ್ನೇ ಇಲ್ಲಿಯೂ ವಿಧಿಸಲಾಗಿತ್ತು. ಯಾರೂ ಆಸಕ್ತಿ ತೋರಲಿಲ್ಲ. ಇನ್ನೆರಡು ದಿನಗಳಲ್ಲಿ ನಾಲ್ಕನೇ ಬಾರಿಗೆ ಟೆಂಡರ್ ಆಹ್ವಾನಿಸಲಾಗುವುದು. ಕಟ್ಟಡದ ಬಳಕೆಗೆ ಕ್ರಮ ತೆಗೆದುಕೊಳ್ಳಲಾಗುವುದು

ಕೆ.ಸಿ.ದೊರೆಸ್ವಾಮಿ, ಕಾರ್ಯದರ್ಶಿ, ಯಶವಂತಪುರ ಎಪಿಎಂಸಿ



ವ್ಯರ್ಥವಾಗಿರುವ ಮಹುಮಹಡಿ ಕಟ್ಟಡ

ಕೋಟ್ಯಂತರ ರೂಪಾಯಿ ವ್ಯರ್ಥ: ಎಪಿಎಂಸಿ ಆವರಣದಲ್ಲಿ ದಟ್ಟಣೆ ನಿಯಂತ್ರಿಸಲು ಎಪಿಎಂಸಿ ನಿಧಿಯಿಂದ ₹80 ಕೋಟಿ ವೆಚ್ಚದಲ್ಲಿ ಸಕಲ ಸೌಲಭ್ಯಗಳು ಇರುವ 10 ಅಂತಸ್ತಿನ ಕಟ್ಟಡ ನಿರ್ಮಿಸಲಾಗಿದೆ. ಅಧಿಕಾರಿಗಳು ಬಳಸುವ ಮೂರು ವಾಹನಗಳನ್ನು ಕೆಳ ಅಂತಸ್ತಿನಲ್ಲಿ ನಿಲುಗಡೆ ಮಾಡಲು ಅವಕಾಶ ಕಲ್ಪಿಸಿರುವುದನ್ನು ಬಿಟ್ಟರೆ, ಸಾರ್ವಜನಿಕರ ಯಾವುದೇ ವಾಹನಗಳು ಅಲ್ಲಿ ನಿಲುಗಡೆ ಆಗುತ್ತಿಲ್ಲ. ಮುಖ್ಯ ದ್ವಾರದ ಗೇಟ್‌ಗಳು ಮೂರು ವರ್ಷದಿಂದಲೂ ಬೀಗ ಹಾಕಿದ ಸ್ಥಿತಿಯಲ್ಲೇ ಇವೆ.

2018ರಲ್ಲಿ ಕಟ್ಟಡದ ಕಾಮಗಾರಿ ಆರಂಭವಾಗಿತ್ತು. ಎರಡು ವರ್ಷ ಕಾಮಗಾರಿ ಚುರುಕಾಗಿ ಸಾಗಿತ್ತು. ಕೋವಿಡ್ ಸಂದರ್ಭದಲ್ಲಿ ಕಟ್ಟಡ ಕೆಲಸ ಸ್ಥಗಿತಗೊಂಡಿತ್ತು. ನಂತರ ಬೇರೆ ಬೇರೆ ಕಾರಣಕ್ಕೆ ಕುಂಟುತ್ತಲೇ ಸಾಗಿದ್ದ ಕಾಮಗಾರಿ 2022ರ ಮೇ ವೇಳೆಗೆ ಮುಕ್ತಾಯವಾಗಿತ್ತು.

ಹೆದ್ದಾರಿಯಲ್ಲಿ ನಿತ್ಯವೂ ಸಮಸ್ಯೆ: ಯಶವಂತಪುರ ರೈಲು ನಿಲ್ದಾಣ, ಗೊರಗುಂಟೆಪಾಳ್ಯ, ಸ್ಯಾಂಡಲ್ ಸೋಪ್ ಫ್ಯಾಕ್ಟರಿ, ಓರಾಯನ್ ಮಾಲ್ ಸುತ್ತಮುತ್ತ ವಾಹನ ನಿಲುಗಡೆಗೆ ನಿತ್ಯವೂ ಚಾಲಕರು ಪರದಾಡುತ್ತಲೇ ಇದ್ದಾರೆ. ಈ ಕಟ್ಟಡವನ್ನು ಆದಷ್ಟು ಬೇಗನೇ ಬಳಕೆಗೆ ಮುಕ್ತಗೊಳಿಸಬೇಕು. ಜತೆಗೆ, ತುಮಕೂರು ಹೆದ್ದಾರಿಯ ಅಲ್ಲಲ್ಲಿ ಬಹುಮಹಡಿ ಕಟ್ಟಡದ ಮಾಹಿತಿಯ ಫಲಕವನ್ನು ಅಳವಡಿಸಬೇಕು ಎಂದು ವಾಹನ ಸವಾರ ಮಧುಸೂದನ್ ಆಗ್ರಹಿಸಿದ್ದಾರೆ.

ಮೂರನೇ ಬಾರಿಯೂ ಗುತ್ತಿಗೆದಾರರು ಹಿಂದೇಟು

ಬಹುಮಹಡಿ ಕಟ್ಟಡದಲ್ಲಿನ ಪಾರ್ಕಿಂಗ್ ನಿರ್ವಹಣೆ ಗುತ್ತಿಗೆಗಾಗಿ ಮೂರು ಬಾರಿ ಟೆಂಡರ್ ಪ್ರಕ್ರಿಯೆ ನಡೆಸಿ, ಬಿಡ್ ಆಹ್ವಾನಿಸಿದ್ದರೂ ಗುತ್ತಿಗೆದಾರರು ಆಸಕ್ತಿ ತೋರಿಲ್ಲ.

ಕಳೆದ ವರ್ಷ ₹12.70 ಕೋಟಿ ಹಾಗೂ ₹7 ಕೋಟಿ ಮೊತ್ತ ನಿಗದಿಗೊಳಿಸಿ ಎರಡು ಬಾರಿ ಟೆಂಡರ್ ಕರೆಯಲಾಗಿತ್ತು. ಅಲ್ಲದೇ ಪ್ರತಿವರ್ಷ ಶೇ 10ರಷ್ಟು ಏರಿಕೆ ಮಾಡುವುದಾಗಿ ಷರತ್ತು ವಿಧಿಸಲಾಗಿತ್ತು. ಆಗಲೂ ಯಾವುದೇ ಗುತ್ತಿಗೆದಾರರು ಟೆಂಡರ್‌ನಲ್ಲಿ ಪಾಲ್ಗೊಂಡಿರಲಿಲ್ಲ. 'ಕಳೆದ ಏಪ್ರಿಲ್ 22ರಂದು ಮತ್ತೆ ಟೆಂಡರ್ ಆಹ್ವಾನಿಸಲಾಗಿತ್ತು. ಏಪ್ರಿಲ್ 29ರ ಸಂಜೆ 4ರವರೆಗೆ ಅವಕಾಶ ಇತ್ತು. ಈಗಿನ ಟೆಂಡರ್‌ನಲ್ಲಿ ₹2.20 ಕೋಟಿ ಮೊತ್ತ ನಿಗದಿ ಮಾಡಿದ್ದರಿಂದ ಈಗಲೂ ಯಾವುದೇ ಗುತ್ತಿಗೆ ಸಂಸ್ಥೆ ಆಸಕ್ತಿ ತೋರಿಲ್ಲ' ಎಂದು ಮೂಲಗಳು ತಿಳಿಸಿವೆ.

'ಅಧಿಕಾರಿಗಳು ವಾಸ್ತವ ಪರಿಸ್ಥಿತಿ ಗಮನಿಸದೇ ಟೆಂಡರ್ ಕರೆಯುತ್ತಿದ್ದಾರೆ. ಇದೇ ಕಾರಣಕ್ಕೆ ಮೂರು ಬಾರಿ ಟೆಂಡರ್ ಆಹ್ವಾನಿಸಿದ್ದರೂ ಯಾರೂ ಕಟ್ಟಡವನ್ನು ಗುತ್ತಿಗೆ ಪಡೆದುಕೊಳ್ಳಲು ಮುಂದಾಗಿಲ್ಲ.

ದುಬಾರಿ ಮೊತ್ತ ನೀಡಿ ಕಟ್ಟಡವನ್ನು ಗುತ್ತಿಗೆ ಪಡೆದುಕೊಂಡರೆ ನಷ್ಟವೇ ಅಧಿಕ' ಎಂದು ಗುತ್ತಿಗೆದಾರರೊಬ್ಬರು ತಿಳಿಸಿದರು.

ಈಡೇರದ ಭರವಸೆ

ಶೀಘ್ರದಲ್ಲೇ ಕಟ್ಟಡವನ್ನು ವಾಹನ ಚಾಲಕರ ಬಳಕೆಗೆ ನೀಡಲಾಗುವುದು ಎಂದು 2024ರ ಮೇನಲ್ಲಿ ಎಪಿಎಂಸಿ ಅಧಿಕಾರಿಗಳು ಭರವಸೆ ನೀಡಿದ್ದರು. ಭರವಸೆ ನೀಡಿ ವರ್ಷವಾದರೂ ಕಟ್ಟಡ ಬಳಕೆಗೆ ಲಭ್ಯವಾಗುತ್ತಿಲ್ಲ. '2024ರ ಜನವರಿ 11ರಂದು ಟೆಂಡರ್ ಆಹ್ವಾನಿಸಲಾಗಿತ್ತು. ಆದರೆ, ಆ ಟೆಂಡರ್‌ನಲ್ಲಿ ಯಾವುದೇ ಸಂಸ್ಥೆ ಹಾಗೂ ಏಜೆನ್ಸಿಯವರು ಭಾಗವಹಿಸಿರಲಿಲ್ಲ. ಅದಾದ ಮೇಲೆ ಮಾರ್ಚ್ 1ರಂದು ಸಮಿತಿ ಸಭೆ ನಡೆಸಿ, ತಿಂಗಳ ಟೆಂಡರ್ ಮೊತ್ತ ನಿಗದಿ ಪಡಿಸಿಕೊಂಡು ಅಥವಾ ಪಾರ್ಕಿಂಗ್ ಸೇವೆಯಿಂದ ಬರುವ ಮೊತ್ತದಲ್ಲಿ ಶೇಕಡವಾರು ಆದಾಯ ಹಂಚಿಕೆ ಆಧಾರದಲ್ಲಿ ಟೆಂಡರ್ ಆಹ್ವಾನಿಸುವ ಕುರಿತು ಕ್ರಮ ತೆಗೆದುಕೊಳ್ಳಲಾಗಿತ್ತು. ಅಷ್ಟರಲ್ಲಿ ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಾಗಿತ್ತು. ಆದ್ದರಿಂದ ಬಳಕೆಗೆ ನೀಡಲು ಸಾಧ್ಯವಾಗಿರಲಿಲ್ಲ. ತಕ್ಷಣವೇ ಕ್ರಮ ಕೈಗೊಳ್ಳುವುದಾಗಿ ಎಂಪಿಎಂಸಿ ಅಧಿಕಾರಿಗಳು ತಿಳಿಸಿದ್ದರು. ವರ್ಷವಾಗಿದ್ದರೂ ಕ್ರಮ ಆಗಿಲ್ಲ. ₹80 ಕೋಟಿ ಖರ್ಚು ಮಾಡಿ ನಿರ್ಮಿಸಿದ್ದ ಕಟ್ಟಡ ವ್ಯರ್ಥ ಆಗುತ್ತಿದೆ' ಎಂದು ಸಾರ್ವಜನಿಕರು ದೂರಿದ್ದಾರೆ.



ಸುದ್ದಿ 2 ನಿಮಿಷ

ಬಸವಾನಂದ ಸ್ವಾಮೀಜಿಗೆ 'ಕಸಾಪ ದತ್ತಿ ಪ್ರಶಸ್ತಿ'

ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ನೀಡುವ 'ಡಾ.ಎಚ್.ವಿಶ್ವನಾಥ್ ಮತ್ತು ಎಂ.ಎಸ್.ಇಂದಿರಾ ದತ್ತಿ ಪ್ರಶಸ್ತಿ'ಗೆ ಬಸವಾನಂದ ಸ್ವಾಮೀಜಿ ಆಯ್ಕೆಯಾಗಿದ್ದಾರೆ.

ಈ ಪ್ರಶಸ್ತಿಯು ₹ 10 ಸಾವಿರ ನಗದು ಒಳಗೊಂಡಿದೆ. ಕಸಾಪ ಅಧ್ಯಕ್ಷ ಮಹೇಶ ಜೋಶಿ ನೇತೃತ್ವದ ಸಮಿತಿ ಈ ಆಯ್ಕೆ ಮಾಡಿದೆ. ಅಂಧ ಬರಹಗಾರರನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ಎಚ್.ವಿಶ್ವನಾಥ್ ಅವರು ಈ ಪುರಸ್ಕಾರವನ್ನು ಪರಿಷತ್ತಿನಲ್ಲಿ ಸ್ಥಾಪಿಸಿದ್ದಾರೆ.

ಧಾರವಾಡದ ಮನುಗುಂಡಿ ಗುರುಬಸವ ಮಹಾಮನೆಯ ಬಸವಾನಂದ ಸ್ವಾಮೀಜಿ ಅವರು, ಯೋಗ ಮತ್ತು ನಿಸರ್ಗ ಚಿಕಿತ್ಸೆಯ ಮೂಲಕ ಜನಮನ್ನಣೆ ಪಡೆದಿದ್ದಾರೆ. ಅಂಧರಾದ ಅವರು, ಸಂಗೀತವನ್ನು ಕಲಿಯುವ ಜತೆಗೆ ಶಿಕ್ಷಕರಾಗಿ ವೃತ್ತಿ ಆರಂಭಿಸಿದ್ದರು. ಬಳಿಕ ಲಿಂಗಾನಂದ ಸ್ವಾಮೀಜಿ ಅವರಿಂದ ಜಂಗಮ ದೀಕ್ಷೆಯನ್ನು ಪಡೆದರು. ಗುರುಬಸವ ಮಹಾಮನೆಯಲ್ಲಿ ಹಲವು ರಚನಾತ್ಮಕ ಕಾರ್ಯಗಳಲ್ಲಿ ತೊಡಗಿರುವುದು ಮಾತ್ರವಲ್ಲದೆ, ವಚನ ಸಾಹಿತ್ಯದ ಕುರಿತು ಹಲವು ಪ್ರಮುಖ ಕೃತಿಗಳನ್ನು ಅವರು ರಚಿಸಿದ್ದಾರೆ ಎಂದು ಕಸಾಪ ಪ್ರಕಟಣೆ ತಿಳಿಸಿದೆ.



9ರವರೆಗೆ ನಂದಿಬೆಟ್ಟಕ್ಕೆ ನಿರ್ಬಂಧ

ಚಿಕ್ಕಬಳ್ಳಾಪುರ: ಪ್ರಸಿದ್ಧ ಪ್ರವಾಸಿ ತಾಣ ತಾಲ್ಲೂಕಿನ ನಂದಿಗಿರಿಧಾಮಕ್ಕೆ ವಾರದ ದಿನಗಳಲ್ಲಿ ವಿಧಿಸಿರುವ ಪ್ರವಾಸಿಗರ ಪ್ರವೇಶ ನಿರ್ಬಂಧವನ್ನು ಮೇ 9ರವರೆಗೆ ವಿಸ್ತರಿಸಲಾಗಿದೆ.

ಗಿರಿಧಾಮದ ಆರಂಭದಿಂದ 7.70 ಕಿ.ಮೀ ವರೆಗೆ ರಸ್ತೆ ನವೀಕರಣ ಕಾಮಗಾರಿ ಕೈಗೊಳ್ಳಲಾಗಿದ್ದು ಏ.25ರವರೆಗೆ ವಾರದ ದಿನಗಳಲ್ಲಿ (ಸೋಮವಾರದಿಂದ ಶುಕ್ರವಾರದವರೆಗೆ) ಪ್ರವಾಸಿಗರ ಪ್ರವೇಶ ನಿರ್ಬಂಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದರು. ವಾರಾಂತ್ಯದ ಶನಿವಾರ ಮತ್ತು ಭಾನುವಾರ ಮಾತ್ರ ಗಿರಿಧಾಮ ಪ್ರವೇಶಿಸಲು ಅವಕಾಶ ನೀಡಲಾಗಿತ್ತು.

ರಸ್ತೆ ನವೀಕರಣ ಪೈಕಿ 4.10 ಕಿ.ಮೀ ಉದ್ದದ ಕಾಮಗಾರಿ ಪೂರ್ಣವಾಗಿದೆ. ಬಾಕಿ 3.60 ಕಿ.ಮೀ ಉದ್ದದ ರಸ್ತೆ ಡಾಂಬರ್ ಹಾಕುವ ಕಾಮಗಾರಿ ಪೂರ್ಣಗೊಳಿಸಲು 10 ದಿನದ ಅವಶ್ಯವಿದೆ. ಆದ್ದರಿಂದ ಮೇ.9ರವರೆಗೆ ಪ್ರವೇಶ ನಿರ್ಬಂಧ ವಿಸ್ತರಿಸಬೇಕು ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಮತ್ತು ಪ್ರವಾಸೋದ್ಯಮ ಇಲಾಖೆ ಸಹಾಯಕ ನಿರ್ದೇಶಕರು ಸಹ ಕೋರಿಕೆ ಸಲ್ಲಿಸಿದ್ದರು. ಈ ಕೋರಿಕೆಗಳನ್ನು ಪರಿಗಣಿಸಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ನಿರ್ಬಂಧದ ಅವಧಿ ವಿಸ್ತರಿಸಿದ್ದಾರೆ.

ಗಿರಿಧಾಮದ ರಸ್ತೆಯು ತೀರಾ ಕಿರಿದಾಗಿದೆ. ಅಪಾಯಕಾರಿ ತಿರುವುಗಳು ಇವೆ. ಆದ್ದರಿಂದ ರಸ್ತೆಗೆ ಡಾಂಬರ್ ಹಾಕಲು ರಸ್ತೆ ಸಂಚಾರ ಬಂದ್ ಮಾಡಬೇಕಾಗಿದೆ.

'ನಂದಿ'ಯಲ್ಲಿ ಸಂಪುಟ ಸಭೆ

ಚಿಂತಾಮಣಿ: ಬೆಂಗಳೂರಿಗೆ ಸಮೀಪದ ಪ್ರಸಿದ್ಧ ಗಿರಿಧಾಮ ನಂದಿಬೆಟ್ಟದಲ್ಲಿ ಮುಂದಿನ ಸಚಿವ ಸಂಪುಟ ಸಭೆ ನಡೆಸಲು ತೀರ್ಮಾನಿಸಲಾಗಿದೆ.

ನಂದಿಬೆಟ್ಟದಲ್ಲಿ ಸಂಪುಟ ಸಭೆಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಕೂಡ ಒಪ್ಪಿಗೆ ನೀಡಿದ್ದಾರೆ ಎಂದು ಸಚಿವ ಡಾ.ಎಂ.ಸಿ. ಸುಧಾಕರ್ ಗುರುವಾರ ತಿಳಿಸಿದರು.

ಮೂರ್ನಾಲ್ಕು ಜಿಲ್ಲೆಗಳ ಅಭಿವೃದ್ಧಿ ಯೋಜನೆ ಹಾಗೂ ಎದುರಿಸುತ್ತಿರುವ ಸಮಸ್ಯೆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗುವುದು ಎಂದು ಅವರು ಜಂಗಮ ಶೀಗೇಹಳ್ಳಿಯಲ್ಲಿ ಮಾಹಿತಿ ನೀಡಿದರು.

ಹೈಕೋರ್ಟ್ ನ್ಯಾಯಮೂರ್ತಿಗಳ ವರ್ಗಾವಣೆ

ನವದೆಹಲಿ: ಕರ್ನಾಟಕ ಹೈಕೋರ್ಟ್‌ನ ನಾಲ್ವರು ನ್ಯಾಯ ಮೂರ್ತಿಗಳನ್ನು ಸುಪ್ರೀಂ ಕೋರ್ಟ್‌ನ ಹಿರಿಯ ನ್ಯಾಯಮೂರ್ತಿಗಳ ಸಮಿತಿಯ (ಕೊಲಿಜಿಯಂ) ಶಿಫಾರಸಿಗೆ ಅನುಗುಣವಾಗಿ ವರ್ಗಾವಣೆ ಮಾಡಿ ಕೇಂದ್ರ ಸರ್ಕಾರ ಗುರುವಾರ ಅಧಿಸೂಚನೆ ಹೊರಡಿಸಿದೆ.

ನ್ಯಾಯಮೂರ್ತಿ ಹೇಮಂತ ಚಂದನಗೌಡರ ಅವರನ್ನು ಮದ್ರಾಸ್ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಕೃಷ್ಣನ್ ನಟರಾಜನ್ ಅವರನ್ನು ಕೇರಳ ಹೈಕೋರ್ಟ್‌ಗೆ, ನ್ಯಾಯಮೂರ್ತಿ ಎನ್.ಎಸ್. ಸಂಜಯ್ ಗೌಡ ಅವರನ್ನು ಗುಜರಾತ್ ಹೈಕೋರ್ಟ್‌ಗೆ ಮತ್ತು ನ್ಯಾಯಮೂರ್ತಿ ಕೃಷ್ಣ ದೀಕ್ಷಿತ್ ಅವರನ್ನು ಒರಿಸ್ಸಾ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ. ತೆಲಂಗಾಣ ಹೈಕೋರ್ಟ್ ನ್ಯಾಯಮೂರ್ತಿಗಳಾದ ಪಿ. ಶ್ರೀಸುಧಾ, ಕೆ. ಸುರೇಂದರ್ ಅವರನ್ನು ಕ್ರಮವಾಗಿ ಕರ್ನಾಟಕ ಹೈಕೋರ್ಟ್ ಮತ್ತು ಮದ್ರಾಸ್ ಹೈಕೋರ್ಟ್‌ಗೆ ವರ್ಗಾವಣೆ ಮಾಡಲಾಗಿದೆ. ಆಂಧ್ರಪ್ರದೇಶ ಹೈಕೋರ್ಟ್‌ನ ನ್ಯಾಯಮೂರ್ತಿ ಕುಂಭಜದಲ ಮನ್ಮಧ ರಾವ್ ಅವರನ್ನು ಕರ್ನಾಟಕ ಹೈಕೋರ್ಟ್‌ಗೆ ವರ್ಗ ಮಾಡಲಾಗಿದೆ.

ಸಮರ್ ಸ್ಕೂಲ್ ಪರವಾನಗಿ ರದ್ದುಪಡಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾನೂನು ಬಾಹಿರವಾಗಿ ನಡೆಸುತ್ತಿರುವ ಸಮರ್ ಇಂಟರ್ ನ್ಯಾಷನಲ್ ಇಸ್ಲಾಮಿಕ್ ಸ್ಕೂಲ್‌ನ ಪರವಾನಗಿ ರದ್ದುಪಡಿಸಿ' ಎಂದು ಕರ್ನಾಟಕ ರಕ್ಷಣಾ ವೇದಿಕೆಯ (ಎಚ್. ಶಿವರಾಮೇಗೌಡ ಬಣ) ಚಾಮರಾಜಪೇಟೆ ಘಟಕದ ಅಧ್ಯಕ್ಷ ಚಾಂದ್ ಪಾಷ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಥಣಿಸಂದ್ರದ ಆರ್.ಕೆ. ಹೆಗಡೆ ನಗರದ ಈ ಶಾಲೆಯು (ಜಾಮಿಯಾ ಮೊಹಮ್ಮದೀಯ ಎಜುಕೇಷನ್ ಸೊಸೈಟಿ–ಮುಂಬೈ) ಭಾರಿ ಅಕ್ರಮಗಳಲ್ಲಿ ತೊಡಗಿ, ನೂರಾರು ವಿದ್ಯಾರ್ಥಿಗಳ ಭವಿಷ್ಯದ ಜತೆ ಚೆಲ್ಲಾಟ ಆಡುತ್ತಿದೆ. ಶಾಲಾ ಶಿಕ್ಷಣ ಇಲಾಖೆಗೆ ವಿವಿಧ ಹೆಸರಿನ ಟ್ರಸ್ಟ್, ಸೊಸೈಟಿಗಳ ಹೆಸರಿನಲ್ಲಿ ಹಾಗೂ ಶಾಲಾ ಜಾಗದ ಬಗ್ಗೆ ಸುಳ್ಳು ದಾಖಲೆ ನೀಡಿ, 1ರಿಂದ 10ನೇ ತರಗತಿ ನಡೆಸಲಾಗುತ್ತಿದೆ. ಶಾಲಾ ಶಿಕ್ಷಣ ಇಲಾಖೆ ಉಪ ನಿರ್ದೇಶಕರು ಹಲವು ನೋಟಿಸ್‌ಗಳನ್ನು ನೀಡಿದ್ದು, ಈವರೆಗೂ ಪೂರಕ ದಾಖಲೆ ಮತ್ತು ಮಾಹಿತಿ ಒದಗಿಸಿಲ್ಲ. ಎಲ್ಲ ನೀತಿ, ನಿಯಮಗಳನ್ನು ಗಾಳಿಗೆ ತೂರಿದ್ದು, ಶಿಕ್ಷಣ ಇಲಾಖೆಗೆ ಸೆಡ್ಡು ಹೊಡೆದಿದೆ' ಎಂದು ದೂರಿದರು.

ಇಲಾಖೆಯ ಬೆಂಗಳೂರು ದಕ್ಷಿಣ ಜಿಲ್ಲೆಯ ಉಪ ನಿರ್ದೇಶಕರು ಈ ಬಗ್ಗೆ ಇಲಾಖೆಯ ಆಯುಕ್ತರಿಗೆ ಸಲ್ಲಿಸಿದ ವರದಿಯ ಪ್ರತಿಯನ್ನು ಅವರು ಬಿಡುಗಡೆ ಮಾಡಿದರು. ಮಹಾರಾಷ್ಟ್ರ ಶಿಕ್ಷಣ ಇಲಾಖೆಯ ಮಾನ್ಯತೆ ಪಡೆದಿರುವುದಾಗಿ ಸಂಸ್ಥೆ ಹೇಳಿದೆ. ಆದರೆ, ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿಯಿಂದ ಅಲ್ಲಿ ನೋಂದಣಿಯಾಗಿಲ್ಲ ಎನ್ನುವುದು ದೃಢಪಟ್ಟಿದೆ' ಎಂದರು.

ದೇವರಬೀಸನಹಳ್ಳಿ: ಏಕಮುಖ ಸಂಚಾರ

ಬೆಂಗಳೂರು: ಎಚ್.ಎ.ಎಲ್. ವಿಮಾನ ನಿಲ್ದಾಣ ಸಂಚಾರ ಪೊಲೀಸ್ ಠಾಣೆ ವ್ಯಾಪ್ತಿಯ ದೇವರಬೀಸನಹಳ್ಳಿ ಜಂಕ್ಷನ್‌ನಲ್ಲಿ ಸಂಚಾರ ದಟ್ಟಣೆಯನ್ನು ನಿಯಂತ್ರಿಸಲು ದೇವರಬೀಸನಹಳ್ಳಿ ಜಂಕ್ಷನ್‌ನಿಂದ ಸಕ್ರಾ ಆಸ್ಪತ್ರೆ ಕಡೆಗೆ ಸಂಪರ್ಕಿಸುವ ರಸ್ತೆಯನ್ನು ಏಕಮುಖ ಸಂಚಾರ ರಸ್ತೆಯನ್ನಾಗಿ ಮಾರ್ಪಾಡು ಮಾಡಲಾಗಿದೆ. ಮೇ 2ರಿಂದ 8ರವರೆಗೆ ಏಕಮುಖ ಸಂಚಾರ ಇರಲಿದೆ.

ನಿರ್ಬಂಧಿತ ರಸ್ತೆಗಳು: ಸಕ್ರಾ ಆಸ್ಪತ್ರೆ ಕಡೆಯಿಂದ ದೇವರಬೀಸನಹಳ್ಳಿ ಜಂಕ್ಷನ್ ವರೆಗೆ (ಪಶ್ಚಿಮ ದಿಕ್ಕಿನಿಂದ ಪೂರ್ವ ದಿಕ್ಕಿಗೆ).

ಪರ್ಯಾಯ ಮಾರ್ಗ: ಸಕ್ರಾ ಆಸ್ಪತ್ರೆ ಕಡೆಯಿಂದ ದೇವರಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ಸಕ್ರಾ ಆಸ್ಪತ್ರೆ ಮುಖ್ಯ ರಸ್ತೆಯ ಮೂಲಕ ಬೆಳ್ಳಂದೂರು ಕೋಡಿ ಕಡೆಗೆ ಸಂಚರಿಸಿ, ಬೆಳ್ಳಂದೂರು ಮುಖ್ಯ ರಸ್ತೆಯ ಮೂಲಕ ಹೊರ ವರ್ತುಲ ರಸ್ತೆ ತಲುಪಿ ದೇವರಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸಬಹುದಾಗಿದೆ.

ಸಕ್ರಾ ಆಸ್ಪತ್ರೆ ಕಡೆಯಿಂದ ಕಾಡುಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸುವ ವಾಹನಗಳು ಸಕ್ರಾ ಆಸ್ಪತ್ರೆ ರಸ್ತೆಯ ಮೂಲಕ ಹೊರವರ್ತುಲ ರಸ್ತೆ ಕಡೆಗೆ ಸಂಚರಿಸಿ ಗಣೇಶ ದೇವಸ್ಥಾನ ಕ್ರಾಸ್ ಬಳಿ ಎಡಕ್ಕೆ ತಿರುವು ಪಡೆದುಕೊಳ್ಳಬೇಕು.

ಕಾಡುಬೀಸನಹಳ್ಳಿ ಜಂಕ್ಷನ್ ತಲುಪಿ ಅಲ್ಲಿ 'ಯು' ಟರ್ನ್ ಪಡೆದು ಹೊರವರ್ತುಲ ರಸ್ತೆಯ ಸರ್ವೀಸ್ ರಸ್ತೆಯ ಮೂಲಕ ಬಿಸಿನೆಸ್ ಪಾರ್ಕ್ ಕಡೆಗೆ ಪ್ರವೇಶಿಸಿ ದೇವರಬೀಸನಹಳ್ಳಿ ಜಂಕ್ಷನ್ ಕಡೆಗೆ ಸಂಚರಿಸಬಹುದು ಎಂದು ಸಂಚಾರ ಪೂರ್ವ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರಮನೆ ಮೈದಾನಕ್ಕೆ ಟಿಡಿಆರ್ ತೀರ್ಪು ಕಾಯ್ದಿರಿಸಿದ 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರಿನ ಬಳ್ಳಾರಿ ರಸ್ತೆ ಮತ್ತು ಜಯಮಹಲ್ ರಸ್ತೆಗಳ ವಿಸ್ತರಣೆಗಾಗಿ ಸ್ವಾಧೀನಪಡಿಸಿಕೊಂಡಿರುವ ಅರಮನೆ ಮೈದಾನದ 15 ಎಕರೆಗೂ ಹೆಚ್ಚು ಭೂಮಿಗೆ ವರ್ಗಾವಣೆ ಮಾಡಬಹುದಾದ ಅಭಿವೃದ್ಧಿ ಹಕ್ಕು (ಟಿಡಿಆರ್) ನೀಡುವ ಪ್ರಕರಣದ ತೀರ್ಪನ್ನು ಸುಪ್ರೀಂ ಕೋರ್ಟ್ ಗುರುವಾರ ಕಾಯ್ದಿರಿಸಿದೆ.

ನ್ಯಾಯಮೂರ್ತಿಗಳಾದ ಎಂ.ಎಂ. ಸುಂದರೇಶ್ ಮತ್ತು ಅರವಿಂದ್ ಕುಮಾರ್ ಅವರ ಪೀಠವು ಒಂದು ವಾರದೊಳಗೆ ಟಿಡಿಆರ್ ಠೇವಣಿ ಇಡಬೇಕು ಎಂದು ಈ ಹಿಂದೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ₹3400 ಕೋಟಿಯ ಟಿಡಿಆರ್ ಅನ್ನು ಸುಪ್ರೀಂ ಕೋರ್ಟ್‌ನಲ್ಲಿ ರಾಜ್ಯ ಸರ್ಕಾರ ಠೇವಣಿ ಇಟ್ಟಿತ್ತು. ಈ ಟಿಡಿಆರ್‌ಗಳನ್ನು ರಾಜವಂಶಸ್ಥರಿಗೆ ಹಸ್ತಾಂತರ ಮಾಡಬಾರದು ಎಂದು ರಾಜ್ಯ ಸರ್ಕಾರವು ಮಧ್ಯಂತರ ಅರ್ಜಿಯಲ್ಲಿ ಮನವಿ ಮಾಡಿತ್ತು.

ಅರಮನೆ ಮೈದಾನ ಒಟ್ಟು 472 ಎಕರೆ 16 ಗುಂಟೆ ಜಾಗ ಹೊಂದಿದೆ. ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಅವರ ಕಾನೂನುಬದ್ಧ ಉತ್ತರಾಧಿಕಾರಿ ಮತ್ತು ಇತರರು ಸಲ್ಲಿಸಿದ ನ್ಯಾಯಾಂಗ ನಿಂದನೆ ಅರ್ಜಿಗಳು ಮತ್ತು ಇತರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ಹೊರಡಿಸಿತ್ತು. ಆ ಆದೇಶದ ಪ್ರಕಾರ ಕರ್ನಾಟಕ ಸ್ಟಾಂಪ್ ಕಾಯ್ದೆಯ ಸೆಕ್ಷನ್ 45 ಬಿ ಗೆ ಅನುಗುಣವಾಗಿ ಅರಮನೆ ಮೈದಾನಕ್ಕೆ ಹೊಂದಿಕೊಂಡಿರುವ ಪ್ರದೇಶಗಳಲ್ಲಿ ಚಾಲ್ತಿಯಲ್ಲಿರುವ ಮಾರ್ಗಸೂಚಿ ಮೌಲ್ಯಕ್ಕೆ ಅನುಗುಣವಾಗಿ ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಅರಮನೆ ಜಾಗವನ್ನು ಮೌಲ್ಯೀಕರಿಸಿ, ವರ್ಗಾವಣೆ ಮಾಡಬಹುದಾದ ಟಿಡಿಆರ್ ನೀಡಲು ನಿರ್ದೇಶನ ನೀಡಿತ್ತು.



ರಸ್ತೆ ವಿಸ್ತರಣೆ ಉದ್ದೇಶಕ್ಕಾಗಿ ಬಳಕೆಯಾಗುವ 15.36 ಎಕರೆ ಭೂಮಿಗೆ ಪರಿಹಾರವಾಗಿ ₹3,014 ಟಿಡಿಆರ್ ಕೋಟಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಡಿಸೆಂಬರ್‌ನಲ್ಲಿ ಆದೇಶ ನೀಡಿತ್ತು. ಸಣ್ಣ ಜಾಗಕ್ಕೆ ಭಾರಿ ಮೊತ್ತವನ್ನು ಪಾವತಿಸಬೇಕಾದ ಹೊರೆಯಿಂದ ತಪ್ಪಿಸಿಕೊಳ್ಳಲು ಸುಗ್ರೀವಾಜ್ಞೆಯ ಆಸರೆ ಪಡೆಯಲು ಸರ್ಕಾರ ತೀರ್ಮಾನಿಸಿತ್ತು. ಬೆಂಗಳೂರು ಅರಮನೆ (ಆರ್ಜನೆ ಮತ್ತು ವರ್ಗಾವಣೆ) ಕಾಯ್ದೆ–1996 ಕ್ಕೆ ಸಂಬಂಧಪಟ್ಟ ಸಿವಿಲ್ ಮೇಲ್ಮನವಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳಬೇಕು ಎಂದು ಸರ್ಕಾರವು ಮೇಲ್ಮನವಿ ಸಲ್ಲಿಸಿತ್ತು.

ಉಗ್ರರ ದಾಳಿ ಖಂಡಿಸಿದ ಸಾಹಿತಿಗಳು, ಕಲಾವಿದರು

'ಅಗತ್ಯವಾದರೆ ಮಾತ್ರ ಯುದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕರ ದಾಳಿ ಖಂಡಿಸಿದ ಸಾಹಿತಿಗಳು, ಕಲಾವಿದರು, 'ಅನಿವಾರ್ಯವಾದರೆ ಮಾತ್ರ ಪಾಕಿಸ್ತಾನದ ಮೇಲೆ ಯುದ್ಧ ಮಾಡಬೇಕು' ಎಂದು ಅಭಿಪ್ರಾಯಪಟ್ಟರು.

ನಗರದ ಪುರಭವನದ ಎದುರು ಗುರುವಾರ ರಂಗಭೂಮಿ ಕ್ರಿಯಾ ಸಮಿತಿ ಆಯೋಜಿಸಿದ್ದ ಸಾಹಿತಿ– ಕಲಾವಿದರ ಸಾಂಸ್ಕೃತಿಕ ಸಮಾವೇಶದಲ್ಲಿ ಮಾತನಾಡಿದ ಬಹುತೇಕರು, 'ಉಗ್ರರ ದಾಳಿಯಿಂದಾಗಿ ಅಮಾಯಕರು ಮೃತಪಟ್ಟಿದ್ದಾರೆ. ಯಾವುದೇ ಕಾರಣಕ್ಕೂ ಭಯೋತ್ಪಾದನೆಗೆ ಅವಕಾಶ ನೀಡಬಾರದು. ಸಮರ ಬೇಡ, ಸಾಮರಸ್ಯ ಬೇಕು' ಎಂದು ಪ್ರತಿಪಾದಿಸಿದರು.

ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್. ಎನ್. ಮುಕಂದರಾಜ್ ಮಾತನಾಡಿ, 'ಪ್ರಪಂಚದಲ್ಲಿ ಭಯೋತ್ಪಾದನೆಯಿಂದಲೇ ಯುದ್ಧವಾಗುತ್ತಿದೆ. ಆದರೆ, ಯುದ್ಧಕ್ಕೆ ಯುದ್ಧವೇ ಉತ್ತರವಲ್ಲ. ಅನಿವಾರ್ಯವಾದರೆ ಮಾತ್ರ ಯುದ್ಧ ಮಾಡಬೇಕು. ಉಗ್ರರನ್ನು ಪತ್ತೆ ಹಚ್ಚಬೇಕು. ನಿರಪರಾಧಿಗಳು ಸಾಯಬಾರದು' ಎಂದು ನುಡಿದರು.



ಪಹಲ್ಗಾಮ್‌ನಲ್ಲಿನ ಉಗ್ರರ ದಾಳಿ ಖಂಡಿಸಿ ಬೆಂಗಳೂರಿನ ಪುರಭವನದ ಎದುರು ನಡೆದ ಸಾಂಸ್ಕೃತಿ ಕ ಸಮಾವೇಶದಲ್ಲಿ ಸಾಹಿತಿಗಳು ಮತ್ತು ಕಲಾವಿದರು ಪಾಲ್ಗೊಂಡಿದ್ದರು. ಪ್ರಜಾವಾಣಿ ಚಿತ್ರ

ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ, 'ಕೋಮುವಾದಿಗಳು ಜಗತ್ತಿನ ತುಂಬೆಲ್ಲಾ ತುಂಬಿದ್ದಾರೆ. ನಾಗರಿಕರನ್ನು ಕೊಂದಿರುವುದನ್ನು ಸಹಿಸಲು ಸಾಧ್ಯವಿಲ್ಲ. ನಾವು ಯುದ್ಧ ಆಹ್ವಾನಿಸಲು ತಯಾರಿಲ್ಲ. ಅನಿವಾರ್ಯವಾದರೆ ಪಾಕಿಸ್ತಾನದ ಮೇಲೆ ಯುದ್ಧ ಮಾಡಬೇಕೆಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಆದರೆ, ಕೆಲವರು ಅವರನ್ನು ದೇಶದ್ರೋಹಿ ಎಂದು ಬಿಂಬಿಸಲು ಯತ್ನಿಸಿದರು. ಯುದ್ಧ ನಾಗರಿಕ ಜಗತ್ತಿಗೆ ಒಳ್ಳೆಯದಲ್ಲ' ಎಂದು ಹೇಳಿದರು.

ಕಲಾವಿದ ಕೆ.ಎಸ್.ನಾಗರಾಜು ಮಾತನಾಡಿ, 'ಪಾಕಿಸ್ತಾನ ಮತ್ತು ಭಾರತ ನಡುವೆ ನಾಲ್ಕು ಬಾರಿ ಯುದ್ಧ ನಡೆದಿದೆ. ಸಾವಿರಾರು ಜನರು ಮೃತಪಟ್ಟಿದ್ದಾರೆ. ಯುದ್ಧ ಮಾಡುವುದರಿಂದಲೇ ಭಯೋತ್ಪಾದನೆ ಹತ್ತಿಕ್ಕಲು ಸಾಧ್ಯವಿಲ್ಲ. ಉಗ್ರರನ್ನು ಪತ್ತೆಹಚ್ಚಿ, ಹತ್ಯೆ ಮಾಡುವ ಮೂಲಕ ದೇಶಕ್ಕೆ ಸಾಮರಸ್ಯ ತಂದು ಕೊಡಬೇಕು' ಎಂದರು.

ಹಾಸ್ಯ ಕಲಾವಿದ ರಿಚರ್ಡ್ ಲೂಯಿಸ್, 'ಯುದ್ಧದಿಂದ ಜೀವ ಸಂಕುಲ ನಾಶವಾಗುತ್ತದೆ. ಅನೇಕ ರೀತಿಯ ಬಾಂಬ್‌ಗಳನ್ನು ತಯಾರಿಸಲಾಗಿದೆ. ಒಂದು ಅಣು ಬಾಂಬ್‌ನಿಂದ ಇಡೀ ದೇಶವೇ ನಾಶವಾಗುತ್ತದೆ. ಯುದ್ಧ ಗೆಲ್ಲಬಹುದು, ಆದರೆ ನಾಗರಿಕ ಸಮಾಜವನ್ನು ಸೃಷ್ಟಿ ಮಾಡಲು ಸಾಧ್ಯವಿಲ್ಲ' ಎಂದು ಅಭಿಪ್ರಾಯಪಟ್ಟರು.

'ಕೋಮುವಾದಿಗಳಿಗೆ ಧಿಕ್ಕಾರ, ಭಯೋತ್ಪಾದನೆ ತೊಲಗಲಿ' ಎಂಬ ಘೋಷಣೆಗಳನ್ನು ಕೂಗಿದರು. ಬಳಿಕ ಉಗ್ರರ ದಾಳಿಯಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ ಸಲ್ಲಿಸಿದರು.

ಸಮಾವೇಶದಲ್ಲಿ ಶ್ರೀನಿವಾಸ ಜಿ ಕಪ್ಪಣ್ಣ, ರಂಗಶ್ರೀ ರಂಗಸ್ವಾಮಿ, ಬಿ.ವಿ.ರಾಜಾರಾಮ್, ಜಗದೀಶ್ ಜಾಲ, ವಿಜಯಮ್ಮ, ವೈ.ಕೆ. ಮುದ್ದುಕೃಷ್ಣ, ಸಿ.ಕೆ.ಗುಂಡಣ್ಣ, ಸಂಚಯ ಗಣೇಶ್, ಅಂತರಂಗ ಶ್ಯಾಮ್ ಪಾಲ್ಗೊಂಡಿದ್ದರು.

'ಜ್ಞಾನ ಅಂಚೆ' ಆರಂಭ

ಬೆಂಗಳೂರು: ಅಂಚೆ ಇಲಾಖೆಯ 'ಜ್ಞಾನ ಅಂಚೆ' (ಗ್ಯಾನ್ ಪೋಸ್ಟ್) ಎಂಬ ಹೆಸರಿನ ಹೊಸ ಅಂಚೆ ಸೇವೆ ಗುರುವಾರ ಪ್ರಾರಂಭಗೊಂಡಿತು.

ಪಠ್ಯಪುಸ್ತಕಗಳು, ಶಾಸ್ತ್ರೀಯ, ಸಾಂಸ್ಕೃತಿಕ, ಧಾರ್ಮಿಕ ಪುಸ್ತಕಗಳು ಹಾಗೂ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ಮಾತ್ರ ಈ ಸೇವೆ ಮೂಲಕ ಕಳುಹಿಸಬಹುದು ಎಂದು ಬೆಂಗಳೂರು ಪೂರ್ವ ವಲಯ ಹಿರಿಯ ಅಂಚೆ ಅಧೀಕ್ಷಕ ರಂಜಿತ್ ಕುಮಾರ್ ತಿಳಿಸಿದ್ದಾರೆ.

ಕನಿಷ್ಠ ತೂಕ 300 ಗ್ರಾಂ. ಮತ್ತು ಗರಿಷ್ಠ 5 ಕೆ.ಜಿ.ವರೆಗೆ ಕಳುಹಿಸಬಹುದು. ಸ್ಪೀಡ್ ಪೋಸ್ಟ್ ಮತ್ತು ನೋಂದಾಯಿತ ಅಂಚೆಯಂತೆ ಇದನ್ನೂ ಬುಕ್ ಮಾಡಿದಾಗಿನಿಂದ ವಿಳಾಸಕ್ಕೆ ತಲುಪುವವರೆಗೂ ಆನ್‌ಲೈನ್‌ನಲ್ಲಿ ಟ್ರ್ಯಾಕ್ ಮಾಡಬಹುದು.

ಸೇವಾ ಶುಲ್ಕದ ಉಲ್ಲೇಖ: 300 ಗ್ರಾಂ.ವರೆಗೆ ₹20, 301ರಿಂದ 500 ಗ್ರಾಂ.ವರೆಗೆ ₹25, 501ರಿಂದ 1,000 ಗ್ರಾಂ.ವರೆಗೆ ₹35, ಗರಿಷ್ಠ 5,000 ಗ್ರಾಂ.ವರೆಗೆ ₹100 ವಿಧಿಸಲಾಗುತ್ತದೆ ಎಂದಿದ್ದಾರೆ.

ಯುಪಿಎಸ್‌ಸಿ: 23 ಸಾಧಕರಿಗೆ ಸನ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಲಾಢ್ಯರಿಂದ ಬಲಹೀನರಿಗೆ ರಕ್ಷಣೆ ಮತ್ತು ಜೀವನ ಮಾರ್ಗೋಪಾಯಗಳನ್ನು ಒದಗಿಸುವ ಪ್ರಬಲ ಆಡಳಿತ ವ್ಯವಸ್ಥೆಯನ್ನು ಅಧಿಕಾರಿಗಳು ರೂಪಿಸಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ. ಮಹದೇವಪ್ಪ ಹೇಳಿದರು.

ನಗರದ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಗುರುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಯುಪಿಎಸ್‌ಸಿ ಮತ್ತು ಸಿಎಸ್‌ಇ ಪರೀಕ್ಷೆಯಲ್ಲಿ ಉನ್ನತ ಸಾಧನೆ ಮಾಡಿದ 23 ಸಾಧಕರನ್ನು ಅಭಿನಂದಿಸಿ, ಇಂಡಿಯಾ ಫಾರ್ ಐಎಎಸ್ ವೆಬ್‌ಸೈಟ್ ಬಿಡುಗಡೆ ಮಾಡಿ ಮಾತನಾಡಿದರು.

ಯೋಗ್ಯರು ಮತ್ತು ಸಮರ್ಥರ ಕೈಯಲ್ಲಿ ಆಡಳಿತ ಇದ್ದಾಗ, ನಿರ್ಣಯಗಳನ್ನು ಅನುಷ್ಠಾನಗೊಳಿಸುವಾಗ ಸಂವಿಧಾನದ ನಿರ್ದೇಶಕ ತತ್ವಗಳನ್ನು ಪರಿಪಾಲಿಸಬೇಕು. ಯಾರ ಮುಲಾಜಿಗೂ ಒಳಗಾಗಬಾರದು. ಅಧಿಕಾರಿಗಳು ಸಹನೆ, ಕರುಣೆ, ಅನುಕಂಪ, ಪ್ರೀತಿ, ಸ್ವಾತಂತ್ರ್ಯದ ಉದ್ದೇಶಗಳನ್ನು ಈಡೇರಿಸುವ ಜೊತೆಗೆ ಸಮರ್ಥ ಭಾರತವನ್ನು ನಿರ್ಮಿಸಬೇಕು ಎಂದು ಹೇಳಿದರು.



ಯುಪಿಎಸ್‌ಸಿ ಪರೀಕ್ಷೆಯಲ್ಲಿ ಆಯ್ಕೆಯಾದ ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯ ಸಾಧಕರನ್ನು ಸಚಿವ ಡಾ.ಎಚ್ ಸಿ. ಮಹದೇವಪ್ಪ ಗೌರವಿಸಿದರು. ಸಿ.ಎಸ್ ಕೇದಾರ್, ಜಿ. ಎನ್ ಶ್ರೀಕಂಠಯ್ಯ, ಪಿ. ಸಿ. ಶ್ರೀನಿವಾಸ್, ಕೆ.ಎಂ. ನವೀನ್, ನಯನ್ ಗೌಡ, ಪ್ರಶಾಂತ್ ಶ್ರೀನಿವಾಸ್, ಬಾಬು ಸಂದೀಪ್ ಹಾಜರಿದ್ದರು ಪ್ರಜಾವಾಣಿ ಚಿತ್ರ

ಬಿ.ಆರ್. ಅಂಬೇಡ್ಕರ್ 55 ಸಾವಿರ ಪುಸ್ತಕಗಳನ್ನು ಆಳವಾಗಿ ಅಧ್ಯಯನ ಮಾಡಿ 140 ಕೋಟಿ ಜನರನ್ನು ರಕ್ಷಿಸುವ ಸಂವಿಧಾನ ರಚಿಸಿದ್ದಾರೆ. ಬುದ್ಧನ ಕಾಲದಿಂದಲೂ ಭಾರತ ಪ್ರಜಾಪ್ರಭುತ್ವ ದೇಶ. ರಾಜಕೀಯ ಸಮಾನತೆ ಸಿಕ್ಕಿದೆ. ಆದರೆ, ಸಮ ಸಮಾಜ, ಸಮಾನತೆ ಇಲ್ಲದೇ ಇದ್ದಲ್ಲಿ ರಾಜಕೀಯ ಸಮಾನತೆಗೆ ಅರ್ಥವಿರುವುದಿಲ್ಲ ಎಂದರು.

ನಿವೃತ್ತ ಐಎಎಸ್ ಅಧಿಕಾರಿ ಮತ್ತು ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯ ಆಡಳಿತ ಮಂಡಳಿ ಅಧ್ಯಕ್ಷ ಸಿ. ಎಸ್. ಕೇದಾರ್ ಮಾತನಾಡಿ, '2024ರ ಕೇಂದ್ರ ಲೋಕಸೇವಾ ಆಯೋಗದ ನಾಗರಿಕ ಸೇವಾ ಪರೀಕ್ಷೆಯಲ್ಲಿ ಕರ್ನಾಟಕದ 41 ಅಭ್ಯರ್ಥಿಗಳು ಯಶಸ್ವಿಯಾಗಿದ್ದು, ಇಂಡಿಯಾ ಫಾರ್ ಐಎಎಸ್ ಅಕಾಡೆಮಿಯಿಂದ ಬೇರೆ ಬೇರೆ ಹಂತಗಳಲ್ಲಿ ತರಬೇತಿ ಪಡೆದ 23 ಅಭ್ಯರ್ಥಿಗಳು ಯಶಸ್ವಿಯಾಗಿದ್ದಾರೆ' ಎಂದರು.

ಅಕಾಡೆಮಿಯ ಆಡಳಿತ ಮಂಡಳಿಯ ಉಪಾಧ್ಯಕ್ಷ ಜಿ. ಎನ್. ಶ್ರೀಕಂಠಯ್ಯ, ಸಹ ಸಂಸ್ಥಾಪಕ ಮತ್ತು ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ ಪಿ.ಸಿ. ಶ್ರೀನಿವಾಸ್, ನಿರ್ದೇಶಕರಾದ ಕೆ. ನವೀನ್, ಕೆ.ಎಂ. ನಯನ್ ಗೌಡ, ಪ್ರಶಾಂತ್ ಶ್ರೀನಿವಾಸ್, ಬಾಬು ಸಂದೀಪ್ ಹಾಜರಿದ್ದರು.

ಸಿನಿಮಾ ಪುರವಣಿ



ಸಂಜನಾ ಆನಂದ್, ಚಂದನ್ ಶೆಟ್ಟಿ

ನಟನೆಗಿಂತ ಸಂಗೀತಕ್ಕೆ ಆದ್ಯತೆ

ಕನ್ನಡ ರ್‍ಯಾಪರ್ ಚಂದನ್ ಶೆಟ್ಟಿ ನಾಯಕನಾಗಿ ನಟಿಸಿರುವ ಮೊದಲ ಸಿನಿಮಾ 'ಸೂತ್ರಧಾರಿ' ಮೇ 9ರಂದು ತೆರೆಕಾಣುತ್ತಿದೆ. ಅವರು 'ಸೂತ್ರಧಾರಿ'ಯ ಫಲಿತಾಂಶದ ಮೇಲೆ ನಟನೆಯ ವಿಚಾರದಲ್ಲಿ ಮುಂದಿನ ಹೆಜ್ಜೆ ಇಡುವ ನಿರ್ಧಾರ ಮಾಡಿದ್ದಾರೆ.

ಅಭಿಲಾಷ್ ಪಿ.ಎಸ್.

- **ನಟನೆಯತ್ತ ಆಸಕ್ತಿ ಹುಟ್ಟಿದ್ದು ಹೇಗೆ?**

ನನಗೆ ನಟನೆಯತ್ತ ಆಸಕ್ತಿ ಅಥವಾ ನಟನಾಗಬೇಕು ಎಂಬ ಆಸೆ ಇರಲಿಲ್ಲ. ಇವತ್ತಿಗೂ ನಾನು ರ್‍ಯಾಪರ್ ಆಗಿಯೇ ಗುರುತಿಸಿಕೊಳ್ಳಲು ಅಥವಾ ಇದೇ ಕ್ಷೇತ್ರದಲ್ಲಿ ಇನ್ನಷ್ಟು ಬೆಳೆಯಲು ಇಚ್ಛಿಸುವವ. ಕರ್ನಾಟಕದಲ್ಲಿರುವವರಿಗೆ ಚಂದನ್ ಶೆಟ್ಟಿ ಯಾರೆಂದು ತಿಳಿದಿದೆ. ಭಾರತದಲ್ಲಿ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನನ್ನ ಹಾಡೊಂದು ಹಿಟ್ ಆಗಬೇಕು ಎನ್ನುವ ಆಸೆ ಹೊತ್ತವನು. 'ಸೂತ್ರಧಾರಿ' ಸಿನಿಮಾ ಅವಕಾಶ ನನ್ನನ್ನೇ ಹುಡುಕಿಕೊಂಡು ಬಂದಿತ್ತು. ನನ್ನ ತಂದೆಗೆ ನನ್ನನ್ನು ಹೀರೊ ಆಗಿ ನೋಡಬೇಕು ಎಂಬ ಆಸೆ ಇತ್ತು. ಹೀಗಾಗಿ ಅರಸಿಕೊಂಡು ಬಂದ ಅವಕಾಶವನ್ನು ಕಳೆದುಕೊಳ್ಳಲಿಲ್ಲ. 'ಸೂತ್ರಧಾರಿ' ಸಿನಿಮಾ ತಂಡದ ಜೊತೆಗೆ ಕೆಲಸ ಮಾಡಬಹುದು ಎಂದೆನಿಸಿ ನಟಿಸಲು ಒಪ್ಪಿಕೊಂಡೆ.

- **ಈ ಸಿನಿಮಾ ಏಕೆ ವಿಳಂಬವಾಯಿತು?**

'ವಿದ್ಯಾರ್ಥಿ ವಿದ್ಯಾರ್ಥಿನಿಯರೇ' ಸಿನಿಮಾಗೂ ಮೊದಲೇ 'ಸೂತ್ರಧಾರಿ' ಚಿತ್ರ ಪೂರ್ಣಗೊಂಡಿತ್ತು. 2022ರಲ್ಲಿ ಈ ಸಿನಿಮಾದ ಚಿತ್ರೀಕರಣ ಆರಂಭವಾಗಿತ್ತು. ಎರಡು ವರ್ಷಗಳ ಮೊದಲೇ ಹಾಡೊಂದು ರಿಲೀಸ್ ಆಗಿತ್ತು. ಆ ಸಂದರ್ಭದಲ್ಲಿ ಸಿನಿಮಾದ ವಹಿವಾಟುಗಳು ಚೆನ್ನಾಗಿ ಆಗುತ್ತಿತ್ತು. ಒಟಿಟಿ ವೇದಿಕೆಗಳು ರಿಲೀಸ್‌ಗೂ ಮೊದಲೇ ಚಿತ್ರವನ್ನು ಖರೀದಿಸುತ್ತಿದ್ದವು. ನಾವು ಚಿತ್ರ ಬಿಡುಗಡೆಗೆ ಸಜ್ಜಾಗುವ ಸಂದರ್ಭದಲ್ಲಿ ಒಟಿಟಿ ವೇದಿಕೆಗಳು ಕನ್ನಡ ಸಿನಿಮಾಗಳ ಖರೀದಿಯನ್ನು ನಿಲ್ಲಿಸಿದವು. ಚಿತ್ರಮಂದಿರಗಳಲ್ಲಿ ಸಿನಿಮಾ ಓಡಿದರಷ್ಟೇ ಖರೀದಿಸುತ್ತೇವೆ ಎನ್ನುವ ನಿರ್ಧಾರವನ್ನು ಅವು ಮಾಡಿದವು. ರಿಲೀಸ್‌ಗೂ ಮೊದಲೇ ವಹಿವಾಟು ನಡೆದರೆ ಒಂದು ಸುರಕ್ಷಿತ ವಲಯದಲ್ಲಿ ಇರಬಹುದು ಎನ್ನುವ ನಂಬಿಕೆ ನಮ್ಮಲ್ಲಿತ್ತು. ಹೀಗಾಗಿ ಕಾದೆವು. ಯಾವುದೂ ಈಡೇರದೇ ಇದ್ದಾಗ ಚಿತ್ರಮಂದಿರಗಳಲ್ಲಿ ಸಿನಿಮಾ ಬಿಡುಗಡೆಗೆ ದಿನಾಂಕ ಹುಡುಕಿದೆವು. ಕಳೆದ ಕೆಲ ತಿಂಗಳಲ್ಲಿ ಪ್ರತಿ ಶುಕ್ರವಾರ ಐದಾರು ಸಿನಿಮಾಗಳು ತೆರೆಕಂಡವು. ಇದರಿಂದ ಮತ್ತೆ ಸಿನಿಮಾವನ್ನು ಮುಂದೂಡುತ್ತಾ ಮೇ 9ಕ್ಕೆ ಬರಲು ನಿರ್ಧರಿಸಿದೆವು.

- **ನಟನೆಯಲ್ಲಿ ಮುಂದುವರಿಯುತ್ತೀರಾ...ಅಥವಾ?**

ಇದು ಮೇ 9ಕ್ಕೆ ನಿರ್ಧಾರವಾಗಲಿದೆ. 'ಸೂತ್ರಧಾರಿ'ಯ ಫಲಿತಾಂಶಕ್ಕೆ ಕಾಯುತ್ತಿದ್ದೇನೆ. ಒಬ್ಬ ಲೀಡ್ ನಟನಾಗಿ ಒಂದು ಸಿನಿಮಾವನ್ನು ನಿಲ್ಲಿಸಲು ನನಗೆ ಸಾಮರ್ಥ್ಯವಿದೆಯೇ ಎನ್ನುವುದು ಆಗ ತಿಳಿಯಲಿದೆ. ಒಬ್ಬ ಕಲಾವಿದನಾಗಿ ಶೇಕಡ ನೂರರಷ್ಟು ತೊಡಗಿಸಿಕೊಂಡು ಈ ಸಿನಿಮಾ ಮಾಡಿದ್ದೇನೆ. ಈತ ನಟಿಸಬಲ್ಲ, ನಮಗೆ ಮನರಂಜನೆ ನೀಡಬಲ್ಲ ಎಂದು ಪ್ರೇಕ್ಷಕರು ಒಪ್ಪಿದರೆ ಖಂಡಿತವಾಗಿಯೂ ಮತ್ತಷ್ಟು ಒಳ್ಳೆಯ ಸಿನಿಮಾಗಳನ್ನು ಮಾಡುತ್ತೇನೆ.

- **'ಸೂತ್ರಧಾರಿ'ಯ ಪಾತ್ರದ ಬಗ್ಗೆ...**

ನಾನು ಅಂಡರ್‌ಕವರ್ ಪೊಲೀಸ್ ಅಧಿಕಾರಿಯಾಗಿ ನಟಿಸಿದ್ದೇನೆ. ಚಿತ್ರದ ಆರಂಭದಲ್ಲಿ ಈತ ಓರ್ವ ಸೋಮಾರಿ ಪೊಲೀಸ್ ಅಧಿಕಾರಿ. ಪ್ರಕರಣಗಳ ತನಿಖೆಗೆ ಬೇಕಾದ ಬುದ್ಧಿವಂತಿಕೆ ಇದ್ದರೂ ಬಳಸದೇ ಇರುವ ಯುವ ಅಧಿಕಾರಿ. ಹೀಗಿರುವಾಗ ಕಾರಣವಿಲ್ಲದೇ ಸರಣಿ ಆತ್ಮಹತ್ಯೆಗಳು ನಡೆಯುತ್ತವೆ. ಇವುಗಳು ಆತ್ಮಹತ್ಯೆಯಲ್ಲ ಕೊಲೆ ಎಂದು ಪತ್ತೆ ಹಚ್ಚುವ ಈತ ಇವುಗಳ ತನಿಖೆ ಆರಂಭಿಸುತ್ತಾನೆ. ಈ ಸಂದರ್ಭದಲ್ಲಿ ಎದುರಾಗುವ ಕಷ್ಟಗಳು, ಗೊಂದಲವೇ ಚಿತ್ರದ ಕಥೆ.

- **ಹೊಸಬರನ್ನು ಪ್ರೇಕ್ಷಕರು ಹೇಗೆ ಸ್ವೀಕರಿಸುತ್ತಿದ್ದಾರೆ?**

ಈಗಿನ ಸ್ಥಿತಿಯಲ್ಲಿ ಹೊಸಬರಿಗೆ ಹಲವು ಕಷ್ಟಗಳಿವೆ. ಯಾರೂ ಹೊಸಬರನ್ನು ನಂಬಲು ಸಿದ್ಧರಿಲ್ಲ. ಇತ್ತೀಚೆಗೆ ಬಂದ ಹೊಸಬರ ಸಿನಿಮಾಗಳು ಚೆನ್ನಾಗಿವೆ ಎಂಬ ವಿಮರ್ಶೆಗಳು ಬಂದರೂ ಚಿತ್ರಮಂದಿರಕ್ಕೆ ಜನ ಬಂದು ಗೆಲ್ಲಿಸುತ್ತಿಲ್ಲ. ನಾವು ಹೆಚ್ಚಾಗಿ ಜನ ಸಿನಿಮಾಗಳಿಗೆ ಬರುತ್ತಿಲ್ಲ ಎನ್ನುತ್ತಾ ಓಡಾಡುತ್ತಿದ್ದೇವೆ. ಪದೇ ಪದೇ ಕೇಳಿಬರುವ ಈ ಮಾತು ಜನರ ಮನಸ್ಸಿನಲ್ಲೂ ಅಚ್ಚೊತ್ತಿದೆ. 'ಕನ್ನಡ ಸಿನಿಮಾಗೆ ಜನ ಬರುತ್ತಿಲ್ಲ, ನಾವೇಕೆ ಹೋಗಬೇಕು' ಎಂದು ಅವರೇ ನಿರ್ಧರಿಸಿಕೊಂಡುಬಿಟ್ಟಿದ್ದಾರೆ. ಇದು ಭರವಸೆಯನ್ನೂ ಕಸಿದುಕೊಂಡಿದೆ. ಪ್ರತಿಯೊಬ್ಬರ ಮನೆಯಲ್ಲೂ ದೊಡ್ಡ ಟಿ.ವಿಗಳು ಇವೆ. ಅವುಗಳನ್ನೇ ಅವರು ಸಿನಿಮಾ ಪರದೆ ಮಾಡಿಕೊಂಡಿದ್ದಾರೆ. ಈಗಿನ ಸಮಯದಲ್ಲಿ ಚಿತ್ರಮಂದಿರಗಳಿಗೆ ಹೋಗಿ ಸಿನಿಮಾ ನೋಡುವುದು ಎಂದರೆ ಸಾವಿರಾರು ರೂಪಾಯಿ ಖರ್ಚಿನ ಜೊತೆಗೆ ಒಂದು ಶ್ರಮದ ಕೆಲಸವಾಗಿದೆ. ಅದಕ್ಕಾಗಿ ಸಮಯ ಎತ್ತಿಡಬೇಕಿದೆ. ಸಿನಿಮಾಗೆ ಹೋಗಲು ಪ್ಲ್ಯಾನ್ ಮಾಡಬೇಕಾದ ಸಂದರ್ಭ ಬಂದಿದೆ. ನಾವೊಂದು ಬದಲಾವಣೆಯ ಕಾಲಘಟ್ಟದಲ್ಲಿದ್ದೇವೆ. ಮನರಂಜನೆಗೆ ಈಗ ಹಲವು ವೇದಿಕೆಗಳು ಇವೆ. ಚಿತ್ರಮಂದಿರ ಒಂದು ವೇದಿಕೆಯಷ್ಟೇ. ಸಣ್ಣ, ಮಧ್ಯಮ ಬಜೆಟ್‌ನ ಸಿನಿಮಾಗಳು ಇನ್ನು ಮುಂದೆ ಬಿಡುಗಡೆಗಾಗಿ ಲಕ್ಷಾಂತರ ರೂಪಾಯಿ ಖರ್ಚು ಮಾಡುವುದಕ್ಕಿಂತ ಒಟಿಟಿ ಮೂಲಕ ಪ್ರೇಕ್ಷಕರನ್ನು ತಲುಪುವುದೇ ಒಳ್ಳೆಯದು.

- **ಹೊಸ ಪ್ರಾಜೆಕ್ಟ್‌ಗಳು?**

'ಸೂತ್ರಧಾರಿ'ಯ ಫಲಿತಾಂಶ ನೋಡಿಕೊಂಡು 'ಎಲ್ರ ಕಾಲೆಳೆಯುತ್ತೆ ಕಾಲ' ಸಿನಿಮಾ ಬಿಡುಗಡೆಯಾಗಲಿದೆ. ಇದನ್ನು ಒಟಿಟಿಯಲ್ಲೇ ಬಿಡುಗಡೆ ಮಾಡಿ ಎಂದು ಕೇಳಿಕೊಂಡಿದ್ದೇನೆ. 'ಮುದ್ದು ರಾಕ್ಷಸಿ' ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ. ಇದನ್ನು ಹೊರತುಪಡಿಸಿ ಯಾವ ಸಿನಿಮಾಗಳನ್ನೂ ಒಪ್ಪಿಕೊಂಡಿಲ್ಲ. ಕಥೆಯನ್ನೂ ಕೇಳುತ್ತಿಲ್ಲ. ❖

- **ಸಂಗೀತವೇ ನಿಮ್ಮ ಜೀವನ, ಈ ದಾರಿಯಲ್ಲಿ...**

ಅಂತರರಾಷ್ಟ್ರೀಯ ಮಾರುಕಟ್ಟೆಗೆ ತಲುಪಬೇಕು ಎನ್ನುವ ಉದ್ದೇಶದಿಂದ ಹೊಸ ಹೊಸ ಶೈಲಿಯ ಪ್ರಯೋಗ ಮಾಡುತ್ತಿದ್ದೇನೆ. ನನ್ನ ಹೆಸರೇ ಕನ್ನಡ ರ್‍ಯಾಪರ್ ಚಂದನ್ ಶೆಟ್ಟಿ. ಹೀಗಾಗಿ ಕನ್ನಡ ಹಾಡಿನ ಮೂಲಕವೇ ಅಂತರರಾಷ್ಟ್ರೀಯ ಮಟ್ಟಕ್ಕೆ ತಲುಪಬೇಕು ಎನ್ನುವ ಗುರಿ ನನ್ನದು. ಪ್ರಚಲಿತ ಮಾರುಕಟ್ಟೆಯಲ್ಲಿ ಯಾವ ಶೈಲಿಯ ಮ್ಯೂಸಿಕ್ ಓಡುತ್ತಿದೆಯೋ ಅದೇ ಮಾದರಿಯಲ್ಲಿ ಹಾಡೊಂದನ್ನು ಮಾಡಬೇಕು ಎಂದುಕೊಂಡಿದ್ದೇನೆ.

45 ದಿನಕ್ಕೊಂದು ಹಾಡು ಬಿಡುಗಡೆ ಮಾಡುವ ನಿರ್ಧಾರವನ್ನು ನಾನು ಮಾಡಿದ್ದೇನೆ. ಒಂದು ಹಾಡಿನ ಶೂಟಿಂಗ್ ಪೂರ್ಣಗೊಂಡಿದೆ. ಸಂಕಲನಕ್ಕೆ ಕೊಂಚ ಸಮಯ ತೆಗೆದುಕೊಳ್ಳುತ್ತಿದೆ. ಶೀಘ್ರದಲ್ಲೇ ಇದು ಬಿಡುಗಡೆಯಾಗಲಿದೆ. ವರ್ಷಕ್ಕೆ ನನ್ನ ನಾಲ್ಕು ಹಾಡುಗಳು ಬಿಡುಗಡೆಯಾಗಲಿವೆ. ನನಗೆ ಫ್ಯಾನ್ಸ್‌ಗಳು ಇರುವುದೇ ಹಾಡಿಗಾಗಿ. ಎರಡು ವರ್ಷದಲ್ಲಿ ನನಗೆ ಸಿನಿಮಾದಲ್ಲಿ ಸಿಗುವ ಸಂಭಾವನೆ, ಮೂರು ಗಂಟೆಯ ಒಂದು ಮ್ಯೂಸಿಕ್ ಶೋದಲ್ಲಿ ಸಿಗುತ್ತದೆ.



ಚಂದನ್ ಶೆಟ್ಟಿ



ಬೃಂದಾ ಸಿನಿಬುಟ್ಟಿಯಲ್ಲಿ ಐದು ಸಿನಿಮಾಗಳು

'ನೆನಪಿರಲಿ' ಪ್ರೇಮ್ ನಟನೆಯ 'ಪ್ರೇಮಂ ಪೂಜ್ಯಂ' ಸಿನಿಮಾ ಮೂಲಕ ನಾಯಕಿಯಾಗಿ ಚಂದನವನಕ್ಕೆ ಹೆಜ್ಜೆ ಇಟ್ಟ ನಟಿ ಬೃಂದಾ ಆಚಾರ್ಯ ಅವರು ತಮ್ಮ ಐದು ಕನ್ನಡ ಸಿನಿಮಾಗಳ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ.

'ಕೌಸಲ್ಯ ಸುಪ್ರಜಾ ರಾಮ' ಚಿತ್ರದಲ್ಲಿ 'ಶಿವಾನಿ'ಯಾಗಿ ಮಿಂಚಿದ್ದರು ಬೃಂದಾ. ಇದರ ಬೆನ್ನಲ್ಲೇ ಸಾಲು ಸಾಲು ಅವಕಾಶಗಳು ಅರಸಿ ಬಂದವು. ದೀಕ್ಷಿತ್ ಶೆಟ್ಟಿ ಜೊತೆಗೆ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ', ನಿರೂಪ್ ಭಂಡಾರಿ ಜೊತೆಗೆ 'ಸತ್ಯ ಸನ್ ಆಫ್ ಹರಿಶ್ಚಂದ್ರ', ದುನಿಯಾ ವಿಜಯ್ ಜೊತೆಗೆ 'ಮಾರುತ', ಸತ್ಯಪ್ರಕಾಶ್ ಜೊತೆಗೆ 'ಎಕ್ಸ್ ಆ್ಯಂಡ್ ವೈ' ಹಾಗೂ ಅಜೇಯ್ ರಾವ್ ನಟನೆಯ ಸಿನಿಮಾವೊಂದರಲ್ಲಿ ಬಣ್ಣಹಚ್ಚಿದ್ದಾರೆ. 'ಈ ಎಲ್ಲಾ ಸಿನಿಮಾಗಳ ಚಿತ್ರೀಕರಣ ಹಾಗೂ ಡಬ್ಬಿಂಗ್ ಪೂರ್ಣಗೊಂಡು ರಿಲೀಸ್‌ಗೆ ಸಜ್ಜಾಗಿವೆ. ಈ ಪೈಕಿ 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಜುಲೈನಲ್ಲಿ ತೆರೆಗೆ ಬರುವ ಸಾಧ್ಯತೆ ಇದೆ' ಎನ್ನುತ್ತಾ 'ಸಿನಿಮಾ ಪುರವಣಿ'ಯೊಂದಿಗೆ ಮಾತಿಗೆ ಇಳಿದರು ಬೃಂದಾ.

'ಈ ವರ್ಷ ಐದು ಸಿನಿಮಾಗಳಲ್ಲಿ ಕನಿಷ್ಠ ಮೂರು ಸಿನಿಮಾಗಳು ಬಿಡುಗಡೆ ಆಗಲಿವೆ. 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಸಿನಿಮಾದಲ್ಲಿ ಬ್ಯಾಂಕ್ ಅಕೌಂಟೆಂಟ್ ಪಾತ್ರ ಮಾಡಿದ್ದೇನೆ. ನಾನು ನಿಜ ಜೀವನದಲ್ಲಿ ಇರುವುದಕ್ಕಿಂತ ಬಹಳ ಗಂಭೀರವಾದ ಪಾತ್ರವಿದು. ಸಿನಿಮಾದಲ್ಲಿ ಪ್ರತಿಯೊಂದು ಪಾತ್ರವನ್ನು ಬಹಳ ನಾಜೂಕಿನಿಂದ ನಿರ್ದೇಶಕರಾದ ಅಭಿಷೇಕ್ ಬರೆದಿದ್ದಾರೆ. 'ಮಾರುತ' ಸಿನಿಮಾ ಒಂದು ಕೌಟುಂಬಿಕ ಚಿತ್ರ. ನೈಜ ಘಟನೆ ಆಧಾರಿತ ಸಾಮಾಜಿಕ ವಿಷಯವನ್ನು ಇಟ್ಟುಕೊಂಡು ಈ ಸಿನಿಮಾದ ಕಥೆ ಬರೆಯಲಾಗಿದೆ. ಇದರಲ್ಲಿ ನಾನು ಓರ್ವ ಮುಗ್ಧ ಹುಡುಗಿಯ ಪಾತ್ರ ಮಾಡಿದ್ದೇನೆ. ಮಾಡಿರುವ ಎಲ್ಲಾ ಸಿನಿಮಾಗಳಲ್ಲೂ ಹೊಸ ಅನುಭವ ಸಿಕ್ಕಿದೆ. 'ಜೂಲಿಯೆಟ್' ಸಿನಿಮಾದಲ್ಲಿ ಪ್ರಯೋಗಾತ್ಮಕ ಪಾತ್ರ ಮಾಡಿದ್ದೆ. ಒಳ್ಳೆಯ ನಿರ್ಮಾಣ ಸಂಸ್ಥೆ, ಖ್ಯಾತ ನಟರ ಜೊತೆ ನಟಿಸಿದ್ದೇನೆ. ಭಿನ್ನವಾದ ಪಾತ್ರಗಳು ಎಲ್ಲಾ ಸಿನಿಮಾಗಳಲ್ಲಿ ಇದ್ದವು. 2025ರಲ್ಲಿ ನಾನು ಹಲವು ಕಥೆಗಳನ್ನು ಕೇಳಿದ್ದೇನೆ. ಇದರಲ್ಲಿ ಒಂದೆರಡು ಒಪ್ಪಿಕೊಂಡಿದ್ದೇನೆ. ಪಾತ್ರಗಳ ಆಯ್ಕೆಯಲ್ಲಿ ಸ್ವಲ್ಪ ಗಂಭೀರವಾಗುತ್ತಿದ್ದೇನೆ. ಹಳೆಯ ಪಾತ್ರಗಳೇ ಮರುಕಳಿಸಬಾರದು ಎನ್ನುವ ಉದ್ದೇಶ ಇದರಲ್ಲಿದೆ' ಎಂದರು.

'ಒಳ್ಳೆಯ ಸಿನಿಮಾ ಬಂದರೆ ಜನ ಕೈಬಿಡಲ್ಲ ಎನ್ನುವ ನಂಬಿಕೆಯೇ ಚಿತ್ರರಂಗದಲ್ಲಿ ಸಾಲು ಸಾಲು ಸಿನಿಮಾ ನಿರ್ಮಾಣವಾಗುವುದರ ಹಿಂದಿನ ಶಕ್ತಿ. ಈ ಸಂದರ್ಭದಲ್ಲಿ ಭರವಸೆ ಇಟ್ಟುಕೊಂಡು ಕೆಲಸ ಮಾಡುವುದು ಮುಖ್ಯವಾಗುತ್ತದೆ. ಪರ ಭಾಷೆಗಳಿಂದಲೂ ನನಗೆ ಅವಕಾಶಗಳು ಬಂದಿವೆ. ಒಂದು ತಮಿಳು ಹಾಗೂ ಇನ್ನೊಂದು ತೆಲುಗಿನಿಂದ ಬಂದಿತ್ತು. ಪಾತ್ರ ಇಷ್ಟವಾಗದ ಕಾರಣ ಒಪ್ಪಿಕೊಂಡಿಲ್ಲ. 'ಬ್ಯಾಂಕ್ ಆಫ್ ಭಾಗ್ಯಲಕ್ಷ್ಮೀ' ಸಿನಿಮಾ ತೆಲುಗಿನಲ್ಲೂ ಬಿಡುಗಡೆ ಆಗಲಿದೆ. ನನಗೆ ನಿರಂತರವಾಗಿ ಸಿನಿಮಾ ಮಾಡುತ್ತಿರಬೇಕು. ಕನ್ನಡದಲ್ಲೇ ಅವಕಾಶಗಳು ಬರುತ್ತಿವೆ. ಪರಭಾಷೆಯಲ್ಲಿ ನಟಿಸಲೇಬೇಕು ಎನ್ನುವ ಉದ್ದೇಶದಿಂದ ಬಂದ ಎಲ್ಲಾ ಪಾತ್ರಗಳನ್ನು ನಾನು ಒಪ್ಪಿಕೊಳ್ಳುವುದಿಲ್ಲ' ಎನ್ನುತ್ತಾರೆ ಬೃಂದಾ. ❖

ಯುವ ರಾಜ್‌ಕುಮಾರ್‌ಗೆ ಸೂರಿ ಆ್ಯಕ್ಷನ್ ಕಟ್

'ಎಕ್ಕ' ಸಿನಿಮಾದ ಟೀಸರ್ ಬಿಡುಗಡೆ ಬೆನ್ನಲ್ಲೇ ಯುವ ರಾಜ್‌ಕುಮಾರ್ ನಟಿಸಲಿರುವ ಹೊಸ ಸಿನಿಮಾದ ಮುಹೂರ್ತ ನಡೆದಿದೆ. ಈ ಬಾರಿ ಯುವ ಅವರಿಗೆ ನಿರ್ದೇಶಕ ಸೂರಿ ಆ್ಯಕ್ಷನ್ ಕಟ್ ಹೇಳಲಿದ್ದಾರೆ.

ನಟ ದುನಿಯಾ ವಿಜಯ್ ಕ್ಲ್ಯಾಪ್ ಮಾಡುವ ಮುಖಾಂತರ ಹೊಸ ಸಿನಿಮಾದ ಚಿತ್ರೀಕರಣಕ್ಕೆ ಇತ್ತೀಚೆಗೆ ಚಾಲನೆ ನೀಡಿದರು. ಇದು ಯುವ ನಟನೆಯ ಮೂರನೇ ಸಿನಿಮಾ. 'ಎಕ್ಕ' ಸಿನಿಮಾವನ್ನು ಕಾರ್ತಿಕ್ ಗೌಡ ಹಾಗೂ ಯೋಗಿ ಜಿ. ರಾವ್ ಅವರ ಕೆಆರ್‌ಜಿ ಸ್ಟುಡಿಯೊಸ್, ಜಯಣ್ಣ ಹಾಗೂ ಭೋಗೇಂದ್ರ ಅವರ ಜಯಣ್ಣ ಫಿಲ್ಮ್ಸ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಅವರ ಪಿಆರ್‌ಕೆ ಪ್ರೊಡಕ್ಷನ್ಸ್ ಜಂಟಿಯಾಗಿ ನಿರ್ಮಾಣ ಮಾಡುತ್ತಿದೆ. ಈ ಪ್ರೊಡಕ್ಷನ್ಸ್‌ಗಳೇ ಸೇರಿ ಯುವ ನಟನೆಯ ಹೊಸ ಸಿನಿಮಾವನ್ನೂ ನಿರ್ಮಾಣ ಮಾಡುತ್ತಿರುವುದು ವಿಶೇಷ.

ಚಿತ್ರದಲ್ಲಿ ಯುವ ರಾಜ್‌ಕುಮಾರ್‌ಗೆ ನಾಯಕಿಯಾಗಿ ದುನಿಯಾ ವಿಜಯ್ ಪುತ್ರಿ ರಿತನ್ಯಾ ನಟಿಸಲಿದ್ದಾರೆ. ಜಡೇಶ್ ಕೆ.ಹಂಪಿ ನಿರ್ದೇಶಿಸಿರುವ ದುನಿಯಾ ವಿಜಯ್ ನಟನೆಯ 'ಲ್ಯಾಂಡ್ ಲಾರ್ಡ್' ಸಿನಿಮಾ ಮೂಲಕ ಚಂದನವನಕ್ಕೆ ಹೆಜ್ಜೆ ಇಟ್ಟಿರುವ ರಿತನ್ಯಾಗೆ ಇದು ಎರಡನೇ ಸಿನಿಮಾ. ಚಿತ್ರಕ್ಕೆ ದೀಪು ಎಸ್. ಕುಮಾರ್ ಸಂಕಲನ, ಚರಣ್ ರಾಜ್ ಸಂಗೀತ ನಿರ್ದೇಶನ, ಸಂತೋಷ್ ಕಲಾ ನಿರ್ದೇಶನ, ಶೇಖರ್ ಛಾಯಾಚಿತ್ರಗ್ರಹಣವಿರಲಿದೆ. ಮೇ ತಿಂಗಳಾತ್ಯಂತಕ್ಕೆ ಚಿತ್ರತಂಡ ಚಿತ್ರೀಕರಣ ಪ್ರಾರಂಭಿಸಲಿದೆ. ಬಿಗ್ ಬಜೆಟ್ ಸಿನಿಮಾ ಇದಾಗಿರಲಿದೆ ಎಂದು ಚಿತ್ರತಂಡ ತಿಳಿಸಿದೆ.

ಯುವ ನಟನೆಯ, ರೋಹಿತ್ ಪದಕಿ ನಿರ್ದೇಶಿಸುತ್ತಿರುವ 'ಎಕ್ಕ' ಸಿನಿಮಾದ ಶೂಟಿಂಗ್ ಅಂತಿಮ ಹಂತದಲ್ಲಿದ್ದು, ಜೂನ್ 6ರಂದು ಈ ಸಿನಿಮಾ ತೆರೆಕಾಣಲಿದೆ. ❖



ಯುವ, ರಿತನ್ಯಾ



ಸೂರಿ, ವಿಜಯ್

'ಪಪ್ಪಿ' ಸಿನಿಮಾ ತೆರೆಗೆ

'ಫಸ್ಟ್ ಲವ್' ಸಿನಿಮಾ ನಿರ್ದೇಶಿಸಿದ್ದ ಆಯುಷ್ ಮಲ್ಲಿ ನಿರ್ದೇಶನದ 'ಪಪ್ಪಿ' ಸಿನಿಮಾ ಗುರುವಾರ(ಮೇ 1) ತೆರೆಕಂಡಿದೆ. ಉತ್ತರ ಕರ್ನಾಟಕ ಭಾಷೆಯಲ್ಲಿರುವ ಈ ಸಿನಿಮಾವನ್ನು ನಟ ಧ್ರುವ ಸರ್ಜಾ ಪ್ರಸ್ತುತಪಡಿಸಿದ್ದಾರೆ.

ಇಬ್ಬರು ಬಾಲಕರು ಹಾಗೂ ನಾಯಿ ಸುತ್ತ ಈ ಸಿನಿಮಾದ ಕಥೆ ಸಾಗುತ್ತದೆ. ಉತ್ತರ ಕರ್ನಾಟಕದ ಕಲಾವಿರಾದ ಜಗದೀಶ್ ಕೊಪ್ಪಳ, ಆದಿತ್ಯ ಸಿಂಧನೂರು, ಅದೃಷ್ಟ ಸಂಕನೂರು, ಋತ್ವಿಕ್ ಬಳ್ಳಾರಿ, ದುರ್ಗಪ್ಪ ಕಾಂಬ್ಳಿ, ರೇಣುಕಾ, ಆರಾವ ಲೋಹಿತ್ ನಾಗರಾಜ್ ಚಿತ್ರದಲ್ಲಿ ನಟಿಸಿದ್ದಾರೆ. ಶ್ರೀಧರ್ ಕಶ್ಯಪ್, ರವಿ ಬಿಲ್ಲೂರ್ ಚಿತ್ರಕ್ಕೆ ಸಂಗೀತ ನೀಡಿದ್ದು, ಬಿ. ಸುರೇಶ್ ಬಾಬು ಛಾಯಾಚಿತ್ರಗ್ರಹಣ ಸಿನಿಮಾಗಿದೆ. ಚಿತ್ರಕ್ಕೆ ಅಂದಪ್ಪ ಸಂಕನೂರು ಬಂಡವಾಳ ಹೂಡಿದ್ದಾರೆ. ಕೆಆರ್‌ಜಿ ಸ್ಟುಡಿಯೊಸ್ 'ಪಪ್ಪಿ' ಚಿತ್ರವನ್ನು ರಾಜ್ಯದಾದ್ಯಂತ ವಿತರಣೆ ಮಾಡುತ್ತಿದೆ.



ಆದಿತ್ಯ, ಜಗದೀಶ್

ಸಿನಿಮಾ ನಿರ್ಮಾಣಕ್ಕಿಳಿದ ಯಶ್ ತಾಯಿ



ಪೃಥ್ವಿ ಅಂಬಾರ್



ಶ್ರೀರಾಜ್

ನಟ ಯಶ್ ತಾಯಿ ಪುಷ್ಪ ಅರುಣ್ ಕುಮಾರ್ ಇದೀಗ ಸಿನಿಮಾ ಕ್ಷೇತ್ರಕ್ಕೆ ಕಾಲಿಟ್ಟಿದ್ದಾರೆ. ಅವರ ಪಿಎ ಪ್ರೊಡಕ್ಷನ್ಸ್‌ನಡಿ ನಿರ್ಮಾಣವಾಗುತ್ತಿರುವ ಚೊಚ್ಚಲ ಚಿತ್ರಕ್ಕೆ 'ಕೊತ್ತಲವಾಡಿ' ಎಂಬ ಶೀರ್ಷಿಕೆ ಇಡಲಾಗಿದ್ದು, ಚಿತ್ರದಲ್ಲಿ ನಾಯಕನಾಗಿ 'ದಿಯಾ' ಖ್ಯಾತಿಯ ಪೃಥ್ವಿ ಅಂಬಾರ್ ನಟಿಸುತ್ತಿದ್ದಾರೆ.

ಇತ್ತೀಚೆಗೆ ಚಿತ್ರದ ಫಸ್ಟ್‌ಲುಕ್ ಹಾಗೂ ಶೀರ್ಷಿಕೆ ಅನಾವರಣಗೊಂಡಿದೆ. ಚಿತ್ರಕ್ಕೆ ಶ್ರೀರಾಜ್ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಶ್ರೀರಾಜ್, ನಿರ್ದೇಶಕರಾದ ಕೆ.ವಿ. ರಾಜು, ರವಿ ಶ್ರೀವತ್ಸ ಅವರ ಬಳಿ ಕೆಲಸ ಮಾಡಿದ ಅನುಭವ ಹೊಂದಿದ್ದಾರೆ. ಇದು ಇವರ ಚೊಚ್ಚಲ ಸಿನಿಮಾ. ಕಿರುತೆರೆ ನಟಿ ಕಾವ್ಯಾ ಶೈವ ನಾಯಕಿಯಾಗಿ ಬಣ್ಣಹಚ್ಚುತ್ತಿದ್ದಾರೆ. ಗೋಪಾಲಕೃಷ್ಣ ದೇಶಪಾಂಡೆ, ರಾಜೇಶ್ ನಟರಂಗ ಮುಂತಾದ ಅನುಭವಿ ತಾರಾಬಳಗ ಚಿತ್ರದಲ್ಲಿದೆ ಎಂದು ಚಿತ್ರತಂಡ ತಿಳಿಸಿದೆ. ಪೃಥ್ವಿ ಅಂಬಾರ್ ಈ ಸಿನಿಮಾದಲ್ಲಿ ಮಾಸ್ ಅವತಾರದಲ್ಲಿ ಕಾಣಿಸಿಕೊಳ್ಳಲಿದ್ದಾರೆ.

ಚಿತ್ರತಂಡದಲ್ಲಿ ಹೊಸಬರೇ ಇದ್ದು, ಹಿನ್ನೆಲೆ ಸಂಗೀತ ನೀಡಲಿರುವ ಅಭಿನಂದನ್ ಕಶ್ಯಪ್, ಸಾಹಸ ನಿರ್ದೇಶಕ ಸಾಗರ್ ಕೂಡ ಯುವ ಪ್ರತಿಭೆಗಳೇ. ಹಳ್ಳಿ ಹಿನ್ನೆಲೆಯಲ್ಲಿ ಸಾಗುವ ಕಥೆಯಲ್ಲಿ ಪೃಥ್ವಿ ಆ್ಯಕ್ಷನ್ ಹೀರೊ ಆಗಿ ಕಾಣಿಸಿಕೊಳ್ಳಲಿದ್ದಾರೆ. ಕಾರ್ತಿಕ್ ಎಸ್. ಛಾಯಾಚಿತ್ರಗ್ರಹಣ, ರಾಮಿಸೆಟ್ಟಿ ಪವನ್ ಸಂಕಲನ, ವಿಕಾಸ್ ವಸಿಷ್ಠ ಸಂಗೀತ, ರಘು ನಿಡುವಳ್ಳಿ ಸಂಭಾಷಣೆ, ವಿ.ನಾಗೇಂದ್ರ ಪ್ರಸಾದ್, ಕಿನ್ನಾಳ್ ರಾಜ್, ಪ್ರಮೋದ್ ಮರವಂತೆ ಹಾಗೂ ಗೌಸ್ ಪಿರ್ ಸಾಹಿತ್ಯ ಸಿನಿಮಾದ ಹಾಡುಗಳಿಗೆ ಇವೆ. ❖

ನಾನು ಮತ್ತು ಗುಂಡ–2 ಶೀರ್ಷಿಕೆ ಗೀತೆ ಬಿಡುಗಡೆ

ರಘುಹಾಸನ್ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿರುವ 'ನಾನು ಮತ್ತು ಗುಂಡ-2' ಚಿತ್ರದ ಶೀರ್ಷಿಕೆ ಗೀತೆಯನ್ನು ನಿರ್ದೇಶಕ ಪ್ರೇಮ್ ಇತ್ತೀಚೆಗೆ ಬಿಡುಗಡೆಗೊಳಿಸಿದರು.

2020ರಲ್ಲಿ ತೆರೆಕಂಡಿದ್ದ ಚಿತ್ರದ ಮೊದಲ ಭಾಗದಲ್ಲಿ ನಟ ಶಿವರಾಜ್ ಕೆ.ಆರ್. ಪೇಟೆ ನಾಯಕನಾಗಿ ನಟಿಸಿದ್ದರು. ಅದರ ಮುಂದುವರಿದ ಭಾಗವಾದ ಈ ಚಿತ್ರದಲ್ಲಿ ರಾಕೇಶ್ ಅಡಿಗ ನಾಯಕನಾಗಿ ಬಣ್ಣಹಚ್ಚಿದ್ದು, ರಚನಾ ಇಂದರ್ ನಾಯಕಿಯಾಗಿ ಕಾಣಿಸಿಕೊಂಡಿದ್ದಾರೆ.

'ರಘು ನನ್ನ ಜೊತೆ ಹಲವು ವರ್ಷಗಳ ಕಾಲ ಕೆಲಸ ಮಾಡಿದ್ದಾರೆ. ಒಂದು ನಾಯಿಯನ್ನು ಪಳಗಿಸಿ ಅದರಿಂದ ನಟನೆಯನ್ನು ತೆಗಿಸುವುದು ಸುಲಭದ ಮಾತಲ್ಲ. ಆರ್.ಪಿ.ಪಟ್ನಾಯಕ್ ಅವರು ಮಾಡಿರುವ 'ಎಕ್ಸ್‌ಕ್ಯೂಸ್ ಮಿ' ಚಿತ್ರದ ಹಾಡುಗಳು ಇವತ್ತಿಗೂ ಹಸಿರಾಗಿವೆ. ಅವರೇ ಈ ಚಿತ್ರಕ್ಕೂ ಸಂಗೀತ ಸಂಯೋಜಿಸಿದ್ದಾರೆ. ಶೀರ್ಷಿಕೆ ಗೀತೆಯೇ ಸಿನಿಮಾದ ಕಥೆ ಹೇಳಿದೆ' ಎಂದರು ಪ್ರೇಮ್.

ಚಿತ್ರದ 6 ಹಾಡುಗಳಿಗೆ ಆರ್.ಪಿ.ಪಟ್ನಾಯಕ್ ಸಂಗೀತ ಸಂಯೋಜಿಸಿದ್ದಾರೆ. 'ಚಿತ್ರದ ಫಸ್ಟ್ ಕಾಪಿ ಸಿದ್ಧವಾಗಿದ್ದು, ಸದ್ಯದಲ್ಲೇ ಸೆನ್ಸಾರ್‌ಗೆ ಹೋಗಲಿದೆ. ಶೀಘ್ರದಲ್ಲೇ ಇನ್ನೊಂದು ಹಾಡು ಹಾಗೂ ಟ್ರೇಲರ್ ಬಿಡುಗಡೆ ಮಾಡುತ್ತೇವೆ' ಎಂದರು ರಘು.

ಊಟಿ, ಶಿವಮೊಗ್ಗ, ತೀರ್ಥಹಳ್ಳಿ, ಬಾಳೆಹೊನ್ನೂರು ಸುತ್ತಮುತ್ತ ಚಿತ್ರದ ಶೂಟಿಂಗ್ ನಡೆಸಲಾಗಿದೆ. ❖



ಚಿತ್ರತಂಡದೊಂದಿಗೆ ನಿರ್ದೇಶಕ ಪ್ರೇಮ್

'ಕಿಲ್ಲರ್' ಆದ ಜ್ಯೋತಿ



ಜ್ಯೋತಿ

ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲಿ ಗುರುತಿಸಿಕೊಂಡಿರುವ ನಟಿ ಜ್ಯೋತಿ ಪೂರ್ವಜ್ ಇದೀಗ ಕನ್ನಡ ಹಾಗೂ ತೆಲುಗು ಭಾಷೆಯಲ್ಲಿ ಸಿದ್ಧಗೊಳ್ಳುತ್ತಿರುವ 'ಕಿಲ್ಲರ್' ಎಂಬ ಸಿನಿಮಾದಲ್ಲಿ ನಟಿಸುತ್ತಿದ್ದಾರೆ.

ಇತ್ತೀಚೆಗೆ ಚಿತ್ರದ ಫಸ್ಟ್‌ಲುಕ್ ಬಿಡುಗಡೆಯಾಗಿದೆ. ಇದೊಂದು ಮಹಿಳಾ ಕೇಂದ್ರಿತ ಚಿತ್ರವಾಗಿದ್ದು, ನಟನೆಯ ಜೊತೆಗೆ ನಿರ್ಮಾಣವನ್ನೂ ಜ್ಯೋತಿ ಮಾಡುತ್ತಿದ್ದಾರೆ. ಇವರಿಗೆ ಪ್ರಜಯ್ ಕಾಮತ್, ಪದ್ಮನಾಭ ರೆಡ್ಡಿ ನಿರ್ಮಾಣದಲ್ಲಿ ಕೈ ಜೋಡಿಸಿದ್ದಾರೆ. ಜ್ಯೋತಿ ಅವರ ಪತಿ ಪೂರ್ವಜ್ ಅವರೇ ಕಥೆ ಬರೆದು ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ. ಜೊತೆಗೆ ಒಂದು ಮಹತ್ವದ ಪಾತ್ರಕ್ಕೂ ಬಣ್ಣಹಚ್ಚಿದ್ದಾರೆ ಎಂದಿದೆ ಚಿತ್ರತಂಡ. ಪ್ರೀತಿ, ಪ್ರಣಯ, ಸೇಡು ಮತ್ತು ಕೃತಕ ಬುದ್ಧಿಮತ್ತೆಯ ವಿಷಯಗಳು ಈ ಚಿತ್ರದಲ್ಲಿದ್ದು, ಚಿತ್ರವು ಸೈನ್ಸ್ ಫಿಕ್ಷನ್ ಜಾನರ್‌ನಲ್ಲಿದೆ.

'ಸಿನಿಮಾದಲ್ಲಿ ನಾನು ನಾಲ್ಕೈದು ಗೆಟಪ್‌ಗಳಲ್ಲಿ ಕಾಣಿಸಿಕೊಂಡಿದ್ದೇನೆ. ಆ್ಯಕ್ಷನ್ ದೃಶ್ಯಗಳೂ ಚಿತ್ರದಲ್ಲಿದೆ. ಎರಡು ಭಾಷೆಗೂ ನಾನೇ ಡಬ್ ಮಾಡಿದ್ದೇನೆ. ಚಿತ್ರದ ಚಿತ್ರೀಕರಣ ಪೂರ್ಣಗೊಂಡಿದೆ' ಎಂದಿದ್ದಾರೆ ಜ್ಯೋತಿ.

ಚಂದ್ರಕಾಂತ್ ಕೊಲ್ಲು, ವಿಶಾಲ್‌ರಾಜ್, ಅರ್ಚನಾ ಅನಂತ್, ಗೌತಮ್ ಚಕ್ರದಾರ್ ಕೊಪ್ಪಿಸೆಟ್ಟಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಹೈದರಾಬಾದ್, ಮೋಹಿನಬಾದ್ ಮುಂತಾದ ಕಡೆ ಚಿತ್ರೀಕರಣ ನಡೆಸಲಾಗಿದ್ದು, ಇನ್ನೆರಡು ತಿಂಗಳಲ್ಲಿ ಸಿನಿಮಾ ತೆರೆಗೆ ಬರುವ ಸಾಧ್ಯತೆ ಇದೆ. ❖

ಖನಿಜಾನ್ವೇಷಣೆಗೆ ಬೇರೆಡೆಯಿಂದ ವರದಿ ಪಡೆದ ಗಣಿ ಇಲಾಖೆ

ಹಳೇ ಅನ್ವೇಷಣೆ ವರದಿ ಆಧರಿಸಿ ಅದಿರು ಬ್ಲಾಕ್ ಹರಾಜು

• ಹರಿಶಂಕರ್ ಆರ್.

ಮುಖ್ಯಾಂಶಗಳು

- ಆರ್‌ಟಿಐ ಕಾಯ್ದೆಯಡಿ ಕೇಳಿದ ಮಾಹಿತಿಗೆ ಇಲಾಖೆಯಿಂದ ವಿವರಣೆ
- ಸಂಡೂರು ತಾಲ್ಲೂಕಿನಲ್ಲಿ ಈಚೆಗೆ ಒಟ್ಟು 7 ಅದಿರು ಬ್ಲಾಕ್‌ಗಳ ಹರಾಜು
- 1973-81ನೇ ಸಾಲಿನಲ್ಲಿ ಖನಿಜಾನ್ವೇಷಣೆ ನಡೆಸಿದ್ದ ಎನ್‌ಎಂಡಿಸಿ

ಬಳ್ಳಾರಿ: 55 ವರ್ಷಗಳ ಹಿಂದೆ ನಡೆಸಿದ ಖನಿಜ ಅನ್ವೇಷಣೆಯ ಆಧಾರದ ಮೇಲೆ ಬೇರೆ ಸಂಸ್ಥೆಯೊಂದರಿಂದ ವರದಿ ಪಡೆದು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಬಳ್ಳಾರಿ ತಾಲ್ಲೂಕಿನ ಸಂಡೂರಿನಲ್ಲಿ ದಟ್ಟಾರಣ್ಯದ (ವರ್ಜಿನ್ ಅರಣ್ಯ) ಅದಿರು ಬ್ಲಾಕ್ ಅನ್ನು ಹರಾಜು ಹಾಕಿರುವುದು ಗೊತ್ತಾಗಿದೆ.

ಹೋರಾಟಗಾರರೊಬ್ಬರು ಮಾಹಿತಿ ಹಕ್ಕು (ಆರ್‌ಟಿಐ) ಕಾಯ್ದೆಯಡಿ ಕೇಳಿದ ಮಾಹಿತಿಗೆ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ನೀಡಿದ ವಿವರಣೆಯಿಂದ ಈ ವಿಷಯ ಗೊತ್ತಾಗಿದೆ.

ಸಂಡೂರು ತಾಲೂಕಿನಲ್ಲಿ ಒಟ್ಟು 7 ಅದಿರು ಬ್ಲಾಕ್‌ಗಳನ್ನು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯು ಈಚೆಗೆ ಹರಾಜು ಹಾಕಿತ್ತು. ಈ ಪೈಕಿ 217.453 (88 ಹೆಕ್ಟೇರ್) ಎಕರೆ ವ್ಯಾಪ್ತಿಯ 'ಕುಮಾರಸ್ವಾಮಿ ಐರನ್ ಓರ್' ಹೆಸರಿನ ಅದಿರು ಬ್ಲಾಕ್ ದಟ್ಟಾರಣ್ಯವಾಗಿತ್ತು. ಆರ್‌ಬಿಎಸ್‌ಎಸ್‌ಎನ್ ಎಂಬ ಸಂಸ್ಥೆ ಅತ್ಯಧಿಕ ಪ್ರೀಮಿಯಮ್ (ಶೇ. 200) ನೀಡಿ ಈ ಬ್ಲಾಕ್ ಅನ್ನು ತನ್ನದಾಗಿಸಿಕೊಂಡಿತ್ತು.

ಈ ಬ್ಲಾಕ್‌ನಲ್ಲಿ 'ಮಿನರಲ್ ಎಕ್ಸ್‌ಪ್ಲೋರೇಷನ್ ಅಂಡ್ ಕನ್ಸಲ್ಟೆನ್ಸಿ ಲಿಮಿಟೆಡ್ (ಎಂಇಸಿಎಲ್)' ಎಂಬ ಸಂಸ್ಥೆ ಖನಿಜಾನ್ವೇಷಣೆ ಮಾಡಿದೆ ಎಂದು ಟೆಂಡರ್ ದಾಖಲೆಗಳಲ್ಲಿ ಹೇಳಲಾಗಿತ್ತು. ಈ ಸಂಸ್ಥೆ ಖನಿಜಾನ್ವೇಷಣೆ ನಡೆಸಿದ್ದು ಯಾವಾಗ ಎಂದು ಆರ್‌ಟಿಐ ಅಡಿ ಹೋರಾಟಗಾರರು ಪ್ರಶ್ನೆ ಮಾಡಿದ್ದರು.

ಇದಕ್ಕೆ ಉತ್ತರಿಸಿರುವ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 'ಕುಮಾರಸ್ವಾಮಿ ಐರನ್ ಓರ್ ಬ್ಲಾಕ್‌ನಲ್ಲಿ ಹೊಸದಾಗಿ ಯಾವುದೇ ಅನ್ವೇಷಣೆ ಕೈಗೊಂಡಿಲ್ಲ. ಈ ಪ್ರದೇಶದಲ್ಲಿ ಭಾರತೀಯ ಭೂವೈಜ್ಞಾನಿಕ ಸಂಸ್ಥೆ 1968-72ನೇ ಸಾಲಿನಲ್ಲಿ ಹಾಗೂ ರಾಷ್ಟ್ರೀಯ ಖನಿಜ ಅಭಿವೃದ್ಧಿ ನಿಗಮ (ಎನ್‌ಎಂಡಿಸಿ) 1973-81ನೇ ಸಾಲಿನಲ್ಲಿ ಖನಿಜಾನ್ವೇಷಣೆ ನಡೆಸಿದ್ದು, ಅದರ ವಿವರಗಳನ್ನು ಪರಿಗಣಿಸಿ ಎಂಇಸಿಎಲ್ ಸಂಸ್ಥೆಯು ಖನಿಜಾನ್ವೇಷಣೆ ವರದಿಯನ್ನು ಸಿದ್ಧಪಡಿಸಿದೆ. ಈ ವರದಿ ಅನ್ವಯ ಬ್ಲಾಕ್‌ಗಳನ್ನು ಹರಾಜಿಗೆ ಹಾಕಲಾಗಿದೆ. ಹರಾಜು ಪ್ರಕ್ರಿಯೆಯ ಅನುಮೋದನೆಯು ಸರ್ಕಾರದ ಹಂತದಲ್ಲಿ ಬಾಕಿ ಇರುತ್ತದೆ' ಎಂದು ಉತ್ತರ ನೀಡಿದೆ.

ಖನಿಜಾನ್ವೇಷಣೆ ಏಕೆ ಮುಖ್ಯ?: ನಿಯಮಗಳ ಪ್ರಕಾರ, ಗಣಿ ಬ್ಲಾಕ್‌ವೊಂದನ್ನು ಹರಾಜಿಗಿಡಬೇಕಿದ್ದರೆ ನಿರ್ದಿಷ್ಟ ಪ್ರದೇಶದಲ್ಲಿ ಖನಿಜಾನ್ವೇಷಣೆ ಆಗಿರಲೇ ಬೇಕು. ಇದರ ಆಧಾರದಲ್ಲೇ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಪ್ರೀಮಿಯಂ ನಿಗದಿ ಮಾಡುತ್ತದೆ. ಬಳಿಕ ಗಣಿಗಾರಿಕೆಗೆ ಯೋಜನೆ ಸಿದ್ಧವಾಗುತ್ತದೆ. ಸದ್ಯ 'ಕುಮಾರಸ್ವಾಮಿ ಐರನ್ ಓರ್ ಬ್ಲಾಕ್' ದಟ್ಟಾರಣ್ಯವಾದ ಕಾರಣ, ಖನಿಜ ಅನ್ವೇಷಣೆ ಮಾಡಬೇಕಿದ್ದರೆ ಮೊದಲಿಗೆ ಅರಣ್ಯ ಇಲಾಖೆಯ ಅನುಮತಿ ಬೇಕು. ಈ ಪ್ರಕ್ರಿಯೆಗೆ ಸಾಕಷ್ಟು ಸಮಯ ಹಿಡಿಯುತ್ತದೆ. ಖನಿಜಾನ್ವೇಷಣೆಯ ಪ್ರಸ್ತಾವವನ್ನು ಅರಣ್ಯ ಇಲಾಖೆ ತಳ್ಳಿ ಹಾಕುವ ಸಾಧ್ಯತೆಗಳೂ ಇರುತ್ತವೆ. ಹದ್ದಿನಪಡೆ ಎಂಬಲ್ಲಿ ಕೆಐಒಸಿಎಲ್ ನಡೆಸಲು ಉದ್ದೇಶಿಸಿದ್ದ ಖನಿಜ ಅನ್ವೇಷಣೆ ಪ್ರಸ್ತಾವನೆಯನ್ನು ಅರಣ್ಯ ಇಲಾಖೆ ಕಳೆದ ವರ್ಷ ತಳ್ಳಿಹಾಕಿತ್ತು. ಇದೆಲ್ಲವನ್ನೂ ತಪ್ಪಿಸಿಕೊಳ್ಳಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಳೇ ಅನ್ವೇಷಣೆ ಮೇಲೆ ಹೊಸ ವರದಿ ಪಡೆದು ಹರಾಜು ಹಾಕಿದೆ' ಎಂಬ ಆರೋಪ ಕೇಳಿ ಬಂದಿದೆ.

'ಕನಿಷ್ಠ 55 ವರ್ಷಗಳ ಹಿಂದಿನ ಅನ್ವೇಷಣೆಯೂ ಸಮಕಾಲೀನ ನೀತಿ, ಮಾನದಂಡ, ತಂತ್ರಜ್ಞಾನ, ಪದ್ಧತಿಗಳ ಆಧಾರದಲ್ಲಿ ನಡೆದಿರುತ್ತದೆ. ಇಂದಿಗೆ ಅದು ಪ್ರಸ್ತುತವಾಗಲಾರದು. ಸಂಡೂರಿನಲ್ಲಿ ಗಣಿ ಬ್ಲಾಕ್‌ಗಳನ್ನು ತೆಗೆದುಕೊಂಡ ಹಲವು ಕಂಪನಿಗಳು ಅದಿರು ಸಿಗದೇ ಕಂಗಾಲಾಗಿ, ಗಣಿ ಬ್ಲಾಕ್ ಅನ್ನೇ ಹಿಂದಕ್ಕೆ ಮರಳಿಸಿದ ಉದಾಹರಣೆಗಳಿವೆ. ಒಂದು ವೇಳೆ ಹಳೇ ಖನಿಜಾನ್ವೇಷಣೆ ಆಧಾರದಲ್ಲಿ ಇಲ್ಲಿಯೂ ಗಣಿಗಾರಿಕೆ ನಡೆದು ಅದಿರು ಸಿಗದಿದ್ದರೆ ಅರಣ್ಯ, ಬಂಡವಾಳ ನಾಶಕ್ಕೆ ಕಾರಣವಾಗುತ್ತದೆ. ಮತ್ತೊಂದು ಕಡೆ ಖಾಸಗಿ ಕಂಪನಿ ನಷ್ಟಕ್ಕೆ ಸಿಲುಕುವುದು ಖಚಿತ' ಎಂದು ಕೆಲ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಇನ್ನು ಈ ಬಗ್ಗೆ ಸ್ಪಷ್ಟನೆ ಪಡೆಯಲು ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ನಿರ್ದೇಶಕರನ್ನು ಸಂಪರ್ಕಿಸಲಾಯಿತು. ಅವರು ಪ್ರತಿಕ್ರಿಯೆಗೆ ಲಭ್ಯವಾಗಲಿಲ್ಲ.

ಅತ್ಯಾಚಾರ ಬಾಲಕಿ ಆತ್ಮಹತ್ಯೆ


ಸಂಡೂರು (ಬಳ್ಳಾರಿ ಜಿಲ್ಲೆ): ಇಲ್ಲಿನ ಗ್ರಾಮವೊಂದರಲ್ಲಿ 9ನೇ ತರಗತಿ ವಿದ್ಯಾರ್ಥಿನಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಆರೋಪಿ ಸುರೇಶ ಎಂಬಾತ ಅತ್ಯಾಚಾರ ಮಾಡಿದ್ದಾನೆ ಎಂದು ಡೆತ್‌ನೋಟ್ ಬರೆದಿದ್ದಾಳೆ.

'ಪ್ರೀತಿಸುವಂತೆ ನಮ್ಮ ಮಗಳನ್ನು ಸುರೇಶ ಒತ್ತಾಯಿಸುತ್ತಿದ್ದ. ಆಕೆ ಒಬ್ಬಳೇ ಇದ್ದಾಗ ಮನೆಯೊಳಗೆ ನುಗ್ಗಿ ಅತ್ಯಾಚಾರ ಮಾಡಿದ್ದಾನೆ. ನೊಂದು ಆಕೆ ಪತ್ರ ಬರೆದಿಟ್ಟು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಪೋಷಕರು ಆರೋಪಿಸಿದ್ದಾರೆ. 'ಆರೋಪಿ ಸುರೇಶ (25) ಎಂಬುವನನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.



ಕಾಡಾನೆ ಸೆರೆ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಹಲಸುಲಿಗೆ ಗ್ರಾಮದಲ್ಲಿ ಗುರುವಾರ ಸೆರೆ ಹಿಡಿದ ಒಂಟಿ ಕಾಡಾನೆಯನ್ನು ಸಾಕಾನೆಗಳ ನೆರವಿನಿಂದ ರಸ್ತೆಯವರೆಗೆ ಕರೆತರಲಾಯಿತು
ಚಿತ್ರ: ಜಾನೇಕೆರೆ ಆರ್. ಪರಮೇಶ್

ಅಟ್ಟಾರಿ– ವಾಘಾ ಗಡಿ ಸಂಪೂರ್ಣ ಬಂದ್



ಅಟ್ಟಾರಿ– ವಾಘಾ ಗಡಿಯನ್ನು ಸಂಪೂರ್ಣ ಮುಚ್ಚಲಾಗಿದ್ದು, ಭದ್ರತೆಗೆ ಬಿಎಸ್‌ಎಫ್ ಯೋಧರನ್ನು ನಿಯೋಜಿಸಲಾಗಿದೆ —ಪಿಟಿಐ ಚಿತ್ರ

ಒಂದನೇ ಪುಟದಿಂದ...

ಗಡಿಯನ್ನು ಈಗ ಸಂಪೂರ್ಣವಾಗಿ ಮುಚ್ಚಲಾಗಿದ್ದು, ಗುರುವಾರ ಎರಡೂ ದೇಶಗಳ ಯಾರೂ ಇನ್ನೊಂದು ದೇಶಕ್ಕೆ ಪಯಣಿಸಿಲ್ಲ ಎಂದು ಮೂಲಗಳು ತಿಳಿಸಿವೆ.

ಪಾಕಿಸ್ತಾನದ 125 ಪ್ರಜೆಗಳು ವಾಘಾ ಗಡಿ ಮೂಲಕ ಭಾರತವನ್ನು ಬುಧವಾರ ತೊರೆದರು. ಇದರೊಂದಿಗೆ ಕಳೆದ ಏಳು ದಿನಗಳಲ್ಲಿ ಭಾರತ ತೊರೆದ ಪಾಕಿಸ್ತಾನಿಯರ ಸಂಖ್ಯೆ 911ಕ್ಕೆ ಏರಿಕೆಯಾಗಿದೆ. ಪಾಕಿಸ್ತಾನದ ವೀಸಾ ಹೊಂದಿರುವ ಭಾರತದ 15 ಪ್ರಜೆಗಳು ಕೂಡಾ ಬುಧವಾರ ಪಾಕಿಸ್ತಾನ ಪ್ರವೇಶಿಸಿದರು.

ಭಾರತದ 152 ಪ್ರಜೆಗಳು ಮತ್ತು ಭಾರತದಲ್ಲಿ ತಂಗಲು ದೀರ್ಘಾವಧಿ ವೀಸಾ ಹೊಂದಿರುವ ಪಾಕಿಸ್ತಾನದ 73 ಪ್ರಜೆಗಳು ಬುಧವಾರ ಗಡಿ ದಾಟಿ ಭಾರತಕ್ಕೆ ಬಂದಿದ್ದಾರೆ. ಇದರೊಂದಿಗೆ ಪಾಕಿಸ್ತಾನದಿಂದ ಭಾರತಕ್ಕೆ ಬಂದವರ ಒಟ್ಟು ಸಂಖ್ಯೆ 1,617ಕ್ಕೆ ತಲುಪಿದೆ.

ಸ್ವರಕ್ಷಣೆಯ ಹಕ್ಕು: ಅಮೆರಿಕ ಬೆಂಬಲ

ಭಯೋತ್ಪಾದನೆಯ ವಿರುದ್ಧದ ಹೋರಾಟ ಮತ್ತು ಭಾರತದ ಸ್ವರಕ್ಷಣೆಯ ಹಕ್ಕನ್ನು ಬೆಂಬಲಿಸುವುದಾಗಿ ಅಮೆರಿಕ ಗುರುವಾರ ಹೇಳಿದೆ.

ಅಮೆರಿಕದ ರಕ್ಷಣಾ ಕಾರ್ಯದರ್ಶಿ ಪೀಟ್ ಹೆಗ್‌ಸೆತ್ ಅವರು ರಕ್ಷಣಾ ಸಚಿವ ರಾಜನಾಥ ಸಿಂಗ್ ಅವರಿಗೆ ಕರೆ ಮಾಡಿ ಮಾತನಾಡಿದ್ದು, ಭಾರತಕ್ಕೆ ತಮ್ಮ ದೇಶದ ಬೆಂಬಲ ಸೂಚಿಸಿದ್ದಾರೆ. 'ಪಾಕಿಸ್ತಾನವು ಜಾಗತಿಕ ಭಯೋತ್ಪಾದನೆಯನ್ನು ಉತ್ತೇಜಿಸುವ 'ಪುಂಡ' ರಾಷ್ಟ್ರ ಎಂಬುದು ಬಯಲಾಗಿದ್ದು, ಇಡೀ ಪ್ರದೇಶವನ್ನು ಅಸ್ಥಿರಗೊಳಿಸುತ್ತಿದೆ. ಜಗತ್ತು ಇನ್ನು ಮುಂದೆ ಭಯೋತ್ಪಾದನೆಯನ್ನು ಕಾಣದಂತೆ ನಟಿಸಲು ಸಾಧ್ಯವಿಲ್ಲ' ಎಂದು ಸಂಭಾಷಣೆ ವೇಳೆ ರಾಜನಾಥ್ ಅವರು ಹೆಗ್‌ಸೆತ್‌ಗೆ ಹೇಳಿದ್ದಾರೆ.

'ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಅಮೆರಿಕ ಸರ್ಕಾರದ ಬಲವಾದ ಬೆಂಬಲವನ್ನು ಹೆಗ್‌ಸೆತ್ ಅವರು ಪುನರುಚ್ಚರಿಸಿದ್ದಾರೆ. ಈಗಿನ ಪರಿಸ್ಥಿತಿಯಲ್ಲಿ ಅಮೆರಿಕವು ಭಾರತದ ಜತೆ ನಿಂತಿದ್ದು, ಸ್ವರಕ್ಷಣೆಗೆ ಭಾರತ ತೆಗೆದುಕೊಳ್ಳುವ ಕ್ರಮಗಳನ್ನು ಬೆಂಬಲಿಸುವುದಾಗಿ ಹೇಳಿದ್ದಾರೆ' ಎಂದು ರಕ್ಷಣಾ ಸಚಿವರ ಕಚೇರಿಯ ಪ್ರಕಟಣೆ ತಿಳಿಸಿದೆ.

'ಭಯೋತ್ಪಾದಕ ಸಂಘಟನೆಗಳಿಗೆ ಬೆಂಬಲ, ಹಣಕಾಸಿನ ನೆರವು ಮತ್ತು ಉಗ್ರರಿಗೆ ತರಬೇತಿ ನೀಡುವ ಸುದೀರ್ಘ ಇತಿಹಾಸವನ್ನು ಪಾಕಿಸ್ತಾನ ಹೊಂದಿದೆ. ಪಹಲ್ಗಾಮ್ ಘಟನೆಯನ್ನು ಜಾಗತಿಕ ಸಮುದಾಯವು ಖಂಡಿಸುವುದು ಅಗತ್ಯ' ಎಂದು ರಾಜನಾಥ ಅವರು ಹೆಗ್‌ಸೆತ್‌ಗೆ ತಿಳಿಸಿದ್ದಾರೆ.

ಪಿಒಕೆ: ಮದರಸಾ ಮುಚ್ಚಲು ನಿರ್ಧಾರ

ಒಂದನೇ ಪುಟದಿಂದ...

ಆದರೆ ಸರ್ಕಾರ ಹೊರಡಿಸಿರುವ ಸುತ್ತೋಲೆಯಲ್ಲಿ, ಬಿಸಿಗಾಳಿಯ ಸಾಧ್ಯತೆಯಿರುವುದರಿಂದ ಮದರಸಾಗಳನ್ನು ಮುಚ್ಚಲು ನಿರ್ಧರಿಸಲಾಗಿದೆ ಎಂದಿದೆ.

'ಇದೀಗ ನಾವು ಎರಡು ರೀತಿಯ ಬಿಸಿಗಾಳಿಗಳನ್ನು ಎದುರಿಸುತ್ತಿದ್ದೇವೆ. ಒಂದು ಹವಾಮಾನ ವೈಪರೀತ್ಯದಿಂದ, ಇನ್ನೊಂದು (ಭಾರತದ ಪ್ರಧಾನಿ) ಮೋದಿ ಅವರಿಂದ' ಎಂದು ಅಹ್ಮದ್ ಅವರು ಸುತ್ತೋಲೆಯ ಬಗ್ಗೆ ಪ್ರತಿಕ್ರಿಯಿಸಿದ್ದಾರೆ. 'ಜನರು ಆತಂಕಕ್ಕೆ ಒಳಗಾಗದಿರಲಿ ಎಂದು ಭಾರತದ ಸಂಭಾವ್ಯ ದಾಳಿಯ ಬಗ್ಗೆ ಸುತ್ತೋಲೆಯಲ್ಲಿ ಉಲ್ಲೇಖಿಸಿಲ್ಲ' ಎಂದಿದ್ದಾರೆ.

'ಮುಗ್ಧ ಮಕ್ಕಳು ಅಪಾಯಕ್ಕೆ ಸಿಲುಕಿಸದಿರಲಿ ಎಂದು ಮದರಸಾ ಮುಚ್ಚುವ ನಿರ್ಧಾರವನ್ನು ಬುಧವಾರ ನಡೆದ ಸಭೆಯಲ್ಲಿ ಸರ್ವಾನುಮತದಿಂದ ತೆಗೆದುಕೊಳ್ಳಲಾಯಿತು' ಎಂದು ಹೇಳಿದ್ದಾರೆ. ಧಾರ್ಮಿಕ ವ್ಯವಹಾರಗಳ ಇಲಾಖೆಯ ಮಾಹಿತಿ ಪ್ರಕಾರ, ಪಿಒಕೆಯಲ್ಲಿ 445 ನೋಂದಾಯಿತ ಮದರಸಾಗಳಿದ್ದು, 26 ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ಬಸ್‌ನಲ್ಲಿ ನಮಾಜ್ ಮಾಡಿದ್ದ ಚಾಲಕ ಅಮಾನತು

ಪ್ರಜಾವಾಣಿ ವಾರ್ತೆ

ಹಾವೇರಿ: ಜಿಲ್ಲೆಯ ಹಾನಗಲ್‌ನಿಂದ ವಿಶಾಲಗಡಕ್ಕೆ ಹೊರಟದ್ದ ಬಸ್‌ನ್ನು ಮಾರ್ಗಮಧ್ಯೆ ನಿಲ್ಲಿಸಿ ಪ್ರಯಾಣಿಕರ ಆಸನದಲ್ಲಿ ಕೂತು ನಮಾಜ್ ಮಾಡಿ ಕರ್ತವ್ಯಲೋಪ ಎಸಗಿದ್ದ ಆರೋಪದಡಿ ಚಾಲಕ ಎ.ಆರ್.ಮುಲ್ಲಾ ಅವರನ್ನು ಸೇವೆಯಿಂದ ಅಮಾನತು ಮಾಡಲಾಗಿದೆ.

ವಾಯುವ್ಯ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಯ (ವಾಕರಸಾಸಂ) ಹಾನಗಲ್ ಡಿಪೊದ ಚಾಲಕ ಮುಲ್ಲಾ ಅವರು ಬಸ್‌ನಲ್ಲಿ ನಮಾಜ್ ಮಾಡಿದ್ದ ದೃಶ್ಯದ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿತ್ತು.

'ಚಾಲಕ ಮುಲ್ಲಾ ಅವರು ಏಪ್ರಿಲ್ 29ರಂದು ವಿಶಾಲಗಡದಿಂದ ಹಾನಗಲ್‌ಗೆ ಬಸ್ ಚಲಾಯಿಸಿಕೊಂಡು ಬರುತ್ತಿದ್ದರು. ಹುಬ್ಬಳ್ಳಿ ಹೊರವಲಯದಲ್ಲಿರುವ ಗಬ್ಬೂರು ಕ್ರಾಸ್ ಬಳಿ ಸಂಜೆ 5.30ಕ್ಕೆ ಬಸ್ ನಿಲ್ಲಿಸಿದ್ದ ಮುಲ್ಲಾ, ಪ್ರಯಾಣಿಕರ ಸೀಟಿನಲ್ಲಿ ನಮಾಜ್ ಮಾಡಿದ್ದರು. ಕರ್ತವ್ಯದಲ್ಲಿರುವ ಸಂದರ್ಭದಲ್ಲಿ ಧಾರ್ಮಿಕ ಆಚರಣೆ ಮಾಡುವ ಮೂಲಕ ಚಾಲಕ, ಸಂಸ್ಥೆಗೆ ಕೆಟ್ಟ ಹೆಸರು ತಂದಿದ್ದಾರೆ. ಹೀಗಾಗಿ, ಅಮಾನತು ಮಾಡಲಾ ಗಿದೆ' ಎಂದು ಜಿಲ್ಲಾ ವಿಭಾಗೀಯ ನಿಯಂತ್ರಣಾಧಿಕಾರಿ ವಿಜಯಕುಮಾರ್ ಅಮಾನತು ಆದೇಶದಲ್ಲಿ ತಿಳಿಸಿದ್ದಾರೆ.


ಪುಸ್ತಕ ಓದದೇ ವಿಮರ್ಶೆ ಮಾಡುವವರಿಂದ ನನ್ನ ಮೇಲೆ ಆರೋಪ: ಮಹೇಶ್

'ಹಂಪನಾ ಅವಧಿಯಲ್ಲೇ ಹಣ ದುರುಪಯೋಗ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ನನ್ನ ವಿರುದ್ಧ ಆರೋಪ ಮಾಡುತ್ತಿರುವವರು ಪುಸ್ತಕ ಓದದೆಯೇ ವಿಮರ್ಶೆ ಮಾಡಿ ಬಹುಮಾನ ಪಡೆಯಲು ಹೊರಟವರು' ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಹೇಶ್ ಜೋಶಿ ಆರೋಪಿಸಿದರು.

ಇಲ್ಲಿ ಸುದ್ದಿಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು, 'ಪರಿಷತ್ತಿಗೆ ಆಡಳಿತಾಧಿಕಾರಿಯನ್ನು ನೇಮಿಸಲು ಒತ್ತಾಯಿಸಿ ಮುಖ್ಯಮಂತ್ರಿಯವರ ಬಳಿಗೆ ನಿಯೋಗ ಒಯ್ಯುವಲ್ಲಿ ಪ್ರಮುಖ ಪಾತ್ರವಹಿಸಿರುವ ಸಾಹಿತಿ ಹಂಪ ನಾಗರಾಜಯ್ಯ ಅವರು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾಗಿದ್ದ ಅವಧಿಯಲ್ಲೇ ಹಣಕಾಸಿನ ದುರುಪಯೋಗ ಆಗಿತ್ತು. ಸ್ವಜನ ಪಕ್ಷಪಾತ, ದುರ್ವರ್ತನೆ, ಅಧಿಕಾರ ದುರುಪಯೋಗ ಆರೋಪಗಳು ಅವರ ಮೇಲಿದ್ದವು. ಅವರ ಅವಧಿಯಲ್ಲಿ ದುರುಪಯೋಗವಾದ ಮೊತ್ತವನ್ನು ವಸೂಲಿ ಮಾಡುವಂತೆ ನ್ಯಾ.ಶ್ಯಾಮಸುಂದರ್ ಸಮಿತಿಯು ಶಿಫಾರಸು ಮಾಡಿತ್ತು. ಈ ವರದಿ ವಿಧಾನ ಮಂಡಲದಲ್ಲೂ ಮಂಡನೆಯಾಗಿತ್ತು. ನನ್ನ ವಿರುದ್ಧ ಆರೋಪ ಮಾಡಲು ಅವರಿಗೆ ಯಾವ ನೈತಿಕತೆ ಇದೆ' ಎಂದು ಪ್ರಶ್ನಿಸಿದರು.



ಮಹೇಶ್ ಜೋಶಿ

'ದುರುಪಯೋಗವಾದ ಮೊತ್ತವನ್ನು ವಸೂಲಿ ಮಾಡುವಂತೆ ಉಪವಿಭಾಗಾಧಿಕಾರಿಗೆ ಸೂಚಿಸುವ ಅಧಿಕಾರ ಸಹಕಾರ ಸಂಘಗಳ ಉಪನಿಬಂಧಕರಿಗೆ ಇಲ್ಲ ಎಂದು ಹಂಪ ನಾಗರಾಜಯ್ಯ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್ ಆ ನೋಟಿಸನ್ನು ರದ್ದುಪಡಿಸಿತ್ತು. ಆ ಬಳಿಕವೂ ವಸೂಲಿಗೆ ಕ್ರಮವಾಗಿಲ್ಲ. ಕಾನೂನು ಸಲಹೆ ಪಡೆದು ಈ ವಿಚಾರವನ್ನು ಕಾರ್ಯಕಾರಿ ಸಮಿತಿ ಮುಂದೆ ಮಂಡಿಸುತ್ತೇನೆ. ಸರ್ಕಾರದ ಗಮನಕ್ಕೂ ಈ ವಿಚಾರವನ್ನು ತರುತ್ತೇನೆ' ಎಂದರು.

'ಹಂಪನಾ ಅಧ್ಯಕ್ಷರಾಗಿ ಆಯ್ಕೆಯಾಗಿದ್ದ ಅವಧಿಯ ಚುನಾವಣೆ ನಿಷ್ಪಕ್ಷಪಾತವಾಗಿ ನಡೆದಿಲ್ಲ ಎಂದು ಪ್ರತಿಭಟನೆಗಳು ನಡೆದಿದ್ದವು. ಅಧ್ಯಕ್ಷರ ಅವಧಿಯನ್ನು ಮೂರು ವರ್ಷಗಳಿಂದ ಐದು ವರ್ಷಗಳಿಗೆ ಹೆಚ್ಚಿಸುವ ಕುರಿತು ಅವರು ಅಧ್ಯಕ್ಷರಾಗಿದ್ದಾಗಲೂ ತಿದ್ದುಪಡಿ ಮಾಡಲಾಗಿತ್ತು' ಎಂದರು.

'ಸರ್ವಾಧಿಕಾರಿಯಂತೆ ವರ್ತಿಸುತ್ತೇನೆ ಎಂದು ನನ್ನ ವಿರುದ್ಧ ಆರೋಪ ಮಾಡುವವರು ಪರಿಷತ್ತಿನ ಚುನಾವಣೆಯಲ್ಲಿ ಠೇವಣಿ ಕಳೆದುಕೊಂಡವರು. ಪರಿಷತ್ತಿನ ಬೈಲಾಗಳಿಗೆ ನನ್ನ ಅವಧಿಯಲ್ಲಿ ಮೂರು ತಿದ್ದುಪಡಿಗಳಾಗಿವೆ. ನಾಮನಿರ್ದೇಶಿತ ಸದಸ್ಯರನ್ನು ಯಾವುದೇ ಕಾರಣ ನೀಡದೇ ತೆಗೆಯುವ ಅಧಿಕಾರ ಅಧ್ಯಕ್ಷರಿಗೆ ನೀಡಲಾಗುತ್ತಿದೆ ಎಂಬುದು ಸುಳ್ಳು. ಸದಸ್ಯರ ವರ್ತನೆ ಪರಿಷತ್ತಿನ ಘನತೆ– ಗೌರವ, ಧ್ಯೇಯೊದ್ದೇಶಗಳಿಗೆ ವಿರುದ್ಧವಾಗಿದ್ದರೆ, ಅವರಿಂದ ವಿವರಣೆ ಪಡೆದು ಪರಿಶೀಲಿಸಬೇಕು. ಆರೋಪ ನಿಜವೆಂದು ಕಂಡುಬಂದರೆ ಮಾತ್ರ ಅವರನ್ನು ಅಮಾನತಿನಲ್ಲಿ ಇಡುವ ಅಧಿಕಾರವನ್ನು ಮಾತ್ರ ಅಧ್ಯಕ್ಷರಿಗೆ ನೀಡಲಾಗುತ್ತಿದೆ' ಎಂದು ಸ್ಪಷ್ಟಪಡಿಸಿದರು.

'ಗಡಿನಾಡ ಘಟಕದ ಚುನಾಯಿತ ಅಧ್ಯಕ್ಷರು ಮೃತಪಟ್ಟರೆ ಏನು ಮಾಡಬೇಕು ಎಂಬ ವಿವರಣೆ ಬೈಲಾದಲ್ಲಿ ಇಲ್ಲ. ಅದರ ಸೇರ್ಪಡೆಗೂ ತಿದ್ದುಪಡಿ ಅಗತ್ಯವಿದೆ' ಎಂದರು. ಮಂಡ್ಯ ಜಿಲ್ಲೆಯಲ್ಲಿ ನಡೆದ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಲೆಕ್ಕಪತ್ರವೇ ಇನ್ನೂ ನಮಗೆ ತಲುಪಿಲ್ಲ ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು. ಸುದ್ದಿಗೋಷ್ಠಿಯಲ್ಲಿ ಪರಿಷತ್ತಿನ ದಕ್ಷಿಣ ಕನ್ನಡ ಜಿಲ್ಲಾ ಘಟಕದ ಅಧ್ಯಕ್ಷ ಎಂ.ಪಿ. ಶ್ರೀನಾಥ್ ಮತ್ತಿತರರು ಭಾಗವಹಿಸಿದ್ದರು.

ಕೇಂದ್ರ ಸರ್ಕಾರದ ವಿರುದ್ಧ ಹುಬ್ಬಳ್ಳಿಯಲ್ಲಿ ಕಾಂಗ್ರೆಸ್ ಪ್ರತಿಭಟನಾ ಸಮಾವೇಶ

‘ಬಿಜೆಪಿಯಿಂದ ಪಾಠ ಕಲಿಯಬೇಕಿಲ್ಲ’

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿಯಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಶಾಸಕ ಪ್ರಸಾದ ಅಬ್ಬಯ್ಯ, ಸಚಿವ ಎಚ್.ಕೆ. ಪಾಟೀಲ, ಮುಖ್ಯಮಂತ್ರಿ ಸಿದ್ದರಾಮಯ್ಯ, ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ವಿಧಾನ ಪರಿಷತ್ತು ಸದಸ್ಯ ಸಲೀಂ ಅಹಮದ್ ಮತ್ತಿತರರು ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಹುಬ್ಬಳ್ಳಿ: ‘ಧರ್ಮ, ಪಕ್ಷಕ್ಕಿಂತ ದೇಶ ಮುಖ್ಯ. ದೇಶಕ್ಕೆ ಎದುರಾದ ಕಂಟಕವನ್ನು ನಾವೆಲ್ಲರೂ ಒಂದಾಗಿ ಎದುರಿಸಬೇಕೆ ಹೊರತು ರಾಜಕೀಯ ಭಾಷಣ ಮಾಡುತ್ತ ಕಾಲ ಕಳೆಯಬಾರದು. ಬ್ರಿಟಿಷರಿಗೆ ಬೆಂಬಲಿಸಿದವರು ಇಂದು ದೇಶಭಕ್ತಿಯ ಬಗ್ಗೆ ಪಾಠ ಮಾಡುವುದು ಸರಿಯಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಎಚ್ಚರಿಕೆ ನೀಡಿದರು.

ಕೇಂದ್ರ ಸರ್ಕಾರವು ಅಗತ್ಯ ವಸ್ತುಗಳ ಬೆಲೆ ಏರಿಕೆ ಮಾಡಿರುವುದನ್ನು ವಿರೋಧಿಸಿ ಇಲ್ಲಿ ಗುರುವಾರ ನಡೆದ ಕಾಂಗ್ರೆಸ್ ಪ್ರತಿಭಟನಾ ಸಮಾವೇಶದಲ್ಲಿ ಮಾತನಾಡಿದ ಅವರು, ‘ಕೇಂದ್ರದ ಸಚಿವರೊಬ್ಬರು ದೇಶದ ಜನರಲ್ಲಿ ದೇಶಭಕ್ತಿ ಇಲ್ಲ ಎನ್ನುತ್ತಾರೆ. ಹಾಗಾದರೆ, ಅವರೆಲ್ಲರೂ ದೇಶದ್ರೋಹಿಗಳೇ, ಬಿಜೆಪಿಯವರಷ್ಟೇ ದೇಶಭಕ್ತರೇ’ ಎಂದು ಪ್ರಶ್ನಿಸಿದರು.

‘ದೇಶಭಕ್ತಿ ಹೆಸರಿನಲ್ಲಿ ನಮ್ಮನ್ನು (ಕಾಂಗ್ರೆಸ್) ಕೆಣಕಬೇಡಿ. ನಮ್ಮನ್ನು ಮುಟ್ಟಿದರೆ, ನಮ್ಮ ಜನ ತಿರುಗಿಬಿದ್ದರೆ ನಿಮ್ಮ ವಿಳಾಸವೇ ಇರಲ್ಲ. ದೇಶಕ್ಕಾಗಿ ಒಂದಾಗಿ ದುಡಿಯೋಣ, ಜೀವ ಕೊಡೋಣ. ಆದರೆ, ಇಲ್ಲಸಲ್ಲದ ನೆಪವೊಡ್ಡಿ ನಮ್ಮನ್ನು ಹೆದರಿಸಲು ಬರಬೇಡಿ. ನಾವು ಎಂದಿಗೂ ಹೆದರುವುದಿಲ್ಲ’ ಎಂದು ಅವರು ಗುಡುಗಿದರು.

‘ಹಿಂದುಳಿದ ವರ್ಗದವರು, ಬುಡಕಟ್ಟು ಜನಾಂಗದವರ ಸ್ಥಿತಿಗತಿ ತಿಳಿಯಲು ಗಣತಿ ಅಗತ್ಯವಿದೆಯೆಂದು 2023ರ ಏಪ್ರಿಲ್ 16ರಂದು ಪ್ರಧಾನಿ ಮೋದಿ ಅವರಿಗೆ ಪತ್ರ ಬರೆದಿದ್ದೆ. ರಾಹುಲ್ ಗಾಂಧಿ ಅವರು ನಿರಂತರ ಇದನ್ನೇ ಗಣತಿ ವಿಷಯವನ್ನೇ ಪ್ರಸ್ತಾಪಿಸಿದರು. ಕಾಂಗ್ರೆಸ್ ದೇಶಾದ್ಯಂತ ಜಾಗೃತಿ ರ‍್ಯಾಲಿ ಕೈಗೊಂಡ ಬಳಿಕ ಕೇಂದ್ರ ಸರ್ಕಾರವು ಈಗ ಜಾತಿಗಣತಿ ಪ್ರಕ್ರಿಯೆಗೆ ಮುಂದಾಗಿದೆ’ ಎಂದರು.

> **ಕೇಂದ್ರ ಸರ್ಕಾರವು ಒಟ್ಟು ಮೀಸಲಾತಿ ಪ್ರಮಾಣದಲ್ಲಿ ಶೇ 50ರ ಮಿತಿ ತೆಗೆದು, ಶೇ 68ಕ್ಕೆ ಏರಿಸಬೇಕು. ಖಾಸಗಿ ಕ್ಷೇತ್ರಗಳಲ್ಲೂ ಮೀಸಲಾತಿ ಸೌಲಭ್ಯ ಕಲ್ಪಿಸಬೇಕು**
> **ಮಲ್ಲಿಕಾರ್ಜುನ ಖರ್ಗೆ,** ಅಧ್ಯಕ್ಷ, ಎಐಸಿಸಿ

‘ಗಣತಿ ಮಾಡಲು ಕೇಂದ್ರ ಸರ್ಕಾರಕ್ಕೆ ಈಗಲೂ ಇಚ್ಛಾಶಕ್ತಿ ಇಲ್ಲ. 2021ರ ಜನಗಣತಿ ಏಕೆ ಮಾಡಲಿಲ್ಲ? ಮಾಡಿದ್ದರೆ, ಜನರ ಸ್ಥಿತಿಗತಿ ಗೊತ್ತಾಗುತ್ತಿತ್ತು. ಈಗ ಒಲ್ಲದ ಮನಸ್ಸಿನಿಂದ ಮಾಡಲು ಮುಂದಾಗಿದೆ. ನಿಜವಾಗಿಯೂ ಆಸಕ್ತಿ ಇದ್ದರೆ, ಮೂರು ತಿಂಗಳಲ್ಲಿ ಗಣತಿ ಪ್ರಕ್ರಿಯೆ ಮಾಡಿ ತೋರಿಸಲಿ’ ಎಂದರು.

‘ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯ ಬಗ್ಗೆ ವಿಶೇಷ ಅಧಿವೇಶನ ಕರೆಯಬೇಕು. ಮೂರು–ನಾಲ್ಕು ಹಂತದ ಭದ್ರತಾ ವ್ಯವಸ್ಥೆ ಇದ್ದರೂ ಪಹಲ್ಗಾಮ್ ದುರಂತ ಹೇಗೆ ಸಂಭವಿಸಿತು ಎಂಬುದು ದೇಶಕ್ಕೆ ಗೊತ್ತಾಗಬೇಕು. ಘಟನೆಗೆ ಯಾರು ಕಾರಣ? ಬೇಹುಗಾರಿಕಾ ಅಥವಾ ಭದ್ರತೆಯ ವೈಫಲ್ಯವೇ ಎಂಬ ಬಗ್ಗೆ ಸುದೀರ್ಘ ಚರ್ಚೆಯಾಗಬೇಕು’ ಎಂದು ಹೇಳಿದರು.


ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿ, ‘ಪಕ್ಷದ ನಾಯಕ ರಾಹುಲ್ ಗಾಂಧಿ ಅವರ ಒತ್ತಡದಿಂದ ಕೇಂದ್ರ ಸರ್ಕಾರ ಜಾತಿಗಣತಿ ಮಾಡಲು ಮುಂದಾಗಿದೆ. ಮೀಸಲಾತಿ ಪ್ರಮಾಣವನ್ನು ಈಗಿರುವ ಶೇ 50ಕ್ಕಿಂತ ಹೆಚ್ಚಿಸದಂತೆ ಸುಪ್ರೀಂ ಕೋರ್ಟ್ ಹೇಳಿತ್ತು. ಮೋದಿ ಅವರು ಪ್ರಧಾನಿಯಾದ ಬಳಿಕ ಆರ್ಥಿಕವಾಗಿ ದುರ್ಬಲವಾದ ಮೇಲ್ವರ್ಗದವರಿಗೆ (ಇಡಬ್ಲುಎಸ್) ಶೇ 10ರಷ್ಟು ಮೀಸಲಾತಿ ಕೊಟ್ಟಿದ್ದಾರೆ. ಇದು ಮೀಸಲಾತಿಯ ಒಟ್ಟು ಪ್ರಮಾಣ ಶೇ 50ಕ್ಕಿಂತಲೂ ಹೆಚ್ಚಾಯಿತ್ತಲ್ಲವೇ’ ಎಂದು ಪ್ರಶ್ನಿಸಿದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಸಚಿವ ಸಂತೋಷ ಲಾಡ್ ಮಾತನಾಡಿದರು.

ಸಚಿವರಾದ ಶಿವಾನಂದ ಪಾಟೀಲ, ಶಿವರಾಜ ತಂಗಡಗಿ, ಶಾಸಕರಾದ ಎನ್.ಎಚ್.ಕೋನರಡ್ಡಿ, ಶ್ರೀನಿವಾಸ ಮಾನೆ, ಪಠಾಣ, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ, ಮುಖಂಡ ಶಾಕೀರ ಸನದಿ, ಅಜ್ಮಮಪೀರ ಖಾದ್ರಿ ಇದ್ದರು

ಆಚಾರ್ಯ ಶಂಕರ: ಅದ್ವೈತದ ಮಹಾಗುರು

• ಎಸ್. ಸೂರ್ಯಪ್ರಕಾಶ ಪಂಡಿತ್



ಮನುಷ್ಯ ಬುದ್ಧಿವಂತನಾದಷ್ಟೂ ಅವನ ಜೀವನದ ಗುಣಮಟ್ಟ ಸುಧಾರಿಸಬೇಕು; ನೆಮ್ಮದಿಯ ಬಾಳ್ವೆ ಅವನದ್ದಾಗಬೇಕು. ಆದರೆ ಈಗಿನ ಪರಿಸ್ಥಿತಿ ಇದಕ್ಕೆ ವಿರುದ್ಧವಾಗಿದೆ. ಸುಖದ ಹುಡುಕಾಟದಲ್ಲಿ ಮನುಷ್ಯನು ಪಡೆದಿರುವ ಫಲ ಎಂದರೆ ಆತಂಕ-ಭಯಗಳೇ; ಅವನ ಬುದ್ಧಿವಂತಿಕೆ ಅವನಿಗೆ ನೀಡುತ್ತಿರುವ ಬಳುವಳಿ ಎಂದರೆ ಅದು ಅಶಾಂತಿಯೇ. ‘ಈ ವಿಪರೀತ ವಿದ್ಯಮಾನಗಳಿಗೆ ಕಾರಣವೇನು? ಮನುಷ್ಯನ ಬುದ್ಧಿಶಕ್ತಿಯು ಅವನ ನೆಮ್ಮದಿಗೆ ಬೇಕಾದ ವಿವೇಕಶಕ್ತಿಯನ್ನು ನೀಡುವಲ್ಲಿ ವಿಫಲವಾಗಿರುವುದಾದರೂ ಏಕೆ? ಮನುಷ್ಯನ ದಿಟವಾದ ನೆಮ್ಮದಿ–ಆನಂದಗಳ ಸ್ವರೂಪ ಏನು? ಅವುಗಳ ನೆಲೆಯಾದರೂ ಎಲ್ಲಿ’ ಇಂಥ ಜೀವನಾಭಿಮುಖವಾದ ಹಲವು ಪ್ರಶ್ನೆಗಳಿಗೆ ಉತ್ತರವನ್ನು ಕೊಡುವಂಥದ್ದೇ ವೇದಾಂತ. ಈ ವೇದಾಂತಶಾಸ್ತ್ರದ ಕಾಂತಿಯನ್ನೂ ಬಲವನ್ನೂ ಹೆಚ್ಚಿಸಿ, ಅದನ್ನು ಗಟ್ಟಿಯಾಗಿ ನೆಲೆಗೊಳಿಸಿದವರು ಶಂಕರಾಚಾರ್ಯರು.

‘ವೇದಾಂತ’ ಎಂದರೆ ವೇದದ ಕೊನೆ, ತಾತ್ಪರ್ಯ. ‘ವೇದ’ ಎಂದರೆ ತಿಳಿವಳಿಕೆ, ಅರಿವು, ಜ್ಞಾನ. ನಮ್ಮ ಅರಿವಿನ ಕೊನೆಯನ್ನು, ಎಂದರೆ ಅದರ ಅಂತಿಮ ಗುರಿಯನ್ನು ತಿಳಿಸಿಕೊಡುವುದೇ ವೇದಾಂತ. ಶಂಕರಾಚಾರ್ಯರು ವೇದಾಂತಕ್ಕೆ ಸ್ಪಷ್ಟತೆಯನ್ನು ತಂದುಕೊಟ್ಟವರು. ವೇದಾಂತದ ಗುರಿಯೇ ಬ್ರಹ್ಮಜ್ಞಾನದ ಅರಿವು ಎಂಬುದನ್ನು ಅವರು ಪ್ರತಿಪಾದಿಸಿದರು. ಬ್ರಹ್ಮಜ್ಞಾನ ಎಂದರೆ ನಮ್ಮತನದ ಅರಿವಲ್ಲದೆ ಬೇರೇನೂ ಅಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ನಮ್ಮತನದ ಅರಿವು ಎಂದರೆ ಏನು? ನಾನು ಯಾರು – ಎಂಬುದನ್ನು ಕಂಡುಕೊಳ್ಳುವುದೇ ನಮ್ಮತನದ ಅರಿವು. ಈ ಪ್ರಶ್ನೆಗೆ ಉತ್ತರ ಮೇಲ್ನೋಟಕ್ಕೆ ಬಹಳ ಸುಲಭ ಎನಿಸುತ್ತದೆ. ಆದರೆ ಹಂತಹಂತವಾಗಿ ಈ ಪ್ರಶ್ನೆಯ ಆಳಕ್ಕೆ ಇಳಿಯುತ್ತಹೋದಂತೆ ಇದರ ಗಹನತೆ ನಮ್ಮನ್ನು ಬೆರಗುಗೊಳಿಸದಿರದು. ನಾವು ದಿಟವಾಗಿಯೂ ಯಾರು – ಎಂಬುದನ್ನು ಸರಿಯಾಗಿ ತಿಳಿದುಕೊಳ್ಳಲು ವಿಫಲವಾಗಿರುವುದೇ ಇಂದಿನ ನಮ್ಮ ಸಮಸ್ಯೆಗಳಿಗೆ ಮೂಲಕಾರಣವಾಗಿದೆ.

ನಾವು ಸತ್ಯವನ್ನು ಸುಳ್ಳು ಎಂಬಂತೆಯೂ, ಸುಳ್ಳನ್ನು ಸತ್ಯ ಎಂಬಂತೆಯೂ ಸ್ವೀಕರಿಸುತ್ತಿದ್ದೇವೆ. ಇದೇ ಅವಿದ್ಯೆ. ಈ ಅವಿದ್ಯೆಯಿಂದ ನಾವು ಬಿಡುಗಡೆಯನ್ನು ಸಾಧಿಸಬೇಕೆಂಬುದೇ ವೇದಾಂತದ ತವಕ. ಇಂಥ ಅವಿದ್ಯೆಯ ಮೂಲವನ್ನು ಶಂಕರಾಚಾರ್ಯರು ‘ಅಧ್ಯಾಸ’ ಎಂದು ಒಕ್ಕಣಿಸಿದರು.‘ಅದಲ್ಲದ್ದರಲ್ಲಿ ಅದು ಎಂಬ ತಿಳಿವಳಿಕೆಯೇ ಅಧ್ಯಾಸ’ ಎಂದಿದ್ದಾರೆ. ಇದು ಹೇಗೆ ಎಂದರೆ ಹಗ್ಗವನ್ನು ಕಂಡು ಹಾವು ಎಂದು ಹೆದರಿಕೊಂಡಂತೆ! ‘ನಾನು ಬಡವ, ನಾನು ಶ್ರೀಮಂತ; ನಾನು ಆ ಜಾತಿಯವನು, ನಾನು ಈ ಧರ್ಮದವನು; ನಾನು ಆ ರಾಜ್ಯದವನು, ನಾನು ಈ ಭಾಷೆಯವನು’ – ಹೀಗೆ ನಮ್ಮನ್ನು ನಾವು ಏನೇನೋ ಆಗಿ ತಿಳಿದುಕೊಳ್ಳುತ್ತಿರುತ್ತೇವೆ. ಹೀಗೆ ನಾವು ತಿಳಿದುಕೊಂಡಿರುವುದನ್ನೇ ಸತ್ಯ ಎಂದು ಹಟವನ್ನೂ ಮಾಡುತ್ತಿರುತ್ತೇವೆ. ಈ ಹಟಬುದ್ಧಿಯಿಂದ ನಮ್ಮಲ್ಲಿ ಪೂರ್ವಗ್ರಹಗಳು ಉಂಟಾಗಿ ಅವು ರಾಗ–ದ್ವೇಷಗಳಿಗೆ ಮೂಲವಾಗುತ್ತವೆ. ಈ ರಾಗದ್ವೇಷಗಳು ನಮ್ಮನ್ನು ಆಕ್ರಮಿಸಿಕೊಂಡು ನಮ್ಮಿಂದ ಎಲ್ಲ ಅನಾಹುತಗಳನ್ನು ಮಾಡಿಸುತ್ತಿರುತ್ತವೆ. ಒಮ್ಮೆ ನಾವು ಯಾರೆಂದು ನಮಗೇ ಅರಿವಾದರೆ ಆಗ ನಮ್ಮ ರಾಗದ್ವೇಷಗಳು ಅಡಗಿ, ನಮ್ಮಲ್ಲಿ ವಿವೇಕದ ಉದಯವಾಗಿ, ಉದ್ವೇಗಗಳು ತೊಲಗಿ ನೆಮ್ಮದಿ ಮೂಡಿಕೊಳ್ಳುತ್ತದೆ. ಹೀಗೆ ನಮ್ಮಲ್ಲಿ ನೆಮ್ಮದಿಯನ್ನು ನೆಲೆಗೊಳಿಸುವುದೇ ವೇದಾಂತದ ಗುರಿ.

ಹಾಗಾದರೆ ನಾವು ನಿಜವಾಗಿಯೂ ಯಾರು? ನಾವೆಲ್ಲರೂ ಚೈತನ್ಯಸ್ವರೂಪಿಗಳು. ಈ ಚೈತನ್ಯವಸ್ತುವನ್ನೇ ವೇದಾಂತಶಾಸ್ತ್ರ ‘ಬ್ರಹ್ಮ’ ಎಂದು ಕರೆದಿರುವುದು. ನಾವು ಈ ಬ್ರಹ್ಮಜ್ಞಾನವನ್ನು ಸಂಪಾದಿಸುವ ವಿಧಾನವನ್ನು ತಿಳಿಸಿಕೊಟ್ಟಿರುವುದೇ ಶಂಕರಾಚಾರ್ಯರ ಹಿರಿಮೆ.

ಬ್ರಹ್ಮಜ್ಞಾನವನ್ನು ಸಂಪಾದಿಸಲು ನಮಗೆ ಬೇಕಾದ ಮೊದಲ ಅರ್ಹತೆ ಎಂದರೆ ಮೊದಲಿಗೆ ನಾವು ಮನುಷ್ಯರಾಗಬೇಕು ಎಂದು ಸೂಚಿಸುತ್ತಾರೆ, ಶಂಕರರು. ಈ ಸಾಧನೆಯ ಮಾರ್ಗವೇ ಸಾಧನಚತುಷ್ಟಯ. ನಮ್ಮ ಒಳಗಿನ ಮತ್ತು ಹೊರಗಿನ, ಎಲ್ಲ ವಿಧದ ಕೊಳೆಗಳನ್ನು ಕಳೆದುಕೊಳ್ಳುವ ವಿಧಾನವೇ ಈ ಸಾಧನೆಯ ತಾತ್ಪರ್ಯ. ನಮ್ಮ ಎಲ್ಲ ಭಾವ-ಬುದ್ಧಿಗಳು ಸಂಸ್ಕಾರಗೊಂಡು ಮನಸ್ಸು ಉದ್ವೇಗವನ್ನು ಕಳೆದುಕೊಂಡಾಗ ಎಲ್ಲೆಲ್ಲೂ ನಮಗೆ ಏಕತೆಯೇ ಅರಿವಿಗೆ ಬರುತ್ತದೆ. ಇಂಥ ಏಕತೆಯನ್ನು ಪಡೆದ ವ್ಯಕ್ತಿಯಲ್ಲಿ ಎಂಥ ಭೇದಬುದ್ಧಿಗೂ ನೆಲೆ ಇರದು. ಭೇದಬುದ್ಧಿಯೇ ಇಲ್ಲದಿದ್ದಾಗ ಭಯ, ದ್ವೇಷ, ಆತಂಕ, ಹಿಂಸೆಗಳಿಗೆ ಅವಕಾಶವಾದರೂ ಹೇಗಿದ್ದೀತು? ಇಂಥ ಸಮಾನತೆಯ ದರ್ಶನವೇ ಅದ್ವೈತದರ್ಶನ. ಇದನ್ನು ಲೋಕದಲ್ಲಿ ಸ್ಥಿರಗೊಳಿಸಿದವರು ಆಚಾರ್ಯ ಶಂಕರರು. ❖

ಅಪಘಾತ: ಬಿ. ಚನ್ನಕೃಷ್ಣಪ್ಪ ಮೃತ

ಪ್ರಜಾವಾಣಿ ವಾರ್ತೆ



ಬೆಂಗಳೂರು: ರಾಷ್ಟ್ರೀಯ ಹೆದ್ದಾರಿ 44ರ ವರ್ಲಕೊಂಡ ಬಳಿ ಬುಧವಾರ ಸಂಭವಿಸಿದ ರಸ್ತೆ ಅಪಘಾತದಲ್ಲಿ ಕರ್ನಾಟಕ ಸಮತಾ ಸೈನಿಕ ದಳದ ರಾಜ್ಯ ಘಟಕ ಅಧ್ಯಕ್ಷ ಬಿ. ಚನ್ನಕೃಷ್ಣಪ್ಪ ಮೃತಪಟ್ಟಿದ್ದಾರೆ.

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಹೊಸಕೋಟೆಯ ಚನ್ನಕೃಷ್ಣಪ್ಪ ಅವರು ಕೆಲಸದ ನಿಮಿತ್ತ ಸ್ನೇಹಿತರ ಜೊತೆ ಬಾಗೇಪಲ್ಲಿಗೆ ಹೋಗಿದ್ದರು. ಹೊಸಕೋಟೆಗೆ ಮರಳುವಾಗ ಅಪಘಾತ ಸಂಭವಿಸಿದೆ. ಟೈರ್ ಸ್ಫೋಟಗೊಂಡ ಪರಿಣಾಮ ಕಾರು ಪಲ್ಟಿಯಾಗಿದೆ. ಚನ್ನಕೃಷ್ಣಪ್ಪ ಸ್ಥಳದಲ್ಲೇ ಅಸುನೀಗಿದರು.

ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ. ಹುಟ್ಟೂರು ಹೊಸಕೋಟೆ ತಾಲ್ಲೂಕು ದಳಸಗೆರೆ ಗ್ರಾಮದಲ್ಲಿ ಬುದ್ಧ ದಮ್ಮದ ವಿಧಿ ವಿಧಾನದಂತೆ ಗುರುವಾರ ಸಂಜೆ ಅಂತ್ಯ ಸಂಸ್ಕಾರ ನೆರವೇರಿತು.

ವಿದ್ಯಾರ್ಥಿ ಆಗಿದ್ದಾಗಲೇ ಚಳವಳಿಗೆ ಧುಮುಕಿದ್ದ ಅವರು, ಬೌದ್ಧ ಧರ್ಮ ಸ್ವೀಕರಿಸಿದ್ದರು. ಕರ್ನಾಟಕ ಕೊಳೆಗೇರಿ ಅಭಿವೃದ್ಧಿ ಮಂಡಳಿ ನಿರ್ಮಿಸಿರುವ ಸುಮಾರು 2,500 ಮನೆಗಳನ್ನು ಪೌರ ಕಾರ್ಮಿಕರಿಗೆ ಹಾಗೂ ಬೆಂಗಳೂರು ನಗರದ ಕಡುಬಡವರಿಗೆ ಹಂಚಿಕೆ ಮಾಡಿಸುವುದರಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ಸಮತಾ ಸೈನಿಕ ದಳದ ಶತಮಾನೋತ್ಸವ ಸಂದರ್ಭದಲ್ಲಿ ಮೈಸೂರಿನಲ್ಲಿ ಕಾರ್ಯಕ್ರಮ ಆಯೋಜಿಸಿ, ಅಂಬೇಡ್ಕರ್ ಅವರ ಚಿತಾಭಸ್ಮವನ್ನು ಮುಂಬೈನಿಂದ ಮೈಸೂರಿಗೆ ತಂದು ಮೆರವಣಿಗೆ ಮಾಡಿಸಿದ್ದರು.

ಅಂಬೇಡ್ಕರ್ ಅವರು ಸ್ಥಾಪಿಸಿದ್ದ ಸಮತಾ ಸೈನಿಕ ದಳವನ್ನು ಕರ್ನಾಟಕದಲ್ಲಿ ಕಟ್ಟಲು ಅವರು ಶ್ರಮಿಸಿದ್ದಲ್ಲದೇ, ಎಲ್ಲ ಜಿಲ್ಲೆಗಳಲ್ಲೂ ಅದರ ಘಟಕವನ್ನು ರಚನೆ ಮಾಡಲು ಪ್ರೇರಣೆಯಾಗಿದ್ದರು. ಅಂಬೇಡ್ಕರ್ ಸ್ಫೂರ್ತಿ ಸೌಧ ನಿರ್ಮಾಣಕ್ಕಾಗಿ ಹತ್ತು ವರ್ಷಗಳು ಹೋರಾಟ ನಡೆಸಿದ್ದರು.

ದೇವನೂರರ ಲೇಖನಗಳಿಗೆ ರಂಗರೂಪ; 4ಕ್ಕೆ ಚೊಚ್ಚಲ ಪ್ರದರ್ಶನ

ರಂಗದ ಮೇಲೆ ‘ಎದೆಗೆ ಬಿದ್ದ ಅಕ್ಷರ’

ಪ್ರಜಾವಾಣಿ ವಾರ್ತೆ



‘ಎದೆಗೆ ಬಿದ್ದ ಅಕ್ಷರ’ ರಂಗತಾಲೀಮಿನ ದೃಶ್ಯ

ಮೈಸೂರು: ಸೂಕ್ಷ್ಮ ಸಂವೇದನೆಯ ಸಾಹಿತಿ ದೇವನೂರ ಮಹಾದೇವ ಅವರ ‘ಎದೆಗೆ ಬಿದ್ದ ಅಕ್ಷರ’ ಕೃತಿಯು ರಂಗರೂಪದಲ್ಲಿ ಪ್ರೇಕ್ಷಕರ ಮುಂದೆ ಬರಲಿದ್ದು, ಮೇ 4ರಂದು ಚೊಚ್ಚಲ ಪ್ರದರ್ಶನಕ್ಕೆ ತಾಲೀಮು ನಡೆದಿದೆ.

ಕಥೆಗಳೇ ಇಲ್ಲದ ಕೃತಿಯು ನಾಟಕದ ರೂಪದಲ್ಲಿ ಬರುತ್ತಿರುವುದು ವಿಶೇಷ. ಪ್ರಬಂಧ, ಭಾಷಣ, ವಿಚಾರ ಹಾಗೂ ಲೇಖನಗಳ ಹೂರಣವಾದ ‘ಎದೆಗೆ ಬಿದ್ದ ಅಕ್ಷರ’ದಲ್ಲಿ 19 ಲೇಖನಗಳಿದ್ದು, ಇವೆಲ್ಲದರ ಆಶಯವನ್ನು ಒಟ್ಟುಗೂಡಿಸಿ ರಂಗರೂಪ ನೀಡಲಾಗಿದೆ. ವರ್ತಮಾನದ ತಲ್ಲಣಗಳನ್ನು ಪ್ರತಿಧ್ವನಿಸುವ ನಾಟಕ ಇದಾಗಲಿದೆ. ವಚನಗಳು ಸೇರಿ 20 ಹಾಡುಗಳನ್ನು ಸಂಯೋಜನೆ ಮಾಡಲಾಗಿದೆ. ಪಪೆಟ್ ಹಾಗೂ ಆ್ಯನಿಮೇಷನ್ ಪ್ರಯೋಗವೂ ಇದೆ.

ಇಡೀ ನಾಟಕದಲ್ಲಿ ಎಲ್ಲಿಯೂ ದೇವನೂರ ಮಹಾದೇವ ಪಾತ್ರ ಬರುವುದಿಲ್ಲ. ಆದರೆ, ಅವರ ಆಶಯಗಳಿಗೆ ಪೂರಕವಾಗಿ, ಯು.ಆರ್. ಅನಂತಮೂರ್ತಿ ಆದಿಯಾಗಿ ನಾಡಿನ ಹಲವು ಸಾಹಿತಿಗಳು–ವಿಚಾರವಾದಿಗಳ ಪಾತ್ರಗಳು ಬರುತ್ತವೆ.

ಕುವೆಂಪು ಅವರ ‘ಮಲೆಗಳಲ್ಲಿ ಮದುಮಗಳು’ ಕೃತಿಯನ್ನು ರಂಗಕ್ಕೆ ತಂದಿದ್ದ ಸಿ. ಬಸವಲಿಂಗಯ್ಯ ಈ ನಾಟಕವನ್ನು ನಿರ್ದೇಶಿಸಿದ್ದಾರೆ. ಎಸ್. ನಟರಾಜ್ ಬೂದಾಳ್ ಹಾಗೂ ಆರ್. ಸಂತೋಷ್ ನಾಯಕ್ ಅವರು ಈ ಕೃತಿಯನ್ನು ರಂಗರೂಪಕ್ಕೆ ತಂದಿದ್ದಾರೆ. ಪ್ರಶಾಂತ್ ಹೆಬ್ಬಸೂರು ರಂಗಸಜ್ಜಿಕೆ, ಸುಬ್ರಹ್ಮಣ್ಯ ಅವರು ಧ್ವನಿವಿನ್ಯಾಸದ ಜವಾಬ್ದಾರಿ ಹೊತ್ತಿದ್ದಾರೆ.

ಮೈಸೂರಿನ ‘ಕಾವಲುಮನೆ ಸಾಂಸ್ಕೃತಿಕ ಕೇಂದ್ರ’ ಈ ನಾಟಕ ಪ್ರಸ್ತುತಪಡಿಸುತ್ತಿದ್ದು, ಮೇ 4ರಂದು ಸಂಜೆ 6.30ಕ್ಕೆ ನಗರದ ವಿನೋಬಾ ರಸ್ತೆಯ ಕಲಾಮಂದಿರ ಆವರಣದ ಕಿರುರಂಗಮಂದಿರದಲ್ಲಿ ಮೊದಲ ಪ್ರದರ್ಶನ ನಡೆಯಲಿದೆ. ಮರು ಪ್ರದರ್ಶನವನ್ನು ಮೇ 9, 18, 23, 24, 25ರಂದು ಕಿರು ರಂಗಮಂದಿರದಲ್ಲೇ ಆಯೋಜಿಸಲಾಗಿದೆ.

> **ಈ ಕೃತಿಯಲ್ಲಿನ ವಿಚಾರಗಳು ಎಲ್ಲರ ಎದೆಗೆ ಬೀಳಬೇಕು ಎಂಬ ಆಶಯದಿಂದ ರಂಗರೂಪಕ್ಕೆ ತಂದಿದ್ದು, ಬಸವಲಿಂಗಯ್ಯ ಪರಿಣಾಮಕಾರಿಯಾಗಿ ನಿರ್ದೇಶನ ಮಾಡಿದ್ದಾರೆ**
> **ಆರ್. ಸಂತೋಷ್,** ನಾಯಕ್ ಲೇಖಕ

> **‘ಎದೆಗೆ ಬಿದ್ದ ಅಕ್ಷರ’ ಜನಕಥನವೇ ಆಗಿದೆ. ವರ್ತಮಾನದ ಸಂಕಟಗಳನ್ನು ಬಿಂಬಿಸುವ ನಾಟಕವು ಪ್ರಜಾಪ್ರಭುತ್ವದ ಆಶಯಗಳನ್ನು ಧ್ವನಿಸುತ್ತದೆ**
> **ಸಿ. ಬಸವಲಿಂಗಯ್ಯ,** ರಂಗ ನಿರ್ದೇಶಕ

‘₹575 ಕೋಟಿ ಎಲ್ಲಿ ಸಾಲುತ್ತದೆ?’

ಜಾತಿಗಣತಿ ನಡೆಸಲು ಮೀಸಲಿಟ್ಟಿರುವ ಹಣ • ಕೇಂದ್ರ ಸರ್ಕಾರಕ್ಕೆ ಮಲ್ಲಿಕಾರ್ಜುನ ಖರ್ಗೆ ಪ್ರಶ್ನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರವು ಜಾತಿಗಣತಿ ನಡೆಸುತ್ತೇವೆ ಎಂದು ಘೋಷಿಸಿದೆ. ಆದರೆ ಈ ಬಾರಿ ಬಜೆಟ್‌ನಲ್ಲಿ ಕೇವಲ ₹575 ಕೋಟಿ ಮೀಸಲಿರಿಸಿದೆ. ಇದು ಯಾವುದಕ್ಕೂ ಸಾಲುವುದಿಲ್ಲ’ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಹೇಳಿದರು.


ಮಲ್ಲಿಕಾರ್ಜುನ ಖರ್ಗೆ

ಬಿಬಿಎಂಪಿಯು ಗುರುವಾರ ಆಯೋಜಿಸಿದ್ದ ಕಾರ್ಮಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ‘ಜಾತಿಗಣತಿ ನಡೆಸಲು 2010ರಲ್ಲಿ ನಮ್ಮದೇ ಯುಪಿಎ ಸರ್ಕಾರ ಒಪ್ಪಿಗೆ ನೀಡಿತ್ತು. ಜಾತಿಗಣತಿಗೆ ಅಗತ್ಯವಿದ್ದ ದತ್ತಾಂಶವನ್ನು ಸಂಗ್ರಹ ಮಾಡಲಾಗಿತ್ತು. ಆದರೆ, ವರದಿ ಬಹಿರಂಗವಾಗಲಿಲ್ಲ’ ಎಂದರು.

‘ಕರ್ನಾಟಕದಲ್ಲಿ ನಮ್ಮ ಪಕ್ಷದ್ದೇ ಸರ್ಕಾರ ಸಾಮಾಜಿಕ ಸಮೀಕ್ಷೆ ಆರಂಭಿಸಿತ್ತು. ಅದಕ್ಕೆ ಕೇಂದ್ರವೇ ಆರಂಭಿಕ ಅನುದಾನ ನೀಡಿತ್ತು. ದೇಶದಾದ್ಯಂತ ಜಾತಿಗಣತಿಗೆ ಮುಂದಡಿ ಇಟ್ಟಿದ್ದೇ ನಾವು. ಆದರೆ ಅದನ್ನು ನಾವು ಪ್ರಚಾರಕ್ಕೆ ಬಳಸಿಕೊಳ್ಳಲಿಲ್ಲ ಅಥವಾ ಬಳಸಿಕೊಳ್ಳಲು ನಮಗೆ ಬರಲಿಲ್ಲ’ ಎಂದರು.

‘ದೇಶದಾದ್ಯಂತ ಜಾತಿ ಗಣತಿ ನಡೆಸಬೇಕು ಎಂದು ರಾಹುಲ್ ಗಾಂಧಿ ಅವರು ಲೋಕಸಭೆಯಲ್ಲಿ ಪದೇ–ಪದೇ ಒತ್ತಾಯಿಸಿದ್ದರು. ಎಲ್ಲ ರಾಜ್ಯಗಳಲ್ಲೂ ಈ ವಿಷಯ ಪ್ರಸ್ತಾಪಿಸಿದ್ದರು. ಆಗ ಅದನ್ನು ವಿರೋಧಿಸಿದ್ದ ಬಿಜೆಪಿ, ಈಗ ತರಾತುರಿಯಲ್ಲಿ ಜಾತಿಗಣತಿಯನ್ನು ಘೋಷಿಸಿದೆ’ ಎಂದರು.

‘ಜಾತಿಗಣತಿ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಾಮಾಣಿಕ ಆಸಕ್ತಿ ಇದ್ದಂತಿಲ್ಲ. ಇದ್ದಿದ್ದರೆ, ಬಜೆಟ್‌ನಲ್ಲಿಯೇ ಅನುದಾನ ತೆಗೆದಿರಿಸುತ್ತಿದ್ದರು. ಕರ್ನಾಟಕದಲ್ಲಿ ಈ ಹಿಂದೆ ಕಾಂಗ್ರೆಸ್ ಸರ್ಕಾರ ಸಾಮಾಜಿಕ ಸಮೀಕ್ಷೆ ನಡೆಸಿತ್ತು. ಅದಕ್ಕೆ ₹168 ಕೋಟಿ ವೆಚ್ಚ ಮಾಡಿತ್ತು, ಅದೂ ಹತ್ತು ವರ್ಷಗಳ ಹಿಂದೆ. ಈಗ ಕೇಂದ್ರ ಇಡೀ ದೇಶದಲ್ಲಿ ಜನಗಣತಿಗೆ ₹575 ಕೋಟಿ ತೆಗೆದಿರಿಸಿದೆ. ಈ ಮೊತ್ತನಹ ಉತ್ತರ ಪ್ರದೇಶ ಒಂದರಲ್ಲಿಯೇ ಗಣತಿ ನಡೆಸಲೂ ಸಾಲುವುದಿಲ್ಲ’ ಎಂದರು.

‘ಪರಿಶಿಷ್ಟ ಜಾತಿ, ಪಂಗಡ ಮತ್ತು ಇತರೆ ಹಿಂದುಳಿದ ವರ್ಗಗಳ ಸಬಲೀಕರಣದ ಬಗ್ಗೆ ಮೋದಿ ಅವರಿಗೆ ನಿಜವಾದ ಕಾಳಜಿ ಇದ್ದರೆ ಪರಿಣಾಮಕಾರಿಯಾಗಿ ಮೀಸಲಾತಿ ಜಾರಿಗೊಳಿಸಲಿ. ಮೀಸಲಾತಿಗೆ ಈಗ ಶೇ 50ರ ಮಿತಿ ಇದೆ. ಮೊದಲು ಅದನ್ನು ತೆಗೆದುಹಾಕಿ. ಪರಿಶಿಷ್ಟ ಜಾತಿ, ಪಂಗಡ ಮತ್ತು ಒಬಿಸಿ ವರ್ಗಗಳಿಗೆ ಖಾಸಗಿ ಕ್ಷೇತ್ರದಲ್ಲೂ ಮೀಸಲಾತಿ ದೊರೆಯುವಂತೆ ಮಾಡಲು ಸಂವಿಧಾನದಲ್ಲಿ ಅವಕಾಶವನ್ನು ನಮ್ಮ ಸರ್ಕಾರವಿದ್ದಾಗ ಕಲ್ಪಿಸಿದ್ದೆವು. ಅದನ್ನು ಮೋದಿ ಅವರ ಸರ್ಕಾರ ಜಾರಿಗೆ ತರಲಿ’ ಎಂದು ಆಗ್ರಹಿಸಿದರು.

ಕರ್ನಾಟಕ ಜಾತಿ ಗಣತಿ ಮಾದರಿಯಲ್ಲ: ಆರ್.ಅಶೋಕ

ಬೆಂಗಳೂರು: ‘ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನಡೆಸಿದ ಜಾತಿಗಣತಿ, ಹೇಗೆ ಈ ಪ್ರಕ್ರಿಯೆ ನಡೆಸಬಾರದು ಎಂಬುದಕ್ಕೆ ಒಂದು ಮಾದರಿ. ಅದರಲ್ಲಿ ಅನುಸರಿಸಬಹುದಾದ ಯಾವುದೇ ಅಂಶಗಳೂ ಇಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ಟೀಕಿಸಿದರು.



ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಅವೈಜ್ಞಾನಿಕ ಮತ್ತು ಎಲ್ಲರನ್ನೂ ಒಳಗೊಳ್ಳುವಿಕೆಯ ಜಾತಿ ಗಣತಿ (ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ) ಆಗಿರಲಿಲ್ಲ. ಕೆಲವು ಸಮುದಾಯಗಳ ಮಧ್ಯೆ ಒಡಕು ತರುವ, ಕೆಲ ಜಾತಿಗಳಿಗೆ ಅನುಕೂಲ ಮಾಡಿಕೊಡುವ ಉದ್ದೇಶವಿತ್ತು’ ಎಂದರು.

‘ರಾಜ್ಯದಲ್ಲಿ ಜಾತಿ ಜನಗಣತಿ ವಿರೋಧಿಸಿ ಎಲ್ಲ ಸಮುದಾಯಗಳೂ ಪ್ರತಿಭಟಿಸುತ್ತಿವೆ. ಸಚಿವರೂ ಕೂಡಾ ವಿರೋಧಿಸಿದ್ದಾರೆ. ಸಿದ್ದರಾಮಯ್ಯ ಅಧಿಕಾರ ಕಳೆದುಕೊಳ್ಳುವ ಭೀತಿಯಲ್ಲಿದ್ದ ಸಮಯದಲ್ಲಿ ಬಿಡುಗಡೆ ಮಾಡಿದ ವರದಿಯನ್ನು ಮಾದರಿ ಎಂದು ಹೇಳಲು ಹೇಗೆ ಸಾಧ್ಯ’ ಎಂದು ಅವರು ಪ್ರಶ್ನಿಸಿದರು.

‘ಜಾತಿ ಜನಗಣತಿಯನ್ನು ಬಿಜೆಪಿ ಎಂದೂ ವಿರೋಧಿಸಿರಲಿಲ್ಲ. ಆದರೆ ರಾಜ್ಯ ಸರ್ಕಾರ ಪಕ್ಷಪಾತ ಮತ್ತು ರಾಜಕೀಯ ದುರುದ್ದೇಶದಿಂದ ತಿರುಚಿದ ಕಾರಣಕ್ಕೆ ವಿರೋಧಿಸಿದ್ದೆವು. ಇದೀಗ ಕೇಂದ್ರ ಸರ್ಕಾರ ಜಾತಿ ಗಣತಿಯನ್ನು ಪಾರದರ್ಶಕವಾಗಿ ಮತ್ತು ವೈಜ್ಞಾನಿಕವಾಗಿ ನಡೆಸಲಿದೆ’ ಎಂದು ಹೇಳಿದರು.

‘ಜಾತಿ ವಿಷ ಬೀಜ ಬಿತ್ತಿದ ಸಿದ್ದರಾಮಯ್ಯ’

‘ಜಾತಿಗಣತಿ ಹೆಸರಿನಲ್ಲಿ ಜಾತಿ ವಿಷಬೀಜ ಬಿತ್ತುವ ಕುತಂತ್ರವನ್ನು ಸಿದ್ದರಾಮಯ್ಯ ಮಾಡಿದ್ದರು. ಇದೀಗ ಕೇಂದ್ರವೇ ಜಾತಿ ಗಣತಿಗೆ ನಿರ್ಧರಿಸುವ ಕಾರಣ ಅವರ ಕುತಂತ್ರ ಫಲಿಸದು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಹೇಳಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ಜನಗಣತಿ ಜತೆ ಜಾತಿ ಜನಗಣತಿ ನಡೆಸುವುದು ಅತ್ಯಗತ್ಯವಾಗಿತ್ತು. ದೇಶದಲ್ಲಿ 1931 ರ ನಂತರ ಯಾವತ್ತೂ ಜಾತಿ ಜನಗಣತಿ ಆಗಿರಲಿಲ್ಲ ಎಂದರು.

ದೇಶದ ಎಲ್ಲ ಸಮುದಾಯ್ಗ ಪ್ರತಿ ಪ್ರಜೆಗೂ ನ್ಯಾಯ ಸಿಗಬೇಕು. ಕಟ್ಟಕಡೆಯ ವ್ಯಕ್ತಿಗೂ ನ್ಯಾಯ ಸಿಗಬೇಕು ಎಂಬ ಕಳಕಳಿ ಪ್ರಧಾನಿ ಅವರದ್ದಾಗಿದೆ. ಕೇಂದ್ರದ ಈ ನಿರ್ಧಾರ ಕಾಂಗ್ರೆಸ್‌ನವರಿಗೂ ಅಚ್ಚರಿ ಮೂಡಿಸಿದೆ’ ಎಂದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರ ಸಾಮಾಜಿಕ ನ್ಯಾಯವನ್ನು ಎತ್ತಿ ಹಿಡಿದು ಜಾತಿ ಗಣತಿ ನಡೆಸಲು ತೀರ್ಮಾನಿಸಿದೆ. ಬ್ರಿಟಿಷರ ನಂತರ ನೆಹರೂ, ಇಂದಿರಾಗಾಂಧಿ, ರಾಜೀವ್ ಗಾಂಧಿ ಪ್ರಧಾನಿಯಾದರೂ, ಕಾಂಗ್ರೆಸ್ ಪಕ್ಷ ಜಾತಿ ಸಮೀಕ್ಷೆ ಮಾಡಿರಲಿಲ್ಲ ಎಂದು ದೂರಿದರು.

ಖರ್ಗೆಗೆ ಮುಖ್ಯಮಂತ್ರಿ ಸ್ಥಾನ ಸಿಗಬೇಕಿತ್ತು: ಮುನಿಯಪ್ಪ

‘ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮುಖ್ಯಮಂತ್ರಿ ಸ್ಥಾನ ಸಿಗಲಿಲ್ಲ ಎಂಬ ಬೇಸರ ನನಗೆ ಇದೆ’ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಹೇಳಿದರು.

‘ರಾಜ್ಯದಲ್ಲಿ ಈಗ ಜಾತಿಗಣತಿ ವಿಚಾರ ಜೋರಾಗಿ ಚರ್ಚೆಯಾಗುತ್ತಿದೆ. ಕೇಂದ್ರ ಸರ್ಕಾರವೂ ಜಾತಿಗಣತಿ ಘೋಷಿಸಿದೆ. ಜಾತಿ ಸಮುದಾಯಗಳ ನೈಜ ಸ್ಥಿತಿಯನ್ನು ಅರಿತುಕೊಳ್ಳಲು ಜಾತಿಗಣತಿ ಪರಿಣಾಮಕಾರಿ ಸಾಧನ. ಅದನ್ನು ನಮ್ಮ ಸರ್ಕಾರ ಮಾಡಿದೆ. ಕೇಂದ್ರ ಸರ್ಕಾರ ಈಗ ಅದನ್ನು ಮಾಡಲು ಹೊರಟಿದೆ’ ಎಂದು ಅವರು ಹೇಳಿದರು.

ಮೀಸಲಾತಿ: ಶೇ 50ರ ನಿರ್ಬಂಧ ತೆಗೆಯಲು ಆಗ್ರಹ

‘ಬಿಹಾರ ಚುನಾವಣೆಗಾಗಿ ಜಾತಿಗಣತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಹಾರದ ವಿಧಾನಸಭಾ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರ ಜಾತಿ ಜನಗಣತಿಗೆ ಮುಂದಾಗಿದೆ’ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘2015 ರಲ್ಲಿ ನಮ್ಮ ಸರ್ಕಾರ ₹168 ಕೋಟಿ ವೆಚ್ಚ ಮಾಡಿ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆ ನಡೆಸಿತ್ತು. ಇದರಿಂದ ಪ್ರೇರಿತವಾಗಿ ಕೇಂದ್ರ ಸರ್ಕಾರ ಜಾತಿ ಗಣತಿಗೆ ಮುಂದಾಗಿದೆ. ಕೇಂದ್ರದ ಕ್ರಮವನ್ನು ಸ್ವಾಗತಿಸುತ್ತೇನೆ’ ಎಂದೂ ಹೇಳಿದರು.

‘ದೇಶದ ಜನತೆಗೆ ಸಾಮಾಜಿಕ ನ್ಯಾಯ ಒದಗಿಸಲು ಜಾತಿ ಗಣತಿ ಜೊತೆಗೆ ಸಾಮಾಜಿಕ, ಶೈಕ್ಷಣಿಕ ಸಮೀಕ್ಷೆಯನ್ನೂ ನಡೆಸಬೇಕು. ಮೀಸಲಾತಿಯಲ್ಲಿ ಶೇ 50 ಗರಿಷ್ಠ ಮಿತಿ ಸಡಿಲಗೊಳಿಸಿ ಜನಸಂಖ್ಯೆಗೆ ಅನುಗುಣವಾಗಿ ಮೀಸಲಾತಿ ಕಲ್ಪಿಸಬೇಕು ಮತ್ತು ಜಾತಿ ಗಣತಿಗೆ ಕೂಡಲೇ ದಿನಾಂಕ ನಿಗದಿ ಮಾಡಬೇಕು’ ಎಂದು ಒತ್ತಾಯಿಸಿದರು.

ಶೇ 50ರ ಮೀಸಲಾತಿಯನ್ನು ಬದಲಾಯಿಸಬೇಕು. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಸಂವಿಧಾನದ 15 ನೇ ವಿಧಿ, ಕಲಂ(5) ರಂತೆ ಮೀಸಲಾತಿ ಕೊಡಬೇಕು ಎಂದು ರಾಹುಲ್‌ಗಾಂಧಿ ಒತ್ತಾಯಿಸಿದ್ದಾರೆ. ಕೇಂದ್ರ ಸರ್ಕಾರ ಇದನ್ನು ಪರಿಗಣಿಸಬೇಕು ಎಂದು ಆಗ್ರಹಿಸಿದರು.

ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಜಾತಿ ಗಣತಿ ಹಾಗೂ ಜನಗಣತಿ ನಡೆಸುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಹಾಡಿ ಹೊಗಳಿದ್ದಾರೆ. ಇದೇ ಕುಮಾರಸ್ವಾಮಿ ಸಮ್ಮಿಶ್ರ ಸರ್ಕಾರದಲ್ಲಿ ಮುಖ್ಯಮಂತ್ರಿ ಆಗಿದ್ದಾಗ, ಹಿಂದುಳಿದ ವರ್ಗಗಳ ಸಚಿವ ಪುಟ್ಟರಂಗಶೆಟ್ಟಿ ಜಾತಿ ಗಣತಿ ವರದಿ ಪಡೆಯಲು ದಿನಾಂಕ ನಿಗದಿ ಮಾಡಿದಾಗ ಅವರನ್ನು ಅಮಾನತು ಮಾಡುವುದಾಗಿ ಹೆದರಿಸಿ ವರದಿಯನ್ನು ಪಡೆಯಲಿಲ್ಲ ಎಂದು ಅವರು ಆರೋಪಿಸಿದರು.

ರಾಜ್ಯ ಸರ್ಕಾರದ ಸಮೀಕ್ಷೆ ಅವೈಜ್ಞಾನಿಕ ಎಂಬ ಕೇಂದ್ರ ಸಚಿವರಾದ ಅಶ್ವಿನ್ ವೈಷ್ಣವ್, ಧರ್ಮೇಂದ್ರ ಪ್ರಧಾನ್ ಅವರ ಹೇಳಿಕೆಗೆ ಪ್ರತಿಕ್ರಿಯಿಸಿದ ಸಿದ್ದರಾಮಯ್ಯ, ‘ಅವರ ಪಕ್ಷದ ಬೆಂಬಲಿಗರು ಬಿಹಾರದಲ್ಲಿ ನಡೆಸಿರುವ ಸಮೀಕ್ಷೆ ಬಗ್ಗೆ ಅವರು ಏನು ಹೇಳುತ್ತಾರೆ?. ರಾಜ್ಯ ಸರ್ಕಾರಗಳಿಗೆ ಜಾತಿ ಅಥವಾ ಜನಗಣತಿ ಮಾಡಲು ಹಕ್ಕಿಲ್ಲ ಎಂದು ಸಂವಿಧಾನದಲ್ಲಿ ಹೇಳಿದೆಯೇ’ ಎಂದು ಪ್ರಶ್ನಿಸಿದರು.



ಜಾತಿ ಗಣತಿಯನ್ನು ಕೇವಲ ಘೋಷಿಸಿದರೆ ಸಾಲದು, ಜಾರಿಗೆ ತರಬೇಕು. ಇತಿಹಾಸ ನೋಡಿದರೆ ಬಿಜೆಪಿ ಸಾಮಾಜಿಕ ನ್ಯಾಯದ ಪರ ಎಂದಿಗೂ ಇಲ್ಲ

ಸಿದ್ದರಾಮಯ್ಯ, ಮುಖ್ಯಮಂತ್ರಿ

‘ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಹಿಂದುಳಿದವರಿಗೆ ಮೀಸಲಾತಿ ನೀಡಬೇಕೆಂದು ಸಂವಿಧಾನವೇ ಹೇಳುತ್ತದೆ. ಜಾತಿಗಣತಿಯೊಂದಿಗೆ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆ ಮಾಡಿದರೆ ಜನಸಂಖ್ಯೆಗನುಗುಣವಾಗಿ ಮೀಸಲಾತಿ ನೀಡಲು ಅನುಕೂಲವಾಗುತ್ತದೆ’ ಎಂದು ಪ್ರತಿಪಾದಿಸಿದರು.

ದತ್ತಾಂಶ ವರದಿ: ಮೇ 9ಕ್ಕೆ ತೀರ್ಮಾನ

‘ಸಾಮಾಜಿಕ, ಶೈಕ್ಷಣಿಕ ಮತ್ತು ಆರ್ಥಿಕ ಸಮೀಕ್ಷೆ ದತ್ತಾಂಶ ಅಧ್ಯಯನ ವರದಿ ಕುರಿತು ಮೇ 9ರ ಸಚಿವ ಸಂಪುಟದಲ್ಲಿ ಚರ್ಚಿಸಿ, ಸಚಿವರ ಅಭಿಪ್ರಾಯ ಪಡೆದು ನಂತರ ತೀರ್ಮಾನ ತೆಗೆದುಕೊಳ್ಳಲಾಗುವುದು’ ಎಂದು ಸಿದ್ದರಾಮಯ್ಯ ತಿಳಿಸಿದರು.

‘ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಏರಿಕೆಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡುತ್ತೇವೆ. ಇದಕ್ಕೆ ಕೇಂದ್ರ ಸಂವಿಧಾನಕ್ಕೆ ತಿದ್ದುಪಡಿ ತರಬೇಕು. ಎಷ್ಟು ಪ್ರಮಾಣ ಏರಿಸಬೇಕು ಎಂದು ಕೇಂದ್ರಕ್ಕೆ ರಾಜ್ಯ ಸರ್ಕಾರ ತಿಳಿಸಬಹುದು’ ಎಂದು ಹೇಳಿದರು.

ದೇಶಿ ತಯಾರಿಕೆ ಮದ್ಯ ಮತ್ತಷ್ಟು ದುಬಾರಿ

ತೆರಿಗೆ ದರ, ಸ್ಲ್ಯಾಬ್‌ನಲ್ಲಿ ಸಮಗ್ರ ಪರಿಷ್ಕರಣೆ • ಪ್ರೀಮಿಯಂ ಗುಣಮಟ್ಟದ ಮದ್ಯದ ಬೆಲೆ ಇಳಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಗ್ಗದ ದರದಲ್ಲಿ ಸಿಗುತ್ತಿದ್ದ ಭಾರತೀಯ ಮದ್ಯಗಳ (ಐಎಂಎಲ್) ಬೆಲೆ, ರಾಜ್ಯದಲ್ಲಿ ಇನ್ನು ಮುಂದೆ ಮತ್ತಷ್ಟು ದುಬಾರಿಯಾಗಲಿದೆ.

ಬ್ರ್ಯಾಂಡಿ, ವಿಸ್ಕಿ, ಜಿನ್, ರಮ್‌ನಂತಹ ಐಎಂಎಲ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲು ರಾಜ್ಯ ಸರ್ಕಾರ ಮುಂದಾಗಿದೆ. ಇದೇ ವೇಳೆ ದುಬಾರಿ ಮತ್ತು ಪ್ರೀಮಿಯಂ ಐಎಂಎಲ್ ಮೇಲಿನ ಸುಂಕ ಕಡಿಮೆಯಾಗಲಿದೆ.

ಮದ್ಯದ ಮೇಲಿನ ಸುಂಕ ಪರಿಷ್ಕರಣೆ ಮತ್ತೆ ತೆರಿಗೆ ಸ್ಲ್ಯಾಬ್‌ಗಳ ಬದಲಾವಣೆಗಾಗಿ ಹಣಕಾಸು ಇಲಾಖೆಯು, ಕರ್ನಾಟಕ ಅಬಕಾರಿ (ಅಬಕಾರಿ ಸುಂಕ ಮತ್ತು ಶುಲ್ಕ) (ಎರಡನೇ ತಿದ್ದುಪಡಿ) ನಿಯಮಗಳು–2025ರ ಕರಡನ್ನು ಹೊರಡಿಸಿದೆ. ಐಎಂಎಲ್‌ನ ತೆರಿಗೆ ಸ್ಲ್ಯಾಬ್‌ಗಳನ್ನು ಪೂರ್ತಿ ಬದಲಾವಣೆ ಮಾಡಲಾಗಿದೆ.

ಗರಿಷ್ಠ ₹449ರಷ್ಟು ಘೋಷಿತ ಮೂಲ ಬೆಲೆ ಇದ್ದ ಐಎಂಎಲ್‌ನ ಪ್ರತಿ ಬಲ್ಕ್ ಲೀಟರ್ ಮೇಲೆ ಈಗ ₹215 ಅಬಕಾರಿ ಸುಂಕ ವಿಧಿಸಲಾಗುತ್ತಿದೆ. ಕರಡು ನಿಯಮದಲ್ಲಿ ಈ ತೆರಿಗೆ ಸ್ಲ್ಯಾಬ್ ರದ್ದುಪಡಿಸಿ, ₹470ರಷ್ಟು ಘೋಷಿತ ಮೂಲ ಬೆಲೆಯ ಹೊಸ ತೆರಿಗೆ ಸ್ಲ್ಯಾಬ್ ರೂಪಿಸಲಾಗಿದೆ. ಇದಕ್ಕೆ ₹297 ಅಬಕಾರಿ ಸುಂಕ ವಿಧಿಸಲಾಗಿದೆ. ಈ ಸ್ಲ್ಯಾಬ್‌ನ ಮದ್ಯದ ಮೇಲೆ ವಿಧಿಸುತ್ತಿದ್ದ ಸುಂಕದಲ್ಲಿ ₹82 ಹೆಚ್ಚಿಸಿದಂತಾಗುತ್ತದೆ.

‘ಪ್ರವೇಶ ಮಟ್ಟದ ಸ್ಲ್ಯಾಬ್‌ನಲ್ಲಿ ಬರುವ ಐಎಂಎಲ್ ಹೆಚ್ಚಿನ ಪ್ರಮಾಣದಲ್ಲಿ ಬಿಕರಿಯಾಗುತ್ತದೆ. ಹೀಗಾಗಿ ಅವುಗಳ ಮೇಲಿನ ಸುಂಕವನ್ನೇ ಹೆಚ್ಚಳ ಮಾಡಲಾಗಿದೆ. ಪರಿಣಾಮವಾಗಿ, ಈ ಸ್ಲ್ಯಾಬ್‌ನ ಮದ್ಯದಿಂದಲೇ ₹1,500 ಕೋಟಿಯಿಂದ ₹2,000 ಕೋಟಿಯಷ್ಟು ಹೆಚ್ಚುವರಿ ಆದಾಯ ಸಂಗ್ರಹವಾಗುವ ನಿರೀಕ್ಷೆ ಇದೆ’ ಎಂದು ಅಬಕಾರಿ ಇಲಾಖೆಯ ಅಧಿಕಾರಿ ವಿವರಿಸಿದರು.

ಈಗ ಜಾರಿಯಲ್ಲಿರುವ ನಿಯಮಗಳ ಪ್ರಕಾರ ಐಎಂಎಲ್‌ಗಳಲ್ಲಿ ಒಟ್ಟು 18 ತೆರಿಗೆ ಸ್ಲ್ಯಾಬ್‌ಗಳಿವೆ. ಕರಡು ನಿಯಮಗಳಲ್ಲಿ ಈ ಸ್ಲ್ಯಾಬ್‌ಗಳನ್ನು 16ಕ್ಕೆ ಇಳಿಸಲಾಗಿದೆ. ಪ್ರೀಮಿಯಂ ಮದ್ಯದ ಮೇಲಿನ ಅಬಕಾರಿ ಸುಂಕ ಸ್ಲ್ಯಾಬ್ ಮತ್ತು ಸುಂಕದ ಮೊತ್ತವನ್ನು ಪೂರ್ಣ ಬದಲಾಯಿಸಲಾಗಿದೆ.

ಈಗಿನ ನಿಯಮಗಳ ಪ್ರಕಾರ ₹15,001 ಮತ್ತು ಅದಕ್ಕಿಂತ ಹೆಚ್ಚಿನ ಘೋಷಿತ ಬೆಲೆ, ಅತ್ಯಂತ ಗರಿಷ್ಠ ಮಟ್ಟದ ಸ್ಲ್ಯಾಬ್ ಆಗಿತ್ತು. ಈ ಸ್ಲ್ಯಾಬ್‌ನ ಮದ್ಯದ, ಪ್ರತಿ ಬಲ್ಕ್ ಲೀಟರ್‌ನ ಮೇಲೆ ₹5,358 ಹೆಚ್ಚುವರಿ ಅಬಕಾರಿ ಸುಂಕ ವಿಧಿಸಲಾಗುತ್ತಿತ್ತು. ಕರಡು ನಿಯಮಗಳಲ್ಲಿ ಈ ಸ್ಲ್ಯಾಬ್ ಅನ್ನು ₹15,001ರಿಂದ ₹20,000ರದವರೆಗೆ ಎಂದು ಪರಿಷ್ಕರಿಸಲಾಗಿದೆ. ಇದರ ಮೇಲಿನ ಅಬಕಾರಿ ಸುಂಕವನ್ನು ₹2,800ಕ್ಕೆ ಇಳಿಸಲಾಗಿದೆ.

₹20,001 ಮತ್ತು ಅದಕ್ಕಿಂತ ಹೆಚ್ಚಿನ ಘೋಷಿತ ಬೆಲೆಯ ಹೊಸ ಸ್ಲ್ಯಾಬ್ ಅನ್ನು ರೂಪಿಸಿದ್ದು, ಅದರ ಪ್ರತಿ ಬಲ್ಕ್ ಲೀಟರ್ ಮೇಲೆ ₹3,000 ಹೆಚ್ಚುವರಿ ಅಬಕಾರಿ ಸುಂಕ ನಿಗದಿ ಮಾಡಲಾಗಿದೆ. ಹೀಗಾಗಿ ಪ್ರೀಮಿಯಂ ಮತ್ತು ದುಬಾರಿ ಮದ್ಯಗಳ ಚಿಲ್ಲರೆ ಮಾರಾಟ ಬೆಲೆ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಲಿದೆ.

ಬಿಯರ್ ತುಟ್ಟಿ?

ಎಲ್ಲ ಸ್ವರೂಪದ ಬಿಯರ್ ಮೇಲಿನ ಹೆಚ್ಚುವರಿ ಅಬಕಾರಿ ಸುಂಕವನ್ನು ಹೆಚ್ಚಿಸಲು ಸರ್ಕಾರ ಮುಂದಾಗಿದೆ. 2023ರ ನಂತರ ಬಿಯರ್ ಬೆಲೆ ಈಗಾಗಲೇ ಮೂರು ಬಾರಿ ಹೆಚ್ಚಳವಾಗಿದೆ. ಪ್ರತಿ ಬಾಟಲಿ ಬಿಯರ್‌ನ ಚಿಲ್ಲರೆ ಮಾರಾಟ ಬೆಲೆಯಲ್ಲಿ ₹15ರಿಂದ ₹25ರಷ್ಟು ಹೆಚ್ಚಾಗಬಹುದು.

ಜಾರಿಯಲ್ಲಿರುವ ಸ್ಲ್ಯಾಬ್ ಮತ್ತು ಸುಂಕ

ಕ್ರಮ ಸಂಖ್ಯೆ	ಘೋಷಿತ ಬೆಲೆ (₹ಗಳಲ್ಲಿ)	ಹೆಚ್ಚುವರಿ ಅಬಕಾರಿ ಸುಂಕ (₹ಗಳಲ್ಲಿ)
1	0-449	215
2	450-499	294
3	500-549	386
4	550-599	497
5	600-699	668
6	700-799	816
7	800-899	870
8	900-999	938
9	1,000-1,099	982
10	1,100-1,199	1,102
11	1,200-1,299	1,325
12	1,300-1,399	1,541
13	1,400-1,799	1,667
14	1,800-2,199	1,860
15	2,200-4,924	2,124
16	4,925-7650	2,483
17	7,651-15,000	3,571
18	15,0001 ಮತ್ತುಮೇಲ್ಪಟ್ಟು	5,358

ಕರಡು ನಿಯಮದಲ್ಲಿರುವ ಸ್ಲ್ಯಾಬ್ ಮತ್ತು ಸುಂಕ

ಕ್ರಮ ಸಂಖ್ಯೆ	ಘೋಷಿತ ಬೆಲೆ (₹ಗಳಲ್ಲಿ)	ಹೆಚ್ಚುವರಿ ಅಬಕಾರಿ ಸುಂಕ (₹ಗಳಲ್ಲಿ)
1	0-470	297
2	471-520	367
3	521-570	461
4	571-650	603
5	651-750	620
6	751-900	770
7	901-1,050	870
8	1,051-1,300	970
9	1,301-1,800	1,200
10	1,801-2,500	1,400
11	2,501-5,000	1,600
12	5,001-8,000	2,000
13	8,001-12,500	2,400
14	12,501-15,000	2,600
15	15,001-20,000	2,800
16	20,001 ಮತ್ತು ಮೇಲ್ಪಟ್ಟು	3,000

*8.64, 9 ಮತ್ತು 12 ಬಲ್ಕ್ ಲೀಟರ್ ಇರುವ ಕೇಸ್‌ಗಳಿಗೆ ಅನ್ವಯ

ದಲಿತನ ಮೇಲೆ ಹಲ್ಲೆ: 10 ಜನರ ವಿರುದ್ಧ ಪ್ರಕರಣ

ಪ್ರಜಾವಾಣಿ ವಾರ್ತೆ

ಭಾಲ್ಕಿ(ಬೀದರ್ ಜಿಲ್ಲೆ): ತಾಲ್ಲೂಕಿನ ಖುದಾವಂದಪೂರ ಗ್ರಾಮದಲ್ಲಿ ಮಂಗಳವಾರ ರಾತ್ರಿ ಅಂಬೇಡ್ಕರ್ ಜಯಂತಿ ವೇಳೆ ಗಲಾಟೆ ನಡೆದಿದೆ. ದಲಿತರೊಬ್ಬರ ಮೇಲೆ ಹಲ್ಲೆ ನಡೆಸಿರುವ ಬಗ್ಗೆ ಮರಾಠ, ಲಿಂಗಾಯತ ಸಮುದಾಯದ 10 ಜನರ ವಿರುದ್ಧ ಮೆಹಕರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಖುದಾವಂದಪೂರ ಗ್ರಾಮದಲ್ಲಿ ಏಪ್ರಿಲ್ 29ರಂದು ರಾತ್ರಿ 9 ಗಂಟೆಗೆ ಅಂಬೇಡ್ಕರ್ ಜಯಂತಿ ಮೆರವಣಿಗೆಯಲ್ಲಿ ಲೇಜಿಮ್ ಹಾಡಿಗೆ ನೃತ್ಯ ಮಾಡುವಾಗ ಅದೇ ಗ್ರಾಮದ ಮರಾಠ ಸಮುದಾಯದ ವಿಕಾಸ ಅಶೋಕ ಮೈನಾಳೆ ಕಲ್ಲು ತೂರಾಟ ನಡೆಸಿದ್ದರಿಂದ ಗೊಂದಲ ನಿರ್ಮಾಣವಾಗಿತ್ತು. ಕೂಡಲೇ ಪೊಲೀಸರು ಸ್ಥಳಕ್ಕೆ ಬಂದು ಸಮಾಧಾನ ಪಡಿಸಲು ಯತ್ನಿಸಿದ್ದರು. ಆದರೂ ಮರಾಠಾ, ಲಿಂಗಾಯತ ಸಮುದಾಯದ ಯುವಕರು ಕಟ್ಟಿಗೆಗಳನ್ನು ತಂದು ಹೊಡೆಯಲು ಬಂದಿದ್ದರು. ಅಂಬೇಡ್ಕರ್ ಜಯಂತಿ ವೇಳೆ ನಡೆದ ಘಟನೆಯನ್ನು ಮನಸ್ಸಿನಲ್ಲಿ ಇಟ್ಟುಕೊಂಡು ಏಪ್ರಿಲ್ 30ರಂದು ಆಕಾಶ್ ಅಶೋಕ್ ಮೈನಾಳೆ ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ ಬೆಲ್ಟ್‌ನಿಂದ ಹೊಡೆದಿದ್ದಾನೆ. ಗ್ರಾಮದ ರಾಗುಬವ್ ಸಮಾಧಿ ಹತ್ತಿರ ಮುಖ್ಯ ಆರೋಪಿ ದತ್ತಾ ಶಂಕರ ಸಂಗಮೆ ಎದುರುಗಡೆ ನನ್ನ ಗಂಡ ದತ್ತಾತ್ರಿ ಸತವಾಜಿ ಭಾಲ್ಕೆಯನ್ನು ನಿಲ್ಲಿಸಿ 9 ಯುವಕರು ಹೊಡೆದಿರುತ್ತಾರೆ. ಬಹಿರ್ದೆಸೆಗೆ ಊರಿನೊಳಗೆ ಬರದಂತೆ ಬೆದರಿಸಿದ್ದಾರೆ. ಪೊಲೀಸ್ ಠಾಣೆಯಲ್ಲಿಯೂ ದತ್ತ ಶಂಕರ್ ಸಂಗಮಿ ಕೊಲೆ ಬೆದರಿಕೆ ಹಾಕಿದ್ದಾರೆ’ ಎಂದು ಆರೋಪಿಸಿ ಅನಿತಾ ದತ್ತಾತ್ರಿ ಭಾಲ್ಕೆ ದೂರಿನಲ್ಲಿ ಆರೋಪಿಸಿದ್ದಾರೆ.

ಈ ಸಂಬಂಧ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ದೌರ್ಜನ್ಯ ತಡೆ ಕಾಯ್ದೆ ಅಡಿ ದತ್ತಾ ಶಂಕರ ಸಂಗಮೆ, ಕಿಶನ ಶಂಕರ, ಭೀಮ ಶಿವಾಜಿ, ರಾಮಕಿಶನ ಸುಭಾಷರಾವ್, ಅಶೋಕ ಚಂದ್ರಪ್ಪ, ಗಣೇಶ್ ಅಶೋಕ, ವಿಷ್ಣು ದುರ್ಯೋಧನ, ವಿಕಾಸ್ ಅಶೋಕ, ಸುಶಾಂತ ಸುನಿಲ್, ಅಭಿಷೇಕ ಅಂಬಾದಾಸ್ ಅವರ ಮೇಲೆ ಪ್ರಕರಣ ದಾಖಲಾಗಿದೆ. ಇದುವರೆಗೂ ಯಾರನ್ನೂ ಬಂಧಿಸಿಲ್ಲ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಖಂಡ್ರೆ ಸೂಚನೆ :‘ಜಿಲ್ಲೆಯ ಕೆಲವು ಕಡೆ ದಲಿತರ ಮೇಲೆ ಹಲ್ಲೆ ನಡೆದಿದೆ ಎಂಬ ದೂರು ಬಂದಿರುವುದರಿಂದ ನೊಂದವರಿಗೆ ತಕ್ಷಣವೇ ರಕ್ಷಣೆ ನೀಡಬೇಕು. ತಪ್ಪಿತಸ್ಥರ ವಿರುದ್ಧ ಕಠಿಣ ಕಾನೂನು ಕ್ರಮ ಜರುಗಿಸಬೇಕು. ದಲಿತರಿಗೆ ಸೂಕ್ತ ರಕ್ಷಣೆ ನೀಡಬೇಕು’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಈಶ್ವರ ಖಂಡ್ರೆ ಅವರು ಜಿಲ್ಲಾಡಳಿತ ಹಾಗೂ ಜಿಲ್ಲಾ ಪೊಲೀಸ್ ಇಲಾಖೆಗೆ ಸೂಚಿಸಿದ್ದಾರೆ.

ಪಾಕ್ ಧ್ವಜ ಎತ್ತಿಕೊಳ್ಳಲು ಯತ್ನ ಯುವತಿ ಶಾಲೆಯಿಂದ ಉಚ್ಚಾಟನೆ

ಲಖನೌ: ರಸ್ತೆಯಲ್ಲಿ ಬಿದ್ದಿದ್ದ ಪಾಕಿಸ್ತಾನದ ಧ್ವಜವನ್ನು ಎತ್ತಿಕೊಳ್ಳಲು ಪ್ರಯತ್ನಿಸಿದ ಮುಸ್ಲಿಂ ಯುವತಿಯನ್ನು ಶಾಲೆಯಿಂದ ಉಚ್ಚಾಟನೆ ಮಾಡಿರುವ ಘಟನೆ ಉತ್ತರ ಪ್ರದೇಶದ ಸಹಾರನ್‌ಪುರ ಜಿಲ್ಲೆಯಲ್ಲಿ ನಡೆದಿದೆ.

ವರದಿಗಳ ಪ್ರಕಾರ, ಸ್ಕೂಟಿಯಲ್ಲಿ ಬಂದ ಯುವತಿ ರಸ್ತೆ ಮೇಲೆ ಬಿದ್ದಿದ್ದ ಪಾಕಿಸ್ತಾನದ ಧ್ವಜವನ್ನು ಗಮನಿಸಿ, ಅದನ್ನು ಎತ್ತಿಕೊಳ್ಳಲು ಪ್ರಯತ್ನಿಸಿದ್ದಾರೆ. ಆದರೆ, ಧ್ವಜ ಎತ್ತಿಕೊಳ್ಳಲು ಸಾಧ್ಯವಾಗದ ಕಾರಣ ಮುಂದೆ ಸಾಗಿದ್ದಾರೆ.

ದಾರಿಹೋಕರು ಈ ದೃಶ್ಯವನ್ನು ಸೆರೆಹಿಡಿದು, ಜಾಲತಾಣದಲ್ಲಿ ಅಪ್ಲೋಡ್ ಮಾಡಿದ್ದಾರೆ. ವಿಡಿಯೊ ವ್ಯಾಪಕವಾಗಿ ಹರಿದಾಡಿದ್ದು, ಹಿಂದೂ ಪರ ಸಂಘಟನೆಗಳು ಯುವತಿ ವಿರುದ್ಧ ಆಕ್ಷೇಪ ವ್ಯಕ್ತಪಡಿಸಿವೆ.

ಅಲ್ಲದೆ, ಯುವತಿ ಓದುತ್ತಿದ್ದ ಶಾಲೆಯ ಎದುರು ಪ್ರತಿಭಟನೆ ನಡೆಸಿ, ಆಕೆಯನ್ನು ಹೊರಗೆ ಹಾಕುವಂತೆ ಆಗ್ರಹಿಸಿದ್ದವು. ಇದರ ಬೆನ್ನಲ್ಲೇ ಶಾಲಾ ಆಡಳಿತವು 11ನೇ ತಗರತಿಯಲ್ಲಿ ವ್ಯಾಸಂಗ ಮಾಡುತ್ತಿದ್ದ ಆಕೆಯನ್ನು ಉಚ್ಚಾಟನೆ ಮಾಡಿದೆ.

ಸಿಐಎಸ್‌ಸಿಇ: ಸೂರ್ಯಗೆ ಶೇ 98 ಅಂಕ



ಬೆಂಗಳೂರು: ಸಿಐಎಸ್‌ಸಿಇ 12ನೇ ತರಗತಿ ಪರೀಕ್ಷೆಯಲ್ಲಿ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರ ಮಗ ಸೂರ್ಯ ಶೇ 98.25 ಅಂಕ ಗಳಿಸಿ ವಿಜ್ಞಾನ ವಿಭಾಗದಲ್ಲಿ ಇಲ್ಲಿನ ಬಿಷಪ್ ಕಾಟನ್ ಶಾಲೆಯಲ್ಲಿ ಮೊದಲ ಸ್ಥಾನ ಪಡೆದಿದ್ದಾರೆ. ಇದೇ ಶಾಲೆಯ ಆರ್ಯನ್ ಅಜ್ಮೀರ ಶೇ 95.50 ಮತ್ತು ಶಯಕ್‌ದಾಸ್ ಶೇ 93.50 ಅಂಕ ಗಳಿಸಿನಂತರದ ಸ್ಥಾನ ಗಳಿಸಿದ್ದಾರೆ.

ಕೆಪಿಎಸ್‌ಸಿ: ದಯಾಮರಣ ಕೋರಿ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) 384 ಗೆಜೆಟೆಡ್ ಪ್ರೊಬೇಷನರಿ ಹುದ್ದೆಗಳ ನೇಮಕಾತಿ ಪರೀಕ್ಷಾರ್ಥಿಗಳಲ್ಲಿ ಹಲವರು ದಯಾಮರಣ ಕೋರಿ ರಾಷ್ಟ್ರಪತಿ ದ್ರೌಪದಿ ಮುರ್ಮ ಅವರಿಗೆ ಪತ್ರ ಬರೆದಿದ್ದಾರೆ.

ಹುದ್ದೆಗಳ ನೇಮಕಾತಿಗೆ ಡಿ. 29ರಂದು ನಡೆದಿದ್ದ ಪೂರ್ವಭಾವಿ ಪರೀಕ್ಷೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ್ದ ಪ್ರಶ್ನೆ ಮತ್ತು ಉತ್ತರಗಳಲ್ಲಿ ಲೋಪದ ಕಾರಣಕ್ಕೆ ಮತ್ತೆ ಪೂರ್ವಭಾವಿ ಪರೀಕ್ಷೆ ನಡೆಸಬೇಕು ಎಂದು ಅಭ್ಯರ್ಥಿಗಳು ಕೋರ್ಟ್ ಮೆಟ್ಟಿಲೇರಿದ್ದರು. ಈ ಮಧ್ಯೆ ಮೇ 3, 5, 7 ಮತ್ತು 9ರಂದು ಮುಖ್ಯ ಪರೀಕ್ಷೆಯನ್ನು ಕೆಪಿಎಸ್‌ಸಿ ನಿಗದಿ ಮಾಡಿದೆ.

‘ನ್ಯಾಯ ಕೋರಿ ಅರ್ಜಿ ಸಲ್ಲಿಸಿದ್ದ 185 ಜನಕ್ಕೆ, ಮುಖ್ಯ ಪರೀಕ್ಷೆ ಬರೆಯಲು ಹೈಕೋರ್ಟ್ ಅವಕಾಶ ನೀಡಿದೆ. ಆದರೆ ಭಾಷಾಂತರದ ತಪ್ಪುಗಳಿಂದ ಕನ್ನಡ ಮಾಧ್ಯಮದ ಸುಮಾರು 70,000 ಅಭ್ಯರ್ಥಿಗಳಿಗೆ ಅನ್ಯಾಯವಾಗಿದೆ. ಹಣಕಾಸಿನ ಸಮಸ್ಯೆ ಕಾರಣಕ್ಕೆ ಎಲ್ಲರೂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಆಗಿಲ್ಲ. ಅವರೆಲ್ಲರಿಗೆ ಪರೀಕ್ಷೆ, ನ್ಯಾಯದ ಬಾಗಿಲು ಮುಚ್ಚಿದಂತಾಗಿದೆ. ನಮ್ಮ ಮನವಿಯನ್ನು ಪುರಸ್ಕರಿಸಿ’ ಎಂದು ಅಭ್ಯರ್ಥಿಗಳು ವಿವರಿಸಿದ್ದಾರೆ.

ಕುಲಕಸುಬು ನಾಶಕ್ಕೆ ಯತ್ನ: ಆಕ್ರೋಶ

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ಪರಿಶಿಷ್ಟ ಜಾತಿ ಸಮೀಕ್ಷೆಗಾಗಿ ಸಿದ್ಧಪಡಿಸಿರುವ ಕೈಪಿಡಿಯಲ್ಲಿ ಭೋವಿಯವರ ಕುಲ ಕಸುಬುಗಳನ್ನು ನಮೂದು ಮಾಡಿಲ್ಲ. ಆ ಮೂಲಕ ಪರಿಶಿಷ್ಟ ಜಾತಿಯಲ್ಲಿ ಅತೀ ಹೆಚ್ಚು ಜನಸಂಖ್ಯೆ ಹೊಂದಿರುವ ಭೋವಿ ಸಮಾಜದ ಕುಲಕಸುಬನ್ನು ರಾಜ್ಯ ಸರ್ಕಾರ ನಾಶ ಮಾಡಲು ಹೊರಟಿದೆ ಎಂದು ಭೋವಿ ಗುರುಪೀಠದ ಪೀಠಾಧ್ಯಕ್ಷ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಆಕ್ರೋಶ ವ್ಯಕ್ತಪಡಿಸಿದರು.

ಕಡಿಮೆ ಸಂಖ್ಯೆಯಲ್ಲಿರುವ ಸಮುದಾಯಗಳ ಕುಲ ಕಸುಬುಗಳನ್ನು ಕೈಪಿಡಿಯಲ್ಲಿ ನಮೂದು ಮಾಡಲಾಗಿದೆ. ಆದರೆ ಭೋವಿ ಸಮುದಾಯದ ಜನರು ತಲತಲಾಂತರದಿಂದಲೂ ಮಾಡಿಕೊಂಡು ಬಂದಿರುವ ಕಟ್ಟಡ ನಿರ್ಮಾಣ, ಬಾವಿ, ಗೋಕಟ್ಟೆ, ಕೆರೆ ನಿರ್ಮಾಣ ಕಾಯಕ, ಮಣ್ಣಿನ ಕಸುಬುಗಳನ್ನು ಕೈಬಿಡಲಾಗಿದೆ. ಕಲ್ಲುಕುಟಿಕ, ಶಿಲ್ಪಿ, ಬೀಸುವ ಕಲ್ಲು ತಯಾರಕ ಎಂಬ ಕಸುಬುಗಳನ್ನಷ್ಟೇ ಸೇರಿಸಲಾಗಿದೆ. ಕೆಲವೇ ಕೆಲವು ಸಮುದಾಯಗಳ ಒತ್ತಡಕ್ಕೆ ಮಣಿದು ಸರ್ಕಾರ ಈ ತಪ್ಪು ಮಾಡಿದೆ’ ಎಂದು ಗುರುವಾರ ಪತ್ರಿಕಾ ಗೋಷ್ಠಿಯಲ್ಲಿ ಆರೋಪಿಸಿದರು.


ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ

‘ನಾಗರಿಕತೆಯ ಆರಂಭದಿಂದಲೂ ನಾವು ನಮ್ಮ ಕುಲ ಕಸುಬನ್ನು ಮಾಡಿಕೊಂಡು ಬಂದಿದ್ದೇವೆ. ಆಧುನೀಕರಣ, ನಗರೀಕರಣದ ಸಂದರ್ಭದಲ್ಲೂ ನಮ್ಮ ಕಸುಬು ಉಳಿದಿವೆ. ಕೊಳವೆ ಬಾವಿ ಬರುವುದಕ್ಕೆ ಮೊದಲು ಭೋವಿ ಸಮುದಾಯದ ಕಾರ್ಮಿಕರು ನಿರ್ಮಿಸಿದ ಬಾವಿ, ಕೆರೆ, ಕಟ್ಟೆಗಳೇ ಜನರಿಗೆ ಜೀವಜಲ ಒದಗಿಸುತ್ತಿದ್ದವು. ಸರ್ಕಾರಗಳು ಇಂತಹ ಕುಲಕಸುಬುಗಳನ್ನು ಸಮೀಕ್ಷೆ ವೇಳೆ ಗುರುತಿಸಬೇಕು, ಇತಿಹಾಸವನ್ನು ಅಳಿಸಿ ಹಾಕುವ ಕೆಲಸ ಮಾಡಬಾರದು’ ಎಂದರು.

‘ಸಮಸಮಾಜ ನಿರ್ಮಾಣ ಮಾಡಬೇಕಾದರೆ ಸಮುದಾಯಗಳ ದತ್ತಾಂಶದ ಅಗತ್ಯವಿದೆ. ನಿವೃತ್ತ ನ್ಯಾಯಮೂರ್ತಿ ನಾಗಮೋಹನ ದಾಸ್ ನೇತೃತ್ವದ ಆಯೋಗ ತರಾತುರಿಯಲ್ಲಿ ಕುಲಕಸುಬುಗಳ ಕೈಪಿಡಿ ರೂಪಿಸಿದೆ. ಹಾವಾಡಿಗ, ಗೊಂಬೆ ಆಡಿಸುವವ, ಹಕ್ಕಿಪಿಕ್ಕಿ ವೃತ್ತಿಗಳನ್ನು ಗುರುತಿಸಿ ಭೋವಿ ಸಮುದಾಯದ ಕಸುಬು ಕೈಬಿಟ್ಟಿರುವುದು ಸರಿಯಲ್ಲ. ಸಮೀಕ್ಷೆ ಆರಂಭಗೊಳ್ಳಲು 3 ದಿನಗಳಷ್ಟೇ ಉಳಿದಿದೆ. ಕೂಡಲೇ ತಪ್ಪು ಸರಿಪಡಿಸದಿದ್ದರೆ ನ್ಯಾಯಾಲಯದಲ್ಲಿ ಪ್ರಶ್ನಿಸಲಾಗುವುದು’ ಎಂದು ಎಚ್ಚರಿಕೆ ನೀಡಿದರು.

‘ಕೈಪಿಡಿ ರೂಪಿಸುವುದಕ್ಕೂ ಮೊದಲು ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ 101 ಸಮುದಾಯಗಳ ಮುಖಂಡರ ಸಭೆ ನಡೆಸಿ ಚರ್ಚೆ ನಡೆಸಬೇಕಾಗಿತ್ತು. ಭೋವಿ ಸಮುದಾಯದಲ್ಲಿ ನಿರ್ಮಾಣ ಕೆಲಸ ಮಾಡುವ ಕನಿಷ್ಠ 10 ಲಕ್ಷ ಜನರಿದ್ದಾರೆ. ಅವರ ಕುಲಕಸುಬನ್ನು ಸಮೀಕ್ಷೆಯಲ್ಲಿ ನಮೂದು ಮಾಡದಿದ್ದರೆ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ’ ಎಂದರು.

ಈ ಸಂದರ್ಭದಲ್ಲಿ ಭೋವಿ ಸಮಾಜದ ಮುಖಂಡರಾದ ತಿಪ್ಪೇಸ್ವಾಮಿ, ಲಕ್ಷ್ಮಣ್, ವೆಂಕಟೇಶ್, ಗೋವಿಂದಪ್ಪ ಇದ್ದರು.

ಕ್ಯಾನ್ಸರ್ ವಿರುದ್ಧ ಹೋರಾಡುತ್ತಲೇ ಡಿಸ್ಟಿಂಕ್ಷನ್ ಪಡೆದ ಚಿರಂತನ್

ಪ್ರಜಾವಾಣಿ ವಾರ್ತೆ



ಚಿರಂತನ್

ಬೆಂಗಳೂರು: ಮೂಳೆಯ ಕ್ಯಾನ್ಸರ್ ವಿರುದ್ಧ ಒಂದು ವರ್ಷದಿಂದ ಹೋರಾಡುತ್ತಲೇ ನಾಗರಬಾವಿಯ ಆರ್ಯನ್ ಪ್ರೆಸಿಡೆನ್ಸಿ ಶಾಲೆಯ ಚಿರಂತನ್ ಹೊನ್ನಾಪುರ, ಐಸಿಎಸ್‌ಇ ಹತ್ತನೇ ತರಗತಿ ಪರೀಕ್ಷೆಯಲ್ಲಿ ಶೇ 92ರಷ್ಟು ಅಂಕಗಳನ್ನು ಪಡೆದು ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣನಾಗಿದ್ದಾನೆ.

9ನೇ ತರಗತಿಯಲ್ಲಿ ಓದುತ್ತಿರುವಾಗ ಮೂಳೆಯ ಕ್ಯಾನ್ಸರ್ ಪತ್ತೆಯಾಯಿತು. ವರ್ಷ ಪೂರ್ತಿ ಶಾಲೆಗೆ ಹೋಗಲಾಗದೆ ಕ್ಯಾನ್ಸರ್ ವಿರುದ್ಧ ಹೋರಾಡಿದ. ಕ್ಯಾನ್ಸರ್ ಪೀಡಿತ ಬಲಗೈ ಮೂಳೆಯನ್ನು ಶಸ್ತ್ರ ಚಿಕಿತ್ಸೆ ಮೂಲಕ ತೆಗೆದು ಹಾಕಲಾಗಿತ್ತು. ಆದಾಗ್ಯೂ ಮತ್ತೊಬ್ಬ ವಿದ್ಯಾರ್ಥಿಯ ಸಹಾಯದಿಂದ 9ನೇ ತರಗತಿ ಪರೀಕ್ಷೆ ಎದುರಿಸಿ ಶೇ 92ರಷ್ಟು ಅಂಕ ಪಡೆದಿದ್ದಾನೆ.

9ನೇ ತರಗತಿಯ ಫಲಿತಾಂಶದ ನಂತರ ಕೂಡಲೇ 10ನೇ ತರಗತಿಯ ವಿಶೇಷ ತರಗತಿಗಳು ಪ್ರಾರಂಭ ವಾಗಿದ್ದವು. ಆದರೆ, ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗ ಬೇಕಾಗಿದ್ದ ಕಾರಣ ಸುಮಾರು ಮೂರು ತಿಂಗಳು ತರಗತಿಗಳಿಗೆ ಹಾಜರಾಗಲು ಸಾಧ್ಯವಾಗಿರಲಿಲ್ಲ.

ಮನೆ ಪಾಠಕ್ಕೆ ಹೋಗದೆ, ಶಾಲೆಯಲ್ಲಿ ಶಿಕ್ಷಕರ ಪಾಠ, ಮಾರ್ಗದರ್ಶನ ಹಾಗೂ ಪ್ರೋತ್ಸಾಹ ಪಡೆದುಕೊಂಡು, ಪರಿಶ್ರಮದಿಂದ ಓದಿದ. ಸಾಮಾಜಿಕ ಮಾಧ್ಯಮಗಳ ಚಾನೆಲ್‌ಗಳಲ್ಲಿ ಬಿತ್ತರ ಗೊಳ್ಳುತ್ತಿದ್ದ ಲೈವ್ ಪಾಠ ಕೇಳುತ್ತಿದ್ದ.

‘ಕಾನೂನು ಪದವಿಯನ್ನು ಪಡೆದು ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆದು ಐಪಿಎಸ್ ಅಧಿಕಾರಿಯಾಗುವ ಆಸೆ ಇದೆ. ಹಾಗಾಗಿ, ಪಿಯುಸಿಯಲ್ಲಿ ವಾಣಿಜ್ಯ ವಿಷಯ ಓದಲು ನಿರ್ಧರಿಸಿದ್ದೇನೆ’ ಎನ್ನುತ್ತಾನೆ ಚಿರಂತನ್.



ಕಾರ್ಮಿಕರ ದಿನಾಚರಣೆಯ ಪ್ರಯುಕ್ತ ಜೆಸಿಟಿಯು ನೇತೃತ್ವದಲ್ಲಿ ಗುರುವಾರ ಬೃಹತ್ ಮೆರವಣಿಗೆ ನಡೆಯಿತು ಪ್ರಜಾವಾಣಿ ಚಿತ್ರ

ಕಾರ್ಮಿಕರ ದಿನಾಚರಣೆ: ವಿವಿಧ ಸಂಘಟನೆಗಳಿಂದ ಮೆರವಣಿಗೆ

ದುಡಿಮೆ ಅವಧಿ ಹೆಚ್ಚಳಕ್ಕೆ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಬ್ಬ ಕಾರ್ಮಿಕ ದಿನಕ್ಕೆ ಎಂಟು ಗಂಟೆ ಮಾತ್ರ ಕೆಲಸ ಮಾಡಬೇಕು ಎಂದು ಹೋರಾಟಕ್ಕಿಳಿದು ಕಾರ್ಮಿಕರು ಹುತಾತ್ಮರಾದ ದಿನವೇ ಮೇ ದಿನಾಚರಣೆ. ಇದರಿಂದ ಜಗತ್ತಿನಾದ್ಯಂತ 8 ಗಂಟೆ ದುಡಿಮೆಯ ಕಾನೂನಾಗಿದೆ. ಆದರೆ, ರಾಜ್ಯದಲ್ಲಿ ದುಡಿಮೆಯ ಅವಧಿ ಯನ್ನು ಹೆಚ್ಚಿಸುವ ಮೂಲಕ ಮೇ ದಿನಕ್ಕೇ ಅವಮಾನ ಮಾಡಲಾಗುತ್ತಿದೆ ಎಂದು ವಿವಿಧ ಕಾರ್ಮಿಕ ಸಂಘಟನೆಗಳ ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

ಜಂಟಿ ಕಾರ್ಮಿಕ ಸಂಘಟನೆಗಳ ಒಕ್ಕೂಟ (ಜೆಸಿಟಿಯು) ಗುರುವಾರ ಮೇ ದಿನ ಆಚರಿಸಿತು.

ಗಾರ್ಮೆಂಟ್‌ಗಳಲ್ಲಿ 10 ಗಂಟೆ ದುಡಿಸುತ್ತಿದ್ದಾರೆ. ಒಪ್ಪದವರನ್ನು ಮನೆಗೆ ಕಳುಹಿಸುತ್ತಿದ್ದಾರೆ. ದುಡಿಮೆ ಅವಧಿಯನ್ನು 8 ಗಂಟೆಗೆ ಸೀಮಿತ-ಗೊಳಿಸಬೇಕು. ಗುತ್ತಿಗೆ ಪದ್ಧತಿ ರದ್ದು ಮಾಡಬೇಕು ಎಂದು ಮುಖಂಡರು ಆಗ್ರಹಿಸಿದರು.

ಕಾರ್ಮಿಕರ ಕಲ್ಯಾಣಕ್ಕಾಗಿ 29 ಕಾಯ್ದೆಗಳಿದ್ದವು. ಅವುಗಳನ್ನು ನಾಲ್ಕು ಕೋಡ್‌ಗಳ ಒಳಗೆ ತಂದು ಹಲವನ್ನು ಬಿಟ್ಟು ಕಾಯ್ದೆಯನ್ನು ದುರ್ಬಲಗೊ-ಳಿಸಲಾಗುತ್ತಿದೆ. ಈ ಕೋಡ್ ಪ್ರಕಾರ, ಕಾರ್ಮಿಕರು ಸಂಘಟನೆ ರಚಿಸಿಕೊ-ಳ್ಳುವಂತಿಲ್ಲ. ದ್ವಿಪಕ್ಷೀಯ ಮಾತುಕತೆ ಇರುವುದಿಲ್ಲ. ಕಾರ್ಮಿಕರನ್ನು ಗುಲಾಮಗಿರಿಗೆ ತಳ್ಳುವ ‘ಲೇಬರ್ ಕೋಡ್’ ವಾಪಸ್ ತೆಗೆದುಕೊಳ್ಳಬೇಕು ಎಂದು ಒತ್ತಾಯಿಸಿದರು.

ಖಾಸಗೀಕರಣ ಮೂಲಕ ಕೇಂದ್ರ ಸರ್ಕಾರವು ಎಲ್ಲ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಕಳೆದುಕೊಳ್ಳುತ್ತಿದೆ. ಖಾಸಗೀಕರಣ ನಿಲ್ಲಿಸಬೇಕು. ಬೆಲೆ ಏರಿಕೆ ವಿಪರೀತವಾಗುತ್ತಿದ್ದು, ಅದಕ್ಕೆ ಸರಿಯಾಗಿ ವೇತನ ಹೆಚ್ಚಳವಾಗುತ್ತಿಲ್ಲ. ಆಶಾ ಕಾರ್ಯಕರ್ತೆಯರು, ಅಂಗನವಾಡಿ ಕಾರ್ಯಕರ್ತೆಯರನ್ನು ಯೋಜನಾ ಕಾರ್ಯಕರ್ತರು ಎಂದು ಕರೆಯುವ ಮೂಲಕ ಶಾಸನಬದ್ಧ ಸೌಲಭ್ಯಗಳಿಂದ ಹೊರಗಿಡಲಾಗಿದೆ. ಅವರನ್ನೂ ಕಾರ್ಮಿಕರು ಎಂದು ಪರಿಗಣಿಸಬೇಕು ಎಂದು ಹೇಳಿದರು.

ಪುರಭವನದಿಂದ ಸ್ವಾತಂತ್ರ್ಯ ಉದ್ಯಾನವರೆಗೆ ಸಾವಿರಾರು ಕಾರ್ಮಿಕರು ಮೆರವಣಿಗೆ ನಡೆಸಿದರು. ಮೇ ದಿನದ ಹುತಾತ್ಮರಿಗೆ, ಪಹಲ್ಗಾಮ್ ದಾಳಿಯಲ್ಲಿ ಹುತಾತ್ಮರಾದವರಿಗೆ ಸಂತಾಪ ಸೂಚಿಸಲಾಯಿತು.

ಜೆಸಿಟಿಯು ಸಂಚಾಲಕ ಕೆ.ವಿ. ಭಟ್, ಕಾರ್ಮಿಕ ಮುಖಂಡರಾದ ಶಾಮಣ್ಣರೆಡ್ಡಿ (ಇಂಟಕ್), ಸತ್ಯಾನಂದ (ಎಐಟಿಯುಸಿ), ಕೆ. ಪ್ರಕಾಶ್ (ಸಿಐಟಿಯು), ರಮಾ ಟಿ.ಸಿ. (ಎಐಯುಟಿಯುಸಿ), ಶಿವಶಂಕರ್ (ಟಿಯುಸಿಸಿ), ಕಾಳಪ್ಪ (ಎಚ್‌ಎಂಕೆಪಿ), ನಾಗನಾಥ (ಎಚ್‌ಎಂಎಸ್), ಕ್ರಿಷ್ಟನ್ ರೊಸಾರಿಯೊ (ಎಐಸಿಸಿಟಿಯು), ಗಂಗಣ್ಣ (ಕೆಐಇಐಎಫ್), ಪಿ.ಕೆ. ಸ್ವಾಮಿ (ಎನ್‌ಸಿಎಲ್) ಭಾಗವಹಿಸಿದ್ದರು.

‘ಕಾರ್ಮಿಕ ಶಕ್ತಿಗಳೇ ಆಡಳಿತಗಾರರಾಗಲಿ’

ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯಲ್ಲಿ ನ್ಯಾ. ಗೋಪಾಲಗೌಡ ಅಭಿಮತ

ಪ್ರಜಾವಾಣಿ ವಾರ್ತೆ



ಅಂತರರಾಷ್ಟ್ರೀಯ ಕಾರ್ಮಿಕ ದಿನಾಚರಣೆಯಲ್ಲಿ ಇ.ಕೆ.ಎನ್. ರಾಜನ್, ವಿ. ರಾಮಮೂರ್ತಿ, ವಿ. ಗೋಪಾಲಗೌಡ, ಕೆ. ಷರೀಫಾ ಮತ್ತು ಅಶೋಕ್ ಪಾಲ್ಗೊಂಡಿದ್ದರು —ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಕಾರ್ಮಿಕ ಶಕ್ತಿಗಳೇ ಆಡಳಿತ ಮಾಡು ವಂತಾಗಬೇಕಾದರೆ ಬಂಡವಾಳಶಾಹಿಗಳಿಗೆ ಮತ ಹಾಕುವುದನ್ನು ನಿಲ್ಲಿಸಬೇಕು. ಕಾರ್ಮಿಕರನ್ನೇ ಜನಪ್ರತಿನಿಧಿಗಳನ್ನಾಗಿ ಆಯ್ಕೆ ಮಾಡಬೇಕು’ ಎಂದು ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ವಿ. ಗೋಪಾಲಗೌಡ ತಿಳಿಸಿದರು.

ಕರ್ನಾಟಕ ವರ್ಕರ್ಸ್ ಯೂನಿಯನ್ ಗುರುವಾರ ಹಮ್ಮಿಕೊಂಡಿದ್ದ ಅಂತರ ರಾಷ್ಟ್ರೀಯ ಕಾರ್ಮಿಕ ದಿನಾಚರಣೆಯಲ್ಲಿ ಅವರು ಮಾತನಾಡಿದರು.

ಕಾರ್ಮಿಕರಿಲ್ಲದೆ ಯಾವ ಮುಖ್ಯಮಂತ್ರಿಯೂ ಇಲ್ಲ, ಪ್ರಧಾನಿಯೂ ಇಲ್ಲ. ದೇಶವು ನಡೆಯುತ್ತಿರುವುದೇ ಕಾರ್ಮಿಕರು ಮತ್ತು ಕೃಷಿಕರಿಂದ. ಬಂಡವಾಳ ಹೂಡಿಕೆಯಷ್ಟೇ ಕಾರ್ಮಿಕ ಶಕ್ತಿಯೂ ಮುಖ್ಯ. ಹಾಗಾಗಿ ಬಂಡವಾಳಗಾರರ ಸಮಾನರಾಗಿ ಕಾರ್ಮಿಕರೂ ಇರಬೇಕು ಎಂದು ಪ್ರತಿಪಾದಿಸಿದರು.

ಗೌರಿ ಪೂಜೆ, ಸರಸ್ವತಿ ಪೂಜೆ, ಲಕ್ಷ್ಮಿ ಪೂಜೆ ಎಂದು ಮಹಿಳೆಯರನ್ನು ಪೂಜೆಗೆ ಸೀಮಿತಗೊಳಿ-ಸಲಾಗಿದೆ. ಜನಸಂಖ್ಯೆಯ ಶೇಕಡ 50ರಷ್ಟು ಇರುವ ಮಹಿಳೆಯರಿಗೆ ಸಮಾನವಾದ ಅವಕಾಶ ನೀಡಿಲ್ಲ. ಸಂವಿಧಾನದಲ್ಲಿ ಸಮಾನತೆ ನೀಡಲಾಗಿದೆ. ಕಾರ್ಯರೂಪ ದಲ್ಲಿ ಸಮಾನತೆ ಇಲ್ಲ. ಮಹಿಳೆಯರು ಕಾರ್ಮಿಕ ಸಂಘಟನೆ ಗಳ ನಾಯಕರಾಗಬೇಕು. ಮಹಿಳೆಯರು ಆಡಳಿತ ನಡೆ-ಸುವವರಾಗಬೇಕು. ಹೆಸರಿಗಷ್ಟೇ ರಾಜಕೀಯ ಪ್ರಾತಿನಿಧ್ಯ ನೀಡುವ ಬದಲು ಸಂಸತ್ತು, ವಿಧಾನಸಭೆಗಳಲ್ಲಿ ಶೇ 50ರಷ್ಟು ಮಹಿಳೆಯರು ಇರಬೇಕು ಎಂದು ಹೇಳಿದರು.

ಹಲವು ಕಾರ್ಮಿಕ ಸಂಘಟನೆಗಳಿವೆ. ಕಾರ್ಮಿಕರ ಬಗ್ಗೆ ನಿಜವಾದ ಕಳಕಳಿ ಇದ್ದರೆ ಎಲ್ಲ ಸಂಘಟನೆಗಳು ಒಗ್ಗೂಡಬೇಕು ಎಂದರು.

ಕರ್ನಾಟಕ ಚಲನಚಿತ್ರ ಕಾರ್ಮಿಕ ಸಂಘದ ಸ್ಥಾಪಕ ಅಧ್ಯಕ್ಷ ಅಶೋಕ್ ಮಾತನಾಡಿ, ‘ಚಲನಚಿತ್ರ ನಿರ್ಮಾಣ ಮಾಡುವ ಹಂತದಲ್ಲಿ ನಟ, ನಟಿಯರಿಗೆ ವೇತನ ಪಾವತಿಯಲ್ಲಿ ಅಷ್ಟಾಗಿ ಸಮಸ್ಯೆ ಆಗುವುದಿಲ್ಲ. ಆದರೆ, ಕಾರ್ಮಿಕರಿಗೆ ವೇತನ ಸರಿಯಾಗಿ ಪಾವತಿಯಾಗು ತ್ತಿರಲಿಲ್ಲ. ಅದಕ್ಕಾಗಿ ಕಾರ್ಮಿಕರ ಸಂಘಟನೆ ಮಾಡಬೇಕಾಯಿತು. ಕಾರ್ಮಿಕ ಸಂಘ ಕಟ್ಟಿದ ಕಾರಣಕ್ಕೆ ನಿರ್ಮಾಪಕರು ನನಗೆ ನೀಡುವ ಅವಕಾಶವನ್ನು ಕಡಿಮೆ ಮಾಡಿದರು. ಆದರೆ, ದುಡಿಯುವ ಕಾರ್ಮಿಕರಿಗೆ ಸರಿಯಾದ ಸಮಯಕ್ಕೆ ವೇತನ ಸಿಗುವಂತಾಗಿರುವುದು ತೃಪ್ತಿ ನೀಡಿದೆ’ ಎಂದು ಹೇಳಿದರು.

‘ಒಂದು ದೇಶ, ಹಿಂದಿ ಒಂದೇ ಭಾಷೆ, ಒಂದೇ ಚುನಾವಣೆ ಎಂದು ಎಲ್ಲವನ್ನೂ ಒಂದೇ ಮಾಡುವ ಪ್ರಯತ್ನ ನಡೆಯುತ್ತಿದೆ. ನಾವು ಕನ್ನಡಿಗರು ಅವುಗಳನ್ನು ಒಪ್ಪಲು ಸಾಧ್ಯವಿಲ್ಲ. ನಮಗೆ ಕನ್ನಡವೇ ಮೊದಲು’ ಎಂದರು.

ಸಾಹಿತಿ ಕೆ. ಷರೀಫಾ ಮಾತನಾಡಿ, ‘ಕಾರ್ಮಿಕ ಕಾಯ್ದೆಗಳನ್ನೆಲ್ಲ ಇಲ್ಲವಾಗಿಸುವ ಕಾಲದಲ್ಲಿ ನಾವಿದ್ದೇವೆ. ನಾವು ಮೌನವಾಗಿದ್ದೇವೆ. ಸಂದರ್ಭ ಬಂದರೆ ನಾವು ಸಿಡಿದೇಳುವ ಸಿಂಹಗಳಾಗುತ್ತೇವೆ ಎಂಬುದು ಅವರಿಗೆ ಗೊತ್ತಿಲ್ಲ. ನಮ್ಮಲ್ಲಿ ಯಾರಿಗೂ ಯುದ್ಧ ಬೇಕಾಗಿಲ್ಲ. ಯುದ್ಧಕ್ಕಾಗಿ ಹಪಾಹಪಿಸುವವರು ನಾವಲ್ಲ’ ಎಂದರು.

ಯೂನಿಯನ್ ಉಪಾಧ್ಯಕ್ಷ ರಾಮ ಮೂರ್ತಿ ಅಧ್ಯಕ್ಷತೆ ವಹಿಸಿದ್ದರು. ಪ್ರಧಾನ ಕಾರ್ಯದರ್ಶಿ ಇ.ಕೆ.ಎನ್. ರಾಜನ್, ಜಂಟಿ ಕಾರ್ಯದರ್ಶಿ ಮೆಲ್ಕಿಯೋರ್ ಆರ್.ಡಿ. ಉಪಸ್ಥಿತರಿದ್ದರು.



ಬಸವ ಸೇವಾ ಟ್ರಸ್ಟ್ ವತಿಯಿಂದ ಪೌರ ಕಾರ್ಮಿಕರನ್ನು ಗೌರವಿಸಲಾಯಿತು

ಮಲ್ಲಸಂದ್ರದಲ್ಲಿ ಬಸವ ಜಯಂತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವ ಸೇವಾ ಟ್ರಸ್ಟ್‌ನಿಂದ ಟಿ. ದಾಸರಹಳ್ಳಿಯ ಮಲ್ಲಸಂದ್ರದಲ್ಲಿ 892ನೇ ಬಸವ ಜಯಂತಿ ಕಾರ್ಯಕ್ರಮ ಬುಧವಾರ ಅದ್ದೂರಿಯಾಗಿ ನಡೆಯಿತು.

ಸ್ವಚ್ಛತಾ ಕಾಯಕದಲ್ಲಿ ತೊಡಗಿ ಕೊಂಡಿರುವ ಪೌರಕಾರ್ಮಿಕರನ್ನು ಗೌರವಿಸಲಾಯಿತು. ಭಕ್ತರಿಗೆ ಪ್ರಸಾದ ವಿತರಿಸಲಾಯಿತು.

ಟ್ರಸ್ಟ್ ಅಧ್ಯಕ್ಷ ಎಂ. ರವಿಕುಮಾರ್ ಮಾತನಾಡಿ, ‘ಸಮಾಜದ ಶ್ರಮಿಕರನ್ನು ಗುರುತಿಸಿ, ಅವರ ಕಾಯಕವನ್ನು ಮೆಚ್ಚಿ ಕಾಯಕಯೋಗಿ ಪ್ರಶಸ್ತಿ ನೀಡಿ ಗೌರವಿಸ ಲಾಗಿದೆ. ಮುಂದಿನ ದಿನಗಳಲ್ಲಿ ಮಕ್ಕಳ ಕಲ್ಯಾಣಕ್ಕಾಗಿ ಮತ್ತು ಹಿಂದುಳಿದವರ ಏಳಿಗೆಗಾಗಿ ಕಾರ್ಯಕ್ರಮ ರೂಪಿಸಲಾಗು ವುದು’ ಎಂದು ತಿಳಿಸಿದರು.

ಟ್ರಸ್ಟ್ ಉಪಾಧ್ಯಕ್ಷ ಎಂ. ಮಹದೇವಸ್ವಾಮಿ, ಪದಾಧಿಕಾರಿಗಳಾದ ಶಶಿಧರ, ಜಯಕುಮಾರ್, ಸೆಲ್ವಿ, ಸವಿತಾ ಭಾಗವಹಿಸಿದ್ದರು.

ನಗರದಲ್ಲಿ ಇಂದು


ಶಂಕರಾಚಾರ್ಯರ ಜಯಂತಿ ಮತ್ತು ಶಂಕರ ಪ್ರಶಸ್ತಿ ಪ್ರದಾನ ಸಮಾರಂಭ: ಅತಿಥಿಗಳು: ಎಸ್. ಸೂರ್ಯಪ್ರಕಾಶ ಪಂಡಿತ್, ಎನ್. ಕುಮಾರ್, ರಘುನಾಥ್, ಅಧ್ಯಕ್ಷತೆ: ಎ.ವಿ. ಪ್ರಸನ್ನ, ಆಯೋಜನೆ ಹಾಗೂ ಸ್ಥಳ: ಬಬ್ಬೂರುಕಮ್ಮೆ ಸೇವಾ ಸಮಿತಿ, ಶೇಷಾದ್ರಿ ರಸ್ತೆ, ಬೆಳಿಗ್ಗೆ 10.30

ಗಾಯತ್ರಿ ಜಯಂತಿ: ಗಾಯತ್ರಿ ಹೋಮ ಹವನ, ಸಾನ್ನಿಧ್ಯ: ದಯಾನಂದಪುರಿ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ದೇವಾಂಗ ಸಂಘ, ಸಂಪಂಗಿರಾಮನಗರ, ಮಧ್ಯಾಹ್ನ 12

‘ಉಲ್ಲಾಸ ಉತ್ಸಾಹ ಚಾರಣ’ ಪುಸ್ತಕ ಬಿಡುಗಡೆ ಹಾಗೂ ಎಂ.ಎ. ಖಾಲೀದ್ ಅವರಿಗೆ ಗೌರವ ಪದಕ ಸಮರ್ಪಣೆ: ಅಧ್ಯಕ್ಷತೆ: ಸುಭಾಷ್ ಭರಣಿ, ಮುಖ್ಯ ಅತಿಥಿಗಳು: ಪಿ.ಜಿ.ಆರ್. ಸಿಂಧ್ಯ, ಎಸ್. ಷಡಾಕ್ಷರಿ, ವೂಡೇ ಪಿ. ಕೃಷ್ಣ, ಎಂ.ಕೆ. ಶ್ರೀಧರ್, ರಾಜಶೇಖರ್ ಎನ್., ಬಿ.ಆರ್. ರಾಮಚಂದ್ರರಾವ್, ಆಯೋಜನೆ: ಲಾಲ್ ಬಹದ್ದೂರ್ ಮೌಂಟನೇರಿಂಗ್ ಇನ್‌ಸ್ಟಿಟ್ಯೂಟ್, ಸ್ಥಳ: ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್ ಕೇಂದ್ರ ಕಚೇರಿ, ಅರಮನೆ ರಸ್ತೆ, ಸಂಜೆ 4.30

‘ಹರಿದಾಸ ಸಾಹಿತ್ಯ ಓಘ ಮೇಘ ಮಾನ್ಯ ನೃತ್ಯ ಮಾರ್ಗ’ ರಂಗಾರೋಹಣ: ಮೇಘಾ, ಮಾನ್ಯ, ಅತಿಥಿಗಳು: ಸುಕನ್ಯಾ ಪ್ರಭಾಕರ್, ಭುಜಂಗ್ ರಾವ್, ಜಯಕರ್ ಶೆಟ್ಟಿ, ಆಯೋಜನೆ: ಲಾಸ್ಯ ವರ್ಧನ ಟ್ರಸ್ಟ್, ಸ್ಥಳ: ಕೊಂಡಜ್ಜಿ ಬಸಪ್ಪ ಸಭಾಂಗಣ, ಮಹಾರಾಣಿ ಕಾಲೇಜು ಹತ್ತಿರ, ಅರಮನೆ ರಸ್ತೆ, ಸಂಜೆ 5

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ವಿಶೇಷ ಹರಿಕಥೆ ಕಛೇರಿ: ವಿಶಾಖ ಹರಿ ಮತ್ತು ತಂಡ, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 6.30



ಶಂಕರಾಚಾರ್ಯ

ಶಂಕರ ಜಯಂತಿ ಮಹೋತ್ಸವ: ಶತರುದ್ರಾಭಿಷೇಕ, ರಾಜಬೀದಿ ಉತ್ಸವ, ಮುಖ್ಯ ಅತಿಥಿಗಳು: ಜಪಾನಂದಜೀ ಮಹಾರಾಜ್, ಶ್ರೀನಿವಾಸ ಹರೀಶ್ ಕುಮಾರ್, ಉಪಸ್ಥಿತಿ: ತೇಜಸ್ವಿ ಸೂರ್ಯ, ರವಿ ಸುಬ್ರಹ್ಮಣ್ಯ, ಉದಯ ಗರುಡಾಚಾರ್, ಸಿ.ಕೆ. ರಾಮಮೂರ್ತಿ, ಎಸ್. ರಘುನಾಥ್, ತೇಜಸ್ವಿನಿ ಅನಂತಕುಮಾರ್, ಚಕ್ರವರ್ತಿ ಸೂಲಿಬೆಲೆ, ಕೆ.ಪಿ. ಪುತ್ತೂರಾಯ, ಆಯೋಜನೆ: ಶ್ರೀ ಶಂಕರ ಜಯಂತಿ ಸೇವಾ ಸಮಿತಿ, ಸ್ಥಳ: ಶೃಂಗೇರಿ ಶಂಕರಮಠ, ಶಂಕರಪುರ, ಚಾಮರಾಜಪೇಟೆ, ಬೆಳಿಗ್ಗೆ 8ರಿಂದ

ಆದಿ ಶಂಕರಾಚಾರ್ಯರ ಜಯಂತಿ: ಉದ್ಘಾಟನೆ: ಸಿದ್ದರಾಮಯ್ಯ, ಉಪಸ್ಥಿತಿ: ಡಿ.ಕೆ. ಶಿವಕುಮಾರ್, ಶಿವರಾಜ್ ತಂಗಡಗಿ, ಅಧ್ಯಕ್ಷತೆ: ಉದಯ ಗರುಡಾಚಾರ್, ಉಪನ್ಯಾಸ: ಟಿ.ಎನ್. ವಾಸುದೇವಮೂರ್ತಿ, ಆಯೋಜನೆ: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಸಂಜೆ 6

ಶಂಕರ ಜಯಂತಿ ಮತ್ತು 53ನೇ ವರ್ಷದ ಸುವರ್ಣ ಮಹೋತ್ಸವ ಸಂಗೀತೋತ್ಸವ ಸಮಾರಂಭ: ಗಾಯನ: ಪಿ. ರಮಾ, ಪಿಟೀಲು: ಎಂ.ಡಿ. ಅರ್ಜುನ್, ಮೃದಂಗ: ನಿಕ್ಷಿತ್ ಪುತ್ತೂರ್, ಘಟ: ಎಸ್. ಶ್ರೀಶೈಲ, ಆಯೋಜನೆ: ಶ್ರೀ ತ್ಯಾಗರಾಜ ಗಾನಸಭಾ ಟ್ರಸ್ಟ್, ಸ್ಥಳ: ಬಾಲಮೋಹನ ವಿದ್ಯಾಮಂದಿರ, ರಾಜಾಜಿನಗರ, ಸಂಜೆ 6

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಯಲಹಂಕದಲ್ಲಿ ಅಂಬೇಡ್ಕರ್ ಪ್ರತಿಮೆ ಅನಾವರಣ ನಾಳೆ

ಯಲಹಂಕ: ಮಿನಿ ವಿಧಾನಸೌಧದ ಮುಂಭಾಗದಲ್ಲಿ ಸ್ಥಾಪಿಸಿರುವ ಅಂಬೇಡ್ಕರ್ ಅವರ ಪ್ರತಿಮೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೇ 3ರಂದು ಉದ್ಘಾಟಿಸಲಿದ್ದಾರೆ.

ಅಂಬೇಡ್ಕರ್ ಅವರ ಕಂಚಿನ ಪ್ರತಿಮೆ ಸ್ಥಾಪಿಸಬೇಕೆಂದು ಒತ್ತಾಯಿಸಿ, ದಲಿತಪರ ಸಂಘಟನೆಗಳು ನಡೆಸಿದ ಹೋರಾಟದ ಫಲವಾಗಿ ಸಮಾಜ ಕಲ್ಯಾಣ ಇಲಾಖೆ ವತಿಯಿಂದ ₹1.6 ಕೋಟಿ ಅನುದಾನ ಬಿಡುಗಡೆ ಮಾಡಲಾಯಿತು. ಎರಡು ವರ್ಷದ ಹಿಂದೆ 14 ಅಡಿ ಎತ್ತರದ ಕಂಚಿನ ಪ್ರತಿಮೆ ಸ್ಥಾಪಿಸಲಾಗಿತ್ತು.

ಶಾಸಕ ಎಸ್.ಆರ್.ವಿಶ್ವನಾಥ್ ಅಧ್ಯಕ್ಷತೆಯಲ್ಲಿ ನಡೆದ ಪೂರ್ವಭಾವಿ ಸಭೆ ಯಲ್ಲಿ ಯಲಹಂಕ, ಬ್ಯಾಟರಾಯನಪುರ ಕ್ಷೇತ್ರವ್ಯಾಪ್ತಿಯ ದಲಿತ ಮುಖಂಡರು, ತಾಲ್ಲೂಕು ಆಡಳಿತದ ಅಧಿಕಾರಿಗಳು ಕಾರ್ಯಕ್ರಮದ ಬಗ್ಗೆ ಚರ್ಚೆ ನಡೆಸಿದರು.

ತಹಶೀಲ್ದಾರ್ ಶ್ರೇಯಸ್.ಜಿ.ಎಸ್, ಸಮಾಜಕಲ್ಯಾಣ ಇಲಾಖೆಯ ಸಹಾಯಕ ನಿರ್ದೇಶಕ ಹರೀಶ್, ಬಿಬಿಎಂಪಿ ಕಾರ್ಯ ಪಾಲಕ ಎಂಜಿನಿಯರ್ ಸುಧಾಕರರೆಡ್ಡಿ, ಮುಖಂಡರಾದ ಬಿ.ಆರ್.ಮುನಿರಾಜು, ಜಿ.ಗುರುಸ್ವಾಮಿ, ಡಿ.ವಿ.ವೀರಭದ್ರೇಗೌಡ, ಲಿಂಗನಹಳ್ಳಿ ವೆಂಕಟೇಶ್, ಆವಲಹಳ್ಳಿ ಮಾರುತಿ, ಸೋಮಶೇಖರ್ ಇದ್ದರು.



ನಗರದ ಕೆ.ಆರ್. ಮಾರುಕಟ್ಟೆ ಪ್ರದೇಶದಲ್ಲಿ ಗುರುವಾರ ರಾತ್ರಿ ಸುರಿದ ಮಳೆಯಲ್ಲಿ ಸಾಗಿದ ತಳ್ಳುಗಾಡಿ ವ್ಯಾಪಾರಿ ಚಿತ್ರ: ಪ್ರಶಾಂತ್ ಎಚ್.ಜಿ.



ಅನಿಲ್ ಕುಂಬ್ಳೆ ವೃತ್ತದಲ್ಲಿ ಮಳೆಗೆ ರಸ್ತೆಯೇ ಚರಂಡಿಯಂತಾಗಿತ್ತು ಚಿತ್ರ: ಎಸ್.ಕೆ. ದಿನೇಶ್

ಅಬ್ಬರಿಸಿದ ಮಳೆ ಆಟೊ ಚಾಲಕ ಸಾವು

- ಉರುಳಿ ಬಿದ್ದ ಮರಗಳು
- ಸಮರ್ಪಕ ಚರಂಡಿ ವ್ಯವಸ್ಥೆ ಇಲ್ಲದೇ ಹಲವೆಡೆ ರಸ್ತೆಯಲ್ಲೇ ಹರಿದ ನೀರು
- ವಾಹನ ಸಂಚಾರಕ್ಕೆ ತೊಡಕು
- ಒಂದು ತಾಸಿಗೂ ಹೆಚ್ಚು ಸುರಿದ ಮಳೆ



ನಗರದ ಜೆ.ಸಿ. ರಸ್ತೆಯಲ್ಲಿ ಮಳೆಯ ನಡುವೆ ವಾಹನಗಳು ಸಾಗಿದವು ಚಿತ್ರ: ಎಂ.ಎಸ್. ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ರಾತ್ರಿ ಗಾಳಿ, ಗುಡುಗು ಸಿಡಿಲಿನೊಂದಿಗೆ ಧಾರಾಕಾರ ಮಳೆ ಸುರಿದಿದ್ದು, ಹಲವೆಡೆ ಮರಗಳು ಮುರಿದು ಬಿದ್ದಿವೆ. ರಸ್ತೆಯಲ್ಲಿ ನೀರು ನಿಂತು ಸಂಚಾರಕ್ಕೆ ತೊಡಕುಂಟಾಗಿದೆ. ಕತ್ರಿಗುಪ್ಪೆ ಮುಖ್ಯರಸ್ತೆಯ ಬಸ್ ನಿಲ್ದಾಣದ ಬಳಿ ಆಟೊದ ಮೇಲೆ ಮರ ಉರುಳಿ ಬಿದ್ದು, ಆಟೊ ಚಾಲಕ, ಇಟ್ಟಮಡು ನಿವಾಸಿ ಮಹೇಶ್ (45) ಸ್ಥಳದಲ್ಲೇ ಮೃತಪಟ್ಟಿದ್ದಾರೆ. ರಾತ್ರಿ 7.30ರ ಸುಮಾರಿಗೆ ಘಟನೆ ನಡೆದಿದೆ.

ಕೋರಮಂಗಲ, ಸುಬ್ರಹ್ಮಣ್ಯನಗರ, ತಾವರೆಕೆರೆ ಸಹಿತ ವಿವಿಧೆಡೆ ಮರಗಳು ಮುರಿದು ಬಿದ್ದಿವೆ. ಕೋರಮಂಗಲದಲ್ಲಿ ಮರ ಬಿದ್ದು ಕಾರು ಜಖಂಗೊಂಡಿದೆ. ರಸ್ತೆಯಲ್ಲಿಯೇ ಕಾಲುವೆಯಂತೆ ನೀರು ಹರಿಯಿತು. ನಗರದ ವಿವಿಧೆಡೆ ಚರಂಡಿ ವ್ಯವಸ್ಥೆ ಸರಿ ಇಲ್ಲದೇ ರಸ್ತೆಯಲ್ಲಿಯೇ ಮಳೆನೀರು ನಿಂತಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆಯಾಯಿತು. ಬಿಳೇಕಹಳ್ಳಿಯಿಂದ ಜೆ.ಡಿ. ಮರ ಕಡೆಗೆ, ವೀರಸಂದ್ರ ಬಳಿ ಎರಡೂ ಬದಿ ರಸ್ತೆಯಲ್ಲಿ, ಬಸಾಪುರ ಜಂಕ್ಷನ್‌ನಲ್ಲಿ ಹೊರಮಾವು ಕೆಳಸೇತುವೆಯಲ್ಲಿ ನೀರು ನಿಂತಿತ್ತು.

ವಿಧಾನಸೌಧದ ಸುತ್ತಮುತ್ತ, ರಿಚ್ಮಂಡ್ ಟೌನ್, ಶಾಂತಿನಗರ, ಕಾರ್ಪೊರೇಷನ್ ವೃತ್ತ, ಮೆಜೆಸ್ಟಿಕ್, ಕೆ.ಆರ್.ಮಾರುಕಟ್ಟೆ, ರಾಜಾಜಿನಗರ, ಬಸವೇಶ್ವರ ನಗರ, ನಂದಿನಿ ಲೇಔಟ್ ಸೇರಿ ಹಲವು ಬಡಾವಣೆಗಳಲ್ಲಿ ಒಂದು ತಾಸಿಗೂ ಹೆಚ್ಚು ಜೋರು ಮಳೆ ಸುರಿಯಿತು. ಕೆಲಸ ಮುಗಿಸಿ ಮನೆಗೆ ತೆರಳುತ್ತಿದ್ದವರು ಮಾರ್ಗ ಮಧ್ಯದಲ್ಲೇ ಸಿಲುಕಿ ಪರದಾಡಿದರು.

ಜ್ಞಾನಭಾರತಿ ಹತ್ತಿರ ನೀರು ನಿಂತಿರುವುದರಿಂದ ರಾಜರಾಜೇಶ್ವರಿ ನಗರದ ಕಡೆಗೆ ವಾಹನಗಳು ನಿಧಾನಗತಿಯಲ್ಲಿ ಸಾಗಿದವು. ತಾವರೆಕೆರೆಯಿಂದ ನಿಮ್ಹಾನ್ಸ್ ಆಸ್ಪತ್ರೆ ಕಡೆಗೆ ವಾಹನಗಳ ಸಂಚಾರಕ್ಕೆ ತಡೆಯುಂಟಾಯಿತು. ಹೆಬ್ಬಾಳ ಪೊಲೀಸ್ ಠಾಣೆಯಿಂದ ವಿಮಾನ ನಿಲ್ದಾಣದ ಕಡೆಗೆ, ಆರ್.ಪಿ. ರಸ್ತೆಯಿಂದ ಪಿ.ಜಿ. ಹಳ್ಳಿ ಕಡೆಗೆ, ವರ್ತೂರು ಕಡೆಯಿಂದ ಗುಂಜೂರು ಕಡೆಗೆ, ಭಾಷ್ಯಂ ವೃತ್ತದಿಂದ ಕಾವೇರಿ ಕಡೆಗೆ, ಉದಯ ಟಿ.ವಿ ಜಂಕ್ಷನ್ ಕಡೆಯಿಂದ ಜಯಮಹಲ್ ರಸ್ತೆ ಕಡೆಗೆ ವಾಹನಗಳು ನಿಧಾನವಾಗಿ ಸಾಗಿದವು.

ಗುಡುಗು ಮಿಂಚು ಸಹಿತ ಒಂದು ತಾಸಿಗೂ ಅಧಿಕ ಮಳೆಯಾಗಿದ್ದು, ಬೇಸಿಗೆಯ ಧಗೆಯನ್ನು ಕಡಿಮೆ ಮಾಡಿತು.

ಮಳೆ ಪ್ರಮಾಣ: ಹಂಪಿನಗರ 5.5 ಸೆಂ.ಮೀ., ನಾಯಂಡಹಳ್ಳಿ 4.5 ಸೆಂ.ಮೀ., ವಿದ್ಯಾಪೀಠ 4.5 ಸೆಂ.ಮೀ., ರಾಜರಾಜೇಶ್ವರಿ ನಗರ 4.4 ಸೆಂ.ಮೀ., ಹೊರಮಾವು 3.1 ಸೆಂ.ಮೀ., ಹೇರೋಹಳ್ಳಿ 3 ಸೆಂ.ಮೀ., ಪುಲಕೇಶಿನಗರ 2.7 ಸೆಂ.ಮೀ., ಕೆಂಗೇರಿ 2.5 ಸೆಂ.ಮೀ., ಗೊಟ್ಟಿಗೆರೆ 2.4 ಸೆಂ.ಮೀ., ಬಾಣಸವಾಡಿ 2.4 ಸೆಂ.ಮೀ., ಬಸವೇಶ್ವರ ನಗರ 2 ಸೆಂ.ಮೀ., ಸಿಂಗಸಂದ್ರ 1.8 ಸೆಂ.ಮೀ., ಪಟ್ಟಾಭಿರಾಮ ನಗರ 1.7 ಸೆಂ.ಮೀ., ನಾಗಪುರ 1.7 ಸೆಂ.ಮೀ., ಅಂಜನಾಪುರ 1.7 ಸೆಂ.ಮೀ., ಬಿಳೇಕಹಳ್ಳಿ 1.6 ಸೆಂ.ಮೀ., ಕೋರಮಂಗಲ 1.4 ಸೆಂ.ಮೀ., ಸಂಪಂಗಿರಾಮ ನಗರ 1.4 ಸೆಂ.ಮೀ., ನಂದಿನಿ ಲೇಔಟ್ 1.3 ಸೆಂ.ಮೀ., ಕುಶಾಲನಗರ 1.3 ಸೆಂ.ಮೀ., ರಾಜಾಜಿನಗರ 1.3 ಸೆಂ.ಮೀ., ವನ್ನರ್‌ಪೇಟೆ 1.2 ಸೆಂ.ಮೀ., ಎಚ್‌ಎಎಲ್ 1 ಸೆಂ.ಮೀ., ಬಸವನಪುರ 1 ಸೆಂ.ಮೀ., ಅರಕೆರೆ 1 ಸೆಂ.ಮೀ., ಎಚ್‌ಎಸ್‌ಆರ್ ಲೇಔಟ್ 1 ಸೆಂ.ಮೀ., ಕೆ.ಆರ್.ಪುರ 1 ಸೆಂ.ಮೀ. ಮಳೆಯಾಗಿದೆ.



ಮಳೆಯಲ್ಲಿ ಜನರು ಕೊಡೆಗಳನ್ನು ಹಿಡಿದು ನಡೆದರು

ಮುರಿದು ಬಿದ್ದ 10 ಮರ, 23 ಟೊಂಗೆ

ವಲಯ	ಬಿದ್ದ ಮರ	ತೆರವು	ಬಿದ್ದ ಟೊಂಗೆ	ತೆರವು
ದಕ್ಷಿಣ	4	2	6	3
ಆರ್‌ಆರ್‌ನಗರ	2	0	3	1
ಬೊಮ್ಮನಹಳ್ಳಿ	1	1	3	1
ಪಶ್ಚಿಮ	2	1	2	2
ಮಹದೇವಪುರ	0	0	2	2
ಯಲಹಂಕ	1	1	4	1
ಪೂರ್ವ	0	0	1	1
ದಾಸರಹಳ್ಳಿ	0	0	2	1

ಅನಿಲ ಸೋರಿಕೆಯಿಂದ ಬೆಂಕಿ ಅವಘಡ: ಇಬ್ಬರ ಸಾವು

ಪ್ರಜಾವಾಣಿ ವಾರ್ತೆ



ನಾಗರಾಜ ಗೌಡ



ಶ್ರೀನಿವಾಸ್

ನೆಲಮಂಗಲ: ಬೆಂಗಳೂರು ಉತ್ತರ ತಾಲ್ಲೂಕಿನ ಅಡಕಮಾರನ ಹಳ್ಳಿಯ ಮನೆಯೊಂದರಲ್ಲಿ ಅಡುಗೆ ಅನಿಲ ಸೋರಿಕೆಯಿಂದ ಸಂಭವಿಸಿದ ಅಗ್ನಿ ಅವಘಡದಲ್ಲಿ ಇಬ್ಬರು ಮೃತಪಟ್ಟಿದ್ದಾರೆ.

ನಾಗರಾಜಗೌಡ (50) ಹಾಗೂ ಶ್ರೀನಿವಾಸ್ (50) ಮೃತಮಟ್ಟವರು.

ಘಟನೆಯು ಸೋಮವಾರ ನಡೆದಿತ್ತು. ಘಟನೆಯಲ್ಲಿ ಆರು ಮಂದಿ ಗಾಯಗೊಂಡಿದ್ದರು. ನಾಗರಾಜಗೌಡ ಹಾಗೂ ಶ್ರೀನಿವಾಸ್ ಗುರುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಘಟನೆ ನಡೆದದ್ದು ಹೇಗೆ?: ಅಡಕಮಾರನಹಳ್ಳಿಯ ಗಂಗಯ್ಯ ಅವರ ಮನೆಯಲ್ಲಿ ಬಳ್ಳಾರಿ ಜಿಲ್ಲೆಯ ನಾಗರಾಜಗೌಡ ಕುಟುಂಬವು ಬಾಡಿಗೆಗೆ ನೆಲಸಿತ್ತು. ಸೋಮವಾರ ಬೆಳಿಗ್ಗೆ ಕೆಲಸಕ್ಕೆ ತೆರಳುವ ವೇಳೆ ನಾಗರಾಜ್ ಅವರು ದೇವರಿಗೆ ದೀಪ ಹಚ್ಚುತ್ತಿದ್ದರು. ಅವರ ಎರಡನೇ ಪುತ್ರ ಅಭಿಷೇಕ್ ಅವರು ಖಾಲಿಯಾಗಿದ್ದ ಸಿಲಿಂಡರ್ ಅನ್ನು ಬದಲಾಯಿಸುತ್ತಿದ್ದರು. ಈ ಸಂದರ್ಭದಲ್ಲಿ ವಾಷರ್ ಸರಿ ಇಲ್ಲದೇ ಇದ್ದ ಕಾರಣಕ್ಕೆ ಅನಿಲ ಸೋರಿಕೆ ಆಗಿ ಬೆಂಕಿ ಹೊತ್ತಿಕೊಂಡಿತ್ತು. ಬೆಂಕಿಯ ಕೆನ್ನಾಲಿಗೆಗೆ ಮನೆ ಸಂಪೂರ್ಣ ಆಹುತಿ ಆಗಿತ್ತು.

ಅವಘಡದಲ್ಲಿ ನಾಗರಾಜಗೌಡ, ಪತ್ನಿ ಲಕ್ಷ್ಮೀದೇವಿ(35), ಪುತ್ರರಾದ ಬಸವನಗೌಡ(19), ಅಭಿಷೇಕ್(18) ನೆರವಿಗೆ ಬಂದಿದ್ದ ಪಕ್ಕದ ಮನೆಯ ಶ್ರೀನಿವಾಸ್ (50), ಮನೆ ಮಾಲೀಕರ ಮಗ ಶಿವಶಂಕರ್ ಗಾಯಗೊಂಡಿದ್ದರು. ಅಭಿಷೇಕ್ ಸ್ಥಿತಿ ಗಂಭೀರ ವಾಗಿದೆ. ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಮುಂದುವರಿದಿದೆ.



ಸರಣಿ ಅಪಘಾತ

ಹೊಂಬೇಗೌಡ ನಗರದಲ್ಲಿ (ವಿಲ್ಸನ್ ಗಾರ್ಡನ್) ಗುರುವಾರ ಆಂಬುಲೆನ್ಸ್, ಆಟೊ ಹಾಗೂ ಸ್ಕೂಟರ್ ಮಧ್ಯೆ ಸರಣಿ ಅಪಘಾತ ಸಂಭವಿಸಿದ್ದು ವಾಹನಗಳು ಜಖಂಗೊಂಡಿವೆ ಪ್ರಜಾವಾಣಿ ಚಿತ್ರ

ಸಂಕ್ಷಿಪ್ತ ಸುದ್ದಿ

ಅಪಘಾತ: ಬೈಕ್ ಸವಾರ ಸಾವು

ಬೆಂಗಳೂರು: ಮತ್ತಿಕೆರೆಯಲ್ಲಿರುವ ಎಂ.ಎಸ್.ರಾಮಯ್ಯ ಆಸ್ಪತ್ರೆ ಬಳಿ ಬುಧವಾರ ರಾತ್ರಿ ದ್ವಿಚಕ್ರ ವಾಹನಗಳ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರರೊಬ್ಬರು ಮೃತಪಟ್ಟಿದ್ದಾರೆ.

ತಮಿಳುನಾಡಿನ ಡೇವಿಡ್ ಸೆಂಗೋಲ್ (33) ಮೃತಪಟ್ಟವರು.

ಮತ್ತಿಕೆರೆಯ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದ ಡೇವಿಡ್ ಅವರು ಲಾಂಡ್ರಿಯಲ್ಲಿ ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಬೈಕ್‌ನಲ್ಲಿ ರಾತ್ರಿ ಪಿ.ಜಿ.ಗೆ ವಾಪಸ್ ಆಗುತ್ತಿದ್ದಾಗ ಘಟನೆ ನಡೆದಿದೆ. ಡೇವಿಡ್ ಮತ್ತು ವಿಜಯ್ ಎಂಬುವವರ ಬೈಕ್‌ಗಳ ಮಧ್ಯೆ ಮುಖಾಮುಖಿ ಡಿಕ್ಕಿ ಸಂಭವಿಸಿದೆ. ಹೆಲ್ಮೆಟ್ ಧರಿಸದ ಕಾರಣ ತಲೆಗೆ ತೀವ್ರ ಗಾಯವಾಗಿದ್ದ ಡೇವಿಡ್ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ. ವಿಜಯ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ ಎಂದು ಪೊಲೀಸರು ಹೇಳಿದರು.

‘ಮೇ’ನಲ್ಲಿ ಅಧಿಕ ತಾಪಮಾನ’


ನವದೆಹಲಿ (ಪಿಟಿಐ): ಮೇ ತಿಂಗಳಿನಲ್ಲಿ ಭಾರತದ ಬಹುತೇಕ ಭಾಗಗಳಲ್ಲಿ ಸಾಮಾನ್ಯಕ್ಕಿಂತ ಅಧಿಕ ತಾಪಮಾನ ಇರಲಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಬುಧವಾರ ತಿಳಿಸಿದೆ.

‘ಉತ್ತರ ಕರ್ನಾಟಕ, ಗುಜರಾತ್, ಒಡಿಶಾ, ಛತ್ತೀಸಗಢ, ಮಹಾರಾಷ್ಟ್ರ ಹಾಗೂ ತೆಲಂಗಾಣದ ಹಲವು ಪ್ರದೇಶಗಳಲ್ಲಿ ಬಿಸಿಗಾಳಿಯ ದಿನಗಳು ಸಾಮಾನ್ಯಕ್ಕಿಂತ ಹೆಚ್ಚಿರಲಿವೆ’ ಎಂದು ಐಎಂಡಿ ಮಹಾನಿರ್ದೇಶಕ ಮೃತ್ಯಂಜಯ ಮಹಾಪಾತ್ರ ತಿಳಿಸಿದರು.

ಡಿ.ಕೆ. ಸುರೇಶ್ ಪತ್ನಿ ಎಂದಾಕೆ ಸೆರೆ

ಆರೋಪಿ ಮಹಿಳೆ ಮೈಸೂರಿನ ಸರ್ಕಾರಿ ಶಾಲೆಯ ಶಿಕ್ಷಕಿ

ಪ್ರಜಾವಾಣಿ ವಾರ್ತೆ



ಪವಿತ್ರ

ರಾಮನಗರ: ‘ನಾನು ಮಾಜಿ ಸಂಸದ ಡಿ.ಕೆ. ಸುರೇಶ್ ಪತ್ನಿ’ ಎಂದು ಹೇಳಿಕೊಂಡು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊ ಹರಿಬಿಟ್ಟಿದ್ದ ಸರ್ಕಾರಿ ಶಾಲೆಯ ಶಿಕ್ಷಕಿಯನ್ನು ರಾಮನಗರ ಸಿಇಎನ್ ಠಾಣೆ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಮೈಸೂರು ತಾಲ್ಲೂಕಿನ ಇಲವಾಲದ ಪವಿತ್ರ ಬಂಧಿತ ಶಿಕ್ಷಕಿ. ಸಮೀಪದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯಲ್ಲಿ ಶಿಕ್ಷಕಿಯಾಗಿ ಕೆಲಸ ಮಾಡುತ್ತಿದ್ದ ಪವಿತ್ರ ಕನಕಪುರ ತಾಲ್ಲೂಕಿನ ದೊಡ್ಡಆಲಹಳ್ಳಿ ಮೂಲದವರು. ಪತಿಯಿಂದ ವಿಚ್ಛೇದನ ಪಡೆದಿರುವ ಆಕೆ ಪ್ರತ್ಯೇಕವಾಗಿ ವಾಸವಾಗಿದ್ದರು. ಮಾನಸಿಕವಾಗಿಯೂ ಕುಗ್ಗಿದ್ದರು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ನೆರೆಹೊರೆಯವರನ್ನು ಹೆದರಿಸಲು ಪವಿತ್ರ ತಾನು ಡಿ.ಕೆ. ಸುರೇಶ್ ಪತ್ನಿ ಎಂದು ಹೇಳಿಕೊಂಡಿದ್ದಳು. ತನ್ನ ಚಿತ್ರಗಳನ್ನು ಎಡಿಟ್ ಮಾಡಿ ಸುರೇಶ್ ಚಿತ್ರದೊಂದಿಗೆ ಜೋಡಿಸಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದಳು. ವಿಡಿಯೊ ಕೂಡ ಹರಿಬಿಟ್ಟಿದ್ದಳು. ಪವಿತ್ರ ವಿರುದ್ಧ ಪ್ರಕರಣ ದಾಖಲಾಗುತ್ತಿದ್ದಂತೆ ಮೈಸೂರಿಗೆ ತೆರಳಿ ಬಂಧಿಸಲಾಯಿತು. ಕೋರ್ಟ್‌ಗೆ ಹಾಜರುಪಡಿಸಿದ ಬಳಿಕ ನ್ಯಾಯಾಂಗ ಬಂಧನಕ್ಕೆ ನೀಡಲಾಯಿತು ಎಂದು ಮೂಲಗಳು ಹೇಳಿವೆ.

ಸಾಮಾಜಿಕ ಜಾಲತಾಣ ಇನ್‌ಸ್ಟಾಗ್ರಾಮ್‌ನಲ್ಲಿ pavitrah 256 ಎಂಬ ಹೆಸರಿನಲ್ಲಿ ಹಾಗೂ ಫೇಸ್‌ಬುಕ್‌ನಲ್ಲಿ PavitraDksuresh Dodalahalli ಎಂಬ ಹೆಸರಿನಲ್ಲಿ ಖಾತೆ ಹೊಂದಿದ್ದ ಪವಿತ್ರ ಎರಡೂ ಜಾಲತಾಣಗಳಲ್ಲಿ ಏಪ್ರಿಲ್ 7 ಮತ್ತು 8ರಂದು ವಿಡಿಯೊ ಪೋಸ್ಟ್ ಮಾಡಿದ್ದರು.

‘ನಾನು ಮೊದಲು ಡಿ.ಕೆ. ಸುರೇಶ್ ಅವರ ಹೆಂಡತಿಯಾಗಿ ಹೇಳಬೇಕೆಂದರೆ, ನಾನು ಫಸ್ಟ್ ಸುರೇಶ್ ಅವರ ಅಭಿಮಾನಿ. ಯಾಕೆಂದರೆ ಅವರು ಮೂರು ಸಲ ಎಂ.ಪಿ.ಯಾಗಿ ಯಾರೂ ಮಾಡದ ಒಳ್ಳೆಯ ಕೆಲಸಗಳನ್ನು ಮಾಡಿದ್ದಾರೆ. ಅವರನ್ನು ನನ್ನ ಗಂಡ ಎಂದು ಹೇಳಿಕೊಳ್ಳಲು ಖುಷಿಪಡುತ್ತೇನೆ’ ಎಂದು ವಿಡಿಯೊದಲ್ಲಿ ಹೇಳಿಕೊಂಡಿದ್ದಳು.

ವಿಡಿಯೊ ವಿಷಯ ಗಮನಕ್ಕೆ ಬರುತ್ತಿದ್ದಂತೆ ವಕೀಲ ಪ್ರದೀಪ್ ಎಂಬವರು ಸುರೇಶ್ ಪರವಾಗಿ ಸಿಇಎನ್ ಠಾಣೆಗೆ ಬುಧವಾರ ದೂರು ಕೊಟ್ಟಿದ್ದರು. ದುರುದ್ದೇಶದಿಂದ ತಾನು ಸುರೇಶ್ ಅವರ ಪತ್ನಿ ಎಂದು ಹೇಳಿಕೊಂಡು ಅಪಪ್ರಚಾರ ನಡೆಸುತ್ತಿರುವ ಮಹಿಳೆ, ಸಾರ್ವಜನಿಕವಾಗಿ ತಪ್ಪು ಸಂದೇಶ ಹರಡುತ್ತಿದ್ದಾರೆ. ಆಕೆ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ದೂರಿನಲ್ಲಿ ತಿಳಿಸಿದ್ದರು.



ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್ ಚಾಮರಾಜಪೇಟೆಯ ಕೋಟೆ ಪ್ರೌಢಶಾಲೆ ಆವರಣದಲ್ಲಿ ಹಮ್ಮಿಕೊಂಡಿರುವ 87ನೇ ಶ್ರೀ ರಾಮನವಮಿ ಸಂಗೀತೋತ್ಸವದಲ್ಲಿ ಪಿಟೀಲು ವಾದಕರಾದ ಮೈಸೂರು ನಾಗರಾಜ್ ಮತ್ತು ಅವರ ಪುತ್ರ ಕಾರ್ತಿಕ್ ಅವರು ಸಂಗೀತ ಕಛೇರಿಯನ್ನು ಗುರುವಾರ ನಡೆಸಿಕೊಟ್ಟರು ಪ್ರಜಾವಾಣಿ ಚಿತ್ರ

ದೂರು ನೀಡಿದ ಯುವತಿ, ಆರೋಪಿಗಾಗಿ ಹುಡುಕಾಟ

ಮತ್ತೊಂದು ಲೈಂಗಿಕ ದೌರ್ಜನ್ಯ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ ಒಂದನೇ ಕ್ರಾಸ್‌ನ ಅಡ್ಡರಸ್ತೆಯಲ್ಲಿ ತೆರಳುತ್ತಿದ್ದ ಯುವತಿಯನ್ನು ತಬ್ಬಿಕೊಂಡು ಲೈಂಗಿಕ ದೌರ್ಜನ್ಯ ಎಸಗಿದ್ದ ಪ್ರಕರಣವು ಮಾಸುವ ಮುನ್ನವೇ ನಗರದ ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲೂ ಇಂತಹದ್ದೇ ಘಟನೆ ನಡೆದಿದೆ.

ಮಾರತ್‌ಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯ ಎಕೋ ವರ್ಲ್ಡ್ ಟೆಕ್‌ಪಾರ್ಕ್ ಗೇಟ್ ಬಳಿ 20 ವರ್ಷದ ಯುವತಿ ಬುಧವಾರ ರಾತ್ರಿ 11.30ರ ಸುಮಾರಿಗೆ ನಡೆದು ತೆರಳುತ್ತಿದ್ದರು. ಆಗ ಬೈಕ್‌ನಲ್ಲಿ ಬಂದಿದ್ದ ಆರೋಪಿ, ಯುವತಿಯ ಹಿಂಭಾಗವನ್ನು ಮುಟ್ಟಿ ಲೈಂಗಿಕ ದೌರ್ಜನ್ಯ ಎಸಗಿ ಪರಾರಿ ಆಗಿದ್ದಾನೆ ಎಂದು ಮೂಲಗಳು ತಿಳಿಸಿವೆ.

ಯುವತಿ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ದೂರು ನೀಡಿರುವ ಹೊರ ರಾಜ್ಯದ ಯುವತಿ ಸಾಫ್ಟ್‌ವೇರ್ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಆರೋಪಿ ವರ್ತನೆಯಿಂದ ಗಾಬರಿಗೊಂಡಿದ್ದ ಯುವತಿ ಜೋರಾಗಿ ಕಿರುಚಿದ್ದರು. ಆಗ ಆರೋಪಿ ಸ್ಥಳದಿಂದ ಪರಾರಿ ಆಗಿದ್ದಾನೆ’ ಎಂದು ಪೊಲೀಸರು ಹೇಳಿದರು.

ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲನೆ: ‘ಘಟನೆ ನಡೆದ ಸ್ಥಳದ ಸುತ್ತಮುತ್ತ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ನಡೆಸಲಾಗಿದೆ. ಆರೋಪಿಯ ಸುಳಿವು ಲಭಿಸಿದೆ. ಶೀಘ್ರದಲ್ಲೇ ಆರೋಪಿಯನ್ನು ಬಂಧಿಸಲಾಗುವುದು’ ಎಂದು ಪೊಲೀಸರು ತಿಳಿಸಿದರು.

ಭಾರತಿ ಲೇಔಟ್‌ನ ಪೇಯಿಂಗ್ ಗೆಸ್ಟ್‌ನಲ್ಲಿ ನೆಲಸಿದ್ದ ಹೊರ ರಾಜ್ಯದ ಇಬ್ಬರು ಯುವತಿಯರು ಏಪ್ರಿಲ್ 3ರಂದು ರಾತ್ರಿ ಕಾಫಿ ಕುಡಿದು ವಾಪಸ್ ತೆರಳುತ್ತಿದ್ದರು. ಅದೇ ವೇಳೆಗೆ ಸ್ಕೂಟರ್‌ನಲ್ಲಿ ಬಂದಿದ್ದ ಆರೋಪಿ, ಯುವತಿಯನ್ನು ತಬ್ಬಿಕೊಂಡು ದೌರ್ಜನ್ಯ ಎಸಗಿ ಪರಾರಿ ಆಗಿದ್ದ. ಆರೋಪಿಯನ್ನು ಕೇರಳದಲ್ಲಿ ಪೊಲೀಸರು ಬಂಧಿಸಿದ್ದಾರೆ.

ಪೊಲೀಸರು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದರೂ ನಗರದಲ್ಲಿ ಆಗಾಗ್ಗೆ ಈ ರೀತಿಯ ಪ್ರಕರಣಗಳು ವರದಿ ಆಗುತ್ತಿವೆ. ಪೊಲೀಸರು ಇನ್ನಷ್ಟು ಬಿಗಿಯಾದ ಕ್ರಮ ತೆಗೆದುಕೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ಅಪರಾಧ ಸುದ್ದಿ

ನೈಜೀರಿಯಾದ ಮಹಿಳೆ ಕೊಲೆ ಪರಿಚಯಸ್ಥರ ಮೇಲೆ ಶಂಕೆ

ಬೆಂಗಳೂರು: ಚಿಕ್ಕಜಾಲದ ಟೆಲಿಕಾಂ ಲೇಔಟ್‌ನ ಪಾರ್ಕಿಂಗ್ ಪ್ರದೇಶದಲ್ಲಿ ಸಿಕ್ಕಿದ ಮೃತದೇಹದ ಗುರುತನ್ನು ಚಿಕ್ಕಜಾಲ ಠಾಣೆ ಪೊಲೀಸರು ಪತ್ತೆ ಹಚ್ಚಿದ್ದಾರೆ. ಆಕೆಯ ಪರಿಚಯಸ್ಥರೇ ಕೊಲೆ ಮಾಡಿ ಮೃತದೇಹ ಎಸೆದು ಹೋಗಿದ್ದಾರೆ ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ.

ಕೊಲೆಯಾದ ಮಹಿಳೆಯನ್ನು ನೈಜೀರಿಯಾದ ಲೋವಿತಾ(31) ಎಂದು ಗುರುತಿಸಲಾಗಿದೆ.

ಲೋವಿತಾಳನ್ನು ಕತ್ತು ಹಿಸುಕಿ ಕೊಲೆ ಮಾಡಲಾಗಿತ್ತು. ದೇಹದ ವಿವಿಧೆಡೆ ಚಾಕುವಿನಿಂದ ಇರಿದಿರುವುದು ಪತ್ತೆಯಾಗಿತ್ತು. ಆಫ್ರಿಕನ್ ಅಸೋಸಿಯೇಷನ್ ಸದಸ್ಯರು ಕೃತ್ಯ ನಡೆದ ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದರು. ಆಕೆ ಲೋವಿತಾ ಎಂಬುದು ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಕೆಲವು ತಿಂಗಳ ಹಿಂದಷ್ಟೇ ಭಾರತಕ್ಕೆ ಬಂದಿದ್ದ ಲೋವಿತಾ, ಬನ್ನೇರುಘಟ್ಟ ಸಮೀಪದಲ್ಲಿ ವಾಸವಾಗಿದ್ದರು. ಆಕೆಯ ಸ್ನೇಹಿತರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಪಾಕ್, ಬಾಂಗ್ಲಾ ಪ್ರಜೆಗಳ ಮಾಹಿತಿ ಸಂಗ್ರಹಕ್ಕೆ ಬಿಜೆಪಿ ಭಿನ್ನ ನಾಯಕರ ಅಭಿಯಾನ

ಅಕ್ರಮ ವಾಸಿಗಳ ಪತ್ತೆಗೆ ‘ವಾರ್ ರೂಮ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಅಕ್ರಮವಾಗಿ ನೆಲಸಿರುವ ಪಾಕಿಸ್ತಾನಿಯರು ಮತ್ತು ಬಾಂಗ್ಲಾದೇಶಿಯರನ್ನು ಪತ್ತೆ ಮಾಡಿ, ಮಾಹಿತಿ ಸಂಗ್ರಹಿಸಿ ಅವರ ವಿರುದ್ಧ ಕ್ರಮಕೈಗೊಳ್ಳಲು ಬಿಜೆಪಿಯ ಕೆಲವು ಶಾಸಕರು ಮತ್ತು ಭಿನ್ನರ ಬಣದ ನಾಯಕರು ಅಭಿಯಾನ ಆರಂಭಿಸಿದ್ದಾರೆ.

ಬಿಜೆಪಿಯ ಪ್ರಧಾನ ಕಾರ್ಯದರ್ಶಿ ಹಾಗೂ ಕಾರ್ಕಳ ಶಾಸಕ ವಿ.ಸುನಿಲ್‌ಕುಮಾರ್, ಶಾಸಕ ರಮೇಶ ಜಾರಕಿಹೊಳಿ, ಮಾಜಿ ಸಚಿವ ಅರವಿಂದ ಲಿಂಬಾವಳಿ, ಮಾಜಿ ಸಂಸದ ಜಿ.ಎಂ. ಸಿದ್ದೇಶ್ವರ ಮುಂತಾದವರು ಈ ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ.


ಅರವಿಂದ ಲಿಂಬಾವಳಿ ಅವರು ಸುದ್ದಿಗೋಷ್ಠಿ ನಡೆಸಿ, ಕರ್ನಾಟಕದಲ್ಲಿ ಅಕ್ರಮವಾಗಿ ನೆಲಸಿರುವ ಪಾಕಿಸ್ತಾನಿಗಳು ಮತ್ತು ಬಾಂಗ್ಲಾದೇಶಿಗರನ್ನು ರಾಜ್ಯದಿಂದ ಹೊರಗೆ ಹಾಕಬೇಕು. ಇವರು ಹೋಟೆಲ್ ಕಾರ್ಮಿಕರಾಗಿ, ಅಪಾರ್ಟ್‌ಮೆಂಟ್‌ಗಳಲ್ಲಿ ಸೆಕ್ಯುರಿಟಿ ಗಾರ್ಡ್‌ಗಳಾಗಿ, ಕಟ್ಟಡ ಕಾರ್ಮಿಕರಾಗಿ, ಸಲೂನ್ ಮತ್ತು ಕಸ ಆಯುವ ಕೆಲಸಗಳಲ್ಲಿ ತೊಡಗಿರುತ್ತಾರೆ. ಸರ್ಕಾರ ಇವರನ್ನು ಪತ್ತೆ ಮಾಡಬೇಕು ಎಂದು ಒತ್ತಾಯಿಸಿದರು.

‘ರಾಜ್ಯದಲ್ಲಿ ಪಾಕಿಸ್ತಾನಿಗಳು ಮತ್ತು ಬಾಂಗ್ಲಾದೇಶಿಗರನ್ನು ಉಳಿದುಕೊಳ್ಳಲು ಬಿಟ್ಟರೆ ದೇಶದ ಭದ್ರತೆಗೆ ಸಂಚಕಾರ ಬರಲಿದೆ. ಆದ್ದರಿಂದ ಸಾರ್ವಜನಿಕರೂ ಕೂಡ ತಮ್ಮ ಸುತ್ತಮುತ್ತ ಯಾರಾದರೂ ಪಾಕಿಸ್ತಾನಿಗಳು ಮತ್ತು ಬಾಂಗ್ಲಾದೇಶಿಯರು ವಾಸವಾಗಿದ್ದರೆ ಅವರ ಮಾಹಿತಿಯನ್ನು ನಮಗೆ ನೀಡಬೇಕು. ಇದಕ್ಕಾಗಿ ವಾರ್‌ರೂಮ್ ತೆರೆಯಲಾಗಿದ್ದು, ಅವರನ್ನು ತೆರವುಗೊಳಿಸಲು ಸಹಾಯ ಮಾಡುತ್ತೇವೆ. ಯಾವುದೇ ಭಾರತೀಯರು ಉಗ್ರರಿಗೆ ನೆಲೆ ನೀಡಲು ಸಹಾಯ ಮಾಡುತ್ತಿದ್ದರೂ ಅಂತಹವರ ಮಾಹಿತಿ ನೀಡಬಹುದು’ ಎಂದು ಅವರು ತಿಳಿಸಿದರು.

ಶಾಸಕ ವಿ.ಸುನಿಲ್‌ಕುಮಾರ್ ಅವರೂ ತಮ್ಮ ಫೇಸ್‌ಬುಕ್‌ನಲ್ಲಿ ಈ ಸಂಬಂಧ ಪೋಸ್ಟ್‌ವೊಂದನ್ನು ಹಂಚಿಕೊಂಡಿದ್ದಾರೆ. ‘ದೇಶಕ್ಕಾಗಿ ಜಾಗೃತರಾಗೋಣ, ಗಡಿಯಾಚೆಗಿನ ವೈರಿಯ ನಿಯಂತ್ರಣಕ್ಕೆ ಸೇನೆ ಇದೆ. ಗಡಿಯೊಳಗಿನ ವೈರಿಗಳನ್ನು ಸದೆ ಬಡಿಯಲು ನಾವೆಲ್ಲ ಸೇನಾನಿಯಾಗೋಣ. ಎಲ್ಲವನ್ನೂ ಸರ್ಕಾರ ಮಾಡಲಿ ಎನ್ನುವ ಬದಲು ದುರಿತ ಕಾಲದಲ್ಲಿ ಜವಾಬ್ದಾರಿ ಮೆರೆಯೋಣ’ ಎಂದಿದ್ದಾರೆ.

‘ಪಾಕಿಸ್ತಾನಿ ವಲಸಿಗರು, ಬಾಂಗ್ಲಾ ವಲಸಿಗರು, ಉಗ್ರರ ಸ್ಲೀಪರ್ ಸೆಲ್ ಆಗಿ ಕೆಲಸ ಮಾಡುವವರು, ದೇಶ ದ್ರೋಹಿ ಚಟುವಟಿಕೆಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷ ಸಹಾಯ ಮಾಡುವವರು, ಪಾಕ್ ಪರ ಸಹಾನುಭೂತಿ ಹೊಂದಿರುವವರ ಮೇಲೆ ನಿಗಾ ವಹಿಸೋಣ. ಇಂತಹವರ ಮಾಹಿತಿಯನ್ನು ಸರ್ಕಾರ ಮತ್ತು ಪೊಲೀಸರಿಗೆ ನೀಡೋಣ’ ಎಂದು ಸುನಿಲ್‌ಕುಮಾರ್ ಹೇಳಿದ್ದಾರೆ.

‘ಮಾಹಿತಿ ನೀಡಲು ದೂರವಾಣಿಗೆ ಕರೆ ಮಾಡಿ’



ಅರವಿಂದ ಲಿಂಬಾವಳಿ

ನೆರೆಹೊರೆಯಲ್ಲಿ ಯಾರಾದರೂ ಪಾಕಿಸ್ತಾನಿಗಳು ಮತ್ತು ಬಾಂಗ್ಲಾದೇಶಿಯರು ವಾಸವಾಗಿದ್ದರೆ ಅವರ ಮಾಹಿತಿಯನ್ನು ವಾರ್ ರೂಮ್ ದೂರವಾಣಿ ಸಂಖ್ಯೆ 9035675734, 8217686764ಗೆ ಕರೆ ಮಾಡಿ ಮಾಹಿತಿ ನೀಡಬೇಕು. ಈ ಸಂಖ್ಯೆಗಳಿಗೆ ಬರುವ ಮಾಹಿತಿಯನ್ನು ವಿಶ್ಲೇಷಿಸಿ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿ ಮುಂದಿನ ಕ್ರಮಗಳ ಬಗ್ಗೆ ಚರ್ಚೆ ನಡೆಸುತ್ತೇವೆ ಎಂದು ಅರವಿಂದ ಲಿಂಬಾವಳಿ ತಿಳಿಸಿದರು.

‘ಕನ್ನಡಿಗರಿಗೆ ಸಿಗದ ಉದ್ಯೋಗ’

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಸಮಾಧಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯದ ಖಾಸಗಿ ಕಂಪನಿಗಳಲ್ಲಿ ಸಿ ಮತ್ತು ಡಿ ಗುಂಪಿನ ಹುದ್ದೆಗಳಲ್ಲಿ ಕನ್ನಡಿಗರಿಗೆ ಶೇಕಡ 100ರಷ್ಟು ಅವಕಾಶವಿದ್ದರೂ, ಹೊರಗುತ್ತಿಗೆ ನೇಮಕಾತಿಯ ಟೆಂಡರ್ ಪಡೆಯುವವರು ಅನ್ಯ ರಾಜ್ಯದವರಾದ್ದರಿಂದ ಕನ್ನಡಿಗರು ಅವಕಾಶ ವಂಚಿತರಾಗುತ್ತಿದ್ದಾರೆ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಬೇಸರ ವ್ಯಕ್ತಪಡಿಸಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು, ಮೈಕೊ ಕನ್ನಡ ಬಳಗ ಜಂಟಿಯಾಗಿ ನಗರದಲ್ಲಿ ಗುರುವಾರ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಬೀದಿ ಬದಿ ವ್ಯಾಪಾರ ಕಾರ್ಮಿಕರ ಕಾರ್ಯಕರ್ತೆ ಬಸಮ್ಮ ಅವರಿಗೆ ‘ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ’ ಪ್ರದಾನ ಮಾಡಿ, ಮಾತನಾಡಿದರು.

‘ವಿವಿಧ ಖಾಸಗಿ ಕಂಪನಿಗಳ ಮಾನವ ಸಂಪನ್ಮೂಲ ವಿಭಾಗಗಳಲ್ಲಿ ಈ ಹಿಂದೆ ಕನ್ನಡಿಗರೇ ಹೆಚ್ಚಾಗಿ ಇರುತ್ತಿದ್ದರು. ಈಗ ಈ ವಿಭಾಗದಲ್ಲಿ ಅನ್ಯ ಭಾಷಿಕರೇ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಸಿ ಮತ್ತು ಡಿ ಗುಂಪಿನ ಹುದ್ದೆಯಲ್ಲಿಯೂ ಕನ್ನಡಿಗರ ಸಂಖ್ಯೆ ಇಳಿಕೆಯಾಗುತ್ತಿದೆ. ಹೊರಗುತ್ತಿಗೆಯ ಟೆಂಡರ್ ಆಂಧ್ರಪ್ರದೇಶ ಸೇರಿ ವಿವಿಧ ರಾಜ್ಯದವರ ಪಾಲಾಗುತ್ತಿದೆ. ಇದರಿಂದಾಗಿ ಅವರು ತಮ್ಮ ರಾಜ್ಯದವರನ್ನು ನಿಯೋಜಿಸಿಕೊಳ್ಳುತ್ತಿದ್ದಾರೆ’ ಎಂದರು.

‘ಓದಿಗೆ ಅನುಗುಣವಾದ ಕೆಲಸ ಸಿಗದ ಈ ಸಂದರ್ಭದಲ್ಲಿ, ಯುವಜನರು ಕೆಲಸಕ್ಕೆ ಅಗತ್ಯವಾದ ಕೌಶಲ ಮತ್ತು ಮೌಲ್ಯಗಳನ್ನು ಅಳವಡಿಸಿಕೊಳ್ಳುವತ್ತ ಗಮನಹರಿಸಬೇಕು. ರಾಜ್ಯದಲ್ಲಿ ವಿವಿಧ ಬಹುರಾಷ್ಟ್ರೀಯ ಕಂಪನಿಗಳು ಹೂಡಿಕೆಗೆ ಒಲವು ತೋರುತ್ತಿವೆ. ಹೀಗಾಗಿ, ನಮ್ಮ ಮಕ್ಕಳು ಇಂದಿನ ಕಾಲಘಟ್ಟಕ್ಕೆ ತಕ್ಕುದಾದ ಕೌಶಲಗಳನ್ನು ಪಡೆಯಲು ಅನುಕೂಲವಾಗುವಂತೆ ಶಿಕ್ಷಣ ಸಂಸ್ಥೆಗಳು ವ್ಯವಸ್ಥೆ ಮಾಡಬೇಕು’ ಎಂದು ಹೇಳಿದರು.

ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಎಂ. ಪ್ರಕಾಶಮೂರ್ತಿ, ‘ಬೆಂಗಳೂರಿನಲ್ಲಿ ಕನ್ನಡಿಗರು ಅಲ್ಪಸಂಖ್ಯಾತರಾಗುತ್ತಿದ್ದಾರೆ. ಬೆಂಗಳೂರಿನಲ್ಲಿ ಕನ್ನಡ ಉಳಿದರೆ ಇಡೀ ಕರ್ನಾಟಕದಲ್ಲಿ ಕನ್ನಡ ಉಳಿಯುತ್ತದೆ. ಉದ್ಯೋಗ, ಶಿಕ್ಷಣ ಸಂಬಂಧ ಇಲ್ಲಿಗೆ ಬರುವ ಅನ್ಯ ಭಾಷಿಕರು ಇಲ್ಲಿನ ಸಂಸ್ಕೃತಿಗೆ ಒಗ್ಗಿಕೊಂಡು, ಕನ್ನಡ ಕಲಿಯಬೇಕು’ ಎಂದು ಹೇಳಿದರು.


ನಗರದ ಶಾಂತವೇರಿ ಗೋಪಾಲಗೌಡ ವೃತ್ತದ ಬಳಿ ಶಾಂತವೇರಿ ಗೋಪಾಲಗೌಡರ ಪ್ರತಿಮೆ ನಿರ್ಮಿಸುವಂತೆ ಸರ್ಕಾರಕ್ಕೆ ಮೈಕೊ ಕನ್ನಡ ಬಳಗದ ಪದಾಧಿಕಾರಿಗಳು ಆಗ್ರಹಿಸಿದರು.

ಮೈಕೊ ಕನ್ನಡ ಬಳಗದ ಅಧ್ಯಕ್ಷ ಕೆ.ಎಸ್.ರಾಮತೀರ್ಥ, ಬಾಷ್ ಬಿಡದಿ ಮಾನವ ಸಂಪನ್ಮೂಲ ವಿಭಾಗದ ಎಸ್. ಶ್ರೀನಾಥ್ ಉಪಸ್ಥಿತರಿದ್ದರು.



ಕಾರ್ಯಕ್ರಮದಲ್ಲಿ ಬಸಮ್ಮ ಅವರಿಗೆ ‘ಸಮಾಜವಾದಿ ಧುರೀಣ ಶಾಂತವೇರಿ ಗೋಪಾಲಗೌಡ ಸ್ಮಾರಕ ಪ್ರಶಸ್ತಿ’ಯನ್ನು ಪುರುಷೋತ್ತಮ ಬಿಳಿಮಲೆ ಪ್ರದಾನ ಮಾಡಿದರು. ಚನ್ನಮಲ್ಲಪ್ಪ ಪಾಟೀಲ, ಎಂ. ಪ್ರಕಾಶಮೂರ್ತಿ, ಎಸ್. ಶ್ರೀನಾಥ್ ಮತ್ತು ರಾಮತೀರ್ಥ ಕೆ.ಎಸ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಸ್ವಾತಂತ್ರ್ಯವು ಮನುಷ್ಯನ ದುಡಿಮೆಯನ್ನು ಬೇಡುತ್ತದೆ. ದುಡಿಯದ ಮನುಷ್ಯನಿಗೆ ಸ್ವಾತಂತ್ರ್ಯ ಇರುವುದಿಲ್ಲ.

-ಹಾ.ಮಾ.ನಾಯಕ

ಅಧಿಕಾರಿಗಳೊಂದಿಗೆ ಒರಟು ನಡವಳಿಕೆ ಸಲ್ಲ ಮುಖ್ಯಮಂತ್ರಿಯಿಂದ ಮಾದರಿ ನಡೆ ಅಗತ್ಯ

ಅಗತ್ಯ ವಸ್ತುಗಳ ಬೆಲೆ ಏರಿಕೆ ವಿರೋಧಿಸಿ ಬೆಳಗಾವಿಯಲ್ಲಿ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನಾ ಸಮಾವೇಶದಲ್ಲಿ ಪೊಲೀಸರತ್ತ ಕೈ ತೋರಿಸಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವರ್ತನೆ ಸಾರ್ವಜನಿಕ ಸಭ್ಯತೆಗೆ ತಕ್ಕದ್ದಲ್ಲ. ಸಮಾವೇಶದಲ್ಲಿ ಉಂಟಾದ ಅವ್ಯವಸ್ಥೆ ಮತ್ತು ಗೊಂದಲಗಳಿಂದ ಮುಖ್ಯಮಂತ್ರಿ ಕೋಪಗೊಳ್ಳುವುದು ಸಹಜ. ಆದರೆ, ಭದ್ರತಾ ವ್ಯವಸ್ಥೆಯ ನಿಗಾ ವಹಿಸಿದ್ದ ಪೊಲೀಸರತ್ತ ಕೈ ತೋರಿಸುವುದರ ಜೊತೆಗೆ, ಧಾರವಾಡ ಎಎಸ್‌ಪಿ ನಾರಾಯಣ ಭರಮನಿ ಅವರನ್ನು ದಂಡಿಸುವ ರೀತಿ ಕೈ ಎತ್ತಿರುವ ವರ್ತನೆ ಅವರ ವ್ಯಕ್ತಿತ್ವ ಹಾಗೂ ಹುದ್ದೆಗೆ ಶೋಭೆ ತರುವಂತಹದ್ದಲ್ಲ. ಮುಖ್ಯಮಂತ್ರಿಯವರದು ಅನಪೇಕ್ಷಿತವಾದ ದುಡುಕಿನ ವರ್ತನೆ. ಎಷ್ಟೇ ಉನ್ನತ ಹುದ್ದೆಯಲ್ಲಿರುವ ರಾಜಕಾರಣಿಗೂ ಸರ್ಕಾರಿ ಅಧಿಕಾರಿಯೂ ಸೇರಿದಂತೆ ಯಾರ ಮೇಲೂ ಕೈ ಮಾಡುವ ಅಧಿಕಾರವಿಲ್ಲ ಹಾಗೂ ಅಂಥ ವರ್ತನೆ ನೈತಿಕವಾಗಿಯೂ ಸರಿಯಾದುದಲ್ಲ ಎನ್ನುವುದು ಹಿರಿಯ ರಾಜಕಾರಣಿ ಸಿದ್ದರಾಮಯ್ಯ ಅವರಿಗೆ ತಿಳಿಯದ್ದೇನಲ್ಲ. ವಯಸ್ಸು, ಅನುಭವ, ವಿವೇಕ ಹಾಗೂ ಸ್ಥಾನಮಾನದ ಘನತೆ ಮರೆತು ಸಿಟ್ಟಿಗೆ ಬುದ್ಧಿ ಕೊಟ್ಟಾಗ ಇಂಥ ಮುಜುಗರದ ಸನ್ನಿವೇಶಗಳನ್ನು ಎದುರಿಸಬೇಕಾಗುತ್ತದೆ. ಅಧಿಕಾರಿಯಿಂದ ಕರ್ತವ್ಯಲೋಪ ಆಗಿದ್ದಲ್ಲಿ ವಿಚಾರಣೆ ನಡೆಸಿ ಸೂಕ್ತ ಕ್ರಮ ಕೈಗೊಳ್ಳಲು ಅವಕಾಶವಿದ್ದೇ ಇದೆ. ಆದರೆ, ಅಧಿಕಾರಿಗಳೊಂದಿಗೆ ಅನುಚಿತವಾಗಿ ವರ್ತಿಸುವುದು ಸಲ್ಲದು. ಪ್ರಜಾಪ್ರತಿನಿಧಿಗಳು ಅಧಿಕಾರಿಗಳೊಂದಿಗೆ ಸಾರ್ವಜನಿಕರ ಮುಂದೆ ಅನುಚಿತವಾಗಿ ನಡೆದುಕೊಂಡರೆ ಅದರಿಂದ ಅವರ ನೈತಿಕಸ್ಥೈರ್ಯ ಕುಗ್ಗುತ್ತದೆ. ಮುಖ್ಯಮಂತ್ರಿಯಂಥ ಉನ್ನತ ಸ್ಥಾನದಲ್ಲಿ ಇರುವವರು ಸಚಿವರು, ಶಾಸಕರಿಗೆ ಮೇಲ್ಪಂಕ್ತಿ ಹಾಕಿಕೊಡುವಂತಿರಬೇಕು. ಮುಖ್ಯಮಂತ್ರಿಯೇ ಬಿಡುಬೀಸಾಗಿ ನಡೆದುಕೊಂಡರೆ, ಅದರ ಪ್ರಭಾವ ಉಳಿದವರ ಮೇಲೂ ಆಗುತ್ತದೆ. ವಿಧಾನಸೌಧದಿಂದ ಸ್ಥಳೀಯ ಹಂತದವರೆಗಿನ ರಾಜಕಾರಣಿಗಳು ಅಧಿಕಾರಿಗಳ ಮೇಲೆ ಕೈ ಮಾಡಲು ಮುಂದಾದರೆ ಆಡಳಿತ ವ್ಯವಸ್ಥೆಯೇ ಕುಸಿದುಬೀಳುತ್ತದೆ ಹಾಗೂ ಸಾರ್ವಜನಿಕರು ಕೂಡ ಅಧಿಕಾರಿಗಳನ್ನು ಲಘುವಾಗಿ ನೋಡಲು ಅವಕಾಶ ಕಲ್ಪಿಸಿದಂತಾಗುತ್ತದೆ. ಅಧಿಕಾರಿಗಳ ನೈತಿಕಸ್ಥೈರ್ಯ ಕುಗ್ಗಿಸುವ ಕೆಲಸವನ್ನು ಪ್ರಜಾಪ್ರತಿನಿಧಿಗಳು ಮಾಡಬಾರದು.



ಮುಖ್ಯಮಂತ್ರಿಯವರು ತಮ್ಮ ನಡವಳಿಕೆಯನ್ನು ಬದಲಾಯಿಸಿಕೊಳ್ಳುವ ಮೂಲಕ ಅಧಿಕಾರಿಗಳ ನೈತಿಕಸ್ಥೈರ್ಯ ಹೆಚ್ಚಿಸುವ ಕೆಲಸವನ್ನು ಮಾಡಬೇಕಾಗಿದೆ

ಸಾರ್ವಜನಿಕ ವೇದಿಕೆಗಳಲ್ಲಿ ಸಿದ್ದರಾಮಯ್ಯನವರು ಈ ಮೊದಲೂ ಒರಟಾಗಿ ನಡೆದುಕೊಂಡಿರುವ ನಿದರ್ಶನಗಳಿವೆ. ಪಕ್ಷದ ಕಾರ್ಯಕರ್ತರು, ಮುಖಂಡರು ಹಾಗೂ ಹಿತೈಷಿಗಳೊಂದಿಗೆ ಮಾತನಾಡುವಾಗ ಸಲಿಗೆಯಿಂದ ನಡೆದುಕೊಳ್ಳುವುದನ್ನು ತಪ್ಪೆಂದು ಭಾವಿಸಬೇಕಾಗಿಲ್ಲ. ಸಿದ್ದರಾಮಯ್ಯ ಅವರ ಮಾತು ಮತ್ತು ಆಂಗಿಕ ಭಾಷೆ ಗ್ರಾಮ್ಯ ಸಂವೇದನೆಗಳಿಂದ ರೂಪುಗೊಂಡಿರುವುದು ಅವರ ನಡೆ-ನುಡಿಗಳಲ್ಲಿ ವ್ಯಕ್ತವಾಗುತ್ತದೆ. ಆದರೆ, ಸರ್ಕಾರದಲ್ಲಿ ಜವಾಬ್ದಾರಿಯುತ ಹುದ್ದೆಗಳನ್ನು ನಿಭಾಯಿಸುವವರು ಸಾರ್ವಜನಿಕ ಸಭ್ಯತೆಯನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳುವುದು ಅಗತ್ಯ. ರಾಜ್ಯ ಸರ್ಕಾರದ ಮುಖ್ಯಸ್ಥರಾಗಿ ಅಧಿಕಾರಿಗಳ ಮೇಲೆ ಹಿಡಿತವಿಟ್ಟುಕೊಳ್ಳುವುದು ಹಾಗೂ ತಪ್ಪುಗಳು ಉಂಟಾದಾಗ ಕ್ರಮ ಕೈಗೊಳ್ಳುವುದು ಅಪೇಕ್ಷಣೀಯ. ಆದರೆ, ಅಧಿಕಾರಿಗಳನ್ನು ನಿಯಂತ್ರಣದಲ್ಲಿಟ್ಟುಕೊಳ್ಳಲು ಕಾನೂನು ಮಾರ್ಗವನ್ನು ಅನುಸರಿಸದೆ ಬೇರೆ ದಾರಿಯಿಲ್ಲ. ಸಿದ್ದರಾಮಯ್ಯನವರ ವರ್ತನೆಯನ್ನು ಆ ಕ್ಷಣದ ದುಡುಕುತನ ಎಂದಷ್ಟೇ ನೋಡದೆ, ರಾಜಕೀಯ ಮುಖಂಡರಲ್ಲಿ ಸಂವೇದನೆಗಳು ಕ್ಷೀಣಿಸುತ್ತಿರುವುದರ ಸಂಕೇತವಾಗಿ ನೋಡಬೇಕು. ಜನಸೇವೆಯ ಉತ್ತರದಾಯಿತ್ವದ ಜಾಗದಲ್ಲಿ ಅಧಿಕಾರದ ಲೋಭ ಪ್ರಬಲಗೊಳ್ಳುತ್ತಿರುವುದರ ಪರಿಣಾಮವಾಗಿ ರಾಜಕೀಯ ಮುಖಂಡರು ಸಾರ್ವಜನಿಕ ಲಜ್ಜೆಯಿಂದ ದೂರವಾಗುತ್ತಿದ್ದಾರೆ. ಅಧಿಕಾರವನ್ನು ಜನಸೇವೆಗೆ ದೊರೆತ ಅವಕಾಶ ಎನ್ನುವುದನ್ನು ಪ್ರಜಾಪ್ರತಿನಿಧಿಗಳು ಮರೆತಾಗ, ಅಧಿಕಾರದ ಜೊತೆಗೆ ಉತ್ತರದಾಯಿತ್ವದ ಹೊಣೆಗಾರಿಕೆಯ ಬದಲು ಅಹಂಕಾರವೂ ಸೇರಿಕೊಳ್ಳುತ್ತದೆ. ತಮ್ಮ ಅವಿವೇಕ ಹಾಗೂ ಹೊಣೆಗೇಡಿತನವನ್ನು ಮರೆಮಾಚಿಕೊಳ್ಳಲು ಅಧಿಕಾರಿಗಳ ಮೇಲೆ ದರ್ಪ ಚಲಾಯಿಸುವ ರಾಜಕಾರಣಿಗಳೂ ಇದ್ದಾರೆ. ಅಧಿಕಾರಿಗಳನ್ನು ಜೀತದಾಳುಗಳಂತೆ ಭಾವಿಸುವ ರಾಜಕಾರಣಿಗಳ ವರ್ತನೆ ಕರ್ನಾಟಕಕ್ಕೆ ಸೀಮಿತವಾದುದೂ ಅಲ್ಲ. ಪೊಲೀಸ್ ಅಧಿಕಾರಿಯೊಂದಿಗೆ ಅನುಚಿತವಾಗಿ ನಡೆದುಕೊಂಡ ಮುಖ್ಯಮಂತ್ರಿಯವರ ನಡವಳಿಕೆಯನ್ನು ಟೀಕಿಸುವ ವಿರೋಧ ಪಕ್ಷಗಳ ಮುಖಂಡರು ಕೂಡ ಸಾರ್ವಜನಿಕ ಸಭ್ಯತೆಯನ್ನು ಮೀರಿ ವರ್ತಿಸಿರುವ ನಿದರ್ಶನಗಳು ರಾಜ್ಯದಲ್ಲಿ ಇವೆ, ಬೇರೆ ರಾಜ್ಯಗಳಿಂದಲೂ ವರದಿಯಾಗಿವೆ. ಅಧಿಕಾರಿಗಳನ್ನು ಏಕವಚನದಲ್ಲಿ ತರಾಟೆಗೆ ತೆಗೆದುಕೊಳ್ಳುವುದರಿಂದ ಇಲ್ಲವೇ ಅವರೊಂದಿಗೆ ಒರಟಾಗಿ ವರ್ತಿಸುವುದರಿಂದ ರಾಜಕಾರಣಿಯ ಘನತೆ ಹೆಚ್ಚಾಗುವುದಿಲ್ಲ. ರಾಜಕಾರಣದಲ್ಲಿ ಕ್ಷೀಣಿಸುತ್ತಿರುವ ಸಾರ್ವಜನಿಕ ಸಭ್ಯತೆಯ ರೂಪದಲ್ಲಿ ಮುಖ್ಯಮಂತ್ರಿಯವರ ದುಡುಕಿನ ವರ್ತನೆಯನ್ನು ನೋಡಬೇಕಾಗಿದೆ. ಮುಖ್ಯಮಂತ್ರಿಯವರು ತಮ್ಮ ನಡವಳಿಕೆಯನ್ನು ಬದಲಾಯಿಸಿಕೊಳ್ಳುವ ಮೂಲಕ ಅಧಿಕಾರಿಗಳ ನೈತಿಕಸ್ಥೈರ್ಯ ಹೆಚ್ಚಿಸುವ ಕೆಲಸವನ್ನು ಪ್ರಜ್ಞಾಪೂರ್ವಕವಾಗಿ ಮಾಡಬೇಕಾಗಿದೆ. ಪ್ರಜಾಪ್ರತಿನಿಧಿಗಳಲ್ಲಿ ಸಾರ್ವಜನಿಕ ಸಭ್ಯತೆಯನ್ನು ರೂಢಿಸುವ ಮೇಲ್ಪಂಕ್ತಿಯನ್ನು ಹಾಕಿಕೊಡುವುದು ಸರ್ಕಾರದ ಮುಖ್ಯಸ್ಥರಾಗಿ ಅವರು ನಿರ್ವಹಿಸಬೇಕಾದ ಜವಾಬ್ದಾರಿಯೂ ಹೌದು.

ದಿನದ ಟ್ವೀಟ್

ಜಾತಿಪ್ರಿಯ ನೇತಾರರು!



ಭಾರತದಲ್ಲಿ ಜಾತಿ ಅತ್ಯಂತ ಪ್ರಮುಖವಾದ ಗುರುತು. ರಾಜಕಾರಣಿಗಳಿಗೆ ಜಾತಿ ಬಹಳ ದೊಡ್ಡ ಅಸ್ತ್ರ... ಮೀಸಲಾತಿಯ ವಿಷಯವೂ ಹಾಗೆ. ರಾಜಕಾರಣಿಗಳ ಗೆಲುವಿಗೆ ಅವೇ ದಾಳ. ಕಾಂಗ್ರೆಸ್, ಬಿಜೆಪಿ ಆಗಲಿ, ಪ್ರಾದೇಶಿಕ ಪಕ್ಷಗಳಾಗಲಿ ಜಾತಿಗಳೇ ಅವರ ಶಕ್ತಿ. ಎಲ್ಲ ರಾಜಕಾರಣಿಗಳೂ ಒಂದೇ ಬಳ್ಳಿಯ ಹೂಗಳು.

ಅಮರನಾಥ್ ಶಿವಶಂಕರ್, ಐ.ಟಿ. ಉದ್ಯೋಗಿ

ಕಿಡಿನುಡಿ



ಕಾಂಗ್ರೆಸ್‌ನವರು ಆಗ್ರಹಿಸುತ್ತಿರುವ ಜಾತಿ ಜನಗಣತಿಯು ನಗರ ನಕ್ಸಲ್ ಚಿಂತನೆ ಎಂದು ಸರಿಯಾಗಿ ಒಂದು ವರ್ಷದ ಹಿಂದೆ ಪ್ರಧಾನಿ ಹೇಳಿದ್ದರು. ಈಗ ಪ್ರಧಾನಿ ಅದೇ ಚಿಂತನೆಯನ್ನು ಮುಂದಕ್ಕೆ ಒಯ್ಯುತ್ತಿದ್ದಾರೆ. ಇದರಿಂದ ತಿಳಿದುಬರುವುದು: ನಿಮ್ಮ ಚಿಂತನೆಗಳನ್ನು ಸಂಪೂರ್ಣವಾಗಿ ಬದಲಾಯಿಸಿಕೊಳ್ಳಲು ಒಂದೇ ವರ್ಷ ಸಾಕಾಗುತ್ತದೆ.

#CasteCensus

ಮನೋಜ್ ಅರೋರ, ಲೇಖಕ

25 ವರ್ಷಗಳ ಹಿಂದೆ

ಮಂಗಳವಾರ, 2-5-2000

- **ಸಂಸತ್ ಸದಸ್ಯರ ನಡವಳಿಕೆ ಪ್ರಶ್ನೆ ಸಂವಿಧಾನ ಪೀಠಕ್ಕೆ**

ನವದೆಹಲಿ, ಮೇ 1 (ಪಿಟಿಐ, ಯುಎನ್‌ಐ)– ಲಂಚ ಪಡೆಯುವ ಸಂಸತ್ ಸದಸ್ಯರು ಸಂಸತ್‌ನಲ್ಲಿ ಪಕ್ಷದ ಆದೇಶ ಉಲ್ಲಂಘಿಸಿ 'ನಿರ್ದಿಷ್ಟ'ವಾಗಿ ಮತ ಚಲಾಯಿಸಿದಾಗ ಅಂಥವರನ್ನು ವಿಚಾರಣೆಗೆ ಗುರಿಪಡಿಸಬೇಕೆ? ಈ ಮಹತ್ವದ ಸೂಕ್ಷ್ಮ ವಿಚಾರವನ್ನು ಸುಪ್ರೀಂ ಕೋರ್ಟ್ ಇಂದು ಐವರು ಸದಸ್ಯರ ಸಂವಿಧಾನ ಪೀಠದ ಪರಿಶೀಲನೆಗೆ ಒಪ್ಪಿಸಿತು. ಲಂಚ ಪಡೆದ ಸಂಸದರ ಸಂಸತ್ತಿನಲ್ಲಿನ ನಡವಳಿಕೆಯನ್ನು ವಿಚಾರಣೆಗೆ ಗುರಿಪಡಿಸಬಾರದೆಂದು ಸಂವಿಧಾನ ಪೀಠದ ಬಹುಮತದ ತೀರ್ಪು ಈ ಹಿಂದೆ ಹೊರಬಿದ್ದಿರುವ ಹಿನ್ನೆಲೆಯಲ್ಲಿ ಈ ವಿಷಯಕ್ಕೆ ಮಹತ್ವ ಪ್ರಾಪ್ತವಾಗಿದೆ.

- **ರಾಜ್ಯದಲ್ಲಿ ಖಾಲಿ ಹುದ್ದೆ ರದ್ದು ನೇಮಕಾತಿ ಸಂಪೂರ್ಣ ನಿಷೇಧ**

ಬೆಂಗಳೂರು, ಮೇ 1– ಖಾಲಿ ಇರುವ ಹುದ್ದೆಗಳ ನೇಮಕ ಪ್ರಕ್ರಿಯೆಯನ್ನು ರಾಜ್ಯ ಸರ್ಕಾರ ಸಂಪೂರ್ಣವಾಗಿ ನಿಷೇಧಿಸಿದ್ದು, ಈ ಸಂಬಂಧ ಕಟ್ಟುನಿಟ್ಟಿನ ಆಜ್ಞೆ ಹೊರಡಿಸಿದೆ.

ನೇಮಕಾತಿಗೆ ಸಂಬಂಧಿಸಿದಂತೆ ಕೆಲವು ನಾಗರಿಕ ಸೇವಾ ನಿಯಮಗಳನ್ನು ಪರಾಮರ್ಶಿಸುವ ಅಗತ್ಯ ಇದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

50 ವರ್ಷಗಳ ಹಿಂದೆ

ಶುಕ್ರವಾರ, 2-5-1975

- **ಸರ್ಕಾರಿ ಉದ್ಯಮಗಳಲ್ಲಿ ಹಿಂದುಳಿದವರಿಗೆ ಸ್ಥಾನಗಳ ಮೀಸಲು**

ಬೆಂಗಳೂರು, ಮೇ 1 – ನೇಮಕಗಳಲ್ಲಿ ಹಿಂದುಳಿದ ವರ್ಗಗಳಿಗೆ ಸಾರ್ವಜನಿಕ ಕ್ಷೇತ್ರದ ಕೈಗಾರಿಕೆ, ಶಾಸನಬದ್ಧ ಮಂಡಳಿ, ಕಾರ್ಪೊರೇಷನ್‌ನಂಥ, ಸರ್ಕಾರದ ಆಡಳಿತ ಹತೋಟಿಗೆ ಒಳಪಡುವ ಸಂಸ್ಥೆಗಳಲ್ಲೂ ಸ್ಥಾನಗಳನ್ನು ಕಾದಿರಿಸಲು ಸರ್ಕಾರ ನಿರ್ಧರಿಸಿದೆ.

ಹರಿಜನರಿಗೆ ಶೇ 15, ಗಿರಿಜನರಿಗೆ ಶೇ 3, ಇತರ ಹಿಂದುಳಿದ ವರ್ಗಗಳಿಗೆ ಶೇ 30ರಂತೆ ಸ್ಥಾನಗಳನ್ನು ಕಾದಿರಿಸಲಾಗುವುದು. ಈವರೆಗೆ ಆ ಸೌಲಭ್ಯ ಸರ್ಕಾರಿ ಮತ್ತು ಸ್ಥಳೀಯ ಸಂಸ್ಥೆ ನೇಮಕಗಳಲ್ಲಿ ಮಾತ್ರ ದೊರೆತಿತ್ತು. ಅದನ್ನು ಇತರ ನೇಮಕಗಳಿಗೂ ವಿಸ್ತರಿಸುವಂತೆ ವಿಧಾನ ಮಂಡಲ ಹರಿಜನ, ಗಿರಿಜನ ಕ್ಷೇಮಾಭ್ಯುದಯ ಸಮಿತಿ ಶಿಫಾರಸು ಮಾಡಿತ್ತು.

- **ಚುನಾವಣಾ ಪದ್ಧತಿ ಸುಧಾರಣೆ ಅಗತ್ಯ: ಕಾಮರಾಜ್ ಆಗ್ರಹ**

ವೆಲ್ಲೂರು, ಮೇ 1– ಸ್ವತಂತ್ರ, ನಿಷ್ಪಕ್ಷಪಾತ ಚುನಾವಣೆಗಾಗಿ ಚುನಾವಣಾ ಪದ್ಧತಿಯ ಸುಧಾರಣೆಯಾಗಬೇಕೆಂದು ಸಂಸ್ಥಾ ಕಾಂಗ್ರೆಸ್ ನಾಯಕ ಕಾಮರಾಜ್‌ರವರು ಭಾರಿ ಬಹಿರಂಗ ಸಭೆಯಲ್ಲಿ ಮಾತನಾಡುತ್ತ ಹೇಳಿದರು.

ಜನತೆಯನ್ನು ಬೆದರಿಸಿ ಮತದಾನದಿಂದ ದೂರವಿರಿಸುವುದು, ಹಣದಿಂದ ಮತ ಕೊಳ್ಳುವುದು ಈಗ ವಿಪರೀತವಾಗಿದ್ದು, ಇದು ಸಂಪೂರ್ಣವಾಗಿ ಇಲ್ಲದಂತೆ ಆಗುವಂತಹ ಸುಧಾರಣೆ ಅಗತ್ಯವೆಂದು ಅವರು ಹೇಳಿದರು.

ಸಾರ್ವಜನಿಕ ಜೀವನದಲ್ಲಿ ಭ್ರಷ್ಟಾಚಾರ ಮತ್ತು ಅಕ್ರಮಗಳ ವಿರುದ್ಧ ನೇರ ಕ್ರಮದಲ್ಲಿ ತೊಡಗುವಂತೆ ಜನತೆಗೆ ಕರೆ ನೀಡಿದರು.

ಕಡಿವಾಣ ಹಾಕುವ ಉದ್ದೇಶದ ನಿಯಮಗಳನ್ನು ಕಟ್ಟುನಿಟ್ಟಾಗಿ ಜಾರಿಗೆ ತರಬೇಕಿದೆ

ಕೋಚಿಂಗ್ ವ್ಯೂಹದಲ್ಲಿ ವಿದ್ಯಾರ್ಥಿ ವೃಂದ



ವಿಶ್ಲೇಷಣೆ

ಗುರುರಾಜ್ ಎಸ್. ದಾವಣಗೆರೆ

ಸ್ನೇಹಿತರೊಬ್ಬರನ್ನು ಅವರ ಮಗಳ ದ್ವಿತೀಯ ಪಿಯುಸಿ ಫಲಿತಾಂಶ ಏನಾಯಿತು ಎಂದು ವಿಚಾರಿಸಿದಾಗ 'ಅಷ್ಟೇನೂ ಚೆನ್ನಾಗಿ ಸ್ಕೋರ್ ಆಗಿಲ್ಲ ಸರ್, ಒಳ್ಳೆಯ ಕಾಲೇಜು ಮತ್ತು ಫೇಮಸ್ ಕೋಚಿಂಗ್ ಸೆಂಟರ್ ಎರಡಕ್ಕೂ ಸೇರಿಸಿದ್ದೆ, ಏನೂ ಪ್ರಯೋಜನವಾಗಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು. 'ಕಾಲೇಜಿನ ಶುಲ್ಕಕ್ಕಿಂತ ಡಬಲ್ ಹಣ ಪೇ ಮಾಡಿದ್ದೆ, ಟ್ಯೂಷನ್ ಸೆಂಟರ್‌ನವರು ಮೋಸ ಮಾಡಿಬಿಟ್ರು' ಎಂದವರೇ 'ಕಾಲೇಜಿನವರು ಹೇಳಿಕೊಟ್ಟದ್ದನ್ನೇ ಕಲಿತಿದ್ದರೆ ಸಾಕಿತ್ತು ಅಂತ ಈಗ ಅನ್ನಿಸುತ್ತಿದೆ' ಎಂದು ಮರುಗಿದರು.

ಕರ್ನಾಟಕದಲ್ಲಿ ದ್ವಿತೀಯ ಪಿಯುಸಿ ಪರೀಕ್ಷೆ ಫಲಿತಾಂಶ ಪ್ರಕಟವಾಗಿ ಮೂರು ವಾರಗಳಾಗಿವೆ. ಹೆಚ್ಚಿನ ಅಂಕ ಪಡೆದವರು ಸಂಭ್ರಮದಲ್ಲಿದ್ದಾರೆ. ಕಡಿಮೆ ಪಡೆದವರು ಮರುಪರೀಕ್ಷೆ ಬರೆಯಲು ಸಜ್ಜಾಗುತ್ತಿದ್ದಾರೆ. ಲಕ್ಷಾಂತರ ರೂಪಾಯಿ ಶುಲ್ಕ ಕಟ್ಟಿ ಒಳ್ಳೆಯ ಕಾಲೇಜು, ಪ್ರತಿಷ್ಠಿತ ಕೋಚಿಂಗ್ ಸೆಂಟರ್‌ಗಳಿಗೆ ಸೇರಿಸಿದ್ದರೂ ಮಕ್ಕಳಿಗೆ ಬರಬೇಕಾಗಿದ್ದ ಅಂಕಗಳು ಬಂದಿಲ್ಲ ಎಂಬ ಬೇಜಾರಿನಲ್ಲಿರುವ ಪೋಷಕರು, ಶಿಕ್ಷಣ ವ್ಯವಸ್ಥೆಯ ಬಗ್ಗೆ ಭ್ರಮನಿರಸನಗೊಂಡಿದ್ದಾರೆ.

ಶಾಲೆ- ಕಾಲೇಜುಗಳಿಗೆ ಮಕ್ಕಳನ್ನು ಸೇರಿಸುವುದಕ್ಕಿಂತ ಮುಂಚೆ ಪ್ರತಿಷ್ಠಿತ ಕೋಚಿಂಗ್ ಸೆಂಟರ್ ಹುಡುಕುವ ಪರಿಪಾಟ ನಮ್ಮಲ್ಲಿ ಜಾಸ್ತಿಯಾಗಿದೆ. ಕೆಲವು ಪ್ರತಿಷ್ಠಿತ ಕೋಚಿಂಗ್ ಕೇಂದ್ರಗಳಲ್ಲಿ ದಾಖಲಾತಿ ಪಡೆಯಲು ಹಣವಷ್ಟೇ ಅಲ್ಲ ಮಂತ್ರಿಗಳ ಶಿಫಾರಸು ಸಹ ಬೇಕಾಗುತ್ತದೆ! ಕೋಚಿಂಗ್ ಸೆಂಟರ್ ಸೇರಿಕೊಳ್ಳುವ ವಿದ್ಯಾರ್ಥಿಗಳು ಕಾಲೇಜಿನ ಪಾಠ, ಪ್ರಯೋಗಗಳಿಗಿಂತ ಕೋಚಿಂಗ್ ಕೇಂದ್ರದ ಕೆಲಸಗಳಿಗೆ ಆದ್ಯತೆ ನೀಡುತ್ತಾರೆ. ವಾರ್ಷಿಕ ಪರೀಕ್ಷೆ ಬರೆಯಲು ಒಂದು ಕಾಲೇಜು ಬೇಕಲ್ಲ ಎಂದು ಅಲ್ಲಿಗೆ ಸೇರಿಕೊಂಡಿರುತ್ತಾರೆ. ಕಾಲೇಜಿನ ಪಾಠವೇನಿದ್ದರೂ ಸೆಕೆಂಡರಿ, ಟ್ಯೂಷನ್‌ನಲ್ಲಿ ಹೇಳಿಕೊಡುವುದೇ ಮುಖ್ಯ ಎಂಬ ಭಾವನೆ ಅನೇಕ ಮಕ್ಕಳು ಹಾಗೂ ಪೋಷಕರಲ್ಲಿದೆ.

ಇದನ್ನೇ ಬಂಡವಾಳ ಮಾಡಿಕೊಳ್ಳುವ ಕೋಚಿಂಗ್ ಸೆಂಟರ್‌ನವರು, ವಿಶೇಷ ಡಿಜಿಟಲ್ ಸಾಧನ ಸೌಲಭ್ಯ ಬಳಸಿ ಪಾಠ ಮಾಡುತ್ತೇವೆ, ನಮ್ಮಲ್ಲಿ ನುರಿತ ಅಧ್ಯಾಪಕರಿದ್ದಾರೆ, ಪ್ರತಿದಿನ ಬೆಳಿಗ್ಗೆ ಪರೀಕ್ಷೆ ನಡೆಸುತ್ತೇವೆ, ನೀಟ್, ಜೆಇಇ ಪಾಸಾದವರಿಂದ ಕೋಚಿಂಗ್ ಕೊಡಿಸುತ್ತೇವೆ, ಆಲ್ ಇಂಡಿಯಾ ಲೆವೆಲ್‌ನಲ್ಲಿ ನಮ್ಮ ವಿದ್ಯಾರ್ಥಿಗಳು ಉತ್ತಮ ರ‍್ಯಾಂಕ್‌ನೊಂದಿಗೆ ಪ್ರತಿಷ್ಠಿತ ಕಾಲೇಜುಗಳಲ್ಲಿ ಸೀಟು ಪಡೆದುಕೊಂಡಿದ್ದಾರೆ ಎಂದೆಲ್ಲ ಜಾಹೀರಾತು ನೀಡಿ ಜನರನ್ನು ಆಕರ್ಷಿಸುತ್ತಾರೆ. ಇದನ್ನು ನಂಬಿ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳಿಗೆ ಸೇರಿಕೊಳ್ಳುತ್ತಾರೆ.

ಕಾಲೇಜಿನವರು ಹೇಳಿಕೊಡುವುದು ಸಾಕಾಗುವುದಿಲ್ಲ ಅಂತಲೋ ಅಲ್ಲಿ ಟೀಚಿಂಗ್ ಸರಿ ಇಲ್ಲ ಎಂದೋ ಕೋಚಿಂಗ್ ಕ್ಲಾಸ್‌ಗೆ ಹಾಕಿದ್ದೇವೆ ಎನ್ನುವ ಪೋಷಕರು ಹೆಜ್ಜೆಗೊಬ್ಬರು ಸಿಗುತ್ತಾರೆ. ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪ್ರಾಯೋಗಿಕ ತರಗತಿ, ಟರ್ಮ್ ಟೆಸ್ಟ್, ವಿಶೇಷ ತರಗತಿ, ರೆಮೆಡಿಯಲ್ ಕ್ಲಾಸ್ (ಪರಿಹಾರ ಬೋಧನೆ) ಎಂದೆಲ್ಲ ಕನಿಷ್ಠ ಆರು ಗಂಟೆ ಪಾಠ ಕೇಳಿಸಿಕೊಳ್ಳುತ್ತಾರೆ. ನಂತರ ಬೆಂಗಳೂರಿನಂತಹ ಊರುಗಳಲ್ಲಿ ಮನೆಗೂ ತೆರಳದೆ ನೇರ ಕೋಚಿಂಗ್ ಕೇಂದ್ರಗಳಿಗೆ ಹೋಗಿ ಮೂರರಿಂದ ನಾಲ್ಕು ತಾಸು ಅಲ್ಲಿನ ಪಾಠಗಳಿಗೆ ಕಿವಿಯಾಗುತ್ತಾರೆ. ಅಲ್ಲಿ ನೀಡುವ ಹೋಂವರ್ಕ್, ಟೆಸ್ಟ್‌ಗಳನ್ನು ಮಾಡಿ ಮುಗಿಸಿ ಮನೆ ತಲುಪುವ ವೇಳೆಗೆ ರಾತ್ರಿಯ ಊಟದ ಸಮಯ ಮುಗಿದಿರುತ್ತದೆ. ಇಡೀ ದಿನ ದಣಿಯುವ ದೇಹ, ಮನಸ್ಸಿಗೆ ವಿಶ್ರಾಂತಿಯ ವಿನಾ ಬೇರೇನೂ ಬೇಕೆನಿಸುವುದಿಲ್ಲ. ಆದರೂ ಮನೆಯವರ ಒತ್ತಾಯಕ್ಕೆ ಊಟದ ಶಾಸ್ತ್ರ ಮಾಡುವ ವಿದ್ಯಾರ್ಥಿಗಳು ಊಟವಾದ ತಕ್ಷಣ ನಿದ್ರೆಗೆ ಜಾರುತ್ತಾರೆ. ವರ್ಷದಲ್ಲಿ ಏಳೆಂಟು ತಿಂಗಳು ಹೀಗೇ ನಡೆಯುತ್ತಿರುತ್ತದೆ. ಹೊತ್ತಿಗೆ ಸರಿಯಾಗಿ ಊಟ, ವಿಶ್ರಾಂತಿ ದೊರಕದ ಮಕ್ಕಳು ಬಳಲುತ್ತಾರೆ. ಆಟೋಟಗಳಿಗೆ ಸಮಯವೇ ದೊರಕುವುದಿಲ್ಲ. ಎಷ್ಟೋ ಶಾಲಾ-ಕಾಲೇಜುಗಳ ವೇಳಾಪಟ್ಟಿಯಲ್ಲಿ ಮನಸ್ಸನ್ನು ಪ್ರಫುಲ್ಲಗೊಳಿಸುವ, ಒತ್ತಡ ನಿವಾರಿಸುವ ಕ್ರೀಡೆ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಅವಕಾಶವೇ ಇರುವುದಿಲ್ಲ.

ಒಂದನೇ ತರಗತಿಯಿಂದಲೇ ಮಕ್ಕಳನ್ನು ಮನೆಪಾಠಕ್ಕೆ ಕಳುಹಿಸುವ ಪೋಷಕರಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಹಂತದಲ್ಲಿ ಕೋಚಿಂಗ್ ಇಲ್ಲದಿದ್ದರೆ ಭವಿಷ್ಯವೇ ಇಲ್ಲ ಎಂಬ ಭಾವನೆ ಇದೆ. ಕಾಲೇಜಿನ ಶುಲ್ಕಕ್ಕಿಂತ ಕೋಚಿಂಗ್ ಕೇಂದ್ರದ ಶುಲ್ಕ ಹೆಚ್ಚಿರುತ್ತದೆ. ಆದರೂ ಕೋಚಿಂಗ್ ಕೇಂದ್ರಗಳು ಭರ್ತಿಯಾಗಿರುತ್ತವೆ.

ಐಐಟಿ ಮತ್ತು ಜೆಇಇ ಪರೀಕ್ಷೆಯ ತಯಾರಿಗೆ ಬೆಂಗಳೂರು, ಮಂಗಳೂರಿನ ಕೋಚಿಂಗ್ ಕೇಂದ್ರಗಳು ಸಾಲದು ಎನ್ನುವವರು ಹೆಚ್ಚಿನ ಕೋಚಿಂಗ್‌ಗಾಗಿ ರಾಜಸ್ಥಾನದ ಕೋಟಕ್ಕೆ ತೆರಳುತ್ತಾರೆ. ಅಲ್ಲಿನ ಕೋಚಿಂಗ್ ಕೇಂದ್ರಗಳಲ್ಲಿ ಕಲಿತರೆ ಉತ್ತಮ ರ‍್ಯಾಂಕ್ ಸಿಗುವುದು ಗ್ಯಾರಂಟಿ ಎಂಬ ನಂಬಿಕೆ ಇದೆ. ಲಾಂಗ್ ಟರ್ಮ್ ಕೋಚಿಂಗ್ ಹೆಸರಿನಲ್ಲಿ ಕುಟುಂಬಗಳೇ ಒಂದೆರಡು ವರ್ಷಗಳ ಮಟ್ಟಿಗೆ ಕೋಟಕ್ಕೆ ಸ್ಥಳಾಂತರಗೊಳ್ಳುವುದೂ ಇದೆ.

ಇತ್ತೀಚಿನ ದಿನಗಳಲ್ಲಿ ಕಲಿಕೆಯ ಒತ್ತಡ ತಾಳಲಾಗದೆ, ಅಂದುಕೊಂಡ ಫಲಿತಾಂಶ ದೊರಕದೆ ನಿರಾಶರಾಗುವ ಅನೇಕ ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗುತ್ತಿದ್ದಾರೆ. 2023ರಲ್ಲಿ ಕೋಟದಲ್ಲಿ 26 ವಿದ್ಯಾರ್ಥಿಗಳು ಆತ್ಮಹತ್ಯೆ ಮಾಡಿಕೊಂಡಿದ್ದರು. ಇದರ ಹಿಂದಿನ ವರ್ಷ ಇಡೀ ದೇಶದಲ್ಲಿ ಪರೀಕ್ಷಾ ಕಾರಣಗಳಿಗಾಗಿ 13,044 ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿದ್ದರು. ಮನೆಯವರ ಒತ್ತಾಸೆ, ಶೈಕ್ಷಣಿಕ ಒತ್ತಡ, ಸಂಪನ್ಮೂಲಗಳ ಕೊರತೆ, ಅನಾರೋಗ್ಯವು ವಿದ್ಯಾರ್ಥಿಗಳನ್ನು ಮಾನಸಿಕವಾಗಿ ದುರ್ಬಲಗೊಳಿಸಿಬಿಡುತ್ತವೆ.



ನೀಟ್ ಮತ್ತು ಜೆಇಇ ಪರೀಕ್ಷೆಗಳ ತಯಾರಿ ಒಂದು ರೀತಿಯಲ್ಲಿ 7ನೇ ತರಗತಿಯಿಂದಲೇ ಶುರುವಾಗುತ್ತದೆ. ದಿನಕ್ಕೆ 16-18 ಗಂಟೆ ಓದುವುದರಲ್ಲಿ ಮಗ್ನರಾಗುವ ಎಳೆಯರು ಬರೀ ಆರು ಗಂಟೆ ನಿದ್ರಿಸುತ್ತಾರೆ. ಓದಿನ ಜೊತೆ ಆಟೋಟ, ವಿನೋದಗಳಲ್ಲಿ ಸಮಯ ಕಳೆಯಬೇಕಾದ ಮಕ್ಕಳು ಪೋಷಕರ ನಿರ್ಧಾರದಂತೆ ಕೋಚಿಂಗ್ ವ್ಯವಸ್ಥೆಯ ಭಾಗವಾಗಿ ಶಾಲೆ, ಟ್ಯೂಷನ್, ವಿಶೇಷ ತರಗತಿ, ಮಾಕ್ ಎಕ್ಸಾಮ್ ಎಂದೆಲ್ಲ ಸದಾ ಪುಸ್ತಕಗಳ ಜೊತೆಯೇ ಇರುತ್ತಾರೆ.

ಕೋಚಿಂಗ್‌ನ ಅಡ್ಡಪರಿಣಾಮಗಳಿಗೆ ಕಡಿವಾಣ ಹಾಕಲು ಕೇಂದ್ರ ಸರ್ಕಾರ ಹಲವು ಕಠಿಣ ನಿಯಮಗಳನ್ನು ರೂಪಿಸಿದೆ. 16 ವರ್ಷ ವಯಸ್ಸಿಗಿಂತ ಕಡಿಮೆ ಇರುವ ಮಕ್ಕಳನ್ನು ಕೋಚಿಂಗ್ ಕೇಂದ್ರಗಳಿಗೆ ಸೇರಿಸಿಕೊಳ್ಳುವಂತಿಲ್ಲ, ಕೋಚಿಂಗ್ ಉದ್ಯಮವು ಗ್ರಾಹಕ ರಕ್ಷಣಾ ಕಾಯ್ದೆಗೆ ಒಳಪಡುತ್ತದೆ, ವಿದ್ಯಾರ್ಥಿಯು ತರಬೇತಿಯ ನಡುವೆಯೇ ಕೋಚಿಂಗ್ ಕೇಂದ್ರ ತೊರೆದರೆ ಶುಲ್ಕದ ಇಂತಿಷ್ಟು ಭಾಗವನ್ನು ಹಿಂದಿರುಗಿಸಬೇಕು, ಕೋಚಿಂಗ್ ಸಂಸ್ಥೆಗಳು ಕಡ್ಡಾಯವಾಗಿ ನೋಂದಣಿ ಮಾಡಿಕೊಳ್ಳಬೇಕು, ಸುವ್ಯವಸ್ಥಿತವಾದ ಜಾಗದಲ್ಲಿ ತರಗತಿ ನಡೆಸಬೇಕು ಮತ್ತು ಕೋಚಿಂಗ್ ನೀಡುವ ಶಿಕ್ಷಕರು ಪದವಿ ವಿದ್ಯಾಭ್ಯಾಸವನ್ನು ಪೂರೈಸಿರಲೇಬೇಕು ಎಂಬ ನಿಯಮಗಳಿವೆ. ರಾಜ್ಯ ಸರ್ಕಾರಗಳು ಇವುಗಳನ್ನು ಜಾರಿಗೆ ತರಬೇಕಿದೆ.

ಕೋಚಿಂಗ್ ವ್ಯವಸ್ಥೆ ಈಗ ಸಮಾನಾಂತರ ಶಿಕ್ಷಣ ಎನಿಸಿದೆ. ನಾಗರಿಕ ಸೇವೆ, ಬ್ಯಾಂಕ್, ರೈಲ್ವೆ, ಟೋಫೆಲ್, ಜಿಆರ್‌ಇ, ಪೊಲೀಸ್ ನೇಮಕಾತಿ ಪರೀಕ್ಷೆಗಳಿಗೆ ತರಬೇತಿಯ ಅವಶ್ಯಕತೆ ಇದೆ. ಸ್ಪರ್ಧಾತ್ಮಕ ಪರೀಕ್ಷೆ ಎದುರಿಸುವವರಷ್ಟೇ ಅಲ್ಲ 7ನೇ ತರಗತಿ, ಎಸ್‌ಎಸ್‌ಎಲ್‌ಸಿ, ಪಿಯುಸಿ ಪರೀಕ್ಷೆ ಎದುರಿಸುವವರು ಸಹ ಕೋಚಿಂಗ್ ಬಯಸುತ್ತಾರೆ. ಕೋಚಿಂಗ್ ವ್ಯವಸ್ಥೆ ವ್ಯಾಪಿಸಲು ಶಾಲಾ ವ್ಯವಸ್ಥೆಯಲ್ಲಿನ ದೋಷಗಳೇ ಕಾರಣ ಎಂಬ ಮಾಹಿತಿ ಇದೆ. ಶಾಲೆ ಕಾಲೇಜುಗಳಲ್ಲಿನ ಮೂಲ ಸೌಲಭ್ಯ ಕೊರತೆ, ಕಲಿಕಾ ಸಾಮಗ್ರಿ, ನುರಿತ ಅಧ್ಯಾಪಕರ ಅನುಪಸ್ಥಿತಿಯಿಂದಾಗಿ ಪೋಷಕರು ಮಕ್ಕಳ ಭವಿಷ್ಯವನ್ನು ಸದೃಢಗೊಳಿಸಲು ಕೋಚಿಂಗ್ ಕೇಂದ್ರಗಳ ಮೊರೆ ಹೋಗುತ್ತಾರೆ.

ಕೋಚಿಂಗ್ ಅನಿವಾರ್ಯವೇ? ಖಂಡಿತ ಇಲ್ಲ. ಆದರೆ ಕಲಿಕೆಯಲ್ಲಿ ಹಿಂದುಳಿದವರಿಗೆ ಅದರಿಂದ ಅನುಕೂಲ ಆಗುತ್ತದೆ. ಬುದ್ಧಿವಂತರಿಗೆ ಹೆಚ್ಚಿನ ಬಲ ತುಂಬುತ್ತದೆ. ಹಲವರಿಗೆ ಯಶಸ್ಸು ಲಭಿಸಿದೆ. ಅತಿಯಾದ ಪೈಪೋಟಿ ಇರುವುದರಿಂದ ಪರೀಕ್ಷೆಗಳು ಕಠಿಣವಾಗುತ್ತಿವೆ. ಕಷ್ಟದ ಅಥವಾ ಸವಾಲಿನ ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಎದುರಿಸಿ ಯಶಸ್ವಿಯಾಗಲು ವಿಶೇಷ ತರಬೇತಿ ಬೇಕು.

ಕೋಚಿಂಗ್ ಕೇಂದ್ರ ಸೇರಿಕೊಂಡಾಕ್ಷಣ ಬಯಸಿದ ಅಂಕಗಳು ಬರುತ್ತವೆ ಎಂದು ಯಾವ ಗ್ಯಾರಂಟಿಯೂ ಇಲ್ಲ. ಆದರೂ ಅದಕ್ಕೆ ಮುಗಿಬೀಳುವ ಪ್ರವೃತ್ತಿ ಕಡಿಮೆಯಾಗಿಲ್ಲ. ಮಕ್ಕಳು ಯಶಸ್ವಿ ಆಗಲಿ ಎಂದು ಬಯಸುವುದು ಪೋಷಕರ ತಪ್ಪಲ್ಲ. ಆದರೆ ಇದು ಆಗಲೇಬೇಕು, ಆಗದಿದ್ದರೆ ಭವಿಷ್ಯವೇ ಇಲ್ಲ ಎಂಬಂತೆ ಒತ್ತಡ ಹೇರಬಾರದು. ಶಾಲೆಗಳಲ್ಲಿ ಓದಿದ್ದನ್ನೇ ಓದಿಸುವ, ಬಾಯಿಪಾಠ ಮಾಡಿಸುವ ವಿಧಾನಗಳ ಬದಲಿಗೆ ಪರಿಕಲ್ಪನಾತ್ಮಕ ಮತ್ತು ಪ್ರಾಯೋಗಿಕ ಕಲಿಕೆಗಳನ್ನು ಪ್ರೋತ್ಸಾಹಿಸಿದರೆ ಮಾತ್ರ ವಿದ್ಯಾರ್ಥಿಗಳು ಕೋಚಿಂಗ್ ಕೇಂದ್ರಗಳತ್ತ ಸುಳಿಯುವುದನ್ನು ಕಡಿಮೆ ಮಾಡಬಹುದು ಮತ್ತು ಅನಗತ್ಯ ಒತ್ತಡ ತಪ್ಪಿಸಬಹುದು.

ಚುರುಮುರಿ



ನುಡಿದರೆ ಮುತ್ತಿನ...

• ಬಿ.ಎನ್. ಮಲ್ಲೇಶ್

'ಏನ್ ಮಂಜಮ್ಮ, ಬಸವ ಜಯಂತಿ, ಅಕ್ಷಯ ತೃತೀಯ ಹೆಂಗಾತು? ಚಿನ್ನ ಗಿನ್ನ ಖರೀದಿ ಮಾಡಿದ್ಯೋ ಹೆಂಗೆ?' ಗುಡ್ಡೆ ಕೇಳಿದ.

'ಉಳ್ಳವರು ಚಿನ್ನ ಖರೀದಿಸುವರು, ನಾನೇನು ಮಾಡಲಿ ಬಡವಳಯ್ಯಾ...' ಎಂದಳು ಮಂಜಮ್ಮ.

'ಅಲೆಲೆ, ವಚನ ಹೇಳಾಕೂ ಬರುತ್ತೆ ನಿಂಗೆ' ದುಬ್ಬೀರ ನಕ್ಕ.

'ವಚನ ಹೇಳೋರು ಊರು ತುಂಬಾ ಅದಾರೆ ಬಿಡ್ರಪ್ಪ, ಅದ್ರಲ್ಲೂ ರಾಜಕಾರಣಿಗಳು ಎತ್ತಿದ ಕೈ. ಕಳಬೇಡ ಅಂತಾರೆ, ಕದೀತಾರೆ. ಹುಸಿಯ ನುಡಿಯಲು ಬೇಡ ಅಂತಾರೆ, ಬಾಯಿ ಬಿಟ್ರೆ ಬರೀ ಸುಳ್ಳೇ. ನುಡಿದರೆ ಮುತ್ತಿನ ಹಾರದಂತಿರಬೇಕು ಅಂತಾರೆ, ಕೆಟ್ಟಾ ಕೊಳಕ ಮಾತಾಡ್ತಾರೆ' ಮಂಜಮ್ಮಗೆ ಕೋಪ.

'ಅದ್ರಲ್ಲೂ ಇವತ್ತೇಳಿದ್ದನ್ನ ನಾಳೆ ಹಂಗೆ ಹೇಳೇ ಇಲ್ಲ ಅಂತಾರೆ ಮಂಜಮ್ಮ, ಟೀವೀಲಿ ಬಂತಲ್ಲ ಅಂದ್ರೆ, ಅವರು ತಿರುಚಿ ಹಾಕಿದಾರೆ ಅಂತಾರೆ' ತೆಪರೇಸಿಯೂ ಆಕ್ಷೇಪಿಸಿದ.

'ಇನ್ನೂ ತಲೆ ಕೆಟ್ರೆ 'ನಾನು ನಾನೇ ಅಲ್ಲ' ಅಂದುಬಿಡ್ತಾರೆ ಹುಷಾರು' ಗುಡ್ಡೆ ನಕ್ಕ.

'ಅಲ್ಲ, ಅಕ್ಷಯ ತೃತೀಯದ ದಿನ ಚಿನ್ನ ತಗಂಡ್ರೆ ಅದು ಡಬಲ್ ಆಗುತ್ತಂತೆ ಹೌದಾ?' ದುಬ್ಬೀರ ಕೇಳಿದ.

'ಚಿನ್ನ ಒಂದೇನಾ ಅಥ್ವ ಏನ್ ತಗಂಡ್ರೂ ಡಬಲ್ ಆಗುತ್ತಾ?' ಕೊಟ್ರೇಶಿ ಕೊಕ್ಕೆ.

'ಲೇಯ್ ತಗಡು, ಡಬ್ಬಲ್ ತ್ರಿಬ್ಬಲ್ ಆಗಾಕೆ ಅದು ರಾಜಕಾರಣಿಗಳ ಆಸ್ತಿ ಅಲ್ಲ, ಏನೋ ಒಂದು ನಂಬಿಕೆ ಅಷ್ಟೆ' ತೆಪರೇಸಿ ಹೇಳಿದ.

'ಏನು, ತಗಡಾ? ನುಡಿದರೆ ಮುತ್ತಿನ ಹಾರ ಅಷ್ಟೇ ಅಲ್ಲ, ಹೆಂಗಿರಬೇಕು ಗೊತ್ತಾ?'

'ಹೆಂಗಿರಬೇಕು?'

'ನುಡಿದರೆ ಚಿನ್ನದ ತೂಕದಂತಿರಬೇಕು. ನುಡಿದರೆ 'ಏಯ್, ಯಾವನೋ ಅಲ್ಲಿ, ಬಾರಯ್ಯ ಇಲ್ಲಿ' ಎನ್ನದಂತಿರಬೇಕು. ನುಡಿದರೆ ಯೂ ಟರ್ನ್ ಹೊಡೆಯದಂತಿರಬೇಕು. ನುಡಿದರೆ ವಿರೋಧ ಪಕ್ಷದವರೂ ಮೆಚ್ಚಿ ಅಹುದಹುದೆನುವಂತಿರಬೇಕು... ಹೆಂಗೆ?' ಎಂದ ಕೊಟ್ರೇಶಿ.

'ಬೊಂಬಾಟ್ ಕೊಟ್ರ, ಇವತ್ತು ನಿಂಗೆ ಡಬಲ್ ಚಾ!' ಎಂದ ಗುಡ್ಡೆ. ಎಲ್ಲರೂ 'ಹೋ...' ಎಂದರು.

ಸಂಗತ

ಜಾಲತಾಣ ಆಗಲಿ ಜಾಣತಾಣ

ಜಾಲತಾಣಗಳು ಪರಸ್ಪರ ಸಂಬಂಧದ ಬೆಸುಗೆಯಾಗುವ ಬದಲು ದ್ವೇಷದ ಬಜಾರುಗಳನ್ನೇ ಸೃಷ್ಟಿಸುತ್ತಿರುವುದರ ಬಗ್ಗೆ ನಾವೆಲ್ಲಾ ಚಿಂತಿಸಬೇಕಾಗಿದೆ

• ರೇವಣ್ಣ ಎಂ.ಜಿ.

'ನನ್ನ ಮತ್ತು ನನ್ನ ಕುಟುಂಬದವರ ಚಾರಿತ್ರ್ಯ ಪ್ರಶ್ನಿಸಿ ಸಾಮಾಜಿಕ ಜಾಲತಾಣಗಳಲ್ಲಿ ಅವಹೇಳನಕಾರಿ ಪೋಸ್ಟ್‌ಗಳನ್ನು ಹಾಕುತ್ತಿರುವುದರಿಂದ ಬೇಸರವಾಗಿದೆ' ಎಂದು ಜಾವೆಲಿನ್ ತಾರೆ ನೀರಜ್ ಚೋಪ್ರಾ ಇತ್ತೀಚೆಗೆ ಅಳಲು ತೋಡಿಕೊಂಡಿದ್ದರು. ಅದಾದ ಕೆಲವೇ ದಿನಗಳಲ್ಲಿ, 'ನಿಮ್ಮ ಮನರಂಜನೆಗೆ ನಮ್ಮ ಪುತ್ರ ವಸ್ತುವಾಗುವುದು ಬೇಡ. ಆನ್‌ಲೈನ್ ಒಂದು ಕೊಳಕು ತಾಣ' ಎಂದು ಕ್ರಿಕೆಟಿಗ ಜಸ್‌ಪ್ರೀತ್ ಬೂಮ್ರಾ ಅವರ ಪತ್ನಿ ಬೇಸರ ಹೊರಹಾಕಿದ ಸುದ್ದಿಯೂ ವರದಿಯಾಗಿದೆ.

ಜನಸಾಮಾನ್ಯರಿಂದ ಹಿಡಿದು ಸೆಲೆಬ್ರಿಟಿಗಳವರೆಗೂ ಜಾಲತಾಣಗಳಿಂದ ಬಹಳಷ್ಟು ಉಪಯೋಗ ಪಡೆದಿರುವಂತೆಯೇ ನಿಂದನೆಗೆ ಒಳಗಾಗಿ ನೊಂದುಕೊಳ್ಳುತ್ತಿರುವುದು ಸಹ ಸತ್ಯ. ದಿನಬೆಳಗಾಗುವಷ್ಟರಲ್ಲಿ ಸಾಮಾನ್ಯ ವ್ಯಕ್ತಿಯೊಬ್ಬನನ್ನು ವಿಶ್ವಕ್ಕೇ ಪರಿಚಯಿಸುವಷ್ಟು ಶಕ್ತಿಶಾಲಿಯಾಗಿರುವ ಜಾಲತಾಣಗಳು ಎಂತಹ ಪ್ರಸಿದ್ಧರನ್ನು ಕೂಡ ಕ್ಷಣಾರ್ಧದಲ್ಲಿ ಟೀಕಿಸಿ ಕೆಸರು ಮೆತ್ತುವಂತೆ ಮಾಡುತ್ತಿರುವುದು ವಿಪರ್ಯಾಸ. ಆಧುನಿಕ ಯುಗದಲ್ಲಿ ಧ್ವನಿಯಿಲ್ಲದವರ ಧ್ವನಿಯಾಗಿ, ಹೊಸ ಕ್ರಾಂತಿಯನ್ನೇ ಸೃಷ್ಟಿಸಿರುವ ಜಾಲತಾಣಗಳು, ಪ್ರೀತಿ, ಸ್ನೇಹ, ಕರುಣೆಯ ಸಂಬಂಧಗಳ ಬೆಸುಗೆಯಾಗುವ ಬದಲು ದ್ವೇಷದ ಬಜಾರುಗಳನ್ನೇ ಸೃಷ್ಟಿಸುತ್ತಿರುವುದರ ಬಗ್ಗೆ ನಾವೆಲ್ಲಾ ಚಿಂತಿಸಬೇಕಾಗಿದೆ.

ಪ್ರಜಾಪ್ರಭುತ್ವದಲ್ಲಿ ಎಲ್ಲರಿಗೂ ಅಭಿವ್ಯಕ್ತಿ ಸ್ವಾತಂತ್ರ್ಯ ಇರುತ್ತದೆ. ಹಾಗೆಂದು ಇದು ಸರ್ವತಂತ್ರ ಸ್ವತಂತ್ರವಾದ ಹಕ್ಕಲ್ಲ. ಈ ಹಕ್ಕನ್ನು ಚಲಾಯಿಸುವಾಗ ನಮಗಿರುವ ವಿಶೇಷ ಕರ್ತವ್ಯವನ್ನು ನಿಭಾಯಿಸುವ ಮೂಲಕ ಎಲ್ಲರ ಘನತೆ, ಗೌರವವನ್ನು ಕಾಪಿಟ್ಟು ಸಾರ್ವಜನಿಕ ಸುವ್ಯವಸ್ಥೆಗೆ ಸಹಕಾರಿಯಾಗಬೇಕಾದುದು ನಮ್ಮ ಹೊಣೆ.

ಸಾಮಾಜಿಕ ಮಾಧ್ಯಮಗಳನ್ನು ಬಳಸುವ ಬಗ್ಗೆ ಇತ್ತೀಚೆಗೆ ನಾಗರಿಕ ಸೇವೆಗೆ ಆಯ್ಕೆಯಾದ ಅಭ್ಯರ್ಥಿಗಳಿಗೆ ಲಾಲ್ ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಆಡಳಿತ ಅಕಾಡೆಮಿ ಹೊರಡಿಸಿರುವ ಮಾರ್ಗಸೂಚಿಯು ಪ್ರತಿಯೊಬ್ಬ ಜಾಲತಾಣ ಬಳಕೆದಾರನಿಗೂ ದಿಕ್ಸೂಚಿಯಂತೆ ಆಗಬೇಕು. ಯಾರು ಯಾವ ವಿಚಾರಗಳನ್ನು ಹೇಳುತ್ತಿದ್ದಾರೆ, ಆ ವಿಚಾರಗಳ ಸತ್ಯಾಸತ್ಯತೆಗಳೇನು ಎಂಬುದನ್ನು ಅರಿತು ಪ್ರತಿಕ್ರಿಯಿಸುವುದನ್ನು ಕಲಿಯಬೇಕು. ಪ್ರಚೋದನಕಾರಿ, ಅಪಾಯಕಾರಿ, ನಿಂದನಾತ್ಮಕ ಪ್ರತಿಕ್ರಿಯೆಗಳನ್ನು ಮಾಡುವುದನ್ನು ಬಿಡಬೇಕು.

ಹಾಗೆಯೇ ಸಾಮಾಜಿಕ ಜಾಲತಾಣಗಳನ್ನು ಬಳಸುವವರು, '...ಹುಸಿಯ ನುಡಿಯಲುಬೇಡ..., ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ... ಬಯಿದವರೆನ್ನ ಬಂಧುಗಳೆಂಬೆ, ನಿಂದಿಸಿದವರೆನ್ನ ತಂದೆ ತಾಯಿಗಳೆಂಬೆ..., ಜರಿದವರೆನ್ನ ಜನ್ಮಬಂಧುಗಳೆಂಬೆ, ಹೊಗಳಿದವರೆನ್ನ ಹೊನ್ನಶೂಲದಲಿಕ್ಕಿದರೆಂಬೆ...' ಎಂಬ ಬಸವಣ್ಣನ ಮಾತುಗಳನ್ನು ಮನನ ಮಾಡಿಕೊಂಡು ಎಚ್ಚರಿಕೆ ಮತ್ತು ವಿವೇಚನೆಯಿಂದ ಬಳಸುವಂತೆ ಆಗಬೇಕು. ಆಗ ಜಾಲತಾಣಗಳು ನಿಸ್ಸಂಶಯವಾಗಿ ಜಾಣತಾಣಗಳಾಗಿ ಬದಲಾಗುತ್ತವೆ.

ನಮ್ಮ ಅಭಿಪ್ರಾಯಕ್ಕಿಂತ ಭಿನ್ನವಾದ ಅಭಿಪ್ರಾಯವನ್ನು ಕೇಳಿಸಿಕೊಳ್ಳುವ ತಾಳ್ಮೆ ನಮಗೆ ಮುಖ್ಯವಾಗಬೇಕು. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಹಬಾಳ್ವೆಯನ್ನು ಸಾಧ್ಯವಾಗಿಸಿರುವುದು ಇದೇ ಸಹನೆಯೆಂಬ ಅಸ್ತ್ರ ಅಲ್ಲವೇ? ಗಾಂಧೀಜಿ ಹೇಳಿದ್ದೂ ಈ ಸಹಿಷ್ಣುತೆಯನ್ನೇ ಅಲ್ಲವೇ? ಸತ್ಯವನ್ನು ಅರಸುವ, ಸತ್ಯವನ್ನು ಎದುರಿಸುವ ಪ್ರಜ್ಞೆಯನ್ನು ಬಸವಣ್ಣ ನಮಗೆ ಬಳುವಳಿಯಾಗಿ ಕೊಟ್ಟಿರುವಾಗ ಡಿಜಿಟಲ್ ಸಂಯಮ ಬೆಳೆಸಿಕೊಳ್ಳುವುದು ನಮಗೆ ಅಸಾಧ್ಯವಾದುದೇನೂ ಅಲ್ಲ!

ಡಿಜಿಟಲ್ ಅಪರಾಧಗಳ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಕೊಡುವ ಜೊತೆಗೆ ಡಿಜಿಟಲ್ ದೂರುಗಳನ್ನು ತ್ವರಿತವಾಗಿ ಪರಿಹರಿಸುವ ಕೆಲಸವನ್ನು ಸರ್ಕಾರ ಮಾಡಬೇಕು. ಮುಖ್ಯವಾಗಿ ನಕಲಿ ಅಕೌಂಟ್‌ಗಳನ್ನು ಪತ್ತೆಹಚ್ಚಿ ನಿಷ್ಕ್ರಿಯಗೊಳಿಸಬೇಕು. 2000ನೇ ಇಸವಿಯಲ್ಲಿ ಜಾರಿಯಾದ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕಾನೂನಿಗೆ 2008ರಲ್ಲಿ ತಿದ್ದುಪಡಿ ತಂದು ಸೇರ್ಪಡೆಗೊಳಿಸಿರುವ 66ಎ, ಸಂಪರ್ಕ ಜಾಲ ಅಥವಾ ಇತರ ಯಾವುದಾದರೂ ಜಾಲದ ಮುಖಾಂತರ ಆಕ್ಷೇಪಾರ್ಹ ಸಂದೇಶಗಳನ್ನು ಕಳಿಸಿದ್ದಕ್ಕೆ ಶಿಕ್ಷೆ ಎಂಬ ಕಾಯ್ದೆ ಕಟ್ಟುನಿಟ್ಟಾಗಿ ಜಾರಿಯಾಗಬೇಕು.



ಹಾಗಂತ ಎಲ್ಲವನ್ನೂ ಕಾನೂನಿನಿಂದಲೇ ಸರಿಪಡಿಸಲಾಗದು. ವಯಸ್ಸು ಮತ್ತು ವೃತ್ತಿಗಳ ಭೇದವಿಲ್ಲದೆ ಸಾಮಾಜಿಕ ಜಾಲತಾಣಗಳನ್ನು ಬಳಸುವ ಮಕ್ಕಳು ವಿದ್ಯಾಭ್ಯಾಸವನ್ನು, ದೊಡ್ಡವರು ವೃತ್ತಿಜೀವನದ ಧ್ಯೇಯಗಳನ್ನು ಮರೆಯುತ್ತಿರುವಾಗ, ಮುಂದಿನ ಪೀಳಿಗೆ ಡಿಜಿಟಲ್ ವ್ಯಸನಕ್ಕೆ ಬಲಿಯಾಗುವುದನ್ನು ತಡೆದು ಅವರಿಗೆ ಡಿಜಿಟಲ್ ಸಾಕ್ಷರತೆ ನೀಡಬೇಕಾಗಿದೆ. ಬ್ರಿಟನ್‌ನ ಸಾಮಾಜಿಕ ಸಂಸ್ಥೆಯೊಂದು 14ರಿಂದ 24 ವರ್ಷ ವಯಸ್ಸಿನ ಮಕ್ಕಳನ್ನೊಳಗೊಂಡ ಸಮೀಕ್ಷೆಯೊಂದನ್ನು ಮಾಡಿದೆ. ಜಾಲತಾಣಗಳು ಯುವ ಪೀಳಿಗೆಯ ಮಾನಸಿಕ ಆರೋಗ್ಯದ ಮೇಲೆ ಪರಿಣಾಮ ಬೀರುತ್ತವೆ ಎಂದು ಅದು ವರದಿ ನೀಡಿರುವುದನ್ನು ನಾವು ಎಚ್ಚರಿಕೆಯ ಗಂಟೆಯಾಗಿ ಭಾವಿಸಬೇಕಿದೆ.

ಶಾಲಾ ಕಾಲೇಜುಗಳಲ್ಲಿ ಜಾಲತಾಣಗಳ ಬಗ್ಗೆ ಪಠ್ಯಕ್ರಮ ರೂಪಿಸುವುದರ ಜೊತೆಗೆ, ಇವುಗಳಿಂದ ಆಗುವ ಅಪಾಯಗಳ ಕುರಿತ 'ಸೋಷಿಯಲ್ ಡೈಲಮ'ದಂತಹ ಕಿರುಚಿತ್ರಗಳನ್ನು ಮಕ್ಕಳಿಗೆ ತೋರಿಸಿ ಈ ಬಗ್ಗೆ ಅರಿವು ಮೂಡಿಸಬೇಕಾಗಿದೆ. ಸಾಮಾಜಿಕ ಜಾಲತಾಣಗಳ ಕಂಟೆಂಟ್‌ಗಳನ್ನು ನಿಯಂತ್ರಿಸುವ ಬಗ್ಗೆ ನಿಯಮಗಳನ್ನು ರೂಪಿಸಲು ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ನೀಡಿರುವ ನಿರ್ದೇಶನ ಮತ್ತು 'ಒಟಿಟಿ ಪ್ರತಿನಿಧಿಗಳೂ ನ್ಯಾಯಾಲಯದ ಮುಂದೆ ಬರಲಿ, ಅವರಿಗೂ ಸ್ವಲ್ಪ ಸಾಮಾಜಿಕ ಜವಾಬ್ದಾರಿ ಇರಲಿ' ಎಂಬ ನ್ಯಾಯಮೂರ್ತಿಗಳ ಮಾತು ಈ ದಿಸೆಯಲ್ಲಿ ನಮಗೆ ಭರವಸೆಯ ಬೆಳಕನ್ನು ಚೆಲ್ಲುತ್ತವೆ.

ವಾಚಕರ ವಾಣಿ

ಪಾಕ್ ಪರ ಘೋಷಣೆ: ಕ್ರಮ ಅಗತ್ಯ

ಪಾಕಿಸ್ತಾನದ ಪರ ಯಾರೇ ಘೋಷಣೆ ಕೂಗಿದರೂ ಅದು ದೇಶದ್ರೋಹ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಹೇಳಿರುವುದು (ಪ್ರ.ವಾ., ಮೇ 1) ಸರಿಯಾಗಿದೆ. ಈ ಹಿಂದೆ, ರಾಜ್ಯಸಭಾ ಸದಸ್ಯರಾಗಿ ಆಯ್ಕೆಯಾದ ನಾಸಿರ್ ಹುಸೇನ್ ಅವರ ಗೆಲುವನ್ನು ಸಂಭ್ರಮಿಸುವಾಗಲೂ ಅವರ ಬೆಂಬಲಿಗರಿಂದ ಇಂತಹ ಘೋಷಣೆ ಕೇಳಿಬಂದಿತ್ತು. ಈ ವಿಚಾರವಾಗಿ ಪತ್ರಕರ್ತರೊಬ್ಬರು ನಾಸಿರ್ ಹುಸೇನ್ ಅವರಿಗೆ ಪ್ರಶ್ನೆ ಕೇಳಲು ಹೋದಾಗ ಅವರು ಆತನನ್ನು ಏಕವಚನದಲ್ಲಿ ನಿಂದಿಸಿ ಕಳಿಸಿದ್ದರು. ಪಾಕಿಸ್ತಾನದ ಪರ ಯಾರೇ ಹೇಳಿಕೆಗಳನ್ನು ನೀಡಿದರೂ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಇಲ್ಲವಾದರೆ ಅದರಿಂದ ಕಿಡಿಗೇಡಿಗಳಿಗೆ ಪ್ರೇರಣೆಯಾಗುತ್ತದೆ.

ಕೆ.ಎನ್.ರಂಗನಾಥ್, ಉಜಿರೆ

ಬಾಲಕನ ವಿರುದ್ಧ ಅತಿರೇಕದ ಕ್ರಮ

ಉತ್ತರಪ್ರದೇಶದ ಲಖನೌದಲ್ಲಿ ರಸ್ತೆಯಲ್ಲಿ ಬಿದ್ದಿದ್ದ ಪಾಕಿಸ್ತಾನದ ಧ್ವಜವನ್ನು ಕುತೂಹಲದಿಂದ ಕೈಗೆತ್ತಿಕೊಂಡ ಮುಸ್ಲಿಂ ಬಾಲಕನನ್ನು ನಿಂದಿಸಿ, ಧ್ವಜದ ಮೇಲೆ ಆತನಿಂದ ಬಲವಂತವಾಗಿ ಮೂತ್ರ ವಿಸರ್ಜನೆ ಮಾಡಿಸಿರುವ ಹಿಂದೂಪರ ಸಂಘಟನೆಯ ಕಾರ್ಯಕರ್ತರ ಕೃತ್ಯ ಖಂಡನೀಯ. ದಾರಿಯಲ್ಲಿ ಬಿದ್ದಿದ್ದ ಧ್ವಜದ ಬಗ್ಗೆ ಯಾವುದೇ ಒಬ್ಬ ದಾರಿಹೋಕನಿಗೂ ಕುತೂಹಲ ಮೂಡುವುದು ಸಹಜ. ಅದನ್ನು ವಿಪರೀತವಾಗಿ ಗ್ರಹಿಸಿ ಆ ಬಾಲಕನಿಂದ ಧ್ವಜದ ಮೇಲೆ ಮೂತ್ರ ಮಾಡಿಸಿದ್ದನ್ನು ಒಪ್ಪಲಾಗದು. ಈ ರೀತಿ ರಸ್ತೆಯಲ್ಲಿ ಬಿದ್ದ ವಸ್ತುಗಳನ್ನು ಕೈಗೆತ್ತಿಕೊಂಡು ನೋಡುವುದು ತಪ್ಪು, ಇನ್ನು ಮುಂದೆ ಇಂತಹ ವಿಷಯಗಳಿಂದ ಪ್ರೇರೇಪಿತನಾಗದೆ ನಿನ್ನ ಕೆಲಸವನ್ನು ಸುಸೂತ್ರವಾಗಿ ಮಾಡಿಕೊಂಡು ಹೋಗು ಎಂದು ಆ ಬಾಲಕನಿಗೆ ಬುದ್ಧಿ ಹೇಳಿದ್ದರೆ ಸಾಕಿತ್ತು. ಆದರೆ ಇಂತಹ ವಿಪರೀತದ ಕ್ರಮಗಳಿಂದ ಮಕ್ಕಳ ಮನಸ್ಸು ವಿಹ್ವಲಗೊಂಡು ಮುಂದೆ ಅವರು ಅಡ್ಡದಾರಿ ಹಿಡಿಯಲು ಪ್ರೇರಣೆ ಆಗಬಹುದು. ಏಕೆಂದರೆ ಸಾಮಾನ್ಯವಾಗಿ ಮಕ್ಕಳ ಮನಸ್ಸು ಒಳ್ಳೆಯ ವಿಷಯಗಳಿಗಿಂತಲೂ ಕೆಟ್ಟ ವಿಷಯಗಳತ್ತ ಹೆಚ್ಚು ಆಕರ್ಷಿತವಾಗುತ್ತದೆ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಕೃಷಿಹೊಂಡ ನಿರ್ಮಾಣಕ್ಕೆ ಸಿಗಲಿ ಆದ್ಯತೆ

ಕರ್ನಾಟಕ ವೀರಶೈವ- ಲಿಂಗಾಯತ ಅಭಿವೃದ್ಧಿ ನಿಗಮವು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಕೊಳವೆಬಾವಿ ಕೊರೆಸಲು ಸಾಲ ಮತ್ತು ಸಹಾಯಧನ ನೀಡುವುದಾಗಿ ತಿಳಿಸಿದೆ. ಕೊಳವೆಬಾವಿಗಳಿಂದ ಅಂತರ್ಜಲ ಬರಿದಾಗುತ್ತಿದೆ ಜೊತೆಗೆ ಅವು ವಿಷಪೂರಿತ ಲವಣವನ್ನು ಕಕ್ಕುತ್ತಿವೆ. ಇದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತದೆ. ಹೀಗಾಗಿ, ಪರಿಸರ ನಾಶ ಮಾಡುವ ಕೊಳವೆಬಾವಿಗಳ ಬದಲು ಪರಿಸರಸ್ನೇಹಿ ಕೃಷಿಹೊಂಡಗಳನ್ನು ನಿರ್ಮಿಸುವುದು ಒಳಿತು. ಇದರಿಂದ, ವ್ಯರ್ಥವಾಗುವ ಮಳೆನೀರನ್ನು ಸಂಗ್ರಹಿಸಬಹುದು. ಇದು ಹೆಚ್ಚಿನ ಉತ್ಪಾದನೆಗೆ ಕಾರಣವಾಗಿ ಆದಾಯ ತಂದುಕೊಡುತ್ತದೆ.

ಎಚ್.ಆರ್. ಪ್ರಕಾಶ್, ಕೆ.ಬಿ. ದೊಡ್ಡಿ, ಮಂಡ್ಯ

ಒಳಿತು– ಕೆಡುಕು ತಿಳಿಸುವುದೇ ಇತಿಹಾಸ

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (ಎನ್‌ಸಿಇಆರ್‌ಟಿ) ಏಳನೇ ತರಗತಿಯ ಸಮಾಜ ವಿಜ್ಞಾನ ಪಠ್ಯಪುಸ್ತಕವನ್ನು ಪರಿಷ್ಕರಿಸಿದ್ದು, ದೆಹಲಿ ಸುಲ್ತಾನರು ಮತ್ತು ಮೊಘಲರ ಕುರಿತ ಭಾಗವನ್ನು ಪಠ್ಯಪುಸ್ತಕದಿಂದ ಕೈಬಿಟ್ಟಿದೆ. ಮೊಘಲರು, ದೆಹಲಿ ಸುಲ್ತಾನರ ಇತಿಹಾಸವನ್ನು ನಾವು ಶಾಲಾ ಪಠ್ಯಪುಸ್ತಕಗಳಲ್ಲಿ ಓದಿದ್ದೇವೆ, ಬಹುತೇಕರು ಇವರ ಆಳ್ವಿಕೆಯನ್ನು ಖಂಡಿಸುತ್ತಾರೆ ಹಾಗೂ ಇವರ ವಾಸ್ತುಶಿಲ್ಪವನ್ನು ಮೆಚ್ಚುತ್ತಾರೆ. ಅಕ್ಬರ್, ಷಹಜಹಾನ್, ದಾರಾಶಿಕೊ ಅಂತಹವರು ಸರ್ವಧರ್ಮ ಸಹಿಷ್ಣು ಆಗಿದ್ದರು ಎಂದು ಹೇಳಲಾಗುತ್ತದೆ. ಅದೇ ರೀತಿ ಅಲ್ಲಾವುದ್ದೀನ್ ಖಿಲ್ಜಿ, ಔರಂಗಜೇಬ್ ಅವರಂತಹವರು ಹಿಂದೂ ಧರ್ಮ ವಿರೋಧಿ ಹಾಗೂ ಧಾರ್ಮಿಕ ಅಸಹಿಷ್ಣು ಮನೋಭಾವ ಹೊಂದಿದ್ದರು ಎಂದೂ ನಾವು ಓದಿದ್ದೇವೆ. ಕೆಲವರ ಆಡಳಿತದಲ್ಲಿ ಅನಿಷ್ಟ ಪದ್ಧತಿಗಳ ತಾಂಡವ ನಡೆದಿತ್ತು, ಬಡವರು ತೆರಿಗೆ ಶೋಷಣೆಗೆ ಒಳಗಾಗಿದ್ದರು. ಇನ್ನು ಕೆಲವರು ಉತ್ತಮ ಆಡಳಿತ ನೀಡಿದ್ದರು. ಅಕ್ಬರ್ ಹಿಂದೂಗಳ ಮೇಲಿದ್ದ ತೆರಿಗೆಯನ್ನು ತೆಗೆದುಹಾಕಿದ್ದ, ಷಹಜಹಾನ್ ವಾಸ್ತುಶಿಲ್ಪಕ್ಕೆ ಹೆಚ್ಚು ಒತ್ತು ನೀಡಿ ಕೆಂಪುಕೋಟೆ, ತಾಜಮಹಲ್, ಮಯೂರ ಸಿಂಹಾಸನವನ್ನು ನಿರ್ಮಿಸಿದ್ದ ಎಂದೆಲ್ಲ ಪಠ್ಯಪುಸ್ತಕಗಳಲ್ಲಿ ನಮೂದಿಸಲಾಗಿದೆ.

ಇತಿಹಾಸಕಾರ ಸಂತ ಅಗಸ್ಟಿನ್ ತನ್ನ 'ದಿ ಸಿಟಿ ಆಫ್ ಗಾಡ್' ಕೃತಿಯಲ್ಲಿ, ಒಳಿತು- ಕೆಡುಕು ಮತ್ತು ಸದ್ಗುಣ-ದುರ್ಗುಣಗಳ ನಡುವಿನ ಹೋರಾಟದಲ್ಲಿ ದುಷ್ಟಶಕ್ತಿಯ ಮೇಲೆ ದೈವಶಕ್ತಿ ಗಳಿಸುವ ವಿಜಯದ ಕಥೆಯೇ ಇತಿಹಾಸ ಎಂದಿದ್ದಾರೆ. ಇತಿಹಾಸವೆಂದರೆ ವಿಜಯದ ಕಥೆಯ ಹಿಂದೆ ನೋವು, ಸಂಘರ್ಷ ಎಲ್ಲವನ್ನೂ ಒಳಗೊಂಡ ಘಟನೆಗಳನ್ನು ಮುಂದಿನ ಪೀಳಿಗೆಯು ನೆನಪಿನಲ್ಲಿ ಇಡಬೇಕಾದ ಮಹತ್ವಪೂರ್ಣ ದಾಖಲೆಯಾಗಿದೆ. ಇಂದಿನ ರಾಜಕೀಯ ಸೈದ್ಧಾಂತಿಕ ತಿಕ್ಕಾಟದಿಂದ, ಇತಿಹಾಸಕ್ಕೆ ಸಂಬಂಧಿಸಿದ ಮಹತ್ವದ ಕಾಲಘಟ್ಟವೊಂದನ್ನು ತೆಗೆದುಹಾಕಿರುವುದು ಸ್ವಾಗತಾರ್ಹವಲ್ಲ. ಪಠ್ಯಪುಸ್ತಕಗಳಿಂದ ಮಕ್ಕಳಿಗೆ ನಿಜವಾದ ಇತಿಹಾಸ ತಿಳಿಯಬೇಕು. ಭವ್ಯ ಭಾರತದ ನಿರ್ಮಾಣ ಹೇಗಾಯಿತು ಎಂಬ ಇತಿಹಾಸ ಅವರಿಗೆ ಗೊತ್ತಿಲ್ಲದಿದ್ದರೆ, ಮನೆಯನ್ನು ಪೂರ್ತಿಯಾಗಿ ಕಟ್ಟಿ ಮಧ್ಯಭಾಗದಲ್ಲಿ ಇಟ್ಟಿಗೆಯನ್ನು ತೆಗೆದಂತೆ ಭಾರತದ ಇತಿಹಾಸದ ಅರಿವು ಅಪೂರ್ಣವಾಗಿ ಇರುತ್ತದೆ. ಹಾಗಾಗಿ, ಮಂಡಳಿಯು ನಿಷ್ಪಕ್ಷಪಾತವಾಗಿ ಕೆಲಸ ಮಾಡಿ, ಕೈಬಿಡಲಾದ ವಿಷಯಗಳನ್ನು ಎರಡನೇ ಭಾಗದಲ್ಲಾದರೂ ಸೇರಿಸಬೇಕು.

ಸಂತೋಷ ಕುಮಾರ್ ಎಲ್., ಹಿರಿಯೂರು

ಹೆರಿಗೆ ಆಸ್ಪತ್ರೆ: ಸೇವೆ ಸುಧಾರಿಸಲಿ

ವರ್ಷದಲ್ಲಿ ಒಂದೇ ಹೆರಿಗೆಯನ್ನು ಮಾಡಿಸಿರುವ ಸಾಗರದ ಸರ್ಕಾರಿ ಆಸ್ಪತ್ರೆಯ ಹೆರಿಗೆ ಮತ್ತು ಸ್ತ್ರೀರೋಗ ತಜ್ಞರನ್ನು ವರ್ಗಾವಣೆ ಮಾಡಲು ಜಿಲ್ಲಾ ಉಸ್ತುವಾರಿ ಸಚಿವರು ಮತ್ತು ಶಾಸಕರು ಸಲಹೆ ನೀಡಿದ್ದಾರೆ. ಆದರೆ ಇಂತಹವರನ್ನು ವರ್ಗಾವಣೆ ಮಾಡುವ ಬದಲು ಸೇವೆಯಿಂದ ಕಡ್ಡಾಯವಾಗಿ ನಿವೃತ್ತಿಗೊಳಿಸಬೇಕು. ಜೊತೆಯಲ್ಲಿ ಸರ್ಕಾರ ನಿಯಮ ರೂಪಿಸಿ, ತಾಲ್ಲೂಕಿನಲ್ಲಿ ಜನನ ಪ್ರಮಾಣದ ಅನುಪಾತಕ್ಕೆ ತಕ್ಕಂತೆ ಸರ್ಕಾರಿ ಆಸ್ಪತ್ರೆಯಲ್ಲಿ ಇಂತಿಷ್ಟು ಹೆರಿಗೆ ಮಾಡಿಸಬೇಕು ಎಂಬ ಗುರಿಯನ್ನು ನಿಗದಿಪಡಿಸಬೇಕು. ಅದಕ್ಕೆ ತಕ್ಕಂತೆ ಸೇವಾ ಸೌಲಭ್ಯಗಳಲ್ಲಿ ಸುಧಾರಣೆಯನ್ನೂ ತರಬೇಕು. ಗುರಿ ತಲುಪದ ವೈದ್ಯಾಧಿಕಾರಿಗಳ ವೇತನ ಬಡ್ತಿ, ಪದೋನ್ನತಿಯಂತಹ ಸೇವಾ ಸೌಲಭ್ಯ ತಡೆಹಿಡಿಯಬೇಕು. ಅದಕ್ಕೂ ಬಗ್ಗದೇ ಹೋದಲ್ಲಿ ಕಡ್ಡಾಯವಾಗಿ ನಿವೃತ್ತಿಗೊಳಿಸಬೇಕು.

ಗಣಪತಿ ನಾಯ್ಕ್, ಕಾನಗೋಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.

ಜಾತಿ ಗಣತಿ: ಶತಮಾನದ ಹಾದಿ


ಮುಂದಿನ ಜನಗಣತಿಯ ಜೊತೆ ಜಾತಿಗಣತಿಯನ್ನೂ ನಡೆಸುವ 'ಹಠಾತ್' ನಿರ್ಧಾರವನ್ನು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಕೈಗೊಂಡಿದೆ. ಈ 'ಅನಿರೀಕ್ಷಿತ' ತೀರ್ಮಾನದಿಂದ ಕಾಂಗ್ರೆಸ್ ಪಕ್ಷವೂ ಸೇರಿದಂತೆ ದೇಶದ ಹಲವು ರಾಜ್ಯಗಳು, ಸಮುದಾಯಗಳು ಮತ್ತು ಸಂಘಟನೆಗಳ ಒತ್ತಾಯಕ್ಕೆ ಫಲ ಸಿಕ್ಕಂತಾಗಿದೆ. ಸುಮಾರು 95 ವರ್ಷಗಳ ನಂತರ ನಡೆಯಲಿರುವ ಜಾತಿ ಗಣತಿ ಇದಾಗಲಿದೆ. ಜಾತಿಗಣತಿಯು ದೇಶದ ಹಿಂದುಳಿದ ವರ್ಗಗಳ ಅಭಿವೃದ್ಧಿಯಲ್ಲಿ ನಿರ್ಣಾಯಕ ಘಟ್ಟವಾಗಲಿದ್ದು, ವರದಿ ಪ್ರಕಟವಾದ ನಂತರ ವಿವಿಧ ಜಾತಿ, ಉಪಜಾತಿಗಳಿಂದ ಮೀಸಲಾತಿ, ಒಳಮೀಸಲಾತಿ ಬೇಡಿಕೆ ಹೆಚ್ಚಾಗಲಿದೆ ಎನ್ನುವ ವಿಶ್ಲೇಷಣೆ ನಡೆಯುತ್ತಿದೆ. ಇದರೊಂದಿಗೆ ಈ ವಿಚಾರದಲ್ಲಿ ಬಿಜೆಪಿ ಯೂ–ಟರ್ನ್ ಹೊಡೆದಿರುವ ಬಗ್ಗೆಯೂ ಚರ್ಚೆಯಾಗುತ್ತಿದೆ

● ಬಿ.ವಿ.ಶ್ರೀನಾಥ್, ಸೂರ್ಯನಾರಾಯಣ ವಿ.

ಬ್ರಿಟಿಷರ ಆಳ್ವಿಕೆಯ ಅವಧಿಯಲ್ಲಿ 1881 –1931ರ ನಡುವೆ ಪ್ರತಿ ಹತ್ತು ವರ್ಷಕ್ಕೊಮ್ಮೆ ಜನಗಣತಿ ಮಾಡಲಾಗುತ್ತಿತ್ತು. ಅದರಲ್ಲಿ ಜನರ ಜಾತಿ, ಧರ್ಮ, ವೃತ್ತಿ ಮುಂತಾದ ವಿವರಗಳನ್ನು ದಾಖಲಿಸಲಾಗುತ್ತಿತ್ತು. ಬ್ರಿಟಿಷರು ಭಾರತೀಯ ಸಮಾಜದ ಸಂಕೀರ್ಣ ಸ್ವರೂಪವನ್ನು ಅರಿಯುವುದಕ್ಕಾಗಿ ಆಗ ಜಾತಿಗಣತಿ ಮಾಡುತ್ತಿದ್ದರು ಎನ್ನಲಾಗಿದೆ.

ದೇಶಕ್ಕೆ ಸ್ವಾತಂತ್ರ್ಯ ಬಂದ ನಂತರ ನಡೆದ ಮೊದಲ ಜನಗಣತಿಯ ವೇಳೆ (1951ರಲ್ಲಿ) ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಜನಸಂಖ್ಯೆ ಹೊರತುಪಡಿಸಿ ಇತರೆ ಹಿಂದುಳಿದ ಜಾತಿಗಳ (ಒಬಿಸಿ) ಜಾತಿ, ವೃತ್ತಿ ಇತ್ಯಾದಿ ವಿವರಗಳನ್ನು ಜನಗಣತಿಯಲ್ಲಿ ನಮೂದಿಸದೇ ಇರಲು ಕೇಂದ್ರ ಸರ್ಕಾರ ತೀರ್ಮಾನಿಸಿತ್ತು. ಆದರೆ, ಎಸ್‌ಸಿ, ಎಸ್‌ಟಿ ಹೊರತುಪಡಿಸಿ ಸಾಮಾಜಿಕವಾಗಿ, ಆರ್ಥಿಕವಾಗಿ ಹಿಂದುಳಿದ ಇತರೆ ವರ್ಗಗಳ (ಒಬಿಸಿ) ಜನರಿಗೆ ಸರ್ಕಾರದ ಯೋಜನೆಗಳ ಫಲ ದಕ್ಕುವಂತೆ ಮಾಡುವ ದಿಸೆಯಲ್ಲಿ ಅಗತ್ಯವೆನಿಸಿದರೆ, ರಾಜ್ಯಗಳೇ ಒಬಿಸಿ ಗಣತಿ ಮಾಡಿಸಿ, ರಾಜ್ಯವಾರು ಪಟ್ಟಿ ತಯಾರಿಸಿಕೊಳ್ಳಬಹುದು ಎಂದು 1961ರಲ್ಲಿ ಸೂಚಿಸಿತ್ತು. ಆಗ ಒಬಿಸಿಗೆ ಮೀಸಲಾತಿ ಸೌಲಭ್ಯ ಇರಲಿಲ್ಲ.

ಭಾರತದಲ್ಲಿ ವಿವಿಧ ಸಮುದಾಯಗಳ ಜಾತಿವಾರು ಜನಸಂಖ್ಯೆಯೂ ಸೇರಿದಂತೆ ಇತರೆ ವಿವರಗಳು ಬೇಕು ಎಂದರೆ, ಲಭ್ಯವಿರುವುದು 1931ರ ಮಾಹಿತಿಯೇ. ಅದರ ನಂತರ 1941ರಲ್ಲಿಯೂ ಯುದ್ಧದ ಸಂದರ್ಭದಲ್ಲಿ ಮಾಹಿತಿ ಸಂಗ್ರಹಿಸಲಾಯಿತಾದರೂ ಅದರ ವರದಿ ಬಿಡುಗಡೆಯಾಗಿಲ್ಲ. 2011ರ ಜನಗಣತಿ ವೇಳೆ ಜಾತಿ ವಿವರಗಳನ್ನು ಸಂಗ್ರಹಿಸಲಾಯಿತಾದರೂ ನಂತರದಲ್ಲಿ ಜನಸಂಖ್ಯೆಯ ಮಾಹಿತಿ ಇರುವ ವರದಿ ಮಾತ್ರ ಬಿಡುಗಡೆಯಾಗಿತ್ತು.



2011ರಲ್ಲಿ ನಡೆದಿತ್ತು ಪ್ರಯತ್ನ

ಜಾತಿಗಣತಿ ನಡೆಸಬೇಕು ಎಂಬ ಕೂಗು ದೇಶದಲ್ಲಿ ದಶಕಗಳಿಂದ ಕೇಳಿಬರುತ್ತಿದೆ. 2010ರಲ್ಲಿ ಇತರ ಹಿಂದುಳಿದ ವರ್ಗಗಳ ಮುಖಂಡರು ಅಂದಿನ ಯುಪಿಎ ಸರ್ಕಾರದ ಮೇಲೆ ಒತ್ತಡವನ್ನೂ ತಂದಿದ್ದರು. ಆ ಬಳಿಕ, 2011ರ ಜನಗಣತಿಯ ಭಾಗವಾಗಿ ಜಾತಿಗಣತಿಯನ್ನೂ ನಡೆಸಬೇಕು ಎಂದು ಸಂಸತ್ತಿನ ಎರಡೂ ಸದನಗಳಲ್ಲಿ ನಿರ್ಣಯ ಅಂಗೀಕರಿಸಲಾಗಿತ್ತು. ಅದರಂತೆ 2011ರ ಜನಗಣತಿಯೊಂದಿಗೆ ಸಾಮಾಜಿಕ–ಆರ್ಥಿಕ ಮತ್ತು ಜಾತಿಗಣತಿಯನ್ನೂ ನಡೆಸಲಾಗಿತ್ತು. ಆದರೆ, ಸರ್ಕಾರ ಜನಗಣತಿಯ ವಿವರಗಳನ್ನು ಮಾತ್ರ ಬಹಿರಂಗಪಡಿಸಿತ್ತು. ಜಾತಿಗಣತಿ ಪ್ರಕ್ರಿಯೆ, ಮಾಹಿತಿ ಸಂಗ್ರಹ ವೈಜ್ಞಾನಿಕವಾಗಿರಲಿಲ್ಲ; ಸಂಗ್ರಹಿಸಿದ್ದ ಮಾಹಿತಿ ಅಪೂರ್ಣವಾಗಿತ್ತು ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಗ್ರಾಮೀಣ ಭಾಗದಲ್ಲಿ ಗ್ರಾಮೀಣಾಭಿವೃದ್ಧಿ ಸಚಿವಾಲಯ ಮತ್ತು ನಗರ ಪ್ರದಶಗಳಲ್ಲಿ ವಸತಿ ಮತ್ತು ನಗರ ಬಡತನ ನಿರ್ಮೂಲನೆ ಸಚಿವಾಲಯಗಳು ಜಾತಿಗಣತಿಯನ್ನು ಮಾಡಿದ್ದವು. ಈ ಗಣತಿಯ ವರದಿಯನ್ನು ಬಿಡುಗಡೆ ಮಾಡುವಂತೆ ವಿರೋಧ ಪಕ್ಷಗಳು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತಲೇ ಬಂದಿದ್ದವು. ಸರ್ಕಾರ ಬಿಡುಗಡೆ ಮಾಡದೇ ಇದ್ದುದರಿಂದ ವಿರೋಧ ಪಕ್ಷಗಳ ಟೀಕೆಗೂ ಗುರಿಯಾಗಿತ್ತು.

ಆದರೆ, 2021ರ ಜನಗಣತಿಯಲ್ಲಿ ಜಾತಿಗಣತಿಯನ್ನೂ ಸೇರ್ಪಡೆಗೊಳಿಸುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ನಿರ್ದೇಶಿಸಬೇಕು ಎಂದು ಮನವಿ ಮಾಡಿ ಮಹಾರಾಷ್ಟ್ರ ಸರ್ಕಾರ ಸುಪ್ರೀಂ ಕೋರ್ಟ್‌ನಲ್ಲಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ನ್ಯಾಯಾಲಯಕ್ಕೆ ಪ್ರಮಾಣ ಪತ್ರ ಸಲ್ಲಿಸಿತ್ತು. 2011ರ ಸಾಮಾಜಿಕ–ಆರ್ಥಿಕ ಮತ್ತು ಜಾತಿಗಣತಿಯ ವರದಿಯನ್ನು ಯಾಕೆ ಬಿಡುಗಡೆ ಮಾಡಿಲ್ಲ ಎಂಬುದನ್ನು ಪ್ರಮಾಣಪತ್ರದಲ್ಲಿ ವಿವರಿಸಿತ್ತು. ಗಣತಿಯ ಸಂದರ್ಭದಲ್ಲಿ ಆಗಿದ್ದ ತಪ್ಪುಗಳು ಮತ್ತು ಲೋಪಗಳ ಬಗ್ಗೆ ಉಲ್ಲೇಖಿಸಿತ್ತು.

'1931ರಲ್ಲಿ ನಡೆದಿದ್ದ ಗಣತಿಯ ಪ್ರಕಾರ ದೇಶದಲ್ಲಿ 4,147 ಜಾತಿಗಳಿದ್ದವು. 2011ರ ಜಾತಿ ಗಣತಿಯು 46 ಲಕ್ಷ ಜಾತಿಗಳ ಹೆಸರುಗಳನ್ನು ಹೊಂದಿತ್ತು. ಗಣತಿ ನಡೆಸಿದ ಸಂದರ್ಭದಲ್ಲಿ ಜನರು ತಮ್ಮ ಜಾತಿ, ಉಪ ಜಾತಿ, ಕುಲ, ಗೋತ್ರ ಮತ್ತು ಉಪನಾಮಗಳನ್ನು ಹೇಳಿದ್ದರಿಂದ ಅಷ್ಟೊಂದು ಸಂಖ್ಯೆಯ ಜಾತಿಗಳ ಲೆಕ್ಕ ಸಿಕ್ಕಿತ್ತು. ಇದು ಗಣತಿದಾರರಿಂದ ಆದ ತಪ್ಪು ಅಥವಾ ಸಮೀಕ್ಷೆಯ ಪ್ರಕ್ರಿಯೆಯಲ್ಲಿ ಆದ ಲೋಪಗಳು' ಎಂದು ಕೇಂದ್ರ ಸರ್ಕಾರ ಹೇಳಿತ್ತು.

ಇದಲ್ಲದೇ, ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗಣತಿ ನಡೆಸಿದ ಎರಡೂ ಸಚಿವಾಲಯಗಳಿಗೆ ಸಮೀಕ್ಷೆ ನಡೆಸಿದ ಅನುಭವವಿರಲಿಲ್ಲ. ಸಮೀಕ್ಷೆಯಲ್ಲಿ ಬಳಸಿದ ಪ್ರಶ್ನಾವಳಿಗಳು ಸಮರ್ಪಕವಾಗಿರಲಿಲ್ಲ ಎಂದೂ ಹೇಳಲಾಗಿದೆ.

ಕೇಂದ್ರದ ವ್ಯಾಪ್ತಿ

ಜನಗಣತಿಯು ಕೇಂದ್ರದ ವ್ಯಾಪ್ತಿಗೆ ಬರುವ ವಿಚಾರ. ಹಾಗಿದ್ದರೂ 2008ರ ಅಂಕಿಅಂಶಗಳ ಕಾಯ್ದೆಯು ರಾಜ್ಯ, ಸ್ಥಳೀಯ ಸಂಸ್ಥೆಗಳಿಗೂ ಅಗತ್ಯ ಅಂಕಿಅಂಶ ಸಂಗ್ರಹಿಸುವ ಅಧಿಕಾರ ನೀಡಿದೆ.

ಒಬಿಸಿ ಮೀಸಲಾತಿ ಒತ್ತಡ

1931ರ ಜನಗಣತಿಯ ಪ್ರಕಾರ, ದೇಶದ ಜನಸಂಖ್ಯೆಯಲ್ಲಿ ಒಬಿಸಿ ಪ್ರಮಾಣವು ಶೇ 52ರಷ್ಟು ಇದೆ. ದೇಶದ ಅಂದಿನ ಜನಸಂಖ್ಯೆಯಲ್ಲಿ ಒಟ್ಟು 27.1 ಕೋಟಿ ಒಬಿಸಿಗಳಿದ್ದರು. ಇದರ ಆಧಾರದಲ್ಲಿಯೇ 1980ರಲ್ಲಿ ಮಂಡಲ್ ಆಯೋಗವು ಒಬಿಸಿಗೆ ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣ ಸಂಸ್ಥೆಗಳಲ್ಲಿ ಶೇ 27ರಷ್ಟು ಮೀಸಲಾತಿ ಕಲ್ಪಿಸುವಂತೆ ಶಿಫಾರಸು ಮಾಡಿತ್ತು. 1990ರಲ್ಲಿ ಮಂಡಲ್ ವರದಿ ಜಾರಿಯಾಗಿತ್ತು.

ಉದ್ಯೋಗ ಮತ್ತು ಶಿಕ್ಷಣ ರಂಗದಲ್ಲಿ ಒಬಿಸಿ ಮೀಸಲಾತಿ ಪಡೆಯುತ್ತಿದ್ದರೂ ರಾಜಕೀಯ ರಂಗದಲ್ಲಿ ಮೀಸಲಾತಿ ನೀಡಲಾಗಿಲ್ಲ. ಆದರೆ, ಸಂವಿಧಾನದ 73 ಮತ್ತು 74ನೇ ತಿದ್ದುಪಡಿಯ ನಂತರ 243ಡಿ(6) ಮತ್ತು 243ಟಿ(6) ವಿಧಿಗಳ ಅನ್ವಯ ಪಂಚಾಯಿತಿ ಮತ್ತು ನಗರಸಭೆಗಳಲ್ಲಿ ಒಬಿಸಿಗೆ ಮೀಸಲಾತಿ ಕಲ್ಪಿಸಲಾಯಿತು. ಇದಕ್ಕಾಗಿ ಪ್ರದೇಶವಾರು ಹಾಗೂ ಜಾತಿವಾರು ಒಬಿಸಿ ಜನಸಂಖ್ಯೆ ಅಗತ್ಯವಿದೆ. ಜತೆಗೆ,1931ರ ಜನಗಣತಿಯ ಆಧಾರದಲ್ಲಿ ಸಿದ್ಧಪಡಿಸಲಾಗಿರುವ ಒಬಿಸಿ ಪಟ್ಟಿಯನ್ನು ಕಾಲದಿಂದ ಕಾಲಕ್ಕೆ ಪರಿಷ್ಕರಿಸಬೇಕು ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ (1992) ಸುಪ್ರೀಂ ಕೋರ್ಟ್ ಹೇಳಿತ್ತು. ಉತ್ತರ ಪ್ರದೇಶ, ಮಧ್ಯಪ್ರದೇಶ, ಗುಜರಾತ್, ಮಹಾರಾಷ್ಟ್ರ, ಕರ್ನಾಟಕ, ಒಡಿಶಾ ಮತ್ತು ಜಾರ್ಖಂಡ್ ರಾಜ್ಯಗಳು ಒಬಿಸಿಗಳಿಗೆ ಸ್ಥಳೀಯ ಸಂಸ್ಥೆಗಳ ಚುನಾವಣೆಗಳಲ್ಲಿ ಮೀಸಲಾತಿ ನಿಗದಿಪಡಿಸಲು ಹೊರಟಾಗ, ಹೈಕೋರ್ಟ್‌ಗಳು ಮತ್ತು ಸುಪ್ರೀಂ ಕೋರ್ಟ್ ಅದಕ್ಕೆ ತಡೆಯಾಜ್ಞೆ ನೀಡಿವೆ. ಮೀಸಲಾತಿ ಕಲ್ಪಿಸಲು ಒಬಿಸಿಗಳ ಹಿಂದುಳಿದಿರುವಿಕೆಯ ದತ್ತಾಂಶ ಬೇಕು ಎಂದು ನ್ಯಾಯಾಲಯಗಳು ಸೂಚಿಸಿವೆ.



ಜಾತಿ ಗಣತಿ ಏಕೆ ಮುಖ್ಯ?

ಭಾರತದಲ್ಲಿ ಜಾತಿ ಎನ್ನುವುದು ಚಾರಿತ್ರಿಕ ವಾಸ್ತವ; ಸಮಾಜದ ಅಡಿಪಾಯವೇ ಜಾತಿ; ಇದು ಜನರ ಸಾಮಾಜಿಕ, ಆರ್ಥಿಕ, ರಾಜಕೀಯ ಸ್ಥಿತಿಗತಿಗಳನ್ನು ರೂಪಿಸುವ ನಿರ್ಣಾಯಕ ಅಂಶ. ಯಾವ ಸಮುದಾಯದ ಸಂಖ್ಯೆ ಎಷ್ಟು, ಅವರ ವಿದ್ಯಾಭ್ಯಾಸದ ಮಟ್ಟ ಏನು, ಅದರಲ್ಲಿ ಎಷ್ಟು ಮಂದಿ ಸರ್ಕಾರಿ ಉದ್ಯೋಗಗಳಲ್ಲಿದ್ದಾರೆ, ಸಮುದಾಯಗಳ ರಾಜಕೀಯ ಪ್ರಾತಿನಿಧ್ಯ ಹೇಗಿದೆ ಇವೇ ಮುಂತಾದ ವಿವರಗಳು ಸಮಾಜದ ಸಂರಚನೆಯಲ್ಲಿರುವ ಅಸಮಾನತೆಯನ್ನು ಅರಿಯಲು, ತೊಡೆದುಹಾಕಲು ಮುಖ್ಯವೆನಿಸಿವೆ. ಜತೆಗೆ, ಮೀಸಲಾತಿ ನಿಗದಿಯೂ ಸೇರಿದಂತೆ ಸಾಮಾಜಿಕ ನ್ಯಾಯದ ತತ್ವದ ಅಡಿ ಸರ್ಕಾರವು ನೀತಿ ನಿಯಮ ರೂಪಿಸಲು, ಕಾರ್ಯಕ್ರಮ ಅನುಷ್ಠಾನ ಮಾಡಲು ಪ್ರಮುಖ ಆಕರವಾಗುತ್ತವೆ. ಚುನಾವಣೆಗಳ ಸಂದರ್ಭದಲ್ಲಿ ರಾಜಕೀಯ ಪಕ್ಷಗಳಿಗೆ ಕಾರ್ಯತಂತ್ರ ರೂಪಿಸುವಲ್ಲಿಯೂ ಈ ಮಾಹಿತಿ ಮಹತ್ವದ್ದೆನಿಸಿದೆ. ಹೊಸ ಜಾತಿಗಣತಿ ವಿವರಗಳು ಬಿಡುಗಡೆಯಾದರೆ, ಮೀಸಲಾತಿ ಪಟ್ಟಿ ಪರಿಷ್ಕರಿಸುವ, ಪ್ರಮಾಣವನ್ನು ಪುನರ್ ನಿಗದಿಪಡಿಸುವ, ಉಪಜಾತಿ ಮೀಸಲು ಕಲ್ಪಿಸುವಂತೆ ಒತ್ತಾಯಿಸುವ ಹೋರಾಟ, ಆಂದೋಲನಗಳು ದೇಶದಾದ್ಯಂತ ಹುಟ್ಟಿಕೊಳ್ಳಲಿವೆ ಎನ್ನಲಾಗಿದೆ.

ಹೇಗಿರಬೇಕು ಗಣತಿ?

ಜಾತಿಗಣತಿ ನಡೆಸುವುದು ಸ್ವಾಗತಾರ್ಹವೇ ಆದರೂ, ಅದನ್ನು ಹೇಗೆ ನಡೆಸಬೇಕು ಎನ್ನುವ ಬಗ್ಗೆಯೂ ಚರ್ಚೆಗಳು ಆರಂಭವಾಗಿವೆ. 2011ರ ಜನಗಣತಿ ವೇಳೆ ನಡೆಸಿದ ಜಾತಿಗಣತಿಯ ವೈಫಲ್ಯ ಮತ್ತು ಕೆಲವು ರಾಜ್ಯಗಳಲ್ಲಿ ಬಿಡುಗಡೆಯಾಗಿರುವ ಜಾತಿಗಣತಿ ವರದಿಗಳಲ್ಲಿ ಕಂಡುಬಂದಿವೆ ಎನ್ನಲಾಗುತ್ತಿರುವ ಲೋಪಗಳ ಕಾರಣದಿಂದ ಮುಂದಿನ ಜಾತಿಗಣತಿ ಹೇಗೆ ನಡೆಯಬೇಕು ಎನ್ನುವುದು ಮುಖ್ಯ ವಿಚಾರವಾಗಿದೆ. ಉತ್ತಮ ಪೂರ್ವತಯಾರಿಯೊಂದಿಗೆ ಅತ್ಯಂತ ವೈಜ್ಞಾನಿಕವಾಗಿ, ಜಾತಿ, ಉಪಜಾತಿ, ವೃತ್ತಿ ಮುಂತಾದ ವಿವರಗಳು ಕೈತಪ್ಪದಂತೆ ಸೂಕ್ತವಾಗಿ ಮತ್ತು ಸೂಕ್ಷ್ಮವಾಗಿ ದಾಖಲೀಕರಣ ನಡೆಯಬೇಕು ಎನ್ನುವ ಒತ್ತಾಯ ಕೇಳಿಬಂದಿದೆ.

ರಾಷ್ಟ್ರೀಯ

'ಕೇಂದ್ರ ಜಾತಿಗಣತಿಯ ಪೂರ್ಣ ಮಾಹಿತಿ ನೀಡಲಿ'

● ಶೆಮಿನ್ ಜಾಯ್

ಜನಗಣತಿ ವೇಳೆ ಜಾತಿಗಣತಿಯನ್ನೂ ನಡೆಸುವುದಾಗಿ ಘೋಷಣೆ ಮಾಡುವ ಮೂಲಕ ಮೋದಿ ಸರ್ಕಾರವು ದೇಶವನ್ನು ಅಚ್ಚರಿಗೆ ದೂಡಿದ್ದಲ್ಲದೇ, ವಿರೋಧಿ ಪಾಳಯದ ಪ್ರಮುಖ ಅಸ್ತ್ರವನ್ನು ಇಲ್ಲವಾಗಿಸಿದೆ. ಈ ಬಗ್ಗೆ ಆರ್‌ಜೆಡಿಯ ಹಿರಿಯ ಸಂಸದ ಹಾಗೂ ದೆಹಲಿ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಮನೋಜ್ ಕೆ.ಝಾ ಅವರು 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ್ದಾರೆ.

● **ಜಾತಿಗಣತಿಯ ಘೋಷಣೆಯು ನಿಮಗೆ ಅಚ್ಚರಿ ಉಂಟುಮಾಡಿದೆಯೇ?**



ಮನೋಜ್ ಝಾ, ಆರ್‌ಜೆಡಿ ಸಂಸದ

ಜಾತಿ ಆಧಾರಿತ ಗಣತಿಯನ್ನು ವಿರೋಧಿಸುತ್ತಿದ್ದ ಪಕ್ಷವೇ ಈಗ ಈ ನಿರ್ಧಾರ ತೆಗೆದುಕೊಂಡಿರುವುದು ವಿಸ್ಮಯ ಮೂಡಿಸಿದೆ. ಅವರ ಹಿರಿಯ ನಾಯಕರು ಜಾತಿಗಣತಿ ಬಗ್ಗೆ ಅಪಹಾಸ್ಯ ಮಾಡಿದ್ದರು, ಇದು ಜನರನ್ನು ಒಡೆಯುವ ತಂತ್ರ ಎಂದಿದ್ದರು. ವೈಜ್ಞಾನಿಕವಾದ, ನೈಜವಾದ ಅಂಕಿಅಂಶ ಇಲ್ಲದೇ ಯಾವುದೇ ರೀತಿಯ ಅಭಿವೃದ್ಧಿ ಯೋಜನೆಗಳು, ನೀತಿಗಳು ಅರ್ಥಹೀನ ಎನ್ನುವುದು ಅವರಿಗೆ ಅರ್ಥವಾಗಿದೆಯೇ ಎನ್ನುವುದು ನನ್ನ ಪ್ರಶ್ನೆ.

● **ಪಹಲ್ಗಾಮ್ ದಾಳಿ ನಂತರ ಭದ್ರತೆಗೆ ಸಂಬಂಧಿಸಿದ ವಿಚಾರ ಚರ್ಚೆಯಲ್ಲಿರುವಾಗ ಈ ಘೋಷಣೆ ಹೊರಬಿದ್ದಿರುವುದು ವಿಚಿತ್ರ ಎನ್ನಿಸುತ್ತಿದೆಯೇ?**

ಬೇನಾಮಿ ಸಾರ್ವಜನಿಕ ಹಿತಾಸಕ್ತಿಯ ಅರ್ಜಿಗಳ ಮೂಲಕ ಪರೋಕ್ಷವಾಗಿ ಅವರು ಬಿಹಾರದಲ್ಲಿ ಜಾತಿಗಣತಿಯನ್ನು ನಿಲ್ಲಿಸಲು ಪ್ರಯತ್ನಿಸಿದರು. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ವಿಚಾರವೇನೆಂದರೆ, ಜಾತಿಗಣತಿ ವಿಚಾರ ಪ್ರಸ್ತಾಪ ಮಾಡಿದಾಗ ವಿ ಪಕ್ಷಗಳ ನಾಯಕರು ಅಪಹಾಸ್ಯ ಮಾಡಿದ್ದರು. ಈಗ ಬಿಜೆಪಿ ವಾಸ್ತವಕ್ಕೆ ಕಣ್ಣು ತೆರೆದಿದೆ ಎಂದರೆ, ನನ್ನ ಪ್ರಕಾರ, ಇದು ಶೇ 85 ಮಂದಿಯ ಜಯ. ಈ ಬಗ್ಗೆ 'ಬಟೇಂಗೇ ತೋ ಕಾಟೇಂಗೇ' ಎಂದು ವಿವಿಧ ರೀತಿಯಲ್ಲಿ ಅವಮಾನಿಸುವಂತೆ ಮಾತನಾಡಿದ್ದ ಅವರ ಮುಖ್ಯಮಂತ್ರಿಗಳು ಹಾಗೂ ಹಿರಿಯ ನಾಯಕರ ಗತಿ ಏನು ಎನ್ನುವುದು ನನ್ನ ಆತಂಕವಾಗಿದೆ. ಅವರು ಈಗ ತಮ್ಮ ಮುಖವನ್ನು ಎಲ್ಲಿ ಬಚ್ಚಿಟ್ಟುಕೊಳ್ಳುತ್ತಾರೆ?

● **ಜಾತಿಗಣತಿ ಘೋಷಣೆಗೆ ಬಿಹಾರ ಚುನಾವಣೆ ಕಾರಣವೇ?**

ಒಂದು ಚಿಂತನೆಯನ್ನು ಬಹಳ ಕಾಲ ಅದುಮಿಟ್ಟುಕೊಳ್ಳಲು ಸಾಧ್ಯವಿಲ್ಲ. ಹಿಂದೆ ಏಕೆ ಅದನ್ನು ಸ್ಥಗಿತಗೊಳಿಸಿದ್ದರು ಎನ್ನುವುದರ ಬಗ್ಗೆ ಅವರು ಗಂಭೀರ ಪ್ರಶ್ನೆಗಳನ್ನು ಎದುರಿಸಬೇಕಿದೆ. ಬಿಹಾರದಲ್ಲಿ ಮೀಸಲಾತಿ ಪ್ರಮಾಣ ನಿಗದಿತ ಪ್ರಮಾಣಕ್ಕಿಂತ ಹೆಚ್ಚಾದಾಗ, ಅದನ್ನು ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸುವಂತೆ ನಾವು ಅವರನ್ನು ವಿನಂತಿಸಿದ್ದೆವು. ಸ್ವತಃ ಪ್ರಧಾನ ಮಂತ್ರಿಯವರೇ ಅನೇಕ ವೇದಿಕೆಗಳಲ್ಲಿ ಜಾತಿಗಣತಿ ವಿರುದ್ಧವಾಗಿ ಮಾತನಾಡಿದ್ದಾರೆ. ಅವರು ಈಗ ಬಿಹಾರ ಚುನಾವಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡು ಜಾತಿಗಣತಿ ಘೋಷಣೆ ಮಾಡಿದ್ದರೆ, ಜನ ಅಂತಿಮವಾಗಿ ಯಾರು ಇದರ ಮೂಲ ಕರ್ತೃಗಳು ಎನ್ನುವುದನ್ನು ಅರಿಯುತ್ತಾರೆ ಎನ್ನುವುದನ್ನು ಅವರಿಗೆ ಹೇಳಲಿಚ್ಛಿಸುತ್ತೇನೆ.

● **ಸರ್ಕಾರ ಸಂಪೂರ್ಣ ಮಾಹಿತಿ ಕೊಟ್ಟಿಲ್ಲವೇಕೆ ?**

ಜನಗಣತಿಯನ್ನು ಅವರು ಕೆಲಸಕ್ಕೆ ಬಾರದ ಮಟ್ಟಕ್ಕೆ ಇಳಿಸಿದ್ದಾರೆ. 2021ರಲ್ಲೇ ಜನಗಣತಿ ನಡೆಯಬೇಕಿತ್ತು. ಈಗ ಜಾತಿ ಗಣತಿಯನ್ನು ದಶವಾರ್ಷಿಕ ಗಣತಿ ಜೊತೆ ಸೇರಿಸಿದ್ದಾರೆ. ಜನಗಣತಿಯನ್ನು ಕ್ಷೇತ್ರ ಪುನರ್ ವಿಂಗಡಣೆ ಜೊತೆ ಸೇರಿಸಲಾಗಿದೆ. ಲೋಕಸಭೆ ಮತ್ತು ವಿಧಾನಸಭೆಗಳಲ್ಲಿ ಮಹಿಳೆಯರ ಮೀಸಲಾತಿ ಪ್ರಮಾಣವು ಜನಗಣತಿ ಮತ್ತು ಕ್ಷೇತ್ರ ಪುನರ್ ವಿಂಗಡಣೆಯನ್ನು ಅವಲಂಬಿಸಿದೆ. ಹೀಗೆ ಸಾಕಷ್ಟು ಸಂಗತಿಗಳನ್ನು ಒಟ್ಟಿಗೆ ಸೇರಿಸಿದ್ದಾರೆ. ಜಾತಿಗಣತಿಗೆ ಯಾವ ರೀತಿಯ ವೈಜ್ಞಾನಿಕ ಕ್ರಮಗಳನ್ನು ಅನುಸರಿಸುತ್ತಿದ್ದೇವೆ, ಎಷ್ಟು ಕಾಲಮಿತಿಯನ್ನು ಹಾಕಿಕೊಂಡಿದ್ದೇವೆ ಎನ್ನುವುದನ್ನು ಕೇಂದ್ರ ಸರ್ಕಾರವು ಜನರ ಮುಂದೆ ಇಡಬೇಕು.

● **ವಿಪಕ್ಷಗಳು ಜಾತಿ ಗಣತಿಯನ್ನು ರಾಜಕೀಯ ಲಾಭಕ್ಕೆ ಬಳಸುತ್ತಿವೆ ಎನ್ನುತ್ತಿದ್ದಾರೆ. ನೀವು ಅದಕ್ಕೆ ಏನನ್ನುತ್ತೀರಿ ?**

ಅವರ ತಿಳಿವಳಿಕೆಯ ಟೊಳ್ಳುತನವನ್ನು ಕಂಡು ನನಗೆ ಆಶ್ಚರ್ಯ ಎನ್ನಿಸಿದೆ. ಇದೊಂದು ಗಂಭೀರ ಸಾಮಾಜಿಕ ಹಾಗೂ ಮಾನವ ಶಾಸ್ತ್ರೀಯ ವಿಚಾರ. ಸಚಿವ ಅಶ್ವಿನಿ ವೈಷ್ಣವ್ ಸುಶಿಕ್ಷಿತರು. ಜಾತಿ ಎಂದರೇನು ಎನ್ನುವುದನ್ನು ವಾಸ್ತವಿಕವಾಗಿ ಅರ್ಥ ಮಾಡಿಕೊಳ್ಳಿ ಎಂದು ಅವರಿಗೆ ಸಲಹೆ ನೀಡುತ್ತೇನೆ. ಜಾತಿ ಮತ್ತು ವರ್ಗ ಏಕೆ ಒಟ್ಟಿಗೆ ಹೋಗುತ್ತವೆ? ಕೆಲವು ಜಾತಿಗಳು ಅವುಗಳಿಗೆ ಸಿಗಬೇಕಾದಷ್ಟು ಪ್ರಾತಿನಿಧ್ಯದಿಂದ ಏಕೆ ವಂಚಿತವಾಗಿವೆ? ಇವು ಇವತ್ತಿನ ಚರ್ಚಾ ವಿಚಾರಗಳಾಗಿವೆ. ಇವು ರಾಜಕೀಯ ವಿಚಾರಗಳು ಎಂದರೆ, ವೈಷ್ಣವ್ ಏನು ಹೇಳುತ್ತಿದ್ದಾರೋ ನನಗೆ ಅರ್ಥವಾಗುತ್ತಿಲ್ಲ.

ಬಿಜೆಪಿಯ ಯೂ–ಟರ್ನ್

ಬಿಜೆಪಿಯು ಆರಂಭದಿಂದಲೂ ಜಾತಿ ಗಣತಿಯ ವಿರೋಧಿ ನಿಲುವು ಹೊಂದಿತ್ತು. ಮುಂದಿನ ಜನಗಣತಿಯಲ್ಲಿ ಜಾತಿ ಗಣತಿಯನ್ನು ಮಾಡಲಾಗುವುದಿಲ್ಲ ಎಂದು ಬಿಜೆಪಿ ಸರ್ಕಾರ 2021ರಲ್ಲಿ ಸುಪ್ರೀಂ ಕೋರ್ಟ್‌ಗೆ ತಿಳಿಸಿತ್ತು. ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಬಿಜೆಪಿಯ ಕೇಂದ್ರ ಸಚಿವರು, ಸಂಸದರು, ಮುಖಂಡರು ಎಲ್ಲರೂ ಜಾತಿಗಣತಿಯನ್ನು ವಿರೋಧಿಸಿದವರೇ. ಜಾತಿ ಗಣತಿ ಪರವಾಗಿ ಮಾತನಾಡಿದ್ದ ರಾಹುಲ್ ಗಾಂಧಿ ಸೇರಿದಂತೆ ಕಾಂಗ್ರೆಸ್ ನಾಯಕರ ವಿರುದ್ಧ ಬಿಜೆಪಿ ಮುಖಂಡರು ವಾಗ್ದಾಳಿ ನಡೆಸಿದ್ದರು. ಪ್ರಧಾನಿ ಮೋದಿ ಅವರು ಜಾತಿಗಣತಿಯ ಬೇಡಿಕೆ 'ನಗರ ನಕ್ಸಲ್ ಯೋಚನೆ' ಎಂದು ಕಾಂಗ್ರೆಸ್ ಅನ್ನು ಟೀಕಿಸಿದ್ದರು. ಆದರೆ, ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ ಈಗ ತನ್ನ ನಿಲುವಿಗೆ ವಿರುದ್ಧವಾದ ನಿರ್ಧಾರ ತೆಗೆದುಕೊಂಡು ಯೂ–ಟರ್ನ್ ಹೊಡೆದಿದೆ.

ರಾಜಕೀಯ ಲಾಭದ ಲೆಕ್ಕಾಚಾರವೇ?: ಈ ನಿರ್ಧಾರದ ಹಿಂದೆ ರಾಜಕೀಯ ಲಾಭ ಪಡೆಯುವ ಲೆಕ್ಕಾಚಾರ ಇದೆ ಎಂದು ಹೇಳಲಾಗುತ್ತಿದೆ. ಮುಂದಿನ ಚುನಾವಣೆಗಳಲ್ಲಿ ಪಕ್ಷದ ಪರವಾಗಿ ಜನಾಭಿಪ್ರಾಯ ರೂಪುಗೊಳ್ಳಲು ಇದು ನೆರವಾಗಲಿದೆ ಎನ್ನುವ ಲೆಕ್ಕಾಚಾರವೂ ಇರಬಹುದು ಎಂದು ರಾಜಕೀಯ ತಜ್ಞರು ವಿಶ್ಲೇಷಿಸುತ್ತಿದ್ದಾರೆ. ಜಾತಿಗಣತಿ ನಡೆಸುವ ಬಗ್ಗೆ ಜೆಡಿಯು ಸೇರಿದಂತೆ ಮೈತ್ರಿಪಕ್ಷಗಳಿಂದ ಬಿಜೆಪಿಯ ಮೇಲೆ ಒತ್ತಡ ಇದ್ದಿರಬಹುದು ಎಂದೂ ಹೇಳಲಾಗುತ್ತಿದೆ.

ಗಮನಾರ್ಹ ಸಂಗತಿ ಎಂದರೆ, ಕಳೆದ ವರ್ಷ ಆರ್‌ಎಸ್‌ಎಸ್ ಕೂಡ ಜಾತಿಗಣತಿಯ ಪರವಾಗಿ ಮಾತನಾಡಿತ್ತು. ಕೇರಳದ ಪಾಲಕ್ಕಾಡ್‌ನಲ್ಲಿ 2024ರ ಸೆಪ್ಟೆಂಬರ್ 2ರಂದು ನಡೆದಿದ್ದ ಸಂಘದ ಸಭೆಯಲ್ಲಿ ಆರ್‌ಎಸ್‌ಎಸ್‌ನ ರಾಷ್ಟ್ರೀಯ ಮಾಧ್ಯಮ ಉಸ್ತುವಾರಿ ಸುನಿಲ್ ಅಂಬೇಕರ್ ಅವರು ಮಾತನಾಡುತ್ತಾ, 'ಹಿಂದುಳಿದ ಮತ್ತು ದುರ್ಬಲ ಸಮುದಾಯಗಳ ಕಲ್ಯಾಣದ ಉದ್ದೇಶ ಹೊಂದಿದ್ದ ಜಾತಿಗಣತಿಯನ್ನು ಸಂಘವು ಯಾವತ್ತೂ ಆಕ್ಷೇಪಿಸಿಲ್ಲ. ಆದರೆ, ಇದೇ ಸಮಯದಲ್ಲಿ ಚುನಾವಣಾ ಲಾಭಕ್ಕಾಗಿ ಈ ಗಣತಿಯನ್ನು ಬಳಸಬಾರದು' ಎಂದು ಹೇಳಿದ್ದರು.

ಆಧಾರ: ಪಿಟಿಐ, ಮಾಧ್ಯಮ ವರದಿಗಳು, ಎಕ್ಸ್ ಪೋಸ್ಟ್‌ಗಳು

ಆಗ ತೆಗಳಿಕೆ, ಈಗ ಹೊಗಳಿಕೆ

ಜಾತಿಗಣತಿ ನಡೆಸುವ ಕೇಂದ್ರ ಸರ್ಕಾರದ 'ಹಠಾತ್' ನಿರ್ಧಾರವನ್ನು ಬಿಜೆಪಿ ನಾಯಕರು ಈಗ 'ಐತಿಹಾಸಿಕ ನಿರ್ಧಾರ' ಎಂದು ಹೊಗಳುತ್ತಿದ್ದಾರೆ. ಆದರೆ, ಹಿಂದೆ ಜಾತಿಗಣತಿಯು 'ಸಮಾಜ ವಿಭಜಿಸುವ ರಾಜಕಾರಣ' ಎಂದು ತೆಗಳಿದ್ದರು. ಕರ್ನಾಟಕದಲ್ಲಿ ಜಾತಿಗಣತಿ ವರದಿಯನ್ನು ಕಾಂಗ್ರೆಸ್ ಸರ್ಕಾರ ಅಂಗೀಕರಿಸಿದಾಗ ರಾಜ್ಯ ಬಿಜೆಪಿ ನಾಯಕರು ಅದರ ವಿರುದ್ಧವಾಗಿ ಮಾತನಾಡಿದ್ದರು.



ಜಾತಿಗಣತಿ ನಡೆಸಬೇಕು ಎನ್ನುವ ಬೇಡಿಕೆಯು ನಗರ ನಕ್ಸಲ್ ಯೋಚನೆಯಾಗಿದೆ

ನರೇಂದ್ರ ಮೋದಿ, ಪ್ರಧಾನಿ

(2024ರ ಚುನಾವಣೆಗೂ ಮುನ್ನ ನಡೆದ ಮಾಧ್ಯಮ ಸಂದರ್ಶನದಲ್ಲಿ ನೀಡಿದ ಹೇಳಿಕೆ)



ನಮ್ಮನ್ನು ಒಡೆದರೆ, ನಾವು ನಾಶವಾಗುತ್ತೇವೆ (ಬಟೇಂಗೇ ತೋ ಕಾಟೇಂಗೆ). ಬಾಂಗ್ಲಾದೇಶದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದೇವಲ್ಲಾ. ಅಲ್ಲಿ ಆಗಿರುವ ತಪ್ಪು ಇಲ್ಲಿ ಆಗಬಾರದು. ನಾವೆಲ್ಲಾ ಒಂದಾಗಿದ್ದರೆ ಸುರಕ್ಷಿತವಾಗಿರುತ್ತೇವೆ

ಯೋಗಿ ಆದಿತ್ಯನಾಥ, ಉತ್ತರ ಪ್ರದೇಶ ಮುಖ್ಯಮಂತ್ರಿ

(2024ರ ನವೆಂಬರ್‌ನಲ್ಲಿ ಮಹಾರಾಷ್ಟ್ರ ವಿಧಾನಸಭಾ ಚುನಾವಣಾ ಪ್ರಚಾರದಲ್ಲಿ ನೀಡಿದ ಹೇಳಿಕೆ)

ಈ ಅವೈಜ್ಞಾನಿಕ ಜಾತಿ ಗಣತಿಯು ಹಿಂದೂಗಳನ್ನು ವಿಭಜಿಸುವುದು ಬಿಟ್ಟು ಬೇರೇನೂ ಮಾಡದು #ಒಡೆದುಆಳುವನೀತಿ #ಸ್ಕ್ಯಾಂಗ್ರೆಸ್ #ಹಿಂದೂವಿರೋಧಿಕಾಂಗ್ರೆಸ್ #ಬೋಗಸ್‌ಜಾತಿಗಣತಿ

ಬಿಜೆಪಿ ಕರ್ನಾಟಕ

(ಜಾತಿಗಣತಿ ವರದಿಯನ್ನು ರಾಜ್ಯ ಸರ್ಕಾರ ಅಂಗೀಕರಿಸಿದ ಸಂದರ್ಭದಲ್ಲಿ ಬಿಜೆಪಿ ರಾಜ್ಯ ಘಟಕ 2025ರ ಏ.12ರಂದು ಎಕ್ಸ್‌ನಲ್ಲಿ ಮಾಡಿದ ಟ್ವೀಟ್)

ಗುಂಡಣ್ಣ



ಜೀವನ ಪಾಠಶಾಲೆ

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

186

ಜೀವನ ಒಂದು ಪಾಠಶಾಲೆ. ಅದು ಕಲಿಸುತ್ತದೆ. ಜೀವನದಲ್ಲಿ ಸೋಲು ಬರುತ್ತದೆ. ಬಡತನ ಬರುತ್ತದೆ. ನೋವುಗಳು ಬರುತ್ತವೆ. ನಿರಾಸೆ ಬರುತ್ತದೆ. ನಿಂದೆಗಳು, ವೈರಿಗಳ ಚುಚ್ಚುಮಾತುಗಳೂ ಬರುತ್ತವೆ. ಇದೆಲ್ಲವನ್ನೂ ಮೀರಿ ಬದುಕುವುದನ್ನು ಪುಸ್ತಕ ಓದಿ ಕಲಿಯಲು ಸಾಧ್ಯವಿಲ್ಲ. ಜಗತ್ತು ನೋಡಿ ಕಲಿಯಬೇಕಾಗುತ್ತದೆ. ನಾವು ಆಗಾಗ 'ನಮ್ಮ ಕಷ್ಟದ ಕಾಲಕ್ಕೆ ಯಾರೂ ಆಗಲಿಲ್ಲ. ನಾವು ಎಷ್ಟು ಮಂದಿಗೆ ಸಹಾಯ ಮಾಡಿದ್ದೆವು' ಎಂದು ಬಹಳ ತಾಪ ಮಾಡಿಕೊಳ್ಳುತ್ತೇವೆ. 'ನಮಗೆ ಇದ್ದಾಗ ಎಲ್ಲರೂ ಬಂದರು. ಕಷ್ಟದ ಕಾಲಕ್ಕೆ ಯಾರೂ ಬರಲಿಲ್ಲ' ಎಂದು ಬೇಸರ ಮಾಡಿಕೊಳ್ಳುತ್ತೇವೆ. ಆದರೆ, 'ನಾನು ಸಂತೋಷವಾಗಿದ್ದಾಗ ನನ್ನ ಹತ್ತೂ ಬೆರಳುಗಳು ಒಟ್ಟು ಸೇರಿ ಚಪ್ಪಾಳೆ ಹೊಡೆಯುತ್ತವೆ. ನಾನು ದುಃಖದಲ್ಲಿದ್ದಾಗ ಕಣ್ಣೀರು ಒರೆಸಲು ಒಂದೇ ಬೆರಳು ಬರುತ್ತದೆ ಎಂದ ಮೇಲೆ ನನ್ನ ಕಷ್ಟಗಳನ್ನು ಬಗೆಹರಿಸಲು ಮಂದಿ ಯಾಕೆ ಬರುತ್ತಾರೆ' ಎಂಬ ಸತ್ಯ ನಮಗೆ ಅರ್ಥವಾಗಬೇಕು. ಮಂದಿಯನ್ನು ನಿರೀಕ್ಷೆ ಮಾಡಬಾರದು.

ಬಡತನ ಬಂದರೆ ಬಡತನವನ್ನು ಕಲಿಯುವುದು. ತುಂಬಿದ ಜೇಬು ನೂರು ಆಟ ಕಲಿಸಿದರೆ ಖಾಲಿ ಜೇಬು ನೂರು ಪಾಠ ಕಲಿಸುತ್ತದೆ. ವೈರಿಗಳು ಇರುತ್ತಾರೆ. ನಮ್ಮ ಮಗ್ಗುಲಲ್ಲೇ ಇರುತ್ತಾರೆ. ನಮಗೆ ನೂರು ಮಂದಿ ವೈರಿಗಳು ಇದ್ದಾರೆ ಎಂದು ಅವರ ತಲೆ ತೆಗೆಯಲು ಆಗುತ್ತದೇನು? ಅದಕ್ಕೆ ನಾವೇನು ಮಾಡಬೇಕು ಎಂದರೆ ನಮ್ಮ ತಲೆಯಿಂದ ವೈರಿಗಳನ್ನು ತೆಗೆದುಬಿಡಬೇಕು. ಆಗ ಜೀವನ ಸಾರ್ಥಕ ಆಗುತ್ತದೆ. ಬಹಳ ಮಂದಿ, 'ನಮಗ ನಿಂದೆ ಮಾಡುತ್ತಾರೆ' ಎನ್ನುತ್ತೀರಿ. ಊರ ಮುಂದಿನ ಬಾವಿ ಮುಚ್ಚಬಹುದು. ಊರ ಮಂದಿಯ ಬಾಯಿ ಮುಚ್ಚಲು ಸಾಧ್ಯವಿಲ್ಲ. ನಮ್ಮ ಇಚ್ಛೆಯಂತೆ ಜಗತ್ತು ನಡೆಯುವುದಿಲ್ಲ. ಜಗದ ಇಚ್ಛೆಗೆ ಹೊಂದಿಕೊಂಡು ಬದುಕುವುದನ್ನು ಕಲಿಯಬೇಕು ಮನುಷ್ಯ. ಇರುವುದನ್ನು ಇರುವಂತೆಯೇ ಸ್ವೀಕರಿಸುವುದಕ್ಕೆ ಬುದ್ಧ ಎಂದು ಕರೆಯುತ್ತಾರೆ. ವಯಸ್ಸಾತು ಎನ್ನುವುದನ್ನು ಒಪ್ಪಿಕೊಳ್ಳಬೇಕು. ಮುಪ್ಪು ಬಂದ ಮೇಲೆ ಗಪ್ಪು ಇರಬೇಕು ಎನ್ನುವುದನ್ನು ಕಲಿಯಬೇಕು. ನಾನು ಇರುವುದು ವರ್ತಮಾನದಲ್ಲಿ. ನನ್ನ ಬಯಕೆಗಳು ಇರುವುದು ಭವಿಷ್ಯದಲ್ಲಿ. ಅಂದರೆ ವರ್ತಮಾಕ್ಕೂ ಭವಿಷ್ಯಕ್ಕೂ ಬಹಳ ಅಂತರ ಇದೆ. ವರ್ತಮಾನದಲ್ಲಿ ಸಂತೋಷ ಪಡೋದನ್ನು ಕಲಿಯಬೇಕು.

ಒಬ್ಬ ಗುರು ಇದ್ದರು. ಅವರಿಗೆ ಮೂವರು ಶಿಷ್ಯರಿದ್ದರು. ಒಂದು ದಿನ ಮೂವರಿಗೂ ಊಟಕ್ಕೆ ಹಾಕಿದರು. ಒಬ್ಬನಿಗೆ ಬಂಗಾರದ ತಟ್ಟೆ, ಇನ್ನೊಬ್ಬನಿಗೆ ಬೆಳ್ಳಿತಟ್ಟೆ ಮತ್ತು ಮತ್ತೊಬ್ಬನಿಗೆ ಮಣ್ಣಿನ ತಟ್ಟೆಯಲ್ಲಿ ರೊಟ್ಟಿ ಹಾಕಿದರು. ಊಟವಾದ ಮೇಲೆ ಮಣ್ಣಿನ ತಟ್ಟೆಯಲ್ಲಿ ಊಟ ಮಾಡಿದವನು ಗುರುಗಳಿಗೆ, 'ನೀವು ನಮಗೆ ತಾರತಮ್ಯ ಮಾಡಿದಿರಿ. ಒಬ್ಬನಿಗೆ ಬಂಗಾರ, ಒಬ್ಬನಿಗೆ ಬೆಳ್ಳಿ ತಟ್ಟೆ, ನನಗೆ ಮಣ್ಣಿನ ತಟ್ಟೆಯಲ್ಲಿ ಊಟ ಹಾಕಿದಿರಿ. ಇದು ಸರಿಯಲ್ಲ' ಎಂದ. ಅದಕ್ಕೆ ಗುರುಗಳು, 'ನೀನು ತಟ್ಟೆಯನ್ನು ಯಾಕೆ ನೋಡಿದೆ. ತಟ್ಟೆಯೊಳಗೆ ಇರುವ ರೊಟ್ಟಿ ಎಲ್ಲರಿಗೂ ಒಂದೇ ಇತ್ತಲ್ಲ' ಎಂದು ಉತ್ತರಿಸಿದರು. ನಾವು ಹಾಗೆಯೇ ಒಬ್ಬ ಶ್ರೀಮಂತ ಇರಬಹುದು, ಒಬ್ಬ ಬಡವ ಇರಬಹುದು. ಆದರೆ ನಮಗೆ ಸಿಕ್ಕ ಬದುಕು ಒಂದೇ ಎನ್ನುವುದನ್ನು ತಿಳಿದು ಬದುಕಬೇಕು. ಹೀಗೆ ಸುಂದರವಾಗಿ ಬದುಕಿ ಹೋಗುವುದೇ ಸರಿಯಾದ ಕ್ರಮ. ❖

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಮೇ 2, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಶುಕ್ಲ ಪಂಚಮಿ ಗಂ.9-15 ನಕ್ಷತ್ರ: ಆರ್ದ್ರಾ ಗಂ. 13-04 ಯೋಗ: ಸುಕರ್ಮಾ ಗಂ. 5-39 ನಂತರ ಧೃತಿ ಗಂ.27-20 ಕರಣ: ಬಾಲವ ಗಂ. 9-15, ಮೇಷ ಮಾಸದ 19 ನೇ ದಿನ.

ರಾಹುಕಾಲ: ಬೆಳಿಗ್ಗೆ 10-30 – 12-00

ಸೂರ್ಯೋದಯ : 06-12 ಸೂರ್ಯಾಸ್ತ : 06-43

ಮುಸ್ಲಿಂ ದಿನಾಂಕ : 03 ಜುಲ್ಖಾಯಿದ್

ದಿನ ವಿಶೇಷ : ಶಂಕರಾಚಾರ್ಯ ಜಯಂತಿ, ಅದೃಷ್ಟ ಸಂಖ್ಯೆ : 9, 10

ಮೇಷ: ಮಕ್ಕಳ, ವೃದ್ಧರ ಹಾಗೂ ಕೈಲಾಗದವರ ಸೇವೆ ಮಾಡುವುದು ಧರ್ಮವನ್ನು ಸಂಪಾದಿಸಲು ಸಹಾಯಕ. ಶತ್ರುಗಳ ವಿರುದ್ಧ ಸನ್ಮಾರ್ಗದ ಸೇಡನ್ನು ತೀರಿಸಿಕೊಳ್ಳಲು ಅವಕಾಶ ಸಿಗುವುದು.

ವೃಷಭ: ಕೆಲಸವನ್ನು ಮಾಡುವಾಗ ಮೊದಲಿಂದ ಕಡೆ ತನಕ ಗಮನವನ್ನು ಕೊಡುವಿರಿ. ಸೈಕ್ಲಿಂಗ್ ಅಥವಾ ಜಾಗಿಂಗ್‌ನಂಥ ದೈಹಿಕ ಚಟುವಟಿಕೆಗಳಿಂದಾಗಿ ಉಲ್ಲಾಸ ದಿನ ಆಗಲಿದೆ.

ಮಿಥುನ: ತಂದೆ ತಾಯಿ ಮುಂದೆ ಮುಜುಗರ ಪಡುವಂಥ ಸನ್ನಿವೇಶ ಉಂಟಾಗುವುದು. ಸಮಯವೇ ಸರಿ ತಪ್ಪುಗಳನ್ನು ತಿಳಿಹೇಳುತ್ತದೆ. ಕಡೆ ಸಮಯದವರೆಗೂ ಪ್ರಯತ್ನ ಪ್ರಾಮಾಣಿಕವಾಗಿದ್ದಲ್ಲಿ ವ್ಯವಹಾರದಲ್ಲಿ ಜಯ.

ಕರ್ಕಾಟಕ: ಹೊಸ ಪ್ರಯೋಗಗಳನ್ನು ಮಾಡುವ ಹಾಗೂ ಹೊಸದನ್ನು ಕಲಿಯುವ ಅವಕಾಶ ಸಿಗಲಿದೆ. ಯೋಜನೆಗಳ ಬಗ್ಗೆ ಇತರರಿಗೆ ವಿಶ್ವಾಸ ಇಲ್ಲದಿರಬಹುದು. ಅವರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಮುಂದಡಿಯಿಡಿ.

ಸಿಂಹ: ಜನರು ಪರಿಸ್ಥಿತಿಯನ್ನು ವಿಭಿನ್ನ ದೃಷ್ಟಿಯಿಂದ ನೋಡುವುದನ್ನು ತಿಳಿಸಿಕೊಡಲಿದ್ದಾರೆ. ಅನುಭವಿಸುವ ಸರಿಯಾಗಿರುವಂತೆ ತೀರ್ಮಾನಿಸಿ. ಕಾಲೇಜಿನಲ್ಲಿ ಅಧ್ಯಾಪಕ ವೃತ್ತಿ ದೊರೆಯುವ ಸಂಭವವಿದೆ.

ಕನ್ಯಾ: ವಿದೇಶದಲ್ಲಿ ವಾಸ ಮಾಡುವವರಿಗೆ ಮತ್ತು ವೃತ್ತಿ ಮಾಡುವವರಿಗೆ ನಿರ್ಭಯದ ವಾತಾವರಣದಿಂದ ಉತ್ಸಾಹ. ಆತ್ಮೀಯರು ಪ್ರೀತಿ-ವಿಶ್ವಾಸ ವ್ಯಕ್ತಪಡಿಸುತ್ತಾರೆ. ಮನಸ್ಸಿನ ಬಯಕೆ ಸುಲಭವಾಗಿ ಈಡೇರುವುದು.

ತುಲಾ: ದುರಹಂಕಾರ ವ್ಯಕ್ತಪಡಿಸಿದಲ್ಲಿ ತೊಂದರೆಗೆ ಸಿಲುಕುವ ಸಂಭವವಿದೆ. ಆಸ್ತಿಯ ಬಗ್ಗೆ ಯೋಚಿಸದೆ ಶ್ರಮದಿಂದ ದುಡಿಯುವ ಬಗ್ಗೆ ಗಮನಹರಿಸಿ. ನಿರೀಕ್ಷೆಗೆ ತಕ್ಕ ಪ್ರತಿಕ್ರಿಯೆಯಿಂದ ಮಾನಸಿಕ ನೆಮ್ಮದಿ ಉಂಟಾಗುತ್ತದೆ.

ವೃಶ್ಚಿಕ: ಸಂಘ-ಸಂಸ್ಥೆಯ ಅಧಿಕಾರಿಗಳಿಗೆ ಎಲ್ಲವೂ ಅವರ ನಿಯಂತ್ರಣಕ್ಕೆ ಸಿಗುವುದರಿಂದ ನೆಮ್ಮದಿ ಉಂಟಾಗುತ್ತದೆ. ಉದ್ಯಮಿಗಳಿಗೆ ನೂತನವಾಗಿ ಹಣ ಹೂಡಿಕೆಗೆ ಒತ್ತಾಯ ಬರಲಿದೆ. ಮಿತವಾಗಿ ಮುದುವರಿಯಬಹುದು.

ಧನು: ಅಪೇಕ್ಷಿಸಿದ ಅವಶ್ಯಕ ವಸ್ತುಗಳ ಗಳಿಕೆಯಿಂದ ಅಧಿಕ ಸಂತೋಷ ವೃದ್ಧಿ. ಕಾನೂನು ವಿದ್ಯಾರ್ಥಿಗಳಿಗೆ ಪರಿಶ್ರಮ ಅಗತ್ಯವಿದ್ದು, ಅನುಭವಕ್ಕೆಂದು ಹಿರಿಯ ವಕೀಲರ ಸಹಾಯಕನಾಗಿ ಸೇರಿಕೊಳ್ಳುವುದು ಉತ್ತಮ.

ಮಕರ: ಪಾಲುದಾರಿಕೆ ವ್ಯವಹಾರದಲ್ಲಿ ನಷ್ಟವನ್ನು ಭರಿಸಬೇಕಾದ ಕ್ಲಿಷ್ಟ ಸಂದರ್ಭಗಳು ಬರುವುದು. ವಿಶೇಷವಾಗಿ ಹಣಕಾಸಿನ ವಿಚಾರದಲ್ಲಿ ಎಚ್ಚರಿಕೆಯಿಂದ ಇರಿ.

ಕುಂಭ: ಯೋಚಿಸುವ ಪ್ರತಿ ಕೆಲಸ-ಕಾರ್ಯಗಳು ವಿಳಂಬ ರೀತಿಯಲ್ಲಿ ನಡೆಯಬಹುದು. ಆದರೆ ಹಿಮ್ಮುಖ ಚಲಿಸಬೇಡಿ, ದಿನದ ಅಂತ್ಯದಲ್ಲಿ ಶುಭವಾಗಲಿದೆ. ಯೋಗಾಭ್ಯಾಸದಿಂದ ಆರೋಗ್ಯವೃದ್ಧಿಯಾಗುವುದು.

ಮೀನ: ಸ್ನೇಹಿತರು ವಂಚನೆ ಮಾಡುವ ಪ್ರಸಂಗವಿದೆ. ನೂತನ ಅಧಿಕಾರಿಗಳ ಆಗಮನದಿಂದಾಗಿ ಕಚೇರಿಯಲ್ಲಿ ಕೆಲಸಗಳು ತೋರಿಬರಲಿವೆ. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಉತ್ತಮ ಆದಾಯ.

ಪದಬಂಧ 6029

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಅನುಭವ ಉಳ್ಳವನು (4)
3.ಎಲ್ಲಾಕಡೆಯಿಂದ ಉಂಟಾದ ನಿರ್ಬಂಧ (4)
5.ಮುಚ್ಚುಮರೆಯಿಲ್ಲದಿರುವುದು (3)
7.ಸರಸದಲ್ಲಿರುವ ದ್ರವ (2)
9.ಮಂಕರಿ ಹೊತ್ತಿರುವ ದಡ್ಡ (2)
10.ಹುರುಪು ಹೀಗೆ ಬಂದಿದೆ (3)
11.ಅಂಧನ ಬಳಿಯಿರುವ ಹಣ (2)
12.ನೆನಪಲ್ಲೇ ಇರುವ ಕಾರಣ ಗೊತ್ತಾಯಿತೇ? (2)
14.ವಾರದಲ್ಲೇ ದೊರೆತ ಒಡೆತನ (3)
16.ನರಕಾಧಿಪತಿ ಮಗ (4)
17.ರತ್ನಗಳ ಆಶ್ರಯಸ್ಥಾನ (4)

ಮೇಲಿಂದ ಕೆಳಕ್ಕೆ

1.ಸುರನ ಬಳಿಯೇ ರಾಕ್ಷಸನಿದ್ದಾನಲ್ಲಾ? (3)
2.ಅವಿರತ ಪ್ರಯತ್ನದಲ್ಲಿರುವ ಬ್ರಾಹ್ಮಣ (2)
3.ದಿಟ್ಟತನದಿಂದ ನುಡಿದ ಸತ್ಯ (2)
4.ಸೊಂಟದಿಂದ ಪ್ರಾರಂಭವಾದ ಕಂಪನ (3)
6.ಕರದಲ್ಲಿರುವ ಕಲಸನ್ನ (7)
8.ಒಂದೇ ಕಾಲದಲ್ಲಿದ್ದವನು (5)
9.ರಹಸ್ಯವಾಗಿ ಕೂಡಿ ಮಾತಾಡುವುದು (5)
11.ಕೊತ್ತಂಬರಿ ಬೀಜವಿದು (3)
13.ಪರವಾಗಿ ಪಡೆದುಕೊಂಡಿರುವ ವೇತನ (3)
14.ವಾಣಿಜ್ಯ ಮಾರುತದಲ್ಲಿರುವ ಗಾಳಿ (2)
15.ವಾರಸುದಾರನಿಗೆ ಪ್ರತ್ಯಕ್ಷನಾಗಿರುವ ದೇವತೆ! (2)

1			2	■	3			4
	■	■	5	6		■	■	
7	8	■	■		■	■	9	10
■		■	■		■	■		■
■		■	10			■		■
■		■	■		■	■		■
11		■	■		■	■	12	13
	■	■	14		15	■	■	
16				■	17			

6028ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ದಾರಿಹೋಕ 4.ಶರಾವತಿ
6.ನಿರರ್ಥಕ 8.ಕಡ
9.ಚನ್ನವೀರಕಣವಿ
11.ಗೋಂದು 14.ಭರವಸೆ
15.ಮಂಗಳೂರು 16.ಕಡುಜಾಣೆ

ಮೇಲಿಂದ ಕೆಳಕ್ಕೆ:
1.ದಾರ್ಶನಿಕ 2.ದಶಕ
3.ಪಾತಿ 5.ವರಕವಿ
7.ಕಕ್ಷವೀ 9.ಚದುರಂಗ
10.ಕಳಭ 12.ಹಸೆಮಣೆ
13.ಮರುಕ 15.ಮಂಗ

ಸುಡೊಕು 6414

		5	6		2			3
	3	1			4	6		
6				1			5	9
	8	3		6				4
1				4				8
2			8		1	5	6	
					3			
4		2		9			3	1
	1		4		6		7	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6413 ಸುಡೊಕು

8	7	6	1	4	9	3	2	5
1	3	4	5	2	7	8	6	9
5	9	2	6	3	8	7	4	1
2	1	5	9	7	3	6	8	4
6	4	7	8	1	2	9	5	3
3	8	9	4	5	6	1	7	2
9	2	8	3	6	5	4	1	7
7	6	1	2	9	4	5	3	8
4	5	3	7	8	1	2	9	6

ಎನ್‌ಇಸಿಸಿ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹485
12 ಕ್ಕೆ	₹65
ಮೈಸೂರು	
100ಕ್ಕೆ	₹500

(ಪ್ರತಿ ಕೆ.ಜಿಗೆ)

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್‌-4 ₹195
ಆರ್‌ಎಸ್‌ಎಸ್‌-5 ₹190
ಗುಡ್ ಲಾಟ್ ₹180

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹288-605
ದ್ವಿತಳಿ (ಬಿ.ವಿ)	₹336-703

21 ಲಕ್ಷ ರೈತರಿಗೆ ₹62,155 ಕೋಟಿ ಪಾವತಿ: ಕೇಂದ್ರ ಆಹಾರ ಸಚಿವಾಲಯ ಮಾಹಿತಿ

256 ಲಕ್ಷ ಟನ್ ಗೋಧಿ ಖರೀದಿ

ನವದೆಹಲಿ (ಪಿಟಿಐ): 'ಪ್ರಸಕ್ತ ಬೆಳೆ ವರ್ಷದ ಏಪ್ರಿಲ್ 30ರ ವರೆಗೆ ದೇಶದಲ್ಲಿನ ರೈತರಿಂದ 256 ಲಕ್ಷ ಟನ್ ಗೋಧಿ ಖರೀದಿಸಲಾಗಿದೆ' ಎಂದು ಕೇಂದ್ರ ಆಹಾರ ಸಚಿವಾಲಯದ ಕಾರ್ಯದರ್ಶಿ ಸಂಜೀವ್ ಚೋಪ್ರಾ ಗುರುವಾರ ತಿಳಿಸಿದ್ದಾರೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ 205 ಲಕ್ಷ ಟನ್ ಖರೀದಿಸಲಾಗಿತ್ತು. ಇದಕ್ಕೆ ಹೋಲಿಸಿದರೆ ಖರೀದಿ ಪ್ರಮಾಣದಲ್ಲಿ ಶೇ 25ರಷ್ಟು ಏರಿಕೆಯಾಗಿದೆ ಎಂದು ಹೇಳಿದ್ದಾರೆ.

ಪಂಜಾಬ್‌ನಲ್ಲಿ ಅತಿಹೆಚ್ಚು 103 ಲಕ್ಷ ಟನ್ ಗೋಧಿ ಖರೀದಿಸಲಾಗಿದೆ. ಮಧ್ಯಪ್ರದೇಶದಲ್ಲಿ (67 ಲಕ್ಷ ಟನ್), ಹರಿಯಾಣ (65 ಲಕ್ಷ ಟನ್), ರಾಜಸ್ಥಾನ (11 ಲಕ್ಷ ಟನ್) ಮತ್ತು ಉತ್ತರ ಪ್ರದೇಶದಿಂದ 7.55 ಲಕ್ಷ ಟನ್ ಗೋಧಿ ಖರೀದಿಸಲಾಗಿದೆ.

ಕನಿಷ್ಠ ಬೆಂಬಲ ಬೆಲೆಯಡಿ (ಎಂಎಸ್‌ಪಿ) 21.03 ಲಕ್ಷ ರೈತರಿಂದ ಗೋಧಿ ಖರೀದಿಸಲಾಗಿದ್ದು, ₹62,155 ಕೋಟಿ ಪಾವತಿ ಮಾಡಲಾಗಿದೆ ಎಂದು ತಿಳಿಸಿದ್ದಾರೆ.

2024–25ರ ಬೆಳೆ ವರ್ಷದಲ್ಲಿ (ಜುಲೈ–ಜೂನ್) 11.5 ಕೋಟಿ ಟನ್ ಗೋಧಿ ಉತ್ಪಾದನೆ ಗುರಿಯನ್ನು ಕೃಷಿ ಸಚಿವಾಲಯ ಹೊಂದಿದೆ. ಆಹಾರ ಸಚಿವಾಲಯವು ಈ ಪೈಕಿ 312 ಲಕ್ಷ ಟನ್ ಖರೀದಿಸುವ ಗುರಿ ಹೊಂದಿದೆ. ಈ ಗುರಿ ತಲುಪುವ ಭರವಸೆ ಇದೆ ಎಂದು ಹೇಳಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯ (ಎನ್‌ಎಫ್‌ಎಸ್‌ಎ) ವ್ಯಾಪ್ತಿಯಲ್ಲಿ ಬರುವ 80 ಕೋಟಿ ಜನರು ಮಾಸಿಕ 5 ಕೆ.ಜಿ ಆಹಾರ ಧಾನ್ಯಗಳಿಗೆ ಅರ್ಹರಾಗಿರುತ್ತಾರೆ. ಈ ಹಂಚಿಕೆಯಲ್ಲಿ ಗೋಧಿ-ಅಕ್ಕಿ ಅನುಪಾತವನ್ನು ಸರ್ಕಾರವು ಹೊಂದಿರುವ ದಾಸ್ತಾನುಗಳ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ಎಂದು ಹೇಳಿದ್ದಾರೆ.

ಪಿಡಿಎಸ್- ಖರೀದಿ ಬಳಿಕ ನಿರ್ಧಾರ: ಸರ್ಕಾರವು ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಿಡಿಎಸ್) ಅಡಿಯಲ್ಲಿ ಗೋಧಿ ಪೂರೈಕೆಯನ್ನು ಮತ್ತೆ ಆರಂಭಿಸುತ್ತದೆಯೇ ಎನ್ನುವ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದ ಸಂಜೀವ್ ಚೋಪ್ರಾ, ಖರೀದಿ ಪ್ರಕ್ರಿಯೆ ಮುಗಿಯುವವರೆಗೆ ಕಾಯಬೇಕಿದೆ. ಇಲ್ಲಿಯವರೆಗೆ, 256 ಲಕ್ಷ ಟನ್ ಗೋಧಿಯನ್ನು ಖರೀದಿಸಲಾಗಿದೆ. ಖರೀದಿ ಮುಗಿದ ನಂತರ ಸ್ಪಷ್ಟ ಚಿತ್ರಣ ಸಿಗಲಿದೆ. ಆ ನಂತರ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎಂದರು.




ಮುಖ್ಯಾಂಶಗಳು

- ಪಂಜಾಬ್‌ನಿಂದ ಅತಿಹೆಚ್ಚು 103 ಲಕ್ಷ ಟನ್ ಗೋಧಿ ಖರೀದಿ
- 2024–25ರ ಬೆಳೆ ವರ್ಷದಲ್ಲಿ 11.5 ಕೋಟಿ ಟನ್ ಗೋಧಿ ಉತ್ಪಾದನೆ ಗುರಿ
- 312 ಲಕ್ಷ ಟನ್ ಖರೀದಿಸಲು ಆಹಾರ ಸಚಿವಾಲಯ ಯೋಜನೆ

ಬೆಂಬಲ ಬೆಲೆಯಡಿ ತೊಗರಿ: ಮೇ ಅಂತ್ಯದವರೆಗೆ ಖರೀದಿ

ಬೆಂಗಳೂರು: 'ಬೆಂಬಲ ಬೆಲೆಯಡಿ ತೊಗರಿಯನ್ನು ಮೇ ಅಂತ್ಯದವರೆಗೆ ಖರೀದಿಸಲು ಅವಕಾಶ ನೀಡಲಾಗಿದೆ' ಎಂದು ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ ತಿಳಿಸಿದ್ದಾರೆ.



ಶಿವಾನಂದ ಪಾಟೀಲ

ಖರೀದಿ ಅವಧಿ ಮೇ 1 ಕ್ಕೆ ಮುಗಿದಿದೆ. ಖರೀದಿ ಪ್ರಮಾಣ ಇನ್ನೂ ನಿಗದಿ ಆಗದ ಕಾರಣ ಅವಧಿ ವಿಸ್ತರಣೆ ಮಾಡಲು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಲಾಗಿದೆ ಎಂದು ಪ್ರಕಟಣೆಯಲ್ಲಿ ಹೇಳಿದ್ದಾರೆ.

ಕೇಂದ್ರ ಸರ್ಕಾರ ಕನಿಷ್ಠ ಬೆಂಬಲ ಬೆಲೆಯಲ್ಲಿ 3.06 ಲಕ್ಷ ಟನ್ ತೊಗರಿ ಖರೀದಿಗೆ ಅನುಮತಿ ನೀಡಿದೆ. ಈವರೆಗೆ 1.83 ಲಕ್ಷ ಟನ್ ಖರೀದಿಸಲಾಗಿದೆ. ಇನ್ನೂ 2.70 ಲಕ್ಷ ಟನ್‌ಗೆ ಸಂಬಂಧಿಸಿದ ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಸುಮಾರು 93 ಸಾವಿರ ಟನ್ ಖರೀದಿ ಮಾಡಬೇಕಾಗಿದೆ ಎಂದು ತಿಳಿಸಿದ್ದಾರೆ.

ಕೇಂದ್ರ ಪ್ರತಿ ಟನ್‌ಗೆ ₹7,550 ದರ ನಿಗದಿಪಡಿಸಿದೆ. ಇದನ್ನು ಹೆಚ್ಚಳ ಮಾಡಬೇಕು ಎಂದು ರೈತರು ಬೇಡಿಕೆ ಇಟ್ಟಿದ್ದರು. ರೈತರು ಬೇಡಿಕೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಗಮನಕ್ಕೆ ತಂದಿದ್ದು, ಅವರು ಸ್ಪಂದಿಸಿ ಪ್ರತಿ ಕ್ವಿಂಟಾಲ್‌ಗೆ ₹450 ಪ್ರೋತ್ಸಾಹ ಧನ ಘೋಷಿಸಿದ್ದಾರೆ. ಪ್ರತಿ ಕ್ವಿಂಟಾಲ್‌ಗೆ ₹8,000 ನೀಡಿ ಖರೀದಿ ಮಾಡಲಾಗುತ್ತಿದೆ. ರೈತರು ಈ ಅವಕಾಶ ಬಳಸಿಕೊಳ್ಳಬೇಕು' ಎಂದು ತಿಳಿಸಿದ್ದಾರೆ.

8 ಲಕ್ಷ ಟನ್ ಸಕ್ಕರೆ ರಫ್ತು ನಿರೀಕ್ಷೆ



ನವದೆಹಲಿ (ಪಿಟಿಐ): ಸೆಪ್ಟೆಂಬರ್ ಅಂತ್ಯದ ವೇಳೆಗೆ ದೇಶದ ಸಕ್ಕರೆ ರಫ್ತು 8 ಲಕ್ಷ ಟನ್ ಆಗುವ ನಿರೀಕ್ಷೆ ಇದೆ ಎಂದು ಕೇಂದ್ರ ಆಹಾರ ಸಚಿವಾಲಯದ ಕಾರ್ಯದರ್ಶಿ ಸಂಜೀವ್ ಚೋಪ್ರಾ ಗುರುವಾರ ಹೇಳಿದ್ದಾರೆ.

ಇಲ್ಲಿಯವರೆಗೆ ದೇಶವು 3 ಲಕ್ಷ ಟನ್ ಸಕ್ಕರೆ ರಫ್ತು ಮಾಡಿದ್ದು, ಸಾಗಣೆಗಾಗಿ ಸುಮಾರು 60 ಸಾವಿರ ಟನ್ ಬಂದರುಗಳಲ್ಲಿದೆ. 2024–25ನೇ ಮಾರುಕಟ್ಟೆ ಋತುವಿನಲ್ಲಿ (ಅಕ್ಟೋಬರ್‌ನಿಂದ ಸೆಪ್ಟೆಂಬರ್) 26 ಲಕ್ಷ ಟನ್ ಉತ್ಪಾದನೆ ಆಗುವ ನಿರೀಕ್ಷೆ ಇದೆ. ಆದರೆ, ಇದರಲ್ಲಿ ಹೆಚ್ಚಿನದನ್ನು ಈಗಾಗಲೇ ಗಿರಣಿಗಳು (ಮಿಲ್‌ಗಳು) ಉತ್ಪಾದಿಸಿವೆ ಎಂದು ಹೇಳಿದ್ದಾರೆ.

ಸುದ್ದಿ 2 ನಿಮಿಷ

ವಾಣಿಜ್ಯ ಸಿಲಿಂಡರ್ ದರ ಇಳಿಕೆ

ನವದೆಹಲಿ (ಪಿಟಿಐ): ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ವಿಮಾನ ಇಂಧನ (ಎಟಿಎಫ್) ಮತ್ತು ವಾಣಿಜ್ಯ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರವನ್ನು ಇಳಿಕೆ ಮಾಡಿವೆ. ಹೊಸ ದರವು ಗುರುವಾರದಿಂದಲೇ ಜಾರಿಗೆ ಬಂದಿದೆ.

ವಾಣಿಜ್ಯ ಉದ್ದೇಶಕ್ಕೆ ಬಳಸುವ 19 ಕೆ.ಜಿ ತೂಕದ ಸಿಲಿಂಡರ್ ದರ ₹14.50 ಕಡಿಮೆ ಆಗಿದೆ. ಪ್ರಸ್ತುತ ದರ ದೆಹಲಿಯಲ್ಲಿ ₹1,747 ಆಗಿದೆ. ಮುಂಬೈನಲ್ಲಿ ₹1,669 ಇದೆ.

ಗೃಹ ಬಳಕೆಯ ಅಡುಗೆ ಅನಿಲ ಸಿಲಿಂಡರ್ ದರವು ಕಳೆದ ತಿಂಗಳು ₹50 ಹೆಚ್ಚಳವಾಗಿದ್ದು, ₹853 ಆಗಿದೆ.



ವಿಮಾನ ಇಂಧನ ದರ ಇಳಿಕೆ: ವಿಮಾನಗಳಲ್ಲಿ ಬಳಸುವ ಇಂಧನದ ಬೆಲೆ ಪ್ರತಿ ಕಿಲೋಲೀಟರ್‌ಗೆ (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್) ₹3,954 (ಶೇ 4.4ರಷ್ಟು) ಕಡಿಮೆಯಾಗಿದ್ದು, ದೆಹಲಿಯಲ್ಲಿ ₹85,486 ಆಗಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಇಂಧನ ದರ, ವಿದೇಶಿ ವಿನಿಮಯ ದರಕ್ಕೆ ಅನುಗುಣವಾಗಿ ತೈಲ ಮಾರಾಟ ಕಂಪನಿಗಳು ಪ್ರತಿ ತಿಂಗಳು ಈ ದರ ಪರಿಷ್ಕರಣೆ ಮಾಡುತ್ತವೆ.

ರಫ್ತು ಪ್ರಮಾಣ ಶೇ 6.1ರಷ್ಟು ಏರಿಕೆ

ನವದೆಹಲಿ (ಪಿಟಿಐ): 2024–25ರ ಆರ್ಥಿಕ ವರ್ಷದಲ್ಲಿ ದೇಶದ ಸರಕು ಮತ್ತು ಸೇವೆಗಳ ರಫ್ತು ಮೌಲ್ಯ ₹69.81 ಲಕ್ಷ ಕೋಟಿಯಷ್ಟಾಗಿದೆ (825 ಬಿಲಿಯನ್ ಡಾಲರ್) ಎಂದು ಕೇಂದ್ರ ವಾಣಿಜ್ಯ ಸಚಿವಾಲಯ ಗುರುವಾರ ತಿಳಿಸಿದೆ.

2023–24ರ ಆರ್ಥಿಕ ವರ್ಷದ ಇದೇ ಅವಧಿಯಲ್ಲಿ ₹65.85 ಲಕ್ಷ ಕೋಟಿಯಷ್ಟಿತ್ತು. ಜಾಗತಿಕ ಅನಿಶ್ಚಿತ ಸ್ಥಿತಿಯ ನಡುವೆಯೂ ರಫ್ತು ಪ್ರಮಾಣದಲ್ಲಿ ಶೇ 6.1ರಷ್ಟು ಏರಿಕೆಯಾಗಿದ್ದು, ಸಾರ್ವಕಾಲಿಕ ಗರಿಷ್ಠ ಮಟ್ಟಕ್ಕೆ ಮುಟ್ಟಿದೆ ಎಂದು ಹೇಳಿದೆ.

ಕಳೆದ ಆರ್ಥಿಕ ವರ್ಷದಲ್ಲಿ ಸೇವೆಗಳ ರಫ್ತು ಪ್ರಮಾಣ ಶೇ 13ರಷ್ಟು ಏರಿಕೆಯಾಗಿದ್ದು, ಒಟ್ಟು ಮೌಲ್ಯ ₹32.79 ಲಕ್ಷ ಕೋಟಿಯಾಗಿದೆ. ಮಾರ್ಚ್‌ನಲ್ಲಿ ಸೇವಾ ವಲಯದ ರಫ್ತು ಮೌಲ್ಯ ₹3 ಲಕ್ಷ ಕೋಟಿಯಷ್ಟಾಗಿದೆ. ಹಿಂದಿನ ವರ್ಷದ ಮಾರ್ಚ್‌ಗೆ ಹೋಲಿಸಿದರೆ ಶೇ 18ರಷ್ಟು ಹೆಚ್ಚಳವಾಗಿದೆ. ದೂರಸಂಪರ್ಕ, ಕಂಪ್ಯೂಟರ್, ಸಾರಿಗೆ, ಪ್ರಯಾಣ ಮತ್ತು ಹಣಕಾಸು ಸೇವೆಗಳ ವಲಯವು ರಫ್ತು ಏರಿಕೆಗೆ ಕೊಡುಗೆ ನೀಡಿವೆ ಎಂದು ತಿಳಿಸಿದೆ.

'ಒಂದು ರಾಜ್ಯ; ಒಂದು ಆರ್‌ಆರ್‌ಬಿ' ಜಾರಿ

ನವದೆಹಲಿ (ಪಿಟಿಐ): 'ಒಂದು ರಾಜ್ಯ; ಒಂದು ಆರ್‌ಆರ್‌ಬಿ' ತತ್ವ ಮೇ 1ರಿಂದ ದೇಶದಲ್ಲಿ ಜಾರಿಗೊಂಡಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

700 ಜಿಲ್ಲೆಗಳಲ್ಲಿ 22 ಸಾವಿರಕ್ಕೂ ಹೆಚ್ಚು ಶಾಖೆಗಳನ್ನು ಹೊಂದಿರುವ 28 ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳು (ಆರ್‌ಆರ್‌ಬಿ) ಕಾರ್ಯಾಚರಿಸುತ್ತವೆ ಎಂದು ಸಾಮಾಜಿಕ ಜಾಲತಾಣ ಎಕ್ಸ್‌ನಲ್ಲಿ ಗುರುವಾರ ತಿಳಿಸಿದೆ.

ಬ್ಯಾಂಕ್‌ಗಳ ಪರಿಣಾಮಕಾರಿ ಕಾರ್ಯಾಚರಣೆ, ವೆಚ್ಚ ಕಡಿತಗೊಳಿಸುವುದು ಮತ್ತು ಆರ್ಥಿಕ ಕಾರ್ಯಕ್ಷಮತೆಯನ್ನು ಮತ್ತಷ್ಟು ಸುಧಾರಿಸಲು ಈ ವಿಲೀನ ಮಾಡಲಾಗಿದೆ. ವಿಲೀನದಿಂದ ದೇಶದಲ್ಲಿ ಹಾಲಿ ಇರುವ 43 ಆರ್‌ಆರ್‌ಬಿಗಳ ಸಂಖ್ಯೆಯು 28ಕ್ಕೆ ಇಳಿದಿದೆ ಎಂದು ತಿಳಿಸಿದೆ.

ವಿಲೀನವು ಏಕೀಕೃತ ಬ್ಯಾಂಕ್‌ಗಳ ಬಂಡವಾಳವನ್ನು ಹೆಚ್ಚಿಸುತ್ತದೆ. ಎಲ್ಲಾ ಬ್ಯಾಂಕ್‌ಗಳು ₹2,000 ಕೋಟಿಗಳ ಬಂಡವಾಳವನ್ನು ಹೊಂದಿರುತ್ತವೆ ಎಂದು ಹೇಳಿದೆ.

ಜಿಎಸ್‌ಟಿ: ₹2.37 ಲಕ್ಷ ಕೋಟಿ ಸಂಗ್ರಹ



ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಮೊದಲ ತಿಂಗಳಾದ ಏಪ್ರಿಲ್‌ನಲ್ಲಿ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಸಂಗ್ರಹ ಪ್ರಮಾಣದಲ್ಲಿ ಶೇ 12.6ರಷ್ಟು ಏರಿಕೆಯಾಗಿದ್ದು, ₹2.37 ಲಕ್ಷ ಕೋಟಿಯಾಗಿದೆ.

2024ರ ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ಸಂಗ್ರಹವಾಗಿತ್ತು. ಪರೋಕ್ಷ ತೆರಿಗೆ ಪದ್ಧತಿ (2017ರ ಜುಲೈ 1) ಜಾರಿಗೆ ಬಂದ ಬಳಿಕ ದಾಖಲಾದ ಎರಡನೇ ಅತಿ ಹೆಚ್ಚು ಸಂಗ್ರಹ ಇದಾಗಿದೆ ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ. ಇದೇ ವರ್ಷದ ಮಾರ್ಚ್‌ನಲ್ಲಿ ₹1.96 ಲಕ್ಷ ಕೋಟಿ ಸಂಗ್ರಹವಾಗಿತ್ತು.

ದೇಶೀಯ ವಹಿವಾಟು ಮೇಲಿನ ಜಿಎಸ್‌ಟಿ ಸಂಗ್ರಹದಲ್ಲಿ ಶೇ 10.7ರಷ್ಟು ಏರಿಕೆಯಾಗಿದ್ದು, ₹1.9 ಲಕ್ಷ ಕೋಟಿಯಾಗಿದೆ. ಆಮದು ಸರಕುಗಳ ಮೇಲಿನ ಸಂಗ್ರಹದಲ್ಲಿ ಶೇ 20ರಷ್ಟು ಹೆಚ್ಚಳವಾಗಿದ್ದು, ₹46,913 ಕೋಟಿಯಾಗಿದೆ. ಮರುಪಾವತಿ ಹಂಚಿಕೆ ಶೇ 48ರಷ್ಟು ಏರಿಕೆಯಾಗಿದ್ದು, ₹27,341 ಕೋಟಿಯಾಗಿದೆ. ಮರುಪಾವತಿ ನಂತರ ನಿವ್ವಳ ಜಿಎಸ್‌ಟಿ ಸಂಗ್ರಹ ₹2.09 ಲಕ್ಷ ಕೋಟಿಯಾಗಿದೆ ಎಂದು ತಿಳಿಸಿದೆ.

ಒಟ್ಟು ಸಂಗ್ರಹದಲ್ಲಿ ಕೇಂದ್ರ ಜಿಎಸ್‌ಟಿ ₹48,634 ಕೋಟಿ, ರಾಜ್ಯ ಜಿಎಸ್‌ಟಿ ₹59,372 ಕೋಟಿ, ಸಮಗ್ರ ಜಿಎಸ್‌ಟಿ ₹69,504 ಕೋಟಿ ಮತ್ತು ಸೆಸ್ ಮೂಲಕ ₹12,293 ಕೋಟಿ ಸಂಗ್ರಹವಾಗಿದೆ.

'ಪ್ರಸಕ್ತ ಆರ್ಥಿಕ ವರ್ಷದ ಮೊದಲ ತಿಂಗಳಲ್ಲಿ ನಿವ್ವಳ ಜಿಎಸ್‌ಟಿ ಸಂಗ್ರಹವು ₹2 ಲಕ್ಷ ಕೋಟಿ ದಾಟಿದೆ. ಇದು ಸದೃಢ ಆರ್ಥಿಕ ಚಟುವಟಿಕೆ ಮತ್ತು ಮಾರ್ಚ್ ತಿಂಗಳಲ್ಲಿ ದಾಖಲಾದ ಸರಕು ಮತ್ತು ಸೇವೆಗಳಲ್ಲಿನ ವಹಿವಾಟನ್ನು ಸೂಚಿಸುತ್ತದೆ' ಡೆಲಾಯ್ಟ್ ಇಂಡಿಯಾ ಪಾಲುದಾರ ಎಂ.ಎಸ್. ಮಣಿ ಹೇಳಿದ್ದಾರೆ.

ಹಲ್ಲೆ: ಮೂವರ ಅಮಾನತು

ಒಂದನೇ ಪುಟದಿಂದ...

ನಂತರ ವಿಧಿವಿಜ್ಞಾನ ತಜ್ಞರು, ಅಪರಾಧ ಕೃತ್ಯ ನಡೆದ ಸ್ಥಳ ಪರಿಶೀಲನೆಗೆ ಅಧಿಕಾರಿಗಳು, ಡಿಸಿಪಿಯವರು ಸ್ಥಳಕ್ಕೆ ಭೇಟಿ ನೀಡಿದ್ದರು. ಘಟನೆ ನಡೆದ ಸ್ಥಳದಲ್ಲಿ ಅದೇ ದಿನ ಕ್ರಿಕೆಟ್ ಟೂರ್ನಿ ನಡೆದ ಹಾಗೂ ಆ ಸಂದರ್ಭದಲ್ಲಿ ಜಗಳವಾಗಿ ಯುವಕನಿಗೆ ಹೊಡೆದ ಮಾಹಿತಿ ನಂತರ ಗೊತ್ತಾಯಿತು. ಕೆಲವರು ಫೋನ್ ಮಾಡಿ ಈ ಮಾಹಿತಿಯನ್ನು ಸ್ಥಳೀಯ ಠಾಣೆಯ ಗುಪ್ತವಾರ್ತೆ ವಿಭಾಗದವರು ಹಾಗೂ ಅಧಿಕಾರಿಗಳ ಗಮನಕ್ಕೆ ತಂದಿದ್ದರು. ಆದರೆ ಅವರು ಅದನ್ನು ನಮ್ಮ ಗಮನಕ್ಕೆ ತಂದಿರಲಿಲ್ಲ. ಒಂದು ವೇಳೆ ಆಗಲೇ ಆ ಮಾಹಿತಿಯನ್ನು ಗಮನಕ್ಕೆ ತಂದಿರುತ್ತಿದ್ದರೆ, 'ಅನುಮಾನಾಸ್ಪದ ಅಸಹಜ ಸಾವು' ಎಂದು ಎಫ್‌ಐಆರ್ ದಾಖಲಿಸಿಕೊಳ್ಳುವ ಬದಲು ನೇರವಾಗಿ 'ಹತ್ಯೆ' ಪ್ರಕರಣ ದಾಖಲಿಸಿಕೊಳ್ಳಬಹುದಾಗಿತ್ತು. ಈ ಕರ್ತವ್ಯ ಲೋಪವೆಸಗಿದ್ದಕ್ಕೆ ಠಾಣಾಧಿಕಾರಿ ಶಿವಕುಮಾರ್ ಕೆ.ಆರ್., ಆ ಪ್ರದೇಶದ ಗಸ್ತು ನಿರ್ವಹಣೆಯ ಹೊಣೆ ಹೊತ್ತಿದ್ದ ಕಾನ್‌ಸ್ಟೆಬಲ್ ಯಲ್ಲಾಲಿಂಗ ಹಾಗೂ ಗುಪ್ತವಾರ್ತೆ ವಿಭಾಗದ ಹೆಡ್ ಕಾನ್‌ಸ್ಟೆಬಲ್ ಚಂದ್ರ ಪಿ. ಅವರನ್ನು ಅಮಾನತು ಮಾಡಲಾಗಿದೆ' ಎಂದರು.

ಈ ಪ್ರಕರಣ ಮುಚ್ಚಿಹಾಕುವ ಯತ್ನ ನಡೆದಿತ್ತು ಎಂದು ಅನೇಕ ಸಂಘಟನೆಗಳು ಆರೋಪಿಸಿದ್ದವು. ಮಂಗಳೂರು ಗ್ರಾಮಾಂತರ ಠಾಣೆಯ ಪೊಲೀಸರು ಕರ್ತವ್ಯ ಲೋಪ ಎಸಗಿದ್ದು, ಅವರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಕಾಂಗ್ರೆಸ್‌ನ ಕೆಲ ಪದಾಧಿಕಾರಿಗಳು ಜಿಲ್ಲಾ ಉಸ್ತುವಾರಿ ಸಚಿವ ದಿನೇಶ್ ಗುಂಡೂರಾವ್ ಅವರಿಗೆ ಪತ್ರ ಬರೆದು ಒತ್ತಾಯಿಸಿದ್ದರು.

ಪಾಕ್ ಪರ ಘೋಷಣೆ, ಸಾಕ್ಷ್ಯ ಸಿಕ್ಕಿಲ್ಲ: ಕಮಿಷನರ್

ಒಂದನೇ ಪುಟದಿಂದ...

'ಗುಂಪು ಹಲ್ಲೆಯಿಂದಾಗಿ ಅಶ್ರಫ್ ಪ್ರಾಣ ಕಳೆದುಕೊಂಡಿದ್ದಾನೆ. ಆದರೆ ಕ್ರಿಕೆಟ್ ಪಂದ್ಯ ವೇಳೆ ಯಾವ ಕಾರಣಕ್ಕೆ ಜಗಳ ಶುರುವಾಯಿತು. ಅಶ್ರಫ್ ಮೇಲೆ ಹಲ್ಲೆ ನಡೆಸುವುದಕ್ಕೆ ಏನು ಕಾರಣ ಎಂಬುದು ಸ್ಪಷ್ಟವಾಗಿಲ್ಲ' ಎಂದರು.

ಎಫ್‌ಐಆರ್‌ನಲ್ಲಿ ಉಲ್ಲೇಖ: 'ಗುಂಪು ಹಲ್ಲೆಯಿಂದ ಸಾವಿಗೀಡಾದ ಅಪರಿಚಿತ ಯುವಕ ಕ್ರಿಕೆಟ್ ಮೈದಾನದ ಬಳಿ ಬಂದಿದ್ದ. ಆತ 'ಪಾಕಿಸ್ತಾನ್, ಪಾಕಿಸ್ತಾನ್ ' ಎಂದು ಅರಚುತ್ತಿದ್ದಾನೆ. ಆತನನ್ನು ಬಿಡಬಾರದು, ಹೊಡೆದು ಹಾಕಿ' ಎಂದು ಆರೋಪಿಗಳು ಆತನನ್ನು ಹಿಡಿಯಲು ಧಾವಿಸಿದ್ದರು...' ಎಂದು ಪ್ರಕರಣದಲ್ಲಿ ದೂರು ನೀಡಿರುವ ದೀಪಕ್ ಅವರು ತಿಳಿಸಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ವಿಶ್ವದ ವಿವಿಧೆಡೆ ಕಾರ್ಮಿಕರ ದಿನ ಆಚರಣೆ, ರ್‍ಯಾಲಿ

ಟ್ರಂಪ್ ಸುಂಕ ನೀತಿಗೆ ಕಳವಳ, ಆತಂಕ

ಟೋಕಿಯೊ (ಎ.ಪಿ): ಕಾರ್ಮಿಕರ ದಿನ ನಿಮಿತ್ತ ಗುರುವಾರ ವಿಶ್ವದ ವಿವಿಧೆಡೆ ಕಾರ್ಮಿಕರು, ಶ್ರಮಿಕ ವರ್ಗವು ರ್‍ಯಾಲಿ, ಪ್ರತಿಭಟನಾ ಸಮಾವೇಶಗಳನ್ನು ನಡೆಸಿತು.

ಜಾಗತಿಕವಾಗಿ ಆರ್ಥಿಕ ಅನಿಶ್ಚಿತತೆಗೆ ಕಾರಣವಾಗಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನೂತನ ಸುಂಕ ನೀತಿ ವಿರುದ್ಧ ಪ್ರಮುಖವಾಗಿ ಆಕ್ರೋಶ ವ್ಯಕ್ತವಾಯಿತು.

ಅಮೆರಿಕದ ಶಿಕಾಗೊ, ಲಾಸ್ ಏಂಜಲೀಸ್, ನ್ಯೂಯಾರ್ಕ್ ಹಾಗೂ ತೈವಾನ್, ಜಪಾನ್, ಫಿಲಿಪ್ಪೀನ್ಸ್, ಟರ್ಕಿ ಸೇರಿದಂತೆ ವಿವಿಧೆಡೆ ರ್‍ಯಾಲಿ, ಪ್ರತಿಭಟನಾ ಸಭೆಗಳು ನಡೆದವು.

ಟ್ರಂಪ್ ಅವರು ಇತ್ತೀಚೆಗೆ ಜಾರಿಗೊಳಿಸಿರುವ ನೂತನ ಸುಂಕ ನೀತಿಯ ವಿರುದ್ಧ ಬಹುತೇಕ ಆಕ್ರೋಶ, ಕಳವಳ ವ್ಯಕ್ತವಾಯಿತು. ಟ್ರಂಪ್ ಅವರ ಈ ನೀತಿಯು ವಲಸಿಗರು, ಶ್ರಮಿಕ ವರ್ಗದ ಮೇಲೆ ನಕಾರಾತ್ಮಕ ಪರಿಣಾಮ ಬೀರಲಿದೆ ಎಂಬ ಅಭಿಪ್ರಾಯಗಳು ಕೇಳಿಬಂದವು.

ತೈವಾನ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಅಧ್ಯಕ್ಷ ಲೈ ಚಿಂಗ್ ಟೆ ಅವರು, ಸುಂಕ ನೀತಿಯನ್ನು ಉಲ್ಲೇಖಿಸಿ, 'ಉದ್ಯೋಗ ಕ್ಷೇತ್ರದಲ್ಲಿ ಸ್ಥಿರತೆ ಕಾಯ್ದುಕೊಳ್ಳಲು ಒತ್ತು ನೀಡಿ ಮಸೂದೆ ರೂಪಿಸಲು ನಿರ್ಧರಿಸಲಾಗಿದೆ' ಎಂದು ಕಾರ್ಮಿಕ ಸಮುದಾಯಕ್ಕೆ ಭರವಸೆ ನೀಡಿದರು.

ಕಾರ್ಮಿಕರೇ ಒಂದಾಗಿ', 'ಹಕ್ಕುಗಳಿಗಾಗಿ ಹೋರಾಡಿ' ಎಂಬ ಕಾರ್ಮಿಕರ ಸಂಘಟನೆಗೆ ಒತ್ತು ನೀಡುವ ಘೋಷಣೆಗಳು ಕೇಳಿಬಂದವು.



ಇಂಡೊನೇಷ್ಯಾದ ದ್ವೀಪ ಪ್ರದೇಶದ ಸುರಬಯದಲ್ಲಿ ಗುರುವಾರ ನಡೆದ ಕಾರ್ಮಿಕರ ದಿನ ಸಮಾವೇಶದಲ್ಲಿ ಸಾವಿರಾರು ಶ್ರಮಿಕರು ಸೇರಿದ್ದರು ಎಎಫ್‌ಪಿ ಚಿತ್ರ

ಅಮೆರಿಕ– ಉಕ್ರೇನ್ ಆರ್ಥಿಕ ಒಪ್ಪಂದ

ವಾಷಿಂಗ್ಟನ್ (ಎ.ಪಿ): ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಸತತ ಒತ್ತಡಕ್ಕೆ ಮಣಿದಿರುವ ಉಕ್ರೇನ್ ಬುಧವಾರ ಅಮೆರಿಕದ ಜೊತೆಗೆ ಆರ್ಥಿಕ ಒಪ್ಪಂದಕ್ಕೆ ಸಹಿ ಹಾಕಿದೆ.

ರಷ್ಯಾದ ಅತಿಕ್ರಮಣ ಎದುರಿಸಲು ಸೇನಾ ಮತ್ತು ಆರ್ಥಿಕ ನೆರವು ನೀಡಿದ್ದನ್ನು ಸರಿತೂಗಿಸಲು ಆರ್ಥಿಕ ಒಪ್ಪಂದಕ್ಕೆ ಒಳಪಡಬೇಕು ಎಂದು ಟ್ರಂಪ್ ಅವರು ಒತ್ತಡ ಹೇರಿದ್ದರು.

ಉಕ್ರೇನ್‌ನ ಮರುನಿರ್ಮಾಣಕ್ಕೆ ಅಗತ್ಯ ಹೂಡಿಕೆ ಜೊತೆಗೆ ಉಕ್ರೇನ್‌ನಲ್ಲಿ ಇರುವ ಖನಿಜನಿಕ್ಷೇಪಗಳು ಸೇರಿದಂತೆ ಪ್ರಾಕೃತಿಕ ಸಂಪನ್ಮೂಲ ಬಳಕೆಗೆ ಅಮೆರಿಕಕ್ಕೆ ಈ ಒಪ್ಪಂದ ಅನುವು ಮಾಡಿಕೊಡಲಿದೆ.

ನಿಧನ ವಾರ್ತೆ

ಮಾಜಿ ಸಚಿವೆ ಗಿರಿಜಾ ವ್ಯಾಸ್



ಉದಯಪುರ (ರಾಜಸ್ಥಾನ) (ಪಿಟಿಐ): ಕಾಂಗ್ರೆಸ್‌ನ ಹಿರಿಯ ನಾಯಕಿ ಮತ್ತು ಕೇಂದ್ರದ ಮಾಜಿ ಸಚಿವರಾದ ಗಿರಿಜಾ ವ್ಯಾಸ್ (79) ಅವರು ಅಹಮದಾಬಾದ್‌ನ ಆಸ್ಪತ್ರೆಯಲ್ಲಿ ಗುರುವಾರ ಸಂಜೆ ನಿಧನರಾದರು.

ಮಾರ್ಚ್ 31ರಂದು ಮನೆಯಲ್ಲಿ ಆರತಿ ಮಾಡುವಾಗ ಸುಟ್ಟ ಗಾಯಗಳಿಗೆ ಒಳಗಾಗಿದ್ದ ಅವರನ್ನು ಆಸ್ಪತ್ರೆಗೆ ದಾಖಲಿಸಲಾಗಿತ್ತು.

ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲಿ ಸಚಿವರಾಗಿ ಸೇವೆ ಸಲ್ಲಿಸಿದ್ದ ಗಿರಿಜಾ ಅವರು ರಾಜಸ್ಥಾನದ ಪಿಸಿಸಿ ಅಧ್ಯಕ್ಷರಾಗಿ, ರಾಷ್ಟ್ರೀಯ ಮಹಿಳಾ ಆಯೋಗದ ಅಧ್ಯಕ್ಷರಾಗಿಯೂ ಕಾರ್ಯ ನಿರ್ವಹಿಸಿದ್ದರು. ಮೃತರ ಅಂತ್ಯಕ್ರಿಯೆ ಶುಕ್ರವಾರ ಉದಯಪುರದಲ್ಲಿ ನಡೆಯಲಿದೆ ಎಂದು ಕುಟುಂಬದವರು ತಿಳಿಸಿದ್ದಾರೆ.

ಪೌರಕಾರ್ಮಿಕರ ವೇತನ ₹39,000

ಒಂದನೇ ಪುಟದಿಂದ...

'ನಮ್ಮ ಪಕ್ಷ ಮತ್ತು ಸರ್ಕಾರ ಬಡವರ, ಹಿಂದುಳಿದವರ, ತುಳಿತಕ್ಕೆ ಒಳಗಾದವರ ಪರ ಇದ್ದೇ ಇದೆ. ಪೌರಕಾರ್ಮಿಕರಿಗೆ ಮೊದಲು ತಿಂಗಳ ವೇತನ ₹7,000 ಇತ್ತು. ಅದೂ ಗುತ್ತಿಗೆದಾರರ ಮೂಲಕ ಪಾವತಿ ಆಗುತ್ತಿತ್ತು. ಅದರಲ್ಲಿ ಬಹಳ ಸಮಸ್ಯೆ ಇತ್ತು. ನಮ್ಮ ಹಿಂದಿನ ಸರ್ಕಾರದಲ್ಲಿ ಅವರ ವೇತನವನ್ನು ₹17,000ಕ್ಕೆ ಹೆಚ್ಚಿಸಿದ್ದೆವು. ನೇರವಾಗಿ ಪೌರಕಾರ್ಮಿಕರೇ ವೇತನ ಪಡೆಯುವ ವ್ಯವಸ್ಥೆ ಜಾರಿಗೆ ತಂದಿದ್ದೆವು. ಈಗ ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಸೇವೆ ಕಾಯಂ ಮಾಡಿದ್ದೇವೆ' ಎಂದರು.

ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, 'ಪೌರಕಾರ್ಮಿಕರ ಸೇವೆ ಕಾಯಂ ನಮ್ಮ ಪ್ರಣಾಳಿಕೆಯಲ್ಲಿ ಇತ್ತು. ನಾವು ಭರವಸೆಯನ್ನು ಈಡೇರಿಸಿದ್ದೇವೆ. ಒಂದು ರೂಪಾಯಿ ಲಂಚ ಪಡೆಯದೇ 12,692 ಪೌರ ಕಾರ್ಮಿಕರಿಗೆ ಕಾಯಂ ಹುದ್ದೆ ನೀಡಿದ್ದೇವೆ. ಅವರು ನಿವೃತ್ತಿಯಾದಾಗ ಅವರ ಖಾತೆಯಲ್ಲಿ ₹10 ಲಕ್ಷ ಠೇವಣಿ ಇರಿಸಲಾಗುತ್ತದೆ. ತಿಂಗಳಿಗೆ ₹6,000 ಪಿಂಚಣಿ ನೀಡಲಾಗುತ್ತದೆ' ಎಂದು ಹೇಳಿದರು.

'ರಾಷ್ಟ್ರಕವಿ ಕುವೆಂಪು ಅವರು ಶಿವನನ್ನು ಪೌರಕಾರ್ಮಿಕರಿಗೆ ಹೋಲಿಸಿದ್ದಾರೆ. ಶಿವನನ್ನು ಅವರು 'ಜಗದ ಜಲಗಾರ' ಎಂದಿದ್ದಾರೆ. ಸ್ವಚ್ಛತಾ ಸೇನಾನಿಗಳದ್ದು ಅಷ್ಟು ಮಹತ್ವದ ಕೆಲಸ. ನೀವು ಇಲ್ಲದೇ ಇದ್ದರೆ, ಬೆಂಗಳೂರು ನಾರುತ್ತದೆ. ಪೌರಕಾರ್ಮಿಕರ ಅಭಿವೃದ್ಧಿಗಾಗಿ ಬಿಬಿಎಂಪಿ ಬಜೆಟ್‌ನಲ್ಲಿ ₹600 ಕೋಟಿ, ಅವರ ಮಕ್ಕಳ ಶಿಕ್ಷಣಕ್ಕಾಗಿ ₹700 ಕೋಟಿ ತೆಗೆದಿರಿಸಿದ್ದೇವೆ' ಎಂದರು.

ರಾಜ್ಯದ ಎಲ್ಲೆಡೆ ಕಾಯಂ ಮಾಡಿ: ಖರ್ಗೆ

ಒಂದನೇ ಪುಟದಿಂದ...

'ಬಿಬಿಎಂಪಿ ವ್ಯಾಪ್ತಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಕೆಲ ಪೌರಕಾರ್ಮಿಕರಿಗೆ ಕಾಯಂ ನೇಮಕಾತಿ ಆಗಿಲ್ಲ. ಸಿಂಧುತ್ವ ವಿಚಾರದಲ್ಲಿ ಕೆಲವು ಗೊಂದಲಗಳಿರುವ ಕಾರಣಕ್ಕೆ ಹೀಗಾಗಿದೆ. ಈ ಬಗ್ಗೆ ಪ್ರತ್ಯೇಕ ಬೂತ್ ಆರಂಭಿಸಿ, ದಾಖಲೆಗಳನ್ನು ಪರಿಶೀಲನೆ ಮಾಡಿಸಿ ನ್ಯಾಯ ಒದಗಿಸುತ್ತೇವೆ' ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಅಮಾಯಕರ ಬಂಧನ'

ಒಂದನೇ ಪುಟದಿಂದ...

ಪತ್ರಿಕಾಗೋಷ್ಠಿಯಲ್ಲಿ ಗುರುವಾರ ಮಾತನಾಡಿದ ಅವರು 'ಪಹಲ್ಗಾಮ್ ಘಟನೆ ನಡೆದ ನಂತರ ದೇಶದಲ್ಲಿ ಪ್ರಕ್ಷುಬ್ಧ ವಾತಾವರಣ ನಿರ್ಮಾಣವಾಗಿದ್ದು ದೇಶವಿರೋಧಿ ಚಟುವಟಿಕೆ ಕಂಡುಬಂದರೆ ಜನರು ಆಕ್ರೋಶಗೊಳ್ಳುವ ಪರಿಸ್ಥಿತಿ ಇದೆ. ನನ್ನ ಕ್ಷೇತ್ರದಲ್ಲಿ ಆಗಿರುವ ಗುಂಪು ಹಲ್ಲೆ ಮತ್ತು ಕೊಲೆ ಕೂಡ ಇದೇ ರೀತಿ ಉದ್ವೇಗದಿಂದ ಆಗಿರುವ ಸಾಧ್ಯತೆ ಇದೆ. ಅದನ್ನು ಅಪರಾಧ ಪ್ರಕರಣವಾಗಿ ನೋಡಬೇಕೇ ಹೊರತು ಧರ್ಮ ಮತ್ತು ರಾಜಕೀಯ ಬಣ್ಣ ಕೊಡುವುದು ಸರಿಯಲ್ಲ' ಎಂದರು.

'ಪಾಕಿಸ್ತಾನದ ಪರ ಘೋಷಣೆ ಕೂಗಿದ್ದಕ್ಕೆ ಆಕ್ರೋಶಗೊಂಡ ಗುಂಪು ಯುವಕನನ್ನು ಕೊಂದಿದೆ ಎಂದು ಎಫ್‌ಐಆರ್‌ನಲ್ಲೇ ದಾಖಲಾಗಿದೆ. ಆದರೆ ಘೋಷಣೆ ಕೂಗಿದವ ಮಾನಸಿಕ ಅಸ್ವಸ್ಥ ಎಂದು ಹೇಳುವುದು ನೆಪ. ದೇಶದ್ರೋಹದ ಕೃತ್ಯ ಎಸಗಿದವರನ್ನು ಮತ್ತು ವಿಕೃತಿ ಮೆರೆದವರನ್ನು ಈ ಹಿಂದೆಯೂ ಮಾನಸಿಕ ಅಸ್ವಸ್ಥರು ಎಂದು ಹೇಳಿದ ಉದಾಹರಣೆಗಳು ಇವೆ. ಬೆಂಗಳೂರಿನಲ್ಲಿ ದನದ ಕೆಚ್ಚಲು ಕೊಯ್ದವರು, ಮಂಗಳೂರು ಉತ್ತರ ಕ್ಷೇತ್ರದಲ್ಲಿ ಯುವತಿಯರ ಮೇಲೆ ದೌರ್ಜನ್ಯ ಎಸಗಿದವರು ಎಲ್ಲರೂ ಮಾನಸಿಕ ಅಸ್ವಸ್ಥರು ಹೇಗಾಗುತ್ತಾರೆ' ಎಂದು ಶಾಸಕರು ಪ್ರಶ್ನಿಸಿದರು.

ಹಮ್‌ದರ್ದ್ ವಿರುದ್ಧದ ಆಕ್ಷೇಪಾರ್ಹ ಮಾತು ಅಳಿಸಲು ತಾಕೀತು

ಒಂದನೇ ಪುಟದಿಂದ...

ನ್ಯಾಯಾಂಗ ನಿಂದನೆ ಕ್ರಮ ಜರುಗಿಸಬೇಕಾಗುತ್ತದೆ ಎಂಬ ಎಚ್ಚರಿಕೆ ನೀಡಿದ ನಂತರ, ಆಕ್ಷೇಪಾರ್ಹವಾದ ವಿಷಯಗಳನ್ನು ವಿಡಿಯೊದಿಂದ 24 ತಾಸುಗಳಲ್ಲಿ ಅಳಿಸಲಾಗುತ್ತದೆ ಎಂದು ರಾಮದೇವ ಪರ ವಕೀಲರು ನ್ಯಾಯಾಲಯಕ್ಕೆ ಭರವಸೆ ನೀಡಿದರು.

ತನ್ನ ಆದೇಶವನ್ನು ಪಾಲಿಸಿರುವ ಬಗ್ಗೆ ಪ್ರಮಾಣಪತ್ರ ಸಲ್ಲಿಸುವಂತೆ ರಾಮದೇವ ಅವರಿಗೆ ಸೂಚಿಸಿದ ನ್ಯಾಯಾಲಯವು ವಿಚಾರಣೆಯನ್ನು ಶುಕ್ರವಾರಕ್ಕೆ ಮುಂದೂಡಿದೆ.

ಹಮ್‌ದರ್ದ್ ಕಂಪನಿಯ ಪರವಾಗಿ ವಾದಿಸಿದ ಹಿರಿಯ ವಕೀಲ ಸಂದೀಪ್ ಸೇಥಿ, 'ರಾಮದೇವ ಅವರ ವಿಡಿಯೊ ಕೋಮು ಭಾಷಣದ ರೀತಿಯಲ್ಲಿ ಇದೆ. ಅವರು ಇತರರ ಉತ್ಪನ್ನಗಳ ಬದಲು ತಮ್ಮ ಉತ್ಪನ್ನ ಬಳಸುವಂತೆ ಗ್ರಾಹಕರಿಗೆ ಹೇಳಿ, ಅವರ ನಡುವೆ ಕೋಮು ಆಧಾರದಲ್ಲಿ ವಿಭಜನೆ ಸೃಷ್ಟಿಸುತ್ತಿದ್ದಾರೆ' ಎಂದು ದೂರಿದರು.

ವಿಡಿಯೊ ಅಭಿರುಚಿ ಸರಿಯಿಲ್ಲದಿರಬಹುದು, ಅದು ಮಾನಹಾನಿಕರವೂ ಆಗಿರಬಹುದು. ಆದರೆ ಅದು ಇತರ ಕಂಪನಿಗಳ ಉತ್ಪನ್ನಗಳ ಬಗ್ಗೆ ಅಗೌರವ ತೋರುವಂತೆ ಇಲ್ಲ ಎಂದು ರಾಮದೇವ ಮತ್ತು ಪತಂಜಲಿ ಪರ ವಕೀಲರು ಹೇಳಿದರು.

ಹಮ್‌ದರ್ದ್ ಕಂಪನಿಯ 'ರೂಹ್ ಅಫ್ಜಾ' ಪಾನೀಯದ ಬಗ್ಗೆ ರಾಮದೇವ ಅವರು 'ಶರಬತ್ ಜಿಹಾದ್' ಎಂದು ಹೇಳಿದ್ದು ತನ್ನ ಆತ್ಮಸಾಕ್ಷಿಯನ್ನು ಕಲಕಿದೆ ಎಂದು ನ್ಯಾಯಾಲಯ ಏಪ್ರಿಲ್ 22ರಂದು ಹೇಳಿತ್ತು. ಈ ಹೇಳಿಕೆಗೆ ಸಮರ್ಥನೆ ಇಲ್ಲ ಎಂದೂ ಅದು ಹೇಳಿತ್ತು. ಆಗ ರಾಮದೇವ ಅವರು, ಸಂಬಂಧಪಟ್ಟ ವಿಡಿಯೊಗಳು ಹಾಗೂ ಸಾಮಾಜಿಕ ಜಾಲತಾಣಗಳಲ್ಲಿನ ಪೋಸ್ಟ್‌ಗಳನ್ನು ತಕ್ಷಣವೇ ಅಳಿಸಿಹಾಕುವುದಾಗಿ ಭರವಸೆ ನೀಡಿದ್ದರು.

ಪತಂಜಲಿ ಕಂಪನಿಯ 'ಗುಲಾಬ್ ಶರಬತ್' ಬಗ್ಗೆ ಪ್ರಚಾರ ಮಾಡುವ ಸಂದರ್ಭದಲ್ಲಿ ರಾಮದೇವ ಅವರು, ಹಮ್‌ದರ್ದ್‌ನ 'ರೂಹ್ ಅಫ್ಜಾ' ಪಾನೀಯದಿಂದ ಸಿಗುವ ಹಣದಿಂದ ಮದರಸಾಗಳನ್ನು, ಮಸೀದಿಗಳನ್ನು ನಿರ್ಮಿಸಲಾಗುತ್ತದೆ ಎಂಬುದಾಗಿ ಆರೋಪಿಸಿದ್ದರು ಎಂದು ಹಮ್‌ದರ್ದ್ ಪರ ವಕೀಲರು ಹೇಳಿದ್ದರು.

ಪಾಕ್ ಭದ್ರತಾ ಸಲಹೆಗಾರರಾಗಿ ಮಲ್ಲಿಕ್ ನೇಮಕ

ಇಸ್ಲಾಮಬಾದ್ (ಪಿಟಿಐ): ಐಎಸ್‌ಐ ಮುಖ್ಯಸ್ಥ, ಲೆಫ್ಟಿನೆಂಟ್ ಜನರಲ್ ಮೊಹಮ್ಮದ್ ಅಸೀಂ ಮಲ್ಲಿಕ್ ಅವರನ್ನು ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ಪಾಕಿಸ್ತಾನ ಸರ್ಕಾರ ನೇಮಿಸಿದೆ.

ಪಾಕಿಸ್ತಾನದ ಗುಪ್ತಚರ ಸಂಸ್ಥೆಯ ಮುಖ್ಯಸ್ಥರಾಗಿ ಮಲ್ಲಿಕ್ 2024ರ ಅಕ್ಟೋಬರ್‌ನಲ್ಲಿ ನೇಮಕ ಆಗಿದ್ದರು.

ಈ ಕುರಿತು ಅಧಿಸೂಚನೆಯಲ್ಲಿ, 'ತಕ್ಷಣದಿಂದ ಜಾರಿಗೆ ಬರುವಂತೆ ಮಲ್ಲಿಕ್ ಅವರಿಗೆ ಹೆಚ್ಚುವರಿಯಾಗಿ ಎನ್‌ಎಸ್‌ಎ ಹೊಣೆ ವಹಿಸಲಾಗಿದೆ' ಎಂದು ಸರ್ಕಾರ ತಿಳಿಸಿದೆ.

ಐಎಸ್‌ಐ ಮುಖ್ಯಸ್ಥರನ್ನೇ ರಾಷ್ಟ್ರೀಯ ಭದ್ರತಾ ಸಲಹೆಗಾರರಾಗಿ ನೇಮಿಸಿರುವುದು ಇದೇ ಮೊದಲು. ಕಾಶ್ಮೀರದ ಪಹಲ್ಗಾಮ್‌ನಲ್ಲಿ ಉಗ್ರರ ದಾಳಿಯಿಂದಾಗಿ ಭಾರತ–ಪಾಕ್ ಗಡಿಯಲ್ಲಿ ಉದ್ವಿಗ್ನ ಸ್ಥಿತಿ ತಲೆದೋರಿರುವ ಕಾರಣ ಈ ನೇಮಕ ಮಹತ್ವ ಪಡೆದುಕೊಂಡಿದೆ.

ಪಹಲ್ಗಾಮ್ ಭಯೋತ್ಪಾದಕರ ದಾಳಿ: ನ್ಯಾಯಾಂಗ ತನಿಖೆಗೆ ಸುಪ್ರೀಂ ಕೋರ್ಟ್ ನಕಾರ, ಅರ್ಜಿದಾರರಿಗೆ ತರಾಟೆ

‘ಭದ್ರತಾ ಪಡೆ ಮನೋಬಲ ಕುಗ್ಗಿಸಬೇಡಿ’

ಪ್ರಜಾವಾಣಿ ವಾರ್ತೆ



ನವದೆಹಲಿ: ಪಹಲ್ಗಾಮ್‌ನಲ್ಲಿ ಏಪ್ರಿಲ್ 22ರಂದು ನಡೆದ ಭಯೋತ್ಪಾದಕ ದಾಳಿಯಲ್ಲಿ 26 ಜನರು ಮೃತಪಟ್ಟ ಘಟನೆಯ ನ್ಯಾಯಾಂಗ ತನಿಖೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಪರಿಗಣಿಸಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿತು.

ನಿವೃತ್ತ ನ್ಯಾಯಮೂರ್ತಿಗಳ ಮೇಲ್ವಿಚಾರಣೆಯಲ್ಲಿ ಪಹಲ್ಗಾಮ್ ದಾಳಿಯ ತನಿಖೆ ನಡೆಸಬೇಕು ಎಂದು ಕೋರಿದ ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡ ನ್ಯಾಯಮೂರ್ತಿಗಳಾದ ಸೂರ್ಯ ಕಾಂತ್ ಮತ್ತು ಎನ್. ಕೋಟೀಶ್ವರ್ ಸಿಂಗ್ ಪೀಠವು, ‘ನಿವೃತ್ತ ನ್ಯಾಯಮೂರ್ತಿಗಳು ತಜ್ಞರಲ್ಲ’ ಎಂದು ಹೇಳಿತು.

‘ಇಂತಹ ನಿರ್ಣಾಯಕ ಸಮಯದಲ್ಲಿ, ದೇಶದ ಪ್ರತಿಯೊಬ್ಬ ನಾಗರಿಕರು ಭಯೋತ್ಪಾದನೆಯ ವಿರುದ್ಧ ಹೋರಾಡಲು ಕೈಜೋಡಿಸಿದ್ದಾರೆ. ಈ ರೀತಿಯ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸುವ ಮೂಲಕ ಭದ್ರತಾ ಪಡೆಗಳ ಮನೋಬಲ ಕುಗ್ಗಿಸಲು ಬಯಸುತ್ತೀರಾ. ಈ ರೀತಿಯ ವಿಷಯವನ್ನು ಇಲ್ಲಿಗೆ ತರಬೇಡಿ’ ಎಂದು ಪೀಠವು ಕಟುವಾಗಿ ಹೇಳಿತು.


ಸಾರ್ವಜನಿಕ ಹಿತಾಸಕ್ತಿ ಅರ್ಜಿ ಹಿಂಪಡೆಯುವಂತೆ ಅರ್ಜಿದಾರರಾದ ಫತೇಶ್ ಕುಮಾರ್ ಸಾಹು ಹಾಗೂ ಇತರರಿಗೆ ಪೀಠವು ಸೂಚಿಸಿತು.

ಅರ್ಜಿದಾರರು ವಿಷಯದ ಸೂಕ್ಷ್ಮತೆ ಅರಿತುಕೊಳ್ಳುವಂತೆ ಮತ್ತು ಭದ್ರತಾ ಪಡೆಗಳ ಮನೋಬಲ ಕುಗ್ಗಿಸುವ ಯಾವುದೇ ಅರ್ಜಿ ಸಲ್ಲಿಸದಂತೆ ಪೀಠ ಸಲಹೆ ನೀಡಿತು.

‘ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿಯವರು ತನಿಖೆ ನಡೆಸಬೇಕು ಎಂದು ನೀವು ಕೇಳುತ್ತಿದ್ದೀರಿ. ಅವರು ತನಿಖೆಯಲ್ಲಿ ಪರಿಣತರಲ್ಲ. ಆದರೆ, ಅವರು ವಿಷಯದ ಬಗ್ಗೆ ನಿರ್ಣಯ ಕೈಗೊಳ್ಳಬಹುದು. ಈ ವಿಷಯದ ಬಗ್ಗೆ ಆದೇಶ ಹೊರಡಿಸುವಂತೆ ನಮ್ಮನ್ನು ಕೇಳಬೇಡಿ. ನೀವು ಎಲ್ಲಿಗೆ ಹೋಗಬೇಕೆಂದರೂ ಹೋಗಿ. ನೀವು ಹಿಂದೆ ಸರಿಯುವುದು ಉತ್ತಮ’ ಎಂದು ಪೀಠವು ಹೇಳಿತು.

ಪ್ರವಾಸಿಗರ ಸುರಕ್ಷತೆ ಖಚಿತಪಡಿಸಿಕೊಳ್ಳಲು ಕೇಂದ್ರ ಮತ್ತು ಜಮ್ಮು-ಕಾಶ್ಮೀರ ಸರ್ಕಾರಕ್ಕೆ ನಿರ್ದೇಶನ ನೀಡಬೇಕು ಎಂದೂ ಪಿಐಎಲ್‌ನಲ್ಲಿ ಕೋರಲಾಗಿತ್ತು.

‘ದೇಶ ಶೋಕದಲ್ಲಿರುವಾಗ ಜಾತಿಗಣತಿ ಘೋಷಣೆ: ಉದ್ದೇಶವೇನು?’



ಜೈರಾಮ್ ರಮೇಶ್

ನವದೆಹಲಿ: ‘ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿ ವಿಚಾರವಾಗಿ ಇಡೀ ದೇಶವೇ ಶೋಕದಲ್ಲಿದೆ. ಇದರ ಮಧ್ಯದಲ್ಲಿ ಪ್ರಧಾನಿ ಮೋದಿ ಅವರು ಜಾತಿಗಣತಿ ನಡೆಸುವುದಾಗಿ ಘೋಷಿಸಿದ್ದಾರೆ. ಹಾಗಾದರೆ, ಈ ಇದರ ಹಿಂದಿನ ಉದ್ದೇಶವೇನು? ಡೆಡ್‌ಲೈನ್ ಇಲ್ಲದೆಯೇ ಹೆಡ್‌ಲೈನ್ ನೀಡುವುದರಲ್ಲಿ ಮೋದಿ ಅವರು ನಿಷ್ಣಾತರು’ ಎಂದು ಕಾಂಗ್ರೆಸ್ ಟೀಕಿಸಿದೆ.

ಪಕ್ಷದ ಪ್ರಧಾನ ಕಚೇರಿಯಲ್ಲಿ ಗುರುವಾರ ಮಾಧ್ಯಮಗೋಷ್ಠಿ ನಡೆಸಿದ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್, ‘11 ವರ್ಷಗಳ ದೀರ್ಘ ಮೌನದ ಬಳಿಕ, ಸರ್ಕಾರ ಜಾತಿಗಣತಿ ನಡೆಸುವ ಅಚ್ಚರಿಯ ಘೋಷಣೆ ಮಾಡಿದೆ. ಜಾತಿಗಣತಿಯು ಬಹಳ ಮುಖ್ಯ ವಿಚಾರ. ಆದರೆ, ಸದ್ಯಕ್ಕೆ ಪಹಲ್ಗಾಮ್‌ನಲ್ಲಿ ನಡೆದ ಉಗ್ರರ ದಾಳಿಯೇ ಮುಖ್ಯವಾದುದು. ಹತ್ಯೆಯಾದ ಕುಟುಂಬಗಳು ನ್ಯಾಯಕ್ಕಾಗಿ ಕಾಯುತ್ತಿವೆ. ಇಂಥಾ ಹೊತ್ತಿನಲ್ಲಿ ಪ್ರಧಾನಿ ಅವರು ಚುನಾವಣಾ ಭಾಷಣ, ಹೆಡ್‌ಲೈನ್ ಲಾಲಸೆಯಲ್ಲಿಯೇ ಮುಳುಗಿದ್ದಾರೆ’ ಎಂದರು.

ಸಿಡಬ್ಲ್ಯುಸಿ ಸಭೆ: ಗಣತಿ ವೇಳೆಯೇ ಜಾತಿಗಣತಿಯನ್ನೂ ಮಾಡುವುದಾಗಿ ಘೋಷಣೆ ಮಾಡಿರುವ ಕೇಂದ್ರ ಸರ್ಕಾರದ ನಿರ್ಧಾರದ ಕುರಿತು ಚರ್ಚಿಸಲು ಶುಕ್ರವಾರ ಸಂಜೆ 4ಕ್ಕೆ ಸಿಡಬ್ಲ್ಯುಸಿ ಸಭೆ ನಡೆಯಲಿದೆ ಮೂಲಗಳ ಹೇಳಿವೆ. ಸರ್ಕಾರದ ನಿರ್ಧಾರ ಕುರಿತು ಮುಂದೇನು ಮಾಡಬೇಕು ಎಂಬ ಬಗ್ಗೆ ಚರ್ಚೆ ನಡೆಯಲಿದೆ.

- ಸಾಮಾಜಿಕ ನ್ಯಾಯ ನೀಡುವ ವಿಚಾರದಲ್ಲಿ ಕಾಂಗ್ರೆಸ್ ಬಹಳ ಹಿಂದೆ ಇದೆ ಎಂದು ಆರೋಪಿಸಲಾಗುತ್ತಿದೆ. ಆದರೆ, ಸಂವಿಧಾನಕ್ಕೆ ಮೊದಲ ಬಾರಿ ತಿದ್ದುಪಡಿ ತಂದು ಮೀಸಲಾತಿಯನ್ನು ರಕ್ಷಿಸುವ ಕಾರ್ಯವನ್ನು ನೆಹರೂ ಅವರು ಮಾಡಿದ್ದರು
- ಜಿಎಸ್‌ಟಿ, ಆಧಾರ್ ಕಾರ್ಡ್, ನರೇಗಾ ಮತ್ತು ಆಹಾರ ಭದ್ರತಾ ಕಾಯ್ದೆ ವಿಚಾರಗಳಲ್ಲಿ ಯೂ–ಟರ್ನ್ ಹೊಡೆದಂತೆಯೇ ಮೋದಿ ಅವರು ಜಾತಿಗಣತಿ ವಿಚಾರದಲ್ಲಿಯೂ ಯೂ–ಟರ್ನ್ ಹೊಡುಯುತ್ತಿದ್ದಾರೆ. ಬಹುಶಃ ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರಿಂದ ಯೂ–ಟರ್ನ್ ಹೊಡೆಯುವ ಕಲೆ ಕಲಿತಿರಬಹುದು

‘ಜಾತಿಗಣತಿ ಬಹಿರಂಗ ಮಾಡಲಾಗಲಿಲ್ಲ’: ‘2011ರಲ್ಲಿ ಮನಮೋಹನ್ ಸಿಂಗ್ ಅವರು ಪ್ರಧಾನಿಯಾಗಿದ್ದ ಸಂದರ್ಭದಲ್ಲಿ ಸಾಮಾಜಿಕ–ಆರ್ಥಿಕ ಮತ್ತು ಜಾತಿಗಣತಿ ನಡೆದಿತ್ತು. ಆದರೆ, ಈ ಗಣತಿಯಲ್ಲಿ ಹಲವು ತಪ್ಪುಗಳಿದ್ದವು. ನಾನೇ ಆಗ ಸಚಿವನಾಗಿದ್ದೆ. ಜಾತಿಗಣತಿಯಲ್ಲಿನ ತಪ್ಪುಗಳನ್ನು ಸರಿಪಡಿಸಲು ನಾನು ರಾಜ್ಯಗಳೊಂದಿಗೆ ಮಾತುಕತೆ ನಡೆಸಿದ್ದೇನೆ. ಆಮೇಲೆ, ಚುನಾವಣೆ ಬಂತು, ನೀತಿ ಸಂಹಿತೆ ಜಾರಿಯಾಯಿತು. ನಾವು ಕಲೆಹಾಕಿದ್ದ ಮಾಹಿತಿಗಳನ್ನು ಬಹಿರಂಗ ಮಾಡಲು ಸಾಧ್ಯವಾಗಲಿಲ್ಲ’ ಎಂದು ಜೈರಾಮ್ ರಮೇಶ್ ನೆನಪಿಸಿಕೊಂಡರು.

‘ಈಗಲೂ ಈ ಮಾಹಿತಿಯನ್ನೇ ಮೋದಿ ಸರ್ಕಾರ ಬಳಕೆ ಮಾಡಿಕೊಳ್ಳುತ್ತಿದ್ದೆ ಎಂಬುದು ನನಗೆ ಸಂತೋಷದ ವಿಚಾರ. ಆದರೆ, ಈ ಮಾಹಿತಿಗಳನ್ನು ವಿಂಗಡಿಸುವ ಕಾರ್ಯವನ್ನು ಮೋದಿ ಸರ್ಕಾರ ನಿಲ್ಲಿಸಿಯೇ ಬಿಟ್ಟಿತು’ ಎಂದರು.

‘ಪತಿಯನ್ನು ಷಂಡ ಎಂದಿದ್ದೇ ಆತ್ಮಹತ್ಯೆಗೆ ಪ್ರಚೋದನೆ ಆಗದು’

ನವದೆಹಲಿ: ಆರೋಪಿಯು ನಿಂದನಾತ್ಮಕ ಭಾಷೆ ಬಳಸಿ, ಅವಮಾನ ಆಗುವಂತೆ ವರ್ತಿಸಿದ್ದಾನೆ ಎಂದಮಾತ್ರಕ್ಕೆ ಅದು ಆತ್ಮಹತ್ಯೆಗೆ ಪ್ರಚೋದನೆ ಎನ್ನಲು ಆಗುವುದಿಲ್ಲ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ವ್ಯಕ್ತಿಯು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಪ್ರಚೋದನೆ ನೀಡುವುದು ಆರೋಪಿಯ ಉದ್ದೇಶವಾಗಿತ್ತು ಎನ್ನುವುದಕ್ಕೆ ಸಾಕ್ಷ್ಯಗಳು ಬೇಕು ಎಂದು ಅದು ವಿವರಿಸಿದೆ.

ಪತಿ ದಿನೇಶ್ ಆತ್ಮಹತ್ಯೆ ಮಾಡಿಕೊಂಡಿದ್ದಕ್ಕಾಗಿ ಪತ್ನಿ ಮತ್ತು ಆಕೆಯ ಕೆಲವು ಸಂಬಂಧಿಕರ ವಿರುದ್ಧ ನಡೆಯುತ್ತಿದ್ದ ಕ್ರಿಮಿನಲ್ ಪ್ರಕ್ರಿಯೆಗಳನ್ನು ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರು ಇರುವ ವಿಭಾಗೀಯ ಪೀಠವು ರದ್ದುಗೊಳಿಸಿದೆ. ದಿನೇಶ್ ಅವರು 2013ರ ಡಿಸೆಂಬರ್ 9ರಂದು ಆತ್ಮಹತ್ಯೆ ಮಾಡಿಕೊಂಡಿದ್ದರು.

ಎಫ್‌ಐಆರ್‌ನಲ್ಲಿ ವಿವರಿಸಿರುವ ಆರೋಪಗಳಲ್ಲಿ ‘ಪ್ರಚೋದನೆ’ಯ ಅಂಶಗಳು ಇಲ್ಲದಿರುವುದು ಸ್ಪಷ್ಟವಾಗಿರುವಾಗ, ಭಾರತೀಯ ದಂಡ ಸಂಹಿತೆಯ ಸೆಕ್ಷನ್ 306ರಲ್ಲಿ (ಆತ್ಮಹತ್ಯೆಗೆ ಪ್ರಚೋದನೆ) ವಿವರಿಸಿರುವ ಅಪರಾಧ ಕೃತ್ಯ ನಡೆದಿದೆ ಎನ್ನಲು ಅಗತ್ಯವಾಗಿರುವ ಅಂಶಗಳು ಇಲ್ಲ ಎಂದು ಪೀಠವು ಹೇಳಿದೆ.

‘ಹೀಗಿರುವಾಗ, ಮೇಲ್ಮನವಿದಾರರ ವಿರುದ್ಧ ಕ್ರಿಮಿನಲ್ ಪ್ರಕ್ರಿಯೆಗಳು ಮುಂದುವರಿಯುವುದು ಕಾನೂನು ಪ್ರಕ್ರಿಯೆಯನ್ನು ದುರ್ಬಳಕೆಯಂತೆ ಆಗುತ್ತದೆ’ ಎಂದು ನ್ಯಾಯಮೂರ್ತಿ ಮಸೀಹ್ ಅವರು ತೀರ್ಪಿನಲ್ಲಿ ಹೇಳಿದ್ದಾರೆ.

ಆರೋಪಿಗಳು ಮೃತ ದಿನೇಶ್ ಅವರ ಮೇಲೆ 2013ರ ನವೆಂಬರ್ 10ರಂದು ಹಲ್ಲೆ ನಡೆಸಿದ್ದರು, ಆತನನ್ನು ನಪುಂಸಕ, ಷಂಡ ಎಂದು ನಿಂದಿಸಿದ್ದರು, ಆತನ ಬೆತ್ತಲೆ ಚಿತ್ರಗಳನ್ನು ಇಂಟರ್ನೆಟ್ ಮೂಲಕ ಹಂಚುವುದಾಗಿ ಬೆದರಿಸಿದ್ದರು, ವರದಕ್ಷಿಣೆ ಕಿರುಕುಳದ ಸುಳ್ಳು ಪ್ರಕರಣದಲ್ಲಿ ಸಿಲುಕಿಸಿ ಆತನನ್ನು ಮತ್ತು ಆತನ ತಾಯಿಯನ್ನು ಜೈಲಿಗೆ ಕಳುಹಿಸುವುದಾಗಿ ಬೆದರಿಸಿದ್ದರು ಎಂದು ದೂರಲಾಗಿತ್ತು.

ದಿನೇಶ್ ಅವರು ಮರಣಪತ್ರವನ್ನು ಬರೆದಿದ್ದಾರೆ ಎನ್ನಲಾಗಿತ್ತು. ಆರೋಪಿಯಾದ ಪತ್ನಿ ಪುಷ್ಪಕಲಾಶ್ರೀ ಮತ್ತು ಇತರರ ವಿರುದ್ಧದ ಪ್ರಕರಣ ರದ್ದುಪಡಿಸಲು ಮದ್ರಾಸ್ ಹೈಕೋರ್ಟ್ 2018ರ ಏಪ್ರಿಲ್‌ನಲ್ಲಿ ನಿರಾಕರಿಸಿತ್ತು.

ಅನಧಿಕೃತ ಕಟ್ಟಡ ನಿರ್ಮಾಣ ವಿನಾಯಿತಿ ಬೇಡ: ‘ಸುಪ್ರೀಂ’

ನವದೆಹಲಿ (ಪಿಟಿಐ): ಅನಧಿಕೃತ ನಿರ್ಮಾಣಗಳಿಗೆ ಸಂಬಂಧಿಸಿದ ಪ್ರಕರಣಗಳಲ್ಲಿ ನ್ಯಾಯಾಲಯಗಳು ‘ಕಠಿಣವಾದ ನಿಲುವನ್ನು’ ತೋರಬೇಕು ಎಂದು ಹೇಳಿರುವ ಸುಪ್ರೀಂ ಕೋರ್ಟ್, ಇಂತಹ ನಿರ್ಮಾಣಗಳನ್ನು ನ್ಯಾಯಾಲಯಗಳು ಸಕ್ರಮಗೊಳಿಸಲು ಮುಂದಾಗಬಾರದು ಎಂಬ ಕಿವಿಮಾತು ಹೇಳಿದೆ.

ನಿಬಂಧನೆಗಳನ್ನು ಉಲ್ಲಂಘಿಸುವವರ ರಕ್ಷಣೆಗೆ ಕಾನೂನು ಮುಂದಾಗಬಾರದು. ಅಂಥವರ ರಕ್ಷಣೆಗೆ ಮುಂದಾದಲ್ಲಿ, ‘ತಮ್ಮನ್ನು ಪ್ರಶ್ನಿಸುವವರು ಯಾರೂ ಇಲ್ಲ ಎಂದು ಭಾವಿಸುವುದು ಹೆಚ್ಚಾಗುತ್ತದೆ’ ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

ಅನಧಿಕೃತ ನಿರ್ಮಾಣಕ್ಕೆ ಸಂಬಂಧಿಸಿದ ಅರ್ಜಿಯ ಕುರಿತಾಗಿ ಕಲ್ಕತ್ತ ಹೈಕೋರ್ಟ್ ನೀಡಿದ ಆದೇಶವನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯನ್ನು ಪೀಠವು ವಜಾಗೊಳಿಸಿದೆ. ಅನಧಿಕೃತ ಕಟ್ಟಡಗಳನ್ನು ಧ್ವಂಸಗೊಳಿಸುವ ಪ್ರಕ್ರಿಯೆ ಆರಂಭಿಸುವಂತೆ ಕೋಲ್ಕತ್ತ ಮಹಾನಗರ ಪಾಲಿಕೆಗೆ ಹೈಕೋರ್ಟ್ ಆದೇಶಿಸಿತ್ತು.

ತಹವ್ವುರ್ ರಾಣಾನ ಧ್ವನಿ ಮಾದರಿ ಸಂಗ್ರಹಕ್ಕೆ ಕೋರ್ಟ್ ಅನುಮತಿ

ನವದೆಹಲಿ (ಪಿಟಿಐ): ಮುಂಬೈ ಮೇಲಿನ ಭಯೋತ್ಪಾದಕ ದಾಳಿಯ ಆರೋಪಿ ತಹವ್ವುರ್ ಹುಸೇನ್ ರಾಣಾನ ಕೈಬರಹ ಹಾಗೂ ಆತನ ಧ್ವನಿಯ ಮಾದರಿಯನ್ನು ಸಂಗ್ರಹಿಸಲು ರಾಷ್ಟ್ರೀಯ ತನಿಖಾ ಸಂಸ್ಥೆಗೆ (ಎನ್‌ಐಎ) ದೆಹಲಿಯ ನ್ಯಾಯಾಲಯವೊಂದು ಅವಕಾಶ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಎನ್‌ಐಎ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಚಂದ್ರಜೀತ್ ಸಿಂಗ್ ಅವರು ಈ ಕುರಿತ ಆದೇಶವನ್ನು ಏಪ್ರಿಲ್ 30ರಂದು ಹೊರಡಿಸಿದ್ದಾರೆ. ಮುಂಬೈ ಮೇಲಿನ ದಾಳಿಯ ಪ್ರಮುಖ ಸೂತ್ರಧಾರ ಡೇವಿಡ್ ಹೆಡ್ಲಿ ಅಲಿಯಾಸ್ ದಾವೂದ್ ಗಿಲಾನಿಯ ಆಪ್ತ ರಾಣಾನನ್ನು ಈಚೆಗೆ ಭಾರತಕ್ಕೆ ಕರೆತರಲಾಗಿದೆ.

2008ರ ನವೆಂಬರ್ 26ರಂದು ಪಾಕಿಸ್ತಾನದ 10 ಮಂದಿ ಭಯೋತ್ಪಾದಕರು ಮುಂಬೈ ಮೇಲೆ ದಾಳಿ ನಡೆಸಿದ್ದರು. ಈ ದಾಳಿಯಲ್ಲಿ 166 ಮಂದಿ ಜೀವ ಕಳೆದುಕೊಂಡಿದ್ದರು.

ಎಲ್‌ಇಟಿ ಬಗ್ಗೆ ಮಾಹಿತಿ?: ವಿಚಾರಣೆ ಸಂದರ್ಭದಲ್ಲಿ ‘ಲಷ್ಕರ್ ಎ ತಯಬಾ’ ಉಗ್ರ ಸಂಘಟನೆಯ ಬಗ್ಗೆ ಹಾಗೂ ಅದರ ಭವಿಷ್ಯದ ಆಲೋಚನೆಗಳ ಬಗ್ಗೆ ರಾಣಾ ಮಾಹಿತಿ ಒದಗಿಸಬಹುದು ಎಂದು ಎನ್‌ಐಎ ಅಧಿಕಾರಿಗಳು ಕೋರ್ಟ್‌ಗೆ ತಿಳಿಸಿದ್ದಾರೆ.

ರಾಣಾನನ್ನು ವಶಕ್ಕೆ ಪಡೆಯಲು ವಾದ ಮಂಡಿಸುವ ಸಂದರ್ಭದಲ್ಲಿ ಎನ್‌ಐಎ ಈ ವಿಚಾರ ಪ್ರಸ್ತಾಪಿಸಿದೆ



ಕಟ್ಟೆಚ್ಚರ... ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಜಮ್ಮು ಮತ್ತು ಕಾಶ್ಮೀರದ ಶ್ರೀನಗರದಲ್ಲಿ ಕಟ್ಟೆಚ್ಚರ ವಹಿಸಲಾಗಿದ್ದು, ಯೋಧರು ಗುರುವಾರ ಗಸ್ತು ತಿರುಗಿದರು –ಪಿಟಿಐ ಚಿತ್ರ

ಉದ್ವಿಗ್ನತೆ ಶಮನ: ಭಾರತ, ಪಾಕ್‌ಗೆ ಅಮೆರಿಕ ಮನವಿ



ಮಾರ್ಕೊ ರುಬಿಯೊ

ನವದೆಹಲಿ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿಯ ಬಳಿಕ ಉಂಟಾಗಿರುವ ಉದ್ವಿಗ್ನ ಪರಿಸ್ಥಿತಿಯನ್ನು ತಿಳಿಗೊಳಿಸುವಂತೆ ಅಮೆರಿಕವು ಭಾರತ ಮತ್ತು ಪಾಕಿಸ್ತಾನಕ್ಕೆ ಮನವಿ ಮಾಡಿದೆ.

ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರೂಬಿಯೊ ಅವರು ಭಾರತದ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಮತ್ತು ಪಾಕ್ ಪ್ರಧಾನಿ ಶೆಹಬಾಜ್ ಷರೀಫ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದ್ದಾರೆ.

ಜೈಶಂಕರ್ ಅವರಿಗೆ ಬುಧವಾರ ರಾತ್ರಿ ಕರೆ ಮಾಡಿದ ರುಬಿಯೊ, ‘ಪಹಲ್ಗಾಮ್ ದಾಳಿಯಲ್ಲಿ ಮೃತಪಟ್ಟವರ ಕುಟುಂಬಗಳಿಗೆ ಸಂತಾಪ ಸೂಚಿಸಿದ್ದಾರೆ. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಭಾರತಕ್ಕೆ ನೆರವಾಗುವ ಅಮೆರಿಕದ ಬದ್ಧತೆಯನ್ನು ಪುನರುಚ್ಚರಿಸಿದ್ದಾರೆ’ ಎಂದು ಅಮೆರಿಕ ವಿದೇಶಾಂಗ ಸಚಿವಾಲಯ ತಿಳಿಸಿದೆ.

ಶೆಹಬಾಜ್ ಷರೀಫ್ ಜತೆಗಿನ ದೂರವಾಣಿ ಸಂಭಾಷಣೆಯಲ್ಲಿ ರುಬಿಯೊ ಅವರು, 26 ನಾಗರಿಕರ ಸಾವಿಗೆ ಕಾರಣವಾದ ದಾಳಿಗೆ ಸಂಬಂಧಿಸಿದ ತನಿಖೆಗೆ ಪಾಕಿಸ್ತಾನವು ಸಹಕಾರ ನೀಡಬೇಕು ಎಂದು ಕೋರಿದ್ದಾರೆ.

‘ಪಹಲ್ಗಾಮ್ ದಾಳಿ ಬಗ್ಗೆ ರುಬಿಯೊ ಜತೆ ಬುಧವಾರ ಚರ್ಚಿಸಲಾಗಿದೆ. ದಾಳಿ ನಡೆಸಿದ ಭಯೋತ್ಪಾದಕರು ಮತ್ತು ಎಲ್ಲ ಸಂಚುಕೋರರನ್ನು ಶಿಕ್ಷೆಗೆ ಗುರಿಪಡಿಸಬೇಕು’ ಎಂದು ಜೈಶಂಕರ್ ಅವರು ಗುರುವಾರ ‘ಎಕ್ಸ್’ನಲ್ಲಿ ಬರೆದಿದ್ದಾರೆ.

‘ಉದ್ವಿಗ್ನತೆ ತಗ್ಗಿಸಲು ಮತ್ತು ದಕ್ಷಿಣ ಏಷ್ಯಾದಲ್ಲಿ ಶಾಂತಿ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳಲು ಪಾಕಿಸ್ತಾನದೊಂದಿಗೆ ಮಾತುಕತೆ ನಡೆಸಲು ರುಬಿಯೊ ಅವರು ಭಾರತಕ್ಕೆ ಮನವಿ ಮಾಡಿದರು’ ಎಂದು ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರೆ ಟಾಮಿ ಬ್ರೂಸ್ ಹೇಳಿದ್ದಾರೆ.

‘ಪಾಕ್ ಪ್ರಧಾನಿ ಜತೆಗಿನ ಮಾತುಕತೆಯಲ್ಲಿ, ಭಾರತದ ಜತೆ ನೇರ ಮಾತುಕತೆ ನಡೆಸಿ ಬಿಗುವಿನ ವಾತಾವರಣ ಕಡಿಮೆ ಮಾಡಬೇಕು ಮತ್ತು ದಕ್ಷಿಣ ಏಷ್ಯಾದಲ್ಲಿ ಶಾಂತಿ ಕಾಪಾಡಿಕೊಳ್ಳಬೇಕು ಎಂದುಕೋರಿದರು. ದಾಳಿಯತನಿಖೆಗೆಸಹಕರಿಸುವಂತೆ ಪಾಕಿಸ್ತಾನದ ಅಧಿಕಾರಿಗಳಿಗೆ ಒತ್ತಾಯಿಸಿದರು’ ಎಂದು ಬ್ರೂಸ್ ಅವರು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ನೀಟ್– ತಪ್ಪು ಮಾಹಿತಿ: 106 ಟೆಲಿಗ್ರಾಂ ಚಾನೆಲ್‌ಗಳ ಪತ್ತೆ

ನವದೆಹಲಿ (ಪಿಟಿಐ): ನೀಟ್–ಯುಜಿ ಪರೀಕ್ಷೆಗೆ ಸಂಬಂಧಿಸಿದಂತೆ ತಪ್ಪು ಮಾಹಿತಿಗಳನ್ನು ಹರಡಿದ 106 ಟೆಲಿಗ್ರಾಂ, 16 ಇನ್‌ಸ್ಟಾಗ್ರಾಂ ಚಾನೆಲ್‌ಗಳನ್ನು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿಯು (ಎನ್‌ಟಿಎ) ಪತ್ತೆಹಚ್ಚಿದೆ.

ವೈದ್ಯಕೀಯ ಕೋರ್ಸ್‌ಗಳ ಮುಂಬರುವ ಪ್ರವೇಶ ಪರೀಕ್ಷೆಗೆ ಸಂಬಂಧಿಸಿದಂತೆ, ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದೆ ಎಂದು 1,500ಕ್ಕೂ ಅಧಿಕ ದೂರುಗಳು ಎನ್‌ಟಿಎಗೆ ಬಂದಿದ್ದವು. ನೀಟ್–ಯುಜಿ ಪರೀಕ್ಷಾ ಪ್ರಕ್ರಿಯೆ ಸಮಗ್ರತೆಯನ್ನು ಕಾಪಾಡುವ ದೃಷ್ಟಿಯಿಂದ ಎನ್‌ಟಿಎ ಈ ಕ್ರಮ ಕೈಗೊಂಡಿದೆ. ಪ್ರಶ್ನೆಪತ್ರಿಕೆ ಲಭ್ಯವಿದೆ ಎಂದು ತಪ್ಪು ಮಾಹಿತಿ ನೀಡಿದ ಚಾನೆಲ್‌ಗಳ ವಿರುದ್ಧ ಕಾನೂನು ಕ್ರಮ ತೆಗೆದುಕೊಂಡಿದೆ.

‘ತಪ್ಪು ಮಾಹಿತಿ ಹಂಚಿ, ವಿದ್ಯಾರ್ಥಿಗಳನ್ನು ದಿಕ್ಕು ತಪ್ಪಿಸಿದ 106 ಟೆಲಿಗ್ರಾಂ ಹಾಗೂ 16 ಇನ್‌ಸ್ಟಾಗ್ರಾಂ ಚಾನೆಲ್‌ಗಳನ್ನು ಗುರುತಿಸಲಾಗಿದೆ. ಪರಿಸ್ಥಿತಿ ಉಲ್ಬಣಗೊಳ್ಳುವುದನ್ನು ತಡೆಯಲು ಗೃಹ ಸಚಿವಾಲಯದ ಅಧೀನದಲ್ಲಿರುವ ಸೈಬರ್ ಅಪರಾಧ ಸಮನ್ವಯ ಕೇಂದ್ರಕ್ಕೆ ದೂರು ಸಲ್ಲಿಸಲಾಗಿದೆ’ ಎಂದು ಎನ್‌ಟಿಎ ಅಧಿಕಾರಿಗಳು ತಿಳಿಸಿದ್ದಾರೆ.

ತಪ್ಪು ಮಾಹಿತಿ ಹಂಚಿ, ಪರೀಕ್ಷಾ ಆಕಾಂಕ್ಷಿಗಳಲ್ಲಿ ಅನಗತ್ಯ ಗೊಂದಲ ಸೃಷ್ಟಿಸುತ್ತಿರುವ ಚಾನೆಲ್‌ಗಳನ್ನು ಕೂಡಲೇ ಸ್ಥಗಿತಗೊಳಿಸಬೇಕು ಎಂದು ಟೆಲಿಗ್ರಾಂ ಹಾಗೂ ಇನ್‌ಸ್ಟಾಗ್ರಾಂ ಸಂಸ್ಥೆಗೂ ಎನ್‌ಟಿಎ ಮನವಿ ಮಾಡಿಕೊಂಡಿದೆ. ಮೇ 4ರಂದು ನೀಟ್–ಯುಜಿ ವೈದ್ಯಕೀಯ ಪ್ರವೇಶ ಪರೀಕ್ಷೆ ನಡೆಯಲಿದೆ.

ಪಾಕಿಸ್ತಾನ ಜಿಂದಾಬಾದ್ ಘೋಷಣೆ: ಎಫ್‌ಐಆರ್

ಇಂದೋರ್ (ಪಿಟಿಐ): ಪಹಲ್ಗಾಮ್ ಭಯೋತ್ಪಾದಕ ದಾಳಿ ಖಂಡಿಸಿ, ಮಧ್ಯಪ್ರದೇಶದ ಇಂದೋರ್‌ನಲ್ಲಿ ಏ.25ರಂದು ನಡೆದ ಪ್ರತಿಭಟನೆ ವೇಳೆ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿದ ಆರೋಪದ ಮೇಲೆ ಅಪರಿಚಿತ ವ್ಯಕ್ತಿಯ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

‘ಪ್ರತಿಭಟನೆ ವೇಳೆ ಅಂತಹ ಯಾವುದೇ ಘೋಷಣೆ ಕೂಗಿಲ್ಲ. ಧ್ವನಿ ಬದಲಾಯಿಸಿ, ನಕಲಿ ವಿಡಿಯೊ ಮಾಡಿ, ಬಿಡುಗಡೆಗೊಳಿಸಲಾಗಿದೆ’ ಎಂದು ಪ್ರತಿಭಟನೆಯಲ್ಲಿ ಭಾಗಿಯಾಗಿದ್ದ ಕಾಂಗ್ರೆಸ್‌ನ ಪಾಲಿಕೆ ಸದಸ್ಯ ಅನ್ವರ್ ಖಾದ್ರಿ ತಿಳಿಸಿದ್ದಾರೆ.

‘ಇಲ್ಲಿನ ಬಡ್ವಾಲಿ ಚೌಕ್‌ನಲ್ಲಿ ಪ್ರತಿಭಟನೆ ಆಯೋಜಿಸಲಾಗಿತ್ತು. ಈ ವೇಳೆ ಪಾಕಿಸ್ತಾನ್ ಜಿಂದಾಬಾದ್ ಘೋಷಣೆ ಕೂಗಿರುವುದು ಕೇಳಿದೆ ಎಂದು ಕೆಲವರು ತಿಳಿಸಿದ್ದಾರೆ. ಇದಕ್ಕೆ ಸಂಬಂಧಿಸಿದಂತೆ ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಕೂಡ ಹರಿದಾಡಿದೆ. ಇದರ ಆಧಾರದ ಮೇಲೆ ಅಪರಿಚಿತ ವ್ಯಕ್ತಿಯ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ’ ಎಂದು ಡಿಸಿಪಿ ವಿನೋದ್ ಕುಮಾರ್ ಮೀನಾ ತಿಳಿಸಿದ್ದಾರೆ.

ದೋಷರಹಿತ ಮತದಾರರ ಪಟ್ಟಿಗೆ ಆಯೋಗದ ಕ್ರಮ

ನವದೆಹಲಿ (ಪಿಟಿಐ): ಮತದಾರರ ಪಟ್ಟಿಯ ಪರಿಷ್ಕರಣೆ ಪ್ರಕ್ರಿಯೆಯನ್ನು ವೇಗವಾಗಿ ಮತ್ತು ನಿಖರವಾಗಿ ನಡೆಸಲು ಚುನಾವಣಾ ಆಯೋಗವು ಮರಣ ನೋಂದಣಿ ಮಾಹಿತಿಯನ್ನು ರಿಜಿಸ್ಟ್ರಾರ್ ಜನರಲ್ ಆಫ್ ಇಂಡಿಯಾದಿಂದ (ಆರ್‌ಜಿಐ) ಡಿಜಿಟಲ್ ರೂಪದಲ್ಲಿ ಪಡೆಯಲು ನಿರ್ಧರಿಸಿದೆ.

ಮತದಾರರ ಪಟ್ಟಿ ದೋಷರಹಿತವಾಗಿರುವುದನ್ನು ಖಚಿತಪಡಿಸಿಕೊಳ್ಳಲು ಆಯೋಗವು ಈ ಹೆಜ್ಜೆಯಿಟ್ಟಿದೆ. ಇದು, ಮತದಾರರ ನೋಂದಣಿ ಅಧಿಕಾರಿಗಳು (ಇಆರ್‌ಒ) ಮರಣಗಳ ಬಗ್ಗೆ ಸಕಾಲಿಕ ಮಾಹಿತಿ ಪಡೆಯುವುದನ್ನು ಖಚಿತಪಡಿಸುತ್ತದೆ ಎಂದು ಚುನಾವಣಾ ಆಯೋಗ ಗುರುವಾರ ಹೇಳಿದೆ.

ಮೃತರ ಸಂಬಂಧಿಕರು ಮಾಹಿತಿ ನೀಡುವುದನ್ನು ಕಾಯದೆಯೇ ಮನೆಗಳಿಗೆ ಭೇಟಿ ನೀಡುವ ಮೂಲಕ ಮರಣದ ಮಾಹಿತಿಯನ್ನು ಮರು ಪರಿಶೀಲಿಸಲು ಬೂತ್‌ಮಟ್ಟದ ಅಧಿಕಾರಿಗಳಿಗೆ ಅನುವು ಮಾಡಿಕೊಡುತ್ತದೆ ಎಂದು ತಿಳಿಸಿದೆ.

1960ರ ಮತದಾರರ ನೋಂದಣಿ ಕಾಯ್ದೆ ಮತ್ತು 1969ರ ಜನನ ಮತ್ತು ಮರಣಗಳ ನೋಂದಣಿ ಕಾಯ್ದೆಯಡಿ ಅಂತಹ ವಿವರಗಳನ್ನು ಪಡೆಯುವ ಅಧಿಕಾರ ಚುನಾವಣಾ ಆಯೋಗಕ್ಕೆ ಇದೆ. ಮತದಾರರ ಮಾಹಿತಿ ಒಳಗೊಂಡ ಸ್ಲಿಪ್‌ಗಳನ್ನು ಇನ್ನಷ್ಟು ಮತದಾರ ಸ್ನೇಹಿಯನ್ನಾಗಿ ಮಾಡಲು, ಆಯೋಗವು ಅದರ ವಿನ್ಯಾಸವನ್ನು ಮಾರ್ಪಡಿಸಲು ನಿರ್ಧರಿಸಿದೆ.

ಸ್ಲಿಪ್‌ಗಳಲ್ಲಿ ಮತದಾರರ ಕ್ರಮಸಂಖ್ಯೆಯನ್ನು ದೊಡ್ಡ ಗಾತ್ರ ಮತ್ತು ದಪ್ಪ ಅಕ್ಷರದಲ್ಲಿ ಬರೆಯಲಾಗುತ್ತದೆ. ಮತದಾರರಿಗೆ ತಮ್ಮ ಮತಗಟ್ಟೆಯನ್ನು ಗುರುತಿಸಲು ಹಾಗೂ ಮತಗಟ್ಟೆ ಅಧಿಕಾರಿಗಳಿಗೆ ಮತದಾರರ ಪಟ್ಟಿಯಲ್ಲಿನ ಹೆಸರುಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗಲಿದೆ.

ಛತ್ತೀಸಗಢ–ತೆಲಂಗಾಣ ಗಡಿಯಲ್ಲಿ ನಕ್ಸಲರ ವಿರುದ್ಧ ಕಾರ್ಯಾಚರಣೆ


ನಕ್ಸಲರನ್ನು ಓಡಿಸಿ, ಧ್ವಜ ಹಿಡಿದ ಭದ್ರತಾ ಪಡೆ

‘ಇದೇ ಮೊದಲ ಬಾರಿಗೆ ನಕ್ಸಲರ ವಿರುದ್ಧ ಅತಿ ದೊಡ್ಡ ಕಾರ್ಯಾಚರಣೆ ನಡೆಸುತ್ತಿದ್ದೇವೆ. ನಕ್ಸಲರ ದೊಡ್ಡ ಅಡಗು ತಾಣವಾಗಿದ್ದ ಕರ್ರೇಗುಟ್ಟ ಬೆಟ್ಟವನ್ನು ಭದ್ರತಾ ಪಡೆಗಳು ತಮ್ಮ ವಶಕ್ಕೆ ಪಡೆದುಕೊಂಡಿವೆ. ದೇಶದಲ್ಲಿ ನಕ್ಸಲರನ್ನು ಸಂಪೂರ್ಣ ನಾಶ ಮಾಡುವುದೇ ನಮ್ಮ ಗುರಿ. ಇದು ಈಡೇರುವವರೆಗೂ ಕಾರ್ಯಾಚರಣೆ ಮುಂದುವರಿಯುತ್ತದೆ’ ಎಂದು ಅಧಿಕಾರಿಗಳು ಗುರುವಾರ ಹೇಳಿಕೊಂಡಿದ್ದಾರೆ. ‘ಆಪರೇಷನ್ ಕಗಾರ್’ ಹೆಸರಿನ ಈ ಕಾರ್ಯಾಚರಣೆಯು ಏ.24ರಂದು ಆರಂಭವಾಗಿದೆ.

ಭದ್ರತಾ ಪಡೆಗಳ ಹಿಡಿತದಲ್ಲಿ ಕರ್ರೇಗುಟ್ಟ ಬೆಟ್ಟ

ಛತ್ತೀಸಗಢ ಮತ್ತು ತೆಲಂಗಾಣ ಗಡಿಯಲ್ಲಿ ಕರ್ರೇಗುಟ್ಟ ಮತ್ತು ದುರ್ಗಮ್ಮಗುಟ್ಟ ಬೆಟ್ಟಗಳಿವೆ. ಈ ಬೆಟ್ಟಗಳು ನೆಲಮಟ್ಟದಿಂದ 5 ಸಾವಿರ ಅಡಿ ಎತ್ತರದಲ್ಲಿವೆ. ಈ ಬೆಟ್ಟಗಳು ಪೀಪಲ್ಸ್ ಲಿಬರೇಷನ್ ಗೆರಿಲ್ಲಾ ಆರ್ಮಿ (ಪಿಎಲ್‌ಜಿಎ) ಸಂಘಟನೆಯ ಕೇಂದ್ರ ನೆಲೆಯಾಗಿತ್ತು. ಹಿದ್ಮ, ದೇವಾ, ದಾಮೋದರ್, ಆಜಾದ್ ಮತ್ತು ಸುಜಾತ ಮೊದಲಾದ ನಕ್ಸಲ್ ನಾಯಕರಿಗೆ ತಾಣವಾಗಿತ್ತು.

‘ಆಪರೇಷನ್ ಕಗಾರ್’ ಕಾರ್ಯಾಚರಣೆಯು ಒಂಬತ್ತನೇ ದಿನ ತಲುಪುತ್ತಿದ್ದಂತೆಯೇ ಭದ್ರತಾ ಪಡೆಗಳು ಯಶ ಕಂಡಿವೆ. ಭದ್ರತಾ ಪಡೆಗಳು ಬೆಟ್ಟವನ್ನು ಹತ್ತಿಕೊಂಡೇ ಕಾರ್ಯಾಚರಣೆ ನಡೆಸಿವೆ ಎಂದು ಅಧಿಕಾರಿಗಳು ಮಾಹಿತಿ ನೀಡಿದರು. ನಕ್ಸಲರನ್ನು ಬೆಟ್ಟದಿಂದ ಓಡಿಸಿ, ಬೆಟ್ಟದ ಮೇಲೆ ಭದ್ರತಾ ಪಡೆಗಳು ತ್ರಿವರ್ಣ ಧ್ವಜವನ್ನು ಹಿಡಿದು ಸಂಭ್ರಮಿಸುತ್ತಿರುವ ವಿಡಿಯೊಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ.



ಮೂವರು ಮಹಿಳಾ ನಕ್ಸಲರ ಹತ್ಯೆ

24,500 ಕಾರ್ಯಾಚರಣೆಯಲ್ಲಿ ತೊಡಗಿರುವ ಭದ್ರತಾ ಸಿಬ್ಬಂದಿ

ಪಿಎಲ್‌ಜಿಎ ಸಂಘಟನೆಯ ಬೆಟಾಲಿಯನ್ ನಂ.1 ಗುಂಪಿನ ಸುಮಾರು 500 ನಕ್ಸಲರು ಈ ಬೆಟ್ಟದಲ್ಲಿ ದೊಡ್ಡ ಮಟ್ಟದ ಸಭೆಯೊಂದನ್ನು ನಡೆಸಲಿದ್ದಾರೆ ಎಂಬ ಮಾಹಿತಿ ಮೇರೆಗೆ ಭದ್ರತಾ ಪಡೆಗಳು ಕಾರ್ಯಾಚರಣೆ ಆರಂಭಿಸಿದ್ದವು. ಕಾರ್ಯಾಚರಣೆಯ ಮೊದಲ ದಿನವೇ ಮೂವರು ಮಹಿಳಾ ನಕ್ಸಲರನ್ನು ಭದ್ರತಾ ಪಡೆಗಳು ಗುಂಡಿಕ್ಕಿ ಹತ್ಯೆ ಮಾಡಿದ್ದವು. ಜೊತೆಗೆ, ದೊಡ್ಡ ಮಟ್ಟದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿತ್ತು. ಡ್ರೋನ್ ಹಾಗೂ ಹೆಲಿಕಾಪ್ಟರ್‌ಗಳು ಕಾರ್ಯಾಚರಣೆ ವೇಳೆ ಕರ್ರೇಗುಟ್ಟ ಬೆಟ್ಟವನ್ನು ಸುತ್ತುವರಿಯುತ್ತಲೇ ಇದ್ದವು. ಭದ್ರತಾ ಪಡೆಗಳಿಗೆ ಅಗತ್ಯ ವಸ್ತುಗಳನ್ನು ಹೆಲಿಕಾಪ್ಟರ್ ಮೂಲಕ ರವಾನಿಸಲಾಗುತ್ತಿತ್ತು

‘ಶಾಂತಿ ಮಾತುಕತೆ ನಡೆಸಿ’

ಕಾರ್ಯಾಚರಣೆಯ ಐದನೇ ದಿನವಾಗಿದ್ದ ಶುಕ್ರವಾರದಂದು ನಕ್ಸಲರು ಹೇಳಿಕೆಯೊಂದನ್ನು ಬಿಡುಗಡೆ ಮಾಡಿ, ‘ಕಾರ್ಯಾಚರಣೆಯನ್ನು ನಿಲ್ಲಿಸಿ, ಶಾಂತಿ ಮಾತುಕತೆ ನಡೆಸಿ’ ಎಂದು ಒತ್ತಾಯಿಸಿದ್ದವು. ತೆಲಂಗಾಣ ಮುಖ್ಯಮಂತ್ರಿ ರೇವಂತ ರೆಡ್ಡಿ ಅವರನ್ನು ಭೇಟಿ ಮಾಡಿದ ಕೆಲ ನಾಗರಿಕ ಸಂಘಟನೆಗಳೂ ಇದೇ ಒತ್ತಾಯವನ್ನು ಮುಂದಿಟ್ಟಿವೆ. ‘ಶಾಂತಿ ಮಾತುಕತೆಗೆ ಕೇಂದ್ರದ ಮೇಲೆ ಒತ್ತಡ ಹೇರಿ’ ಎಂದು ಹೇಳಿವೆ.

‘ಶಾಂತಿ ಮಾತುಕತೆಗೆ ಅವಕಾಶವೇ ಇಲ್ಲ’ ಎಂದು ಛತ್ತೀಸಗಢ ಸರ್ಕಾರ ಹೇಳಿದೆ. ಶರಣಾಗತಿಯಾದರೆ, ಸರ್ಕಾರದ ನಿಯಮಗಳಿಗೆ ಅನುಸಾರವಾಗಿ ಪುನರ್‌ವಸತಿ ಕಲ್ಪಿಸಲಾಗುವುದು. ಹಿಂಸಾ ಮಾರ್ಗದಲ್ಲೇ ಮುಂದುವರಿದರೆ ಅಂಥವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ಆಧಾರ: ಪಿಟಿಐ

ಕೇಂದ್ರ ಸರ್ಕಾರವು ಈ ಕಾರ್ಯಾಚರಣೆಯನ್ನು ನಿಲ್ಲಿಸಬೇಕು. ನಕ್ಸಲರು ಎಂದು ಹೇಳುತ್ತಾ ಛತ್ತೀಸಗಢದ ಬುಡಕಟ್ಟು ಜನರನ್ನು, ಯುವಕರನ್ನು ಹತ್ಯೆ ಮಾಡಲಾಗುತ್ತಿದೆ

ಕೆ. ಚಂದ್ರಶೇಖರ್ ರಾವ್ ಬಿಆರ್‌ಎಸ್ ಅಧ್ಯಕ್ಷ

ಕೀರವಾಣಿ ಸಂಗೀತದ ಶುಭಾರಂಭ • ಜಿಯೊ ಸೆಂಟರ್‌ನಲ್ಲಿ ತಾರೆಗಳ ತೋಟ

ಮನರಂಜನೆ ಶೃಂಗದಲ್ಲಿ ವರ್ಣರಂಜಿತ ‘ಅಲೆಗಳು’

• ವಿಶಾಖ ಎನ್.

ಮುಂಬೈ: ಎಂ.ಎಂ. ಕೀರವಾಣಿ ‘ವಸುಧೈವ ಕುಟುಂಬಕಂ’ ಎನ್ನುವ ಸಾರ ಇರುವ ಹಾಡಿಗೆ ತಾವು ಮಾಡಿರುವ ಸ್ವರ ಸಂಯೋಜನೆಯನ್ನು ಪ್ರಸ್ತುತಪಡಿಸಿದ್ದೇ ಜೋರು ಕರತಾಡನ. ಅದಕ್ಕೆ ಚಿತ್ರಾ, ಶ್ರೇಯಾ ಘೋಷಾಲ್, ಮಂಗ್ಲಿ ಅವರ ಕಂಠದ ಗಾಯನ.

ಶಾರುಕ್ ಖಾನ್ ಕಾರ್ಯಕ್ರಮದ ಶುಭಾರಂಭ ಮಾಡಿದರೆ, ಅಮೀರ್ ಖಾನ್ ಕೊನೆಯಲ್ಲಿ ಪ್ರಧಾನಿ ಭಾಷಣಕ್ಕೆ ಇಂಬು ನೀಡಿದರು.

ಜಾಗತಿಕ ಶ್ರವಣ - ದೃಶ್ಯ ಮನರಂಜನೆ ಶೃಂಗ (ವೇವ್ಸ್) ಚಾಲನೆ ಪಡೆದ ಸುಮಾರು ಎರಡು ತಾಸಿನ ಸಮಾರಂಭದಲ್ಲಿ ಮನರಂಜನೆಯ ಒರತೆಯೇ ಇತ್ತು.

ಮೋಹನ್ ಲಾಲ್, ಹೇಮಾ ಮಾಲಿನಿ, ಕಾರ್ತಿಕ್ ಆರ್ಯನ್, ರಣಬೀರ್ ಕಪೂರ್, ಅನಿಲ್ ಕಪೂರ್, ಭೂಮಿ ಪಿಡ್ನೇಕರ್, ನಾಗಾರ್ಜುನ ಆಗೀಗ ವೇದಿಕೆ ಮೇಲೆ ಬಂದು ಪಟಪಟನೆ ಔಚಿತ್ಯಕ್ಕೆ ತಕ್ಕಷ್ಟು ಮಾತನಾಡಿ, ಕಾರ್ಯಕ್ರಮವನ್ನು ಮುನ್ನಡೆಸಿದರು. ಒಬ್ಬರೇ ನಿರೂಪಕರು ಇಲ್ಲದೆ, ತಾರಾಗಣವನ್ನೇ ಒಗ್ಗೂಡಿಸಿ ಆ ಕೆಲಸ ನಿಭಾಯಿಸಿದ್ದು ಗಮನಾರ್ಹವಾಗಿತ್ತು.

ರಜನೀಕಾಂತ್ ಮೆಲುದನಿಯ ಮಾತು ಪ್ರಧಾನಿ ಮೋದಿ ಅವರ ಕುರಿತ ಹೊಗಳಿಕೆಗೆ ಸೀಮಿತವಾಯಿತು. ಅನಂತ ಕಥೆಗಳನ್ನು ಹೊಂದಿರುವ ನಮ್ಮ ದೇಶವು ಜಾಗತಿಕ ಮಟ್ಟದಲ್ಲಿ ಜಪಾನ್, ಅಮೆರಿಕ, ಚೀನಾ ದೇಶಗಳನ್ನು ಮನರಂಜನೆಯಲ್ಲಿ ಹಿಂದಿಕ್ಕಲು ‘ವೇವ್ಸ್’ ಚಿಮ್ಮುಹಲಗೆ ಆಗಲಿ ಎಂದು ನಿರ್ದೇಶಕ ಎಸ್.ಎಸ್. ರಾಜಮೌಳಿ ಹಾರೈಸಿದರು.



‘ವೇವ್ಸ್’ ಉದ್ಘಾಟನಾ ಸಮಾರಂಭಕ್ಕೆ ಸಾಕ್ಷಿಯಾದ ನಟಿ ಆಲಿಯಾ ಭಟ್, ನಿರ್ದೇಶಕ ಎಸ್.ಎಸ್. ರಾಜಮೌಳಿ ಹಾಗೂ ನಟ ಆಮೀರ್ ಖಾನ್ –ಪಿಟಿಐ ಚಿತ್ರ

ಪಹಲ್ಗಾಮ್ ಘಟನೆಯ ನಂತರ ಈ ಶೃಂಗ ಮುಂದಕ್ಕೆ ಹೋಗಲಿದೆ ಎಂದು ಅನೇಕರು ಹೇಳಿದರು. ಆದರೆ, ನಮ್ಮ ಪ್ರಧಾನಿ ಒಬ್ಬ ಫೈಟರ್. ಇಲ್ಲಿಗೆ ಬಂದೇಬಿಟ್ಟರು.

ರಜನೀಕಾಂತ್, ನಟ

‘ಸಂಕಲ್ಪ’ ಎಂಬ ವಿಷಯ ಆಧರಿಸಿದ, ದೇಶದ ಹಲವು ನೃತ್ಯ ಪ್ರಕಾರಗಳನ್ನು ಒಗ್ಗೂಡಿಸಿದಂತಹ ಸಂಯೋಜಿತ ಪ್ರದರ್ಶನ ಚಿತ್ತಾಪಹಾರಿಯಾಗಿತ್ತು.

ಚಿತ್ರರಂಗಕ್ಕೆ ಕಾಣಿಕೆ ಸಲ್ಲಿಸಿ, ಈಗ ಅಗಲಿರುವ ಚೇತನಗಳಾದ ಗುರುದತ್, ರಾಜ್ ಖೋಸ್ಲಾ, ಸಲೀಲ್ ಚೌಧರಿ, ಪಿ.ಭಾನುಮತಿ ಹಾಗೂ ಋತ್ವಿಕ್ ಘಾಟಕ್ ಅವರ ಜನ್ಮ ಶತಮಾನೋತ್ಸವದ ನೆನಪಿಗಾಗಿ ವಿಶೇಷ ಅಂಚೆಚೀಟಿಗಳನ್ನು ಪ್ರಧಾನಿ ನರೇಂದ್ರ ಮೋದಿ ಬಿಡುಗಡೆ ಮಾಡಿದರು.

ಅಕ್ಷಯ್ ಕುಮಾರ್, ಚಿರಂಜೀವಿ, ಮಿಥುನ್ ಚಕ್ರವರ್ತಿ, ವಿಜಯ್ ರಾಜ್, ವಿಕ್ಕಿ ಕೌಶಲ್, ದೀಪಿಕಾ ಪಡುಕೋಣೆ, ಆಲಿಯಾ ಭಟ್, ನಾಗ ಚೈತನ್ಯ ದಂಪತಿ ಮೊದಲಾದ ತಾರೆಗಳ ದಂಡೇ ನೆರೆದಿತ್ತು. ಕನ್ನಡದ ನಿರ್ದೇಶಕ ನಾಗಾಭರಣ ಹಾಗೂ ನಿರ್ಮಾಪಕ ರಾಕ್‌ಲೈನ್ ವೆಂಕಟೇಶ್ ಅವರೂ ಉದ್ಘಾಟನಾ ಸಮಾರಂಭದಲ್ಲಿ ಇದ್ದರು. ಉತ್ತರ ಭಾರತದ ನಟ–ನಟಿಯರಷ್ಟೇ ಅಲ್ಲದೆ ದಕ್ಷಿಣ ಭಾರತದ ನಟ–ನಟಿಯರಿಗೂ ಸಮಪಾಲಿನ ಆಮಂತ್ರಣ ಇತ್ತೆನ್ನುವುದು ಸಮಾರಂಭದಲ್ಲಿ ಎದ್ದು ಕಂಡಿತು. ಕನ್ನಡ ಚಿತ್ರರಂಗದವರ ಪ್ರಾತಿನಿಧ್ಯ ಮಾತ್ರ ಬೆರಳೆಣಿಕೆಯಷ್ಟಿತ್ತು.

ಮುಂಬೈನಲ್ಲಿ ಐಐಸಿಟಿ

ಮುಂಬೈನಲ್ಲಿ ₹400 ಕೋಟಿ ವೆಚ್ಚದಲ್ಲಿ ಭಾರತೀಯ ಸೃಜನಶೀಲ ತಂತ್ರಜ್ಞಾನ ಸಂಸ್ಥೆ (ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜಿ-ಐಐಸಿಟಿ) ಸ್ಥಾಪಿಸಲು ನಿರ್ಧರಿಸಲಾಗಿದೆ ಎಂದು ಸಮಾರಂಭದಲ್ಲಿ ಮಾತನಾಡಿದ ಕೇಂದ್ರ ವಾರ್ತಾ ಸಚಿವ ಅಶ್ವಿನ್ ವೈಷ್ಣವ್ ತಿಳಿಸಿದರು.

ಐಐಟಿ ಮಾದರಿಯ ಈ ಸಂಸ್ಥೆಯು ಮನರಂಜನೆಗೆ ಪೂರಕವಾದ ಪ್ರತಿಭೆಗಳನ್ನು ರೂಪಿಸಲು ಅನುವು ಮಾಡಿಕೊಡಲಿದೆ. ಗೂಗಲ್ ರೀತಿಯ ಸಂಸ್ಥೆಗಳ ಸಹಭಾಗಿತ್ವ ಇದಕ್ಕೆ ಇರಲಿದೆ ಎಂದು ಹೇಳಿದರು.

ಆರಂಭಿಕ ಗೋಷ್ಠಿಯ ಆಕರ್ಷಣೆ

ರಜನಿಕಾಂತ್, ಮೋಹನ್ ಲಾಲ್, ಮಿಥುನ್ ಚಕ್ರವರ್ತಿ, ಹೇಮಾ ಮಾಲಿನಿ ಅವರನ್ನು ಒಳಗೊಂಡ ' ಮಹನೀಯರು ಹಾಗೂ ಮಹತ್ತ : ಭಾರತದ ಆತ್ಮ ರೂಪಿಸಿದ ಕಥೆಗಳು ' ಎಂಬ ವಿಷಯದ ಕುರಿತು ಮೊದಲ ಗೋಷ್ಠಿ ನಡೆಯಿತು. ಅಕ್ಷಯ್ ಕುಮಾರ್ ಅದನ್ನು ನಿರ್ವಹಿಸಿದ್ದು ವಿಶೇಷ.ಕಲಾತ್ಮಕ ಹಾಗೂ ಕಮರ್ಷಿಯಲ್ ಸಿನಿಮಾಗಳ ನಡುವಿನ ಗೆರೆಯನ್ನು ತೆಳುವಾಗಿಸುತ್ತಾ ಬಂದಿದ್ದೆ ಮಲಯಾಳ ಚಿತ್ರರಂಗದ ಏಳಿಗೆಗೆ ಕಾರಣ ಎಂದು ಮೋಹನ್ ಲಾಲ್ ಹೇಳಿದರು.

‘ವೇವ್ಸ್’ ಉದ್ಘಾಟಿಸಿದ ಪ್ರಧಾನಿ ನರೇಂದ್ರ ಮೋದಿ

‘ಮನರಂಜನೆಗೆ ಇದು ಆಡುಂಬೊಲ’

ಪ್ರಜಾವಾಣಿ ವಾರ್ತೆ



ನರೇಂದ್ರ ಮೋದಿ

ಮುಂಬೈ: ‘ಭಾರತವನ್ನು ಆಡುಂಬೊಲ ಮಾಡಿಕೊಂಡು ಈ ನೆಲದ ಕಥೆಗಳನ್ನು ಕಣ್ಣಿಗೆ ಕಟ್ಟುವಂತೆ ತೋರಿಸಲು ಬನ್ನಿ’ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜಾಗತಿಕ ಮನರಂಜನಾ ಹೂಡಿಕೆದಾರರಿಗೆ ಆಹ್ವಾನವಿತ್ತರು.

ಇಲ್ಲಿನ ಜಿಯೊ ವರ್ಲ್ಡ್ ಸೆಂಟರ್‌ನಲ್ಲಿ ಜಾಗತಿಕ ಶ್ರವಣ - ದೃಶ್ಯ ಮನರಂಜನೆ ಶೃಂಗ -2025 (ವೇವ್ಸ್) ಅನ್ನು ಗುರುವಾರ ಉದ್ಘಾಟಿಸಿ, ಅವರು ಮಾತನಾಡಿದರು.

ಮನರಂಜನಾ ಕ್ಷೇತ್ರ ಯುವಕರನ್ನು ಸೆಳೆದಿರುವ ಈ ದಿನಮಾನವನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಅವರಾಡಿದ ನುಡಿಸಾರ ಹೇಗಿದೆ:

- ತಂತ್ರಜ್ಞಾನ ಈಗ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಹಾಗೆಂದು ಮನುಷ್ಯರನ್ನು ರೋಬೊಗಳನ್ನಾಗಿ ಮಾಡಕೂಡದು. ಮನುಷ್ಯರಲ್ಲಿ ಇನ್ನಷ್ಟು ಮಾನವೀಯ ಅಂಶ ಬಿತ್ತಬೇಕು
- ಭಾರತದ ‘ಖಾನಾ’ (ಊಟ) ವಿಶ್ವದಲ್ಲೇ ಜನಪ್ರಿಯ. ನಮ್ಮ ದೇಶದ ‘ಗಾನಾ’ (ಹಾಡು) ಕೂಡ ಹೀಗೆಯೇ ಜನಪ್ರಿಯ ಆಗಲಿ
- ಲಕ್ಷಾಂತರ ಕಥೆಗಳು ನಮ್ಮಲ್ಲಿವೆ. ಹಳ್ಳಿ ಹಳ್ಳಿಗೂ ಒಂದು ಜನಪದ ಇದೆ. ಪರ್ವತದ ಹಾಡು, ನದಿಯ ಗುನುಗು... ಎಲ್ಲವೂ ನಮ್ಮದು. ಅವನ್ನೇ ಚೆಂದದ ‘ಕಂಟೆಂಟ್’ ಆಗಿಸಿ
- ನೂರಕ್ಕೂ ಹೆಚ್ಚು ದೇಶಗಳಲ್ಲಿ ಭಾರತದ ಚಿತ್ರಗಳು ತೆರೆಕಾಣುತ್ತಿವೆ. ಒಟಿಟಿ ವೇದಿಕೆಯ ಬೆಳವಣಿಗೆ ಅಲ್ಪಾವಧಿಯಲ್ಲೇ ಹತ್ತು ಪಟ್ಟಾಗಿದೆ
- ಪರದೆ ಚಿಕ್ಕದಾಗುತ್ತಿದೆ, ಸಾಧ್ಯತೆ ಅಷ್ಟೇ ದೊಡ್ಡದಾಗುತ್ತಿದೆ
- ಆ್ಯನಿಮೇಷನ್ ಹಾಗೂ ಗ್ರಾಫಿಕ್ ಉದ್ಯಮದ ವಹಿವಾಟು ಭಾರತದಲ್ಲಿ ₹400 ಕೋಟಿಗೂ ಹೆಚ್ಚಿದೆ. ಇನ್ನು ಹತ್ತು ವರ್ಷಗಳಲ್ಲಿ ಇದು ದುಪ್ಪಟ್ಟಾಗುವ ಸಾಧ್ಯತೆ ಇದೆ
- ‘ವೇವ್ಸ್’ ಎನ್ನುವುದು ಈ ಶೃಂಗದ ಸಂಕ್ಷಿಪ್ತ ಪದವಷ್ಟೇ ಅಲ್ಲ, ಅದು ನಿಜಕ್ಕೂ ‘ವೇವ್ಸ್’ (ಅಲೆ) ಎಬ್ಬಿಸಲಿದೆ
- ಮುಂದೆ ‘ವೇವ್ಸ್’ ಪ್ರಶಸ್ತಿಗಳನ್ನು ಪ್ರಾರಂಭಿಸಲಾಗುತ್ತದೆ. ಅವು ದೇಶದ ಪ್ರತಿಷ್ಠಿತ ಪ್ರಶಸ್ತಿಗಳಾಗಿ ಪರಿಗಣಿತವಾಗಲಿವೆ

ಜನರ ಪ್ರಶಸ್ತಿಯಾಗಿ ಬದಲಾದ ‘ಪದ್ಮ’

‘ಪದ್ಮ ಪ್ರಶಸ್ತಿಗಳನ್ನು ಬಹಳ ವರ್ಷಗಳಿಂದ ನೀಡುತ್ತಾ ಬಂದಿದ್ದಾರೆ. ನಾವು ಅದನ್ನು ಜನರ ಪ್ರಶಸ್ತಿಯಾಗಿ ಬದಲಾಯಿಸಿದೆವು. ತಮ್ಮಷ್ಟಕ್ಕೆ ತಾವು ಸಾಧನೆ ಮಾಡುತ್ತಾ ಬದುಕುವ ಎಲೆ ಮರೆಯ ಕಾಯಿಯಂತಹ ಜನರನ್ನು ಈ ಪ್ರಶಸ್ತಿಗೆ ಆರಿಸಿದೆವು. ಅದೀಗ ಜನರ ಪದ್ಮ ಪ್ರಶಸ್ತಿ ಆಗಿ ಬದಲಾಗಿದೆ’ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.



ಮುಂಬೈನ ಫಿಲ್ಮ್ ಸಿಟಿಯನ್ನು 120 ಎಕರೆಯಷ್ಟು ವಿಸ್ತರಿಸಿ, ನವೀಕರಿಸಲಾಗುತ್ತಿದೆ. ಹೊಸ ಸವಲತ್ತುಗಳೊಂದಿಗೆ ಅದು ಚಿತ್ರರಂಗದವರಿಗೆ ಲಭ್ಯವಾಗಲಿದೆ

ದೇವೇಂದ್ರ ಫಡಣವಿಸ್, ಮಹಾರಾಷ್ಟ್ರ ಮುಖ್ಯಮಂತ್ರಿ



ರೋಹಿತ್, ರಿಕೆಲ್ಟನ್ ಬಿರುಸಿನ ಅರ್ಧಶತಕ • ಪ್ಲೇ ಆಫ್ ರೇಸ್‌ನಿಂದ ಹೊರಬಿದ್ದ ರಾಯಲ್ಸ್

ದಿಗ್ವಿಜಯ ಮುಂದುವರಿಸಿದ ಮುಂಬೈ

ಜೈಪುರ (ಪಿಟಿಐ): ಮುಂಬೈ ಇಂಡಿಯನ್ಸ್ ಹಾಲಿ ಐಪಿಎಲ್‌ನಲ್ಲಿ ಸತತ ಆರನೇ ಗೆಲುವನ್ನು ಅಧಿಕಾರಯುತ ರೀತಿಯಲ್ಲಿ ಸಾಧಿಸಿತು. ಸರ್ವಾಂಗೀಣ ಪ್ರದರ್ಶನ ನೀಡಿದ ಮುಂಬೈ ಗುರುವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ನೂರು ರನ್‌ಗಳಿಂದ ಸುಲಭವಾಗಿ ಸೋಲಿಸಿತು. ರಾಯಲ್ಸ್ ಪ್ಲೇಆಫ್ ಕನಸು ಭಗ್ನಗೊಂಡಿತು.

ಆರಂಭ ಆಟಗಾರರಾದ ರೋಹಿತ್ ಶರ್ಮಾ (53, 36ಎ) ಮತ್ತು ರಿಯಾನ್ ರಿಕೆಲ್ಟನ್ (61, 38ಎ) ಆಕರ್ಷಕ ಅರ್ಧಶತಕ ಬಾರಿಸಿದ ನಂತರ ಸೂರ್ಯಕುಮಾರ್ ಯಾದವ್ (ಔಟಾಗದೇ 48, 23ಎ) ಮತ್ತು ನಾಯಕ ಹಾರ್ದಿಕ್ ಪಾಂಡ್ಯ (ಔಟಾಗದೇ 48, 23ಎ) ಅವರು ಬಿರುಸಿನ ಆಟವಾಡಿದ್ದರಿಂದ ಮುಂಬೈ 2 ವಿಕೆಟ್‌ಗೆ 217 ರನ್‌ಗಳ ಉತ್ತಮ ಮೊತ್ತ ಗಳಿಸಿತು.

ಮೂರು ದಿನಗಳ ಹಿಂದೆ ಗುಜರಾತ್ ಟೈಟನ್ಸ್ ನೀಡಿದ 210 ರನ್‌ಗಳ ಸವಾಲನ್ನು ನಾಲ್ಕು ಓವರುಗಳಿರುವಂತೆ ಮೆಟ್ಟಿ ನಿಂತಿದ್ದ ರಾಯಲ್ಸ್ ಆರಂಭದಲ್ಲೇ ಎಡವಿತು. ನಂತರ ಚೇತರಿಸಲಿಲ್ಲ. 16.1 ಓವರುಗಳಲ್ಲಿ 117 ರನ್‌ಗಳಿಗೆ ಆಲೌಟ್ ಆಯಿತು. ಇದು 11 ಪಂದ್ಯಗಳಲ್ಲಿ ರಾಯಲ್ಸ್‌ಗೆ ಎಂಟನೇ ಸೋಲು. ಮುಂಬೈ ತಂಡಕ್ಕೆ ಇನ್ನೊಂದು ಗೆಲುವು ಪ್ಲೇ ಆಫ್ ಬಾಗಿಲು ತೆರೆಯಲಿದೆ.

ಸೋಮವಾರ ರಾತ್ರಿ ಅಮೋಘ ಆಟವಾಡಿ ಕ್ರಿಕೆಟ್ ಜಗತ್ತನ್ನು ತನ್ನತ್ತ ಗಮನಿಸುವಂತೆ ಮಾಡಿದ್ದ 14 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ (2ಎಸೆತ) ಖಾತೆ ತೆರೆಯುವ ಮೊದಲೇ ದೀಪಕ್ ಚಾಹರ್ ಬೌಲಿಂಗ್‌ನಲ್ಲಿ ಮಿಡ್‌ಆನ್‌ನಲ್ಲಿ ಕ್ಯಾಚಿತ್ತರು. ಅವರ ಜೊತೆಗಾರ ಯಶಸ್ವಿ ಜೈಸ್ವಾಲ್, ಟ್ರೆಂಟ್ ಬೌಲ್ಟ್ (28ಕ್ಕೆ 3) ಬೌಲಿಂಗ್‌ನಲ್ಲಿ ಎರಡು ಸಿಕ್ಸರ್ ಎತ್ತಿದರೂ, ನಂತರ ಅದೇ ಬೌಲರ್‌ಗೆ ಬೌಲ್ಡ್ ಆದರು. ಬೂಮ್ರಾ (15ಕ್ಕೆ 2) ಅವರು ಶಾರ್ಟ್‌ಪಿಚ್ ಎಸೆತಗಳಲ್ಲಿ ರಿಯಾನ್ ಪರಾಗ್ (16) ಮತ್ತು ಶಿಮ್ರಾನ್ ಹೆಟ್ಮೆಯರ್ (0) ಅವರ ವಿಕೆಟ್‌ಗಳನ್ನು ಪಡೆದರು. ಅಲ್ಲಿಗೆ ನಂತರ ರಾಯಲ್ಸ್ ಪ್ರತಿರೋಧ ಅಡಗಿತು. ಕೊನೆಯಲ್ಲಿ ಜೋಫ್ರಾ ಆರ್ಚರ್ 30 ರನ್ ಗಳಿಸಿದ್ದರಿಂದ ತಂಡದ ಮೊತ್ತ ಶತಕ ದಾಟಿತು.



ರೋಹಿತ್ ಶರ್ಮಾ ಮತ್ತು ರಿಯಾನ್ ರಿಕೆಲ್ಟನ್ ಪಿಟಿಐ ಚಿತ್ರ

ಇದಕ್ಕೆ ಮೊದಲು, ಬ್ಯಾಟಿಂಗಿಗೆ ಇಳಿಸಲ್ಪಟ್ಟ ಮುಂಬೈ ಇಂಡಿಯನ್ಸ್, ರೋಹಿತ್ ಮತ್ತು ರಿಕೆಲ್ಟನ್ ಅವರಿಂದ 116 ರನ್‌ಗಳ ಭದ್ರ ಅಡಿಪಾಯ ಪಡೆಯಿತು. ನಂತರ ಸೂರ್ಯಕುಮಾರ್ ಯಾದವ್ ಮತ್ತು ನಾಯಕ ಹಾರ್ದಿಕ್ ಪಾಂಡ್ಯ ಅವರೂ ಮಿಂಚಿನ ಆಟವಾಡಿ ರಾಯಲ್ಸ್ ತಂಡವನ್ನು ಮತ್ತಷ್ಟು ಒತ್ತಡಕ್ಕೆ ತಳ್ಳಿದರು.

ಸೂರ್ಯಕುಮಾರ್ ಮತ್ತು ಹಾರ್ದಿಕ್ ಮುರಿಯದ ಮೂರನೇ ವಿಕೆಟ್‌ಗೆ 94 ರನ್ ಸೇರಿಸಿದರು. ಕೊನೆಯ ಐದು ಓವರುಗಳಲ್ಲಿ ಇವರಿಬ್ಬರು 71 ರನ್ ಸೂರೆ ಮಾಡಿ ತಂಡದ ಮೊತ್ತವನ್ನು ಸುಲಭವಾಗಿ 200ರ ಗಡಿ ದಾಟಿಸಿದರು. ಸೂರ್ಯ ಆಟದಲ್ಲಿ ನಾಲ್ಕು ಸಿಕ್ಸರ್, ಮೂರು ಬೌಂಡರಿಗಳಿದ್ದವು.

ಜೋಫ್ರಾ ಆರ್ಚರ್ ಅವರ ಮೊದಲ ಓವರ್ ಬಿಗುವಾಗಿತ್ತು. ಆದರೆ ಅವರ ಎರಡನೇ ಓವರಿನಲ್ಲಿ ಮುಂಬೈ ಆರಂಭ ಆಟಗಾರರು 18 ರನ್ ಬಾಚಿದರು. ರೋಹಿತ್ ಕಟ್, ಡ್ರೈವ್‌ಗಳನ್ನು ಪ್ರದರ್ಶಿಸಿದರೆ, ರಿಕೆಲ್ಟನ್ ಮಿಡ್‌ವಿಕೆಟ್‌ಗೆ ಪುಲ್ ಮಾಡಿ ಭರ್ಜರಿ ಸಿಕ್ಸರ್ ಗಳಿಸಿದರು. ಫಝಲ್ ಹಖ್ ಫಾರೂಖಿ ಬೌಲಿಂಗ್‌ನಲ್ಲಿ ರಿಕೆಲ್ಟನ್ ಫ್ಲಿಕ್ ಮೂಲಕ ಸಿಕ್ಸರ್ ಎತ್ತಿದ್ದೂ ಗಮನ ಸೆಳೆಯಿತು. ಪವರ್‌ಪ್ಲೇ ಅವಧಿಯಲ್ಲಿ ಮುಂಬೈ 58 ರನ್ ಗಳಿಸಿತು. ಲೀಗ್‌ನ ಆರಂಭದ ಪಂದ್ಯಗಳಲ್ಲಿ ಪರದಾಡಿದ್ದ ರೋಹಿತ್ ಈಗ ಪ್ರತಿಯೊಂದು ಪಂದ್ಯದಲ್ಲಿ ರನ್ ಹರಿಸುತ್ತಿದ್ದಾರೆ.

ಇಬ್ಬರೂ ಅಲ್ಪಅಂತರದಲ್ಲಿ ನಿರ್ಗಮಿಸಿದರು. ರಿಕೆಲ್ಟನ್ 12ನೇ ಓವರಿನಲ್ಲಿ ತೀಕ್ಷಣ ಅವರಿಗೆ ಬೌಲ್ಡ್ ಆಗುವ ಮೂಲಕ ಶತಕದ ಜೊತೆಯಾಟ ಮುರಿಯಿತು. ಐದು ಎಸೆತಗಳ ತರುವಾಯ, ಪರಾಗ್ ಬೌಲಿಂಗ್‌ನಲ್ಲಿ ರೋಹಿತ್ ಲಾಂಗ್‌ಆಫ್‌ನಲ್ಲಿ ಯಶಸ್ವಿ ಜೈಸ್ವಾಲ್‌ಗೆ ಕ್ಯಾಚಿತ್ತರು.

ಸಂಕ್ಷಿಪ್ತ ಸ್ಕೋರು: ಮುಂಬೈ ಇಂಡಿಯನ್ಸ್: 20 ಓವರುಗಳಲ್ಲಿ 2 ವಿಕೆಟ್‌ಗೆ 217 (ರಿಯಾನ್ ರಿಕೆಲ್ಟನ್ 61, ರೋಹಿತ್ ಶರ್ಮಾ 53, ಸೂರ್ಯಕುಮಾರ್ ಯಾದವ್ ಔಟಾಗದೇ 48, ಹಾರ್ದಿಕ್ ಪಾಂಡ್ಯ ಔಟಾಗದೇ 48, ಮಹೀಷ ತೀಕ್ಷಣ 47ಕ್ಕೆ1, ರಿಯಾನ್ ಪರಾಗ್ 12ಕ್ಕೆ1); ರಾಜಸ್ಥಾನ ರಾಯಲ್ಸ್: 16.1 ಓವರುಗಳಲ್ಲಿ 117 (ಯಶಸ್ವಿ ಜೈಸ್ವಾಲ್ 13, ರಿಯಾನ್ ಪರಾಗ್ 16, ಶುಭಂ ದುಬೆ 15, ಜೋಫ್ರಾ ಆರ್ಚರ್ 30; ಟ್ರೆಂಟ್ ಬೌಲ್ಟ್ 28ಕ್ಕೆ3, ಜಸ್‌ಪ್ರೀತ್ ಬೂಮ್ರಾ 15ಕ್ಕೆ2, ಕರ್ಣ ಶರ್ಮಾ 23ಕ್ಕೆ3); ಪಂದ್ಯದ ಆಟಗಾರ: ರಿಯಾನ್ ರಿಕೆಲ್ಟನ್.

ಐಪಿಎಲ್: ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
ಮುಂಬೈ ಇಂಡಿಯನ್ಸ್	11	7	4	14	1.274
ರಾಯಲ್ ಚಾಲೆಂಜರ್ಸ್ ಬೆಂಗಳೂರು	10	7	3	14	0.521
ಪಂಜಾಬ್ ಕಿಂಗ್ಸ್	10	6	3	13	0.199
ಗುಜರಾತ್ ಟೈಟನ್ಸ್	9	6	3	12	0.748
ಡೆಲ್ಲಿ ಕ್ಯಾಪಿಟಲ್ಸ್	10	6	4	12	0.362
ಲಖನೌ ಸೂಪರ್ ಜೈಂಟ್ಸ್	10	5	5	10	-0.325
ಕೋಲ್ಕತ್ತ ನೈಟ್ ರೈಡರ್ಸ್	10	4	5	9	0.271
ರಾಜಸ್ಥಾನ ರಾಯಲ್ಸ್	11	3	8	6	-0.780
ಸನ್‌ರೈಸರ್ಸ್ ಹೈದರಾಬಾದ್	9	3	6	6	-1.103
ಚೆನ್ನೈ ಸೂಪರ್ ಕಿಂಗ್ಸ್	10	2	8	4	-1.211

ಆರೇಂಜ್ ಕ್ಯಾಪ್
ಸೂರ್ಯಕುಮಾರ್ ಯಾದವ್ (ಎಂಐ) 475 ರನ್

ಪರ್ಪಲ್ ಕ್ಯಾಪ್
ಜೋಶ್ ಹೇಜಲ್‌ವುಡ್ (ಆರ್‌ಸಿಬಿ) 18 ವಿಕೆಟ್

ಜಯದ ಹಾದಿಗೆ ಮರಳುವತ್ತ ಟೈಟನ್ಸ್ ಚಿತ್ತ

ಶುಭಮನ್ ಬಳಗಕ್ಕೆ ಕಮಿನ್ಸ್ ಪಡೆಯ ಸವಾಲು ಇಂದು



ಸನ್‌ರೈಸರ್ಸ್ ಹೈದರಾಬಾದ್ ತಂಡದ ನಾಯಕ ಪ್ಯಾಟ್ ಕಮಿನ್ಸ್

ಅಹಮದಾಬಾದ್ (ಪಿಟಿಐ): ರಾಜಸ್ಥಾನ ರಾಯಲ್ಸ್ ತಂಡದ 14ರ ಪೋರ ವೈಭವ್ ಸೂರ್ಯವಂಶಿಯ ಶತಕದ ಭರಾಟೆಗೆ ಬೆಚ್ಚಿ ಬಿದ್ದಿದ್ದ ಗುಜರಾತ್ ಟೈಟನ್ಸ್ ತಂಡ ಶುಕ್ರವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ಎದುರು ಕಣಕ್ಕಿಳಿಯಲಿದೆ.

ನರೇಂದ್ರ ಮೋದಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ನಡೆಯಲಿರುವ ಪಂದ್ಯವು ಆತಿಥೇಯರಿಗೆ ಮಹತ್ವದ್ದಾಗಿದೆ. 9 ಪಂದ್ಯಗಳನ್ನು ಆಡಿ 6ರಲ್ಲಿ ಜಯಿಸಿ, 3ರಲ್ಲಿ ಸೋತಿರುವ ಶುಭಮನ್ ಗಿಲ್ ನಾಯಕತ್ವದ ಬಳಗವು ಅಗ್ರ ನಾಲ್ಕರಲ್ಲಿ ಸ್ಥಾನ ಉಳಿಸಿಕೊಳ್ಳಬೇಕಿದೆ. ಅದಕ್ಕಾಗಿ ತನ್ನ ಪಾಲಿಗೆ ಉಳಿದಿರುವ 5 ಪಂದ್ಯಗಳಲ್ಲಿ ಕನಿಷ್ಠ ಮೂರರಲ್ಲಿ ಗೆದ್ದರೆ ಪ್ಲೇ ಆಫ್ ಹಾದಿ ಸುಗಮವಾಗಲಿದೆ.

ಅದಕ್ಕಾಗಿ ತಂಡದಲ್ಲಿರುವ ಕೆಲವು ಲೋಪಗಳನ್ನು ಸುಧಾರಿಸಿಕೊಂಡು ಕಣಕ್ಕಿಳಿಯಬೇಕಿದೆ. ಈಚೆಗೆ ರಾಜಸ್ಥಾನ ತಂಡಕ್ಕೆ 210 ರನ್‌ಗಳ ಗುರಿಯನ್ನು ಒಡ್ಡಿದ್ದ ಗಿಲ್ ಬಳಗದ ಬೌಲರ್‌ಗಳು ನಿಖರ ದಾಳಿ ನಡೆಸುವಲ್ಲಿ ಎಡವಿದರು. ವೈಭವ್ ಸೂರ್ಯವಂಶಿ ಮತ್ತು ಯಶಸ್ವಿ ಜೈಸ್ವಾಲ್ ಅವರ ಆರಂಭಿಕ ಜೊತೆಯಾಟವನ್ನು ಬೇಗನೇ ಮುರಿಯುವಲ್ಲಿ ವಿಫಲರಾದರು.

ಇದ್ದುದರಲ್ಲಿ ಪ್ರಸಿದ್ಧ ಕೃಷ್ಣ ಮತ್ತು ಸ್ಪಿನ್ನರ್ ರಶೀದ್ ಖಾನ್ ಅವರಿಬ್ಬರೇ ಆ ಪಂದ್ಯದಲ್ಲಿ ವಿಕೆಟ್ ಪಡೆದಿದ್ದರು. ಅನುಭವಿ ವೇಗಿಗಳಾದ ಮೊಹಮ್ಮದ್ ಸಿರಾಜ್, ಇಶಾಂತ್ ಶರ್ಮಾ ಅವರು ದುಬಾರಿಯಾಗಿದ್ದರು.

ಆದರೆ ಟೂರ್ನಿಯುದ್ದಕ್ಕೂ ಉತ್ತಮವಾಗಿ ಬೌಲಿಂಗ್ ಮಾಡಿರುವ ಸ್ಪಿನ್ನರ್ ಸಾಯಿಕಿಶೋರ್ ಅವರಿಗೆ ಆ ಪಂದ್ಯದಲ್ಲಿ 1 ಓವರ್ ಬೌಲಿಂಗ್ ಮಾಡುವ ಅವಕಾಶ ಮಾತ್ರ ಸಿಕ್ಕಿತ್ತು. ಅದರಲ್ಲಿಯೂ ಅವರು 16 ರನ್ ಕೊಟ್ಟಿದ್ದರು. ಗುಜರಾತ್ ಬೌಲಿಂಗ್ ಪಡೆಯು ಹೈದರಾಬಾದ್ ಬ್ಯಾಟರ್‌ಗಳನ್ನು ಕಟ್ಟಿಹಾಕಲು ತಮ್ಮ ಸಂಪೂರ್ಣ ಸಾಮರ್ಥ್ಯವನ್ನು ಪಣಕ್ಕೊಡ್ಡುವ ಅಗತ್ಯವಿದೆ. ಇಲ್ಲದಿದ್ದರೆ ಅಬ್ಬರದ ಆಟಕ್ಕೆ ಹೆಸರಾಗಿರುವ ಸನ್‌ರೈಸರ್ಸ್ ಬ್ಯಾಟರ್‌ಗಳು ರನ್ ಹೊಳೆ ಹರಿಸಿದರೂ ಅಚ್ಚರಿಯಿಲ್ಲ.

ಪಾಯಿಂಟ್ ಪಟ್ಟಿಯಲ್ಲಿ ಒಂಬತ್ತನೇ ಸ್ಥಾನದಲ್ಲಿರುವ ಸನ್‌ರೈಸರ್ಸ್ ತಂಡವು ಪ್ಲೇ ಆಫ್ ಹಾದಿಯಿಂದ ದೂರದಲ್ಲಿಯೇ ಇದೆ. ಆದರೂ ಪಟ್ಟಿಯಲ್ಲಿ ಮೇಲೇರಲು ಪ್ರಯತ್ನಿಸುವ ಸಾಧ್ಯತೆಯನ್ನು ಅಲ್ಲಗಳೆಯಲಾಗದು.

ಈಚೆಗೆ ಸನ್‌ರೈಸರ್ಸ್ ತಂಡವು ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ ಜಯಗಳಿಸಿತ್ತು. ತಂಡದ ಅನುಭವಿ ಬೌಲರ್ ಮೊಹಮ್ಮದ್ ಶಮಿ, ಉತ್ತಮ ಲಯದಲ್ಲಿರುವ ಹರ್ಷಲ್ ಪಟೇಲ್, ಪ್ಯಾಟ್ ಕಮಿನ್ಸ್ ಅವರ ಮುಂದೆ ಟೈಟನ್ಸ್ ತಂಡದ ಗಿಲ್, ಸಾಯಿ ಸುದರ್ಶನ್ ಜೋಸ್ ಬಟ್ಲರ್ ಅವರನ್ನು ನಿಯಂತ್ರಿಸುವ ಸವಾಲಿದೆ.

ಸನ್‌ರೈಸರ್ಸ್ ತಂಡದ ಅಭಿಷೇಕ್ ಶರ್ಮಾ, ಟ್ರಾವಿಸ್ ಹೆಡ್, ಇಶಾನ್ ಕಿಶನ್, ನಿತೀಶಕುಮಾರ್ ರೆಡ್ಡಿ ಹಾಗೂ ಹೆನ್ರಿಚ್ ಕ್ಲಾಸನ್ ಅವರು ತಮ್ಮ ನೈಜ ಆಟಕ್ಕೆ ಕುದುರಿಕೊಂಡರೆ ಗುಜರಾತ್ ತಂಡದ ಒತ್ತಡ ಹೆಚ್ಚುವುದು ಖಚಿತ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್

ಬಲಾಬಲ
5 ಪಂದ್ಯಗಳು
3 ಗುಜರಾತ್‌ಗೆ ಗೆಲುವು
1 ಹೈದರಾಬಾದ್‌ಗೆ ಗೆಲುವು
1 ಫಲಿತಾಂಶವಿಲ್ಲ



ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್

ಸೂಪರ್‌ಬೆಟ್ ಚೆಸ್: ಪ್ರಜ್ಞಾನಂದ ಮೂರನೇ ಸ್ಥಾನ

ಸ್ಲೊವೇನಿಯಾದ ಫೆಡೊಸೀವ್‌ಗೆ ಪ್ರಶಸ್ತಿ

ವಾರ್ಸಾ (ಪಿಟಿಐ): ನಿರೀಕ್ಷೆಯಂತೆ ಸ್ಲೊವೇನಿಯಾದ ಗ್ರ್ಯಾಂಡ್‌ಮಾಸ್ಟರ್ ವ್ಲಾದಿಮಿರ್ ಫೆಡೊಸೀವ್ ಬುಧವಾರ ಮುಕ್ತಾಯಗೊಂಡ ಸೂಪರ್‌ಬೆಟ್ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದುಕೊಂಡರು. ಭಾರತದ ಗ್ರ್ಯಾಂಡ್ ಮಾಸ್ಟರ್ ಆರ್.ಪ್ರಜ್ಞಾನಂದ ಮೂರನೇ ಸ್ಥಾನ ಗಳಿಸಿದರು.

ಬ್ಲಿಟ್ಜ್ ವಿಭಾಗದಲ್ಲಿ ನಿರಾಶೆ ಅನುಭವಿಸಿದ ಭಾರತದ ಇನ್ನೊಬ್ಬ ಆಟಗಾರ ಅರವಿಂದ ಚಿದಂಬರಂ ಅವರು ಹತ್ತು ಮಂದಿ ಆಟಗಾರರಿದ್ದ ಕಣದಲ್ಲಿ ಜಂಟಿ ಏಳನೇ ಸ್ಥಾನಕ್ಕೆ ಸರಿದರು. ಗ್ರ್ಯಾಂಡ್ ಚೆಸ್ ಟೂರ್‌ನ ಭಾಗವಾಗಿರುವ ಈ ಟೂರ್ನಿ ಅರವಿಂದ್ ಅವರ ಪಾಲಿಗೆ ಮೊದಲನೆಯದಾಗಿತ್ತು.

ಮಂಗಳವಾರದ ಕೊನೆಗೆ 3.5 ಅಂಕಗಳ ಮುನ್ನಡೆ ಹೊಂದಿದ್ದ ಫೆಡೊಸೀವ್ ಸಂಭವನೀಯ 36ರಲ್ಲಿ 26.5 ಅಂಕ ಪಡೆದರು. ಅಗ್ರಸ್ಥಾನಕ್ಕಾಗಿ ಸುಮಾರು ₹34 ಲಕ್ಷ ನಗದು ಬಹುಮಾನ ಅವರ ಪಾಲಾಯಿತು. ಅವರು ವೈಲ್ಡ್‌ಕಾರ್ಡ್ ಪ್ರವೇಶ ಪಡೆದಿದ್ದರು.

ಫ್ರಾನ್ಸ್‌ನ ಮ್ಯಾಕ್ಸಿಂ ವೇಷಿಯರ್ ಲಗ್ರಾವ್ 21.5 ಅಂಕ ಸಂಗ್ರಹಿಸಿ ಎರಡನೇ ಸ್ಥಾನ ಪಡೆದು ₹25 ಲಕ್ಷ ಜೇಬಿಗಿಳಿಸಿದರು. ಪ್ರಜ್ಞಾನಂದ 20.5 ಅಂಕ ಕಲೆಹಾಕಿ ₹21ಲಕ್ಷ ಬಹುಮಾನ ಪಡೆದರು. ಈ ಟೂರ್ನಿಯಲ್ಲಿ ರ್‍ಯಾಪಿಡ್ ಪಂದ್ಯದ ಗೆಲುವಿಗಾಗಿ ಎರಡು ಹಾಗೂ ಬ್ಲಿಟ್ಜ್ ಪಂದ್ಯದ ಗೆಲುವಿಗೆ ಒಂದು ಅಂಕ ನೀಡಲಾಗುತ್ತದೆ.

ಮಾಜಿ ವಿಶ್ವ ಚಾಂಪಿಯನ್, ಬಲ್ಗೇರಿಯಾದ ವ್ಯಾಸೆಲಿನ್ ಟೊಪಲೋವ್ (10 ಅಂಕ) ಕೊನೆಯ ಸ್ಥಾನ ಪಡೆದರು. ಅರವಿಂದ್ ಮತ್ತು ಆತಿಥೇಯ ಪೋಲೆಂಡ್‌ನ ಯಾನ್ ಕ್ರಿಸ್ಟೋಫ್ ಡೂಡಾ ತಲಾ 17 ಅಂಕ ಪಡೆದರು. ಡೂಡಾ ಉತ್ತಮ ಪ್ರೊಗ್ರೆಸಿವ್ ಸ್ಕೋರ್‌ನಿಂದ ಏಳನೇ ಸ್ಥಾನ ಪಡೆದರು.



ಪ್ರಶಸ್ತಿಯೊಂದಿಗೆ ವ್ಲಾದಿಮಿರ್ ಫೆಡೊಸೀವ್ ಎಕ್ಸ್ ಚಿತ್ರ

ಗ್ರ್ಯಾಂಡ್ ಚೆಸ್ ಟೂರ್ ಸರಣಿಯ ಮುಂದಿನ ಟೂರ್ನಿ ರುಮೇನಿಯಾದ ಬುಕಾರೆಸ್ಟ್‌ನಲ್ಲಿ ಮೇ7 ರಿಂದ ನಡೆಯಲಿದೆ. ಕ್ಲಾಸಿಕಲ್ ಮಾದರಿಯ ಈ ಟೂರ್ನಿಯಲ್ಲಿ ಪ್ರಜ್ಞಾನಂದ ಜೊತೆ ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರೂ ಪಾಲ್ಗೊಳ್ಳುವರು. ಒಬ್ಬರು ವೈಲ್ಡ್‌ಕಾರ್ಡ್ ಪ್ರವೇಶ ಪಡೆಯಲಿದ್ದಾರೆ. ಅಮೆರಿಕದ ಫ್ಯಾಬಿಯಾನೊ ಕರುವಾನ, ವೆಸ್ಲಿ ಸೊ ಜೊತೆಗೆ ಉಜ್ಬೇಕಿಸ್ತಾನದ ಅಬ್ದುಸತ್ತಾರೋವ್ ಆಡಲಿದ್ದಾರೆ.

ಐಪಿಎಲ್‌ನಿಂದ ಹೊರಬಿದ್ದ ವಿಘ್ನೇಶ್, ಮ್ಯಾಕ್ಸ್‌ವೆಲ್, ಸಂದೀಪ್ ಶರ್ಮಾ

ಚೆನ್ನೈ/ಜೈಪುರ (ಪಿಟಿಐ): ಪಂಜಾಬ್ ಕಿಂಗ್ಸ್ ತಂಡದಲ್ಲಿರುವ ಆಸ್ಟ್ರೇಲಿಯಾದ ಆಲ್‌ರೌಂಡರ್ ಗ್ಲೆನ್ ಮ್ಯಾಕ್ಸ್‌ವೆಲ್ ಅವರು ಬೆರಳಿನ ಮೂಳೆ ಮುರಿತದಿಂದಾಗಿ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ ಎಂದು ಫ್ರಾಂಚೈಸಿ ಗುರುವಾರ ಪ್ರಕಟಿಸಿದೆ. ರಾಜಸ್ಥಾನ ರಾಯಲ್ಸ್ ತಂಡದ ಮಧ್ಯಮ ವೇಗಿ ಸಂದೀಪ್ ಶರ್ಮಾ ಅವರೂ ಇದೇ ಕಾರಣದಿಂದ ಹಾಲಿ ಐಪಿಎಲ್‌ನ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ.

ಮುಂಬೈ ತಂಡದ ಸ್ಪಿನ್ನರ್ ವಿಘ್ನೇಶ್ ಮೊಣಗಂಟಿನ ಮೂಳೆ ನೋವಿನಿಂದಾಗಿ ಲೀಗ್‌ನ ಉಳಿದ ಪಂದ್ಯಗಳನ್ನು ಕಳೆದುಕೊಂಡಿದ್ದಾರೆ.

ಕೋಲ್ಕತ್ತ ನೈಟ್‌ರೈಡರ್ಸ್ ವಿರುದ್ಧದ ಪಂದ್ಯದ ವೇಳೆ ಮ್ಯಾಕ್ಸ್‌ವೆಲ್ ಬೆರಳಿಗೆ ಗಾಯವಾಗಿತ್ತು. 'ಐಪಿಎಲ್‌ನ ಉಳಿದ ಪಂದ್ಯಗಳಿಗೆ ಮ್ಯಾಕ್ಸ್‌ವೆಲ್ ಆಡಲಾಗುತ್ತಿಲ್ಲ. ಅವರ ಶೀಘ್ರ ಚೇತರಿಕೆಗೆ ನಾವು ಹಾರೈಸುತ್ತೇವೆ' ಎಂದು ಕಿಂಗ್ಸ್ ಸಾಮಾಜಿಕ ಜಾಲತಾಣದಲ್ಲಿ ಸಂದೇಶ ಹಾಕಿದೆ.

ಮ್ಯಾಕ್ಸ್‌ವೆಲ್ ಪಾಲಿಗೆ ಈ ಬಾರಿಯ ಐಪಿಎಲ್ ನಿರಾಶಾದಾಯಕವಾಗಿ ಪರಿಣಮಿಸಿದೆ. ಏಳು ಪಂದ್ಯಗಳಲ್ಲಿ ಅವರು ಗಳಿಸಿದ್ದು ಬರೇ 48 ರನ್‌ಗಳನ್ನು. ಇದರ ಜೊತೆಗೆ ನಾಲ್ಕು ವಿಕೆಟ್‌ಗಳನ್ನು ಪಡೆದಿದ್ದಾರೆ. ಮ್ಯಾಕ್ಸ್‌ವೆಲ್ ಬದಲು ಸೂಕ್ತ ಆಟಗಾರನ ಸೇರ್ಪಡೆಗೆ ಯತ್ನ ಜಾರಿಯಲ್ಲಿದೆ ಎಂದು ಕಿಂಗ್ಸ್ ಕೋಚ್ ರಿಕಿ ಪಾಂಟಿಂಗ್ ಹೇಳಿದರು.

ಶರ್ಮಾ ಅಲಭ್ಯ: ರಾಜಸ್ಥಾನ ರಾಯಲ್ಸ್ ತಂಡದ ಮಧ್ಯಮ ವೇಗದ ಬೌಲರ್ ಸಂದೀಪ್ ಶರ್ಮಾ ಬೆರಳಿನ ಮೂಳೆ ಮುರಿತದಿಂದ ಐಪಿಎಲ್‌ನ ಉಳಿದ ಪಂದ್ಯಗಳಿಗೆ ಅಲಭ್ಯರಾಗಿದ್ದಾರೆ. ಅವರು ಈ ಬಾರಿ ಆಡಿದ 10 ಪಂದ್ಯಗಳಲ್ಲಿ 9 ವಿಕಟ್ ಪಡೆದಿದ್ದರು.

ವಿಘ್ನೇಶ್ ಬದಲು ರಘು ಶರ್ಮಾ



ಗ್ಲೆನ್ ಮ್ಯಾಕ್ಸ್‌ವೆಲ್



ವಿಘ್ನೇಶ್ ಪುತ್ತೂರು

(ನವದೆಹಲಿ ವರದಿ): ಮೊಣಗಂಟಿನ ಮೂಳೆ ನೋವಿನಿಂದಾಗಿ ಮುಂಬೈ ಇಂಡಿಯನ್ಸ್ ತಂಡದ ಎಡಗೈ ಸ್ಪಿನ್ನರ್ ವಿಘ್ನೇಶ್ ಪುತ್ತೂರು ಅವರೂ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ. ಅವರ ಬದಲು ತಂಡವು ಲೆಗ್‌ಸ್ಪಿನ್ನರ್ ರಘು ಶರ್ಮಾ ಅವರನ್ನು ಸೇರ್ಪಡೆ ಮಾಡಿಕೊಂಡಿದೆ.

31 ವರ್ಷದ ರಘು ಶರ್ಮಾ ಅವರು ಮುಂಬೈ ನೆರವು ಸಿಬ್ಬಂದಿ ತಂಡದಲ್ಲಿದ್ದರು. ಈಗ ಅವರು ಮುಖ್ಯ ತಂಡವನ್ನು ಸೇರಿಕೊಳ್ಳಲಿದ್ದಾರೆ. ದೇಶೀಯ ಕ್ರಿಕೆಟ್‌ನಲ್ಲಿ ಅವರು ಪುದುಚೇರಿ ತಂಡಕ್ಕೆ ಆಡುತ್ತಾರೆ. ಅವರು 11 ಪ್ರಥಮ ದರ್ಜೆ ಪಂದ್ಯಗಳಿಂದ 19.59 ಸರಾಸರಿಯಲ್ಲಿ 57 ವಿಕೆಟ್‌ಗಳನ್ನು ಪಡೆದಿದ್ದಾರೆ. 56ಕ್ಕೆ7 ಅವರ ಶ್ರೇಷ್ಠ ಸಾಧನೆ.

ವಿಘ್ನೇಶ್ ಈ ಋತುವಿನಲ್ಲಿ ಆರು ವಿಕೆಟ್‌ಗಳನ್ನು ಪಡೆದಿದ್ದರು. ಚೆನ್ನೈ ವಿರುದ್ಧ ಮೂರು ವಿಕೆಟ್‌ಗಳನ್ನು ಪಡೆದು ಗಮನಸೆಳೆದಿದ್ದರು.

ಅವಕಾಶ ಪಡೆದ ಪ್ರತಾಪ್ ಲಾಕ್ರಾ, ಉತ್ತಮ್ ಸಿಂಗ್

ರಾಷ್ಟ್ರೀಯ ಶಿಬಿರದಲ್ಲಿ 2 ಹೊಸಮುಖ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಭಾರತ ಕ್ರೀಡಾ ಪ್ರಾಧಿಕಾರದ ಕೇಂದ್ರದಲ್ಲಿ ನಡೆಯುತ್ತಿರುವ ಪುರುಷರ ಸೀನಿಯರ್ ಹಾಕಿ ತಂಡದ ತರಬೇತಿ ಶಿಬಿರಕ್ಕೆ ಎರಡು ಹೊಸಮುಖಗಳ ಸೇರ್ಪಡೆಯಾಗಿದೆ. ಡಿಫೆಂಡರ್ ಪ್ರತಾಪ್ ಲಾಕ್ರಾ (ಮಧ್ಯಪ್ರದೇಶ)ಮತ್ತು ಉತ್ತಮ್ ಸಿಂಗ್ (ಉತ್ತರಪ್ರದೇಶ) ಅವರು ಶಿಬಿರದಲ್ಲಿರುವ 38 ಪ್ರಮುಖ ಆಟಗಾರರನ್ನು ಸೇರಿಕೊಳ್ಳಲಿದ್ದಾರೆ.

ಏಪ್ರಿಲ್ 25ರಂದು ಶಿಬಿರ ಆರಂಭವಾದಾಗ 54 ಮಂದಿ ಸಂಭವನೀಯರು ಭಾಗಿಯಾಗಿದ್ದರು. ಒಂದು ವಾರದ ಮೌಲ್ಯಮಾಪನದ ನಂತರ ಆಟಗಾರರ ಸಂಖ್ಯೆಯನ್ನು 40ಕ್ಕೆ ಇಳಿಸಲಾಗಿದೆ. ಆಟಗಾರರ ಇತ್ತೀಚಿನ ನಿರ್ವಹಣೆ ಮತ್ತು ಫಾರ್ಮ್ ಅನ್ನು ಮಾನದಂಡವಾಗಿ ಇಟ್ಟುಕೊಳ್ಳಲಾಯಿತು.

38 ಆಟಗಾರರು ಈ ಹಿಂದೆಯೆ ಶಿಬಿರದಲ್ಲಿದ್ದ ಅನುಭವಿಗಳು. ಪ್ರತಾಪ್ ಮತ್ತು ಉತ್ತಮ್ 15ನೇ ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಲ್ಲಿ ತೋರಿದ ಅಮೋಘ ಸಾಧನೆ ಮತ್ತು ಶಿಬಿರದ ಆರಂಭದಲ್ಲಿ ತೋರಿದ ನಿರ್ವಹಣೆಯ ಆಧಾರದಲ್ಲಿ ಅಂತಿಮ ಶಿಬಿರಕ್ಕೆ ಆಯ್ಕೆಯಾಗಿದ್ದಾರೆ.

ಕೃಷನ್ ಬಹಾದ್ದೂರ್ ಪಾಠಕ್, ಸೂರಜ್ ಕರ್ಕೇರಾ, ಪವನ್ ಮತ್ತು ಮೋಹಿತ್ ಹೊನ್ನೇನಹಳ್ಳಿ ಶಶಿಕುಮಾರ್ ಅವರು ಶಿಬಿರದಲ್ಲಿರುವ ಗೋಲ್‌ಕೀಪರ್‌ಗಳಾಗಿದ್ದಾರೆ.

ರಕ್ಷಣೆ ವಿಭಾಗದಲ್ಲಿ ಅನುಭವಿಗಳಾದ ಅಮಿತ್ ರೋಹಿದಾಸ್, ವರುಣ್ ಕುಮಾರ್, ಜುಗರಾಜ್ ಸಿಂಗ್, ನೀಲಂ ಸಂಜೀಪ್ ಕ್ಸೆಸ್, ಅಮನ್‌ದೀಪ್ ಲಾಕ್ರಾ, ಹರ್ಮನ್‌ಪ್ರೀತ್ ಸಿಂಗ್, ಜರ್ಮನ್‌ಪ್ರೀತ್ ಸಿಂಗ್, ಸಂಜಯ್, ಯಶದೀಪ್ ಸಿವಾಚ್, ಮೊಹಮ್ಮದ್ ರಾಹಿಲ್ ಮೌಸೀನ್ ಜೊತೆಗೆ ಹೊಸ ಮುಖ ಲಾಕ್ರಾ ಸೇರ್ಪಡೆಗೊಂಡಿದ್ದಾರೆ.

ಮಿಡ್‌ಫೀಲ್ಡ್ ವಿಭಾಗದಲ್ಲಿ ರಾಜಕುಮಾರ್ ಪಾಲ್, ನೀಲಕಂಠ ಶರ್ಮಾ, ಹಾರ್ದಿಕ್ ಸಿಂಗ್, ಸುಮಿತ್, ಮೊಯಿರಂಗ್‌ಥೆಮ್ ರವಿಚಂದ್ರ ಸಿಂಗ್, ಪೂವಣ್ಣ ಚಂದುರಾ ಬಾಬಿ, ರಾಜಿಂದರ್ ಸಿಂಗ್, ವಿಷ್ಣುಕಾಂತ್ ಸಿಂಗ್, ಮನ್‌ಪ್ರೀತ್ ಸಿಂಗ್, ವಿವೇಕ್ ಸಾಗರ್ ಪ್ರಸಾದ್ ಮತ್ತು ಶಂಶೇರ್ ಸಿಂಗ್ ಶಿಬಿರದಲ್ಲಿದ್ದಾರೆ.

ಫಾರ್ವರ್ಡ್ ವಿಭಾಗದಲ್ಲಿ ಗುರ್ಜಂತ್ ಸಿಂಗ್, ಅಭಿಷೇಕ್, ಶಿಲಾನಂದ ಲಾಕ್ರಾ, ಆದಿತ್ಯ ಅರ್ಜುನ್ ಲಾಲಗೆ, ಬಾಬಿ ಸಿಂಗ್ ಧಾಮಿ, ಸೆಲ್ವಂ ಕಾರ್ತಿ, ಸುನೀಲ್ ಜೋಜೊ, ಮನ್‌ದೀಪ್ ಸಿಂಗ್, ಲಲಿತ್ ಕುಮಾರ್ ಉಪಾಧ್ಯಾಯ, ದಿಲ್‌ಪ್ರೀತ್ ಸಿಂಗ್, ಸುಖಜೀತ್ ಸಿಂಗ್, ಸುದೀಪ್ ಚಿರ್ಮಾಕೊ, ಅಂಗದ್‌ವೀರ್ ಸಿಂಗ್ ಜೊತೆಗೆ ಹೊಸದಾಗಿ ಉತ್ತಮ ಸಿಂಗ್ ಅವರು ಶಿಬಿರ ಸೇರಿದ್ದಾರೆ.



ಪುರಸ್ಕಾರ

ಖೇಲ್ ರತ್ನ ಪ್ರದಾನ

ಭಾರತದ ಅಗ್ರಮಾನ್ಯ ಬ್ಯಾಡ್ಮಿಂಟನ್ ಜೋಡಿ ಚಿರಾಗ್ ಶೆಟ್ಟಿ ಮತ್ತು ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಅವರಿಗೆ ಮೇಜರ್ ಧ್ಯಾನ್‌ಚಂದ್ ಖೇಲ್ ರತ್ನ ಪುರಸ್ಕಾರವನ್ನು ಕ್ರೀಡಾ ಸಚಿವ ಮನ್ಸುಖ್ ಮಾಂಡವೀಯ ಗುರುವಾರ ನವದೆಹಲಿಯಲ್ಲಿ ಪ್ರದಾನ ಮಾಡಿದರು. ರಾಷ್ಟ್ರಪತಿ ಭವನದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಭಾಗವಹಿಸಲು ಆಟಗಾರರಿಗೆ ಸಾಧ್ಯವಾಗಿರಲಿಲ್ಲ ಪಿಟಿಐ ಚಿತ್ರ

ಟೇಬಲ್ ಟೆನಿಸ್: ಅಥರ್ವಗೆ 3 ಚಿನ್ನ



ಬೆಂಗಳೂರು: ಕರ್ನಾಟಕದ ಟೇಬಲ್ ಟೆನಿಸ್ ಆಟಗಾರ ಅಥರ್ವ ಅವರು ನೇಪಾಳದಲ್ಲಿ ನಡೆದ ದಕ್ಷಿಣ ಏಷ್ಯನ್ ಯೂತ್ ಚಾಂಪಿಯನ್‌ಷಿಪ್‌ನಲ್ಲಿ ಮೂರು ಚಿನ್ನದ ಪದಕ ಗೆದ್ದಿದ್ದಾರೆ.

ತಂಡ ವಿಭಾಗ, ಮಿಶ್ರ ಡಬಲ್ಸ್, ಬಾಲಕರ ಡಬಲ್ಸ್‌ನಲ್ಲಿ ಅಥರ್ವ ಚಿನ್ನ ಗೆದ್ದರೆ, ಸಿಂಗಲ್ಸ್‌ನಲ್ಲಿ ಕಂಚು ಜಯಿಸಿದರು.

15 ವರ್ಷದೊಳಗಿನ ಭಾರತ ತಂಡವನ್ನು ಅಥರ್ವ ಮುನ್ನಡೆಸಿದ್ದರು. ಫೈನಲ್‌ನಲ್ಲಿ ಭಾರತ 3-1ರಿಂದ ನೇಪಾಳ ತಂಡವನ್ನು ಮಣಿಸಿತು. ಮಿಶ್ರ ಡಬಲ್ಸ್‌ನಲ್ಲಿ ಅಥರ್ವ ಮತ್ತು ಪ್ರತೀತಿ ಪಾಲ್ 3-0 ಯಿಂದ ಪಾಕಿಸ್ತಾನ ಆಟಗಾರರನ್ನು ಸೋಲಿಸಿದರು. ಬಾಲಕರ ಡಬಲ್ಸ್‌ನಲ್ಲಿ ವಿಶ್ರುತ್ ರಾಮಕೃಷ್ಣನ್ ಅವರ ಜೊತೆಗೂಡಿ ಅಥರ್ವ 3-0 ಯಿಂದ ನೇಪಾಳದ ಆಟಗಾರರನ್ನು ಮಣಿಸಿದರು.

ಬೆಂಗಳೂರಿನಲ್ಲಿ 24ರಂದು ನಡೆಯಲಿರುವ ಸ್ಪರ್ಧೆ

ನೀರಜ್ ಚೋಪ್ರಾ ಕ್ಲಾಸಿಕ್‌ಗೆ ಜೇನಾ

ನವದೆಹಲಿ (ಪಿಟಿಐ): ಏಷ್ಯನ್ ಕ್ರೀಡೆಗಳ ಬೆಳ್ಳಿ ಪದಕ ವಿಜೇತ ಕಿಶೋರ್ ಜೇನಾ ಅವರು ನೀರಜ್ ಚೋಪ್ರಾ ಕ್ಲಾಸಿಕ್ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ ಭಾಗವಹಿಸಲಿದ್ದಾರೆ ಎಂದು ಆಯೋಜಕರು ಗುರುವಾರ ತಿಳಿಸಿದ್ದಾರೆ. ಇದರಿಂದ ಭಾಗವಹಿಸುವ ಸ್ಪರ್ಧಿಗಳ ಸಂಖ್ಯೆ 12ಕ್ಕೆ ಏರಿದ್ದು, ಇವರಲ್ಲಿ ಭಾರತದ ಐವರು ಒಳಗೊಂಡಿದ್ದಾರೆ.

ಈ ಪ್ರತಿಷ್ಠಿತ ಸ್ಪರ್ಧೆಯು ಮೇ 24ರಂದು ಬೆಂಗಳೂರಿನ ಶ್ರೀ ಕಂಠೀರವ ಕ್ರೀಡಾಂಗಣದಲ್ಲಿ ನಡೆಯಲಿದೆ. ಒಲಿಂಪಿಕ್ಸ್‌ನಲ್ಲಿ ಎರಡು ಪದಕಗಳನ್ನು ಗೆದ್ದಿರುವ ನೀರಜ್ ಚೋಪ್ರಾ ಜೊತೆ ಉದಯೋನ್ಮುಖ ತಾರೆಯರಾದ ಸಚಿನ್ ಯಾದವ್, ರೋಹಿತ್ ಯಾದವ್, ಸಾಹಿಲ್ ಸಿಲ್ವಾಲ್ ಅವರು ಈ ಮೊದಲೇ ಭಾಗವಹಿಸುವ ಸ್ಪರ್ಧಿಗಳ ಪಟ್ಟಿಯಲ್ಲಿದ್ದರು. ಈಗ 29 ವರ್ಷದ ಜೇನಾ ಕೂಡ ಈ ಪಟ್ಟಿಯಲ್ಲಿ ಸೇರಿಕೊಂಡಿದ್ದಾರೆ.



ಕಿಶೋರ್ ಜೇನಾ

ಹಾಂಗ್‌ಝೌ ಏಷ್ಯನ್ ಕ್ರೀಡೆಗಳಲ್ಲಿ ನೀರಜ್ ಚಿನ್ನ ಗೆದ್ದರೆ, ಜೇನಾ 87.54 ಮೀ.ಗಳ ವೈಯಕ್ತಿಕ ಶ್ರೇಷ್ಠ ಥ್ರೋದೊಡನೆ ಬೆಳ್ಳಿ ಪದಕ ತಮ್ಮದಾಗಿಸಿಕೊಂಡಿದ್ದರು.

ಕ್ಲಾಸಿಕ್ ಸ್ಪರ್ಧೆಗೆ ವಿಶ್ವ ಅಥ್ಲೆಟಿಕ್ಸ್ 'ಎ' ಕೆಟಗರಿ ಸ್ಥಾನಮಾನ ನೀಡಿದೆ. ಈ ಕೂಟವನ್ನು ನೀರಜ್ ಚೋಪ್ರಾ ಮತ್ತು ಜೆಎಸ್‌ಡಬ್ಲ್ಯು ಸ್ಪೋರ್ಟ್ಸ್ ಜಂಟಿಯಾಗಿ ಭಾರತ ಅಥ್ಲೆಟಿಕ್ ಫೆಡರೇಷನ್ ಸಹಯೋಗದಲ್ಲಿ ನಡೆಸುತ್ತಿದೆ.

ಎರಡು ಬಾರಿಯ ವಿಶ್ವ ಚಾಂಪಿಯನ್, ಗ್ರೆನೆಡಾದ ಆ್ಯಂಡರ್ಸನ್ ಪೀಟರ್ಸ್ (ವೈಯಕ್ತಿಕ ಶ್ರೇಷ್ಠ ಥ್ರೊ: 93.07 ಮೀ), 2016ರ ರಿಯೊ ಒಲಿಂಪಿಕ್ಸ್ ಸ್ವರ್ಣ ವಿಜೇತ ಜರ್ಮನಿಯ ಥಾಮಸ್ ರೋಹ್ಲರ್ (ವೈಯಕ್ತಿಕ ಶ್ರೇಷ್ಠ 93.90 ಮೀ.), 2015ರ ವಿಶ್ವ ಚಾಂಪಿಯನ್, ಕೆನ್ಯಾದ ಜೂಲಿಯಸ್ ಯೇಗೊ (ಶ್ರೇಷ್ಠ ಥ್ರೊ: 92.72 ಮೀ.) ಭಾಗವಹಿಸುವ ವಿಶ್ವಖ್ಯಾತ ಸ್ಪರ್ಧಿಗಳಲ್ಲಿ ಒಳಗೊಂಡಿದ್ದಾರೆ. ಕರ್ಟಿಸ್ ಅವರು 87.56 ಮೀ. ದೂರ ಎಸೆದು ಈ ಋತುವಿನಲ್ಲಿ ಅಗ್ರಸ್ಥಾನ ಪಡೆದಿದ್ದಾರೆ.

ಸುದೀರ್‌ಮನ್ ಕಪ್: ಭಾರತ ತಂಡಕ್ಕೆ ಸಮಾಧಾನಕರ ಜಯ

ಷಾಮೆನ್ (ಚೀನಾ), (ಪಿಟಿಐ): ವಿಶ್ವ ಬ್ಯಾಡ್ಮಿಂಟನ್ ಫೆಡರೇಷನ್‌ನ ಸುದೀರ್‌ಮನ್ ಕಪ್ ಫೈನಲ್ 'ಡಿ' ಗುಂಪಿನ ಪಂದ್ಯದಲ್ಲಿ ಭಾರತ ತಂಡ ಗುರುವಾರ 3-2 ರಿಂದ ಇಂಗ್ಲೆಂಡ್ ತಂಡವನ್ನು ಮಣಿಸಿ ಸಮಾಧಾನಕರ ಗೆಲುವು ಪಡೆಯಿತು. ಈ ಎರಡೂ ತಂಡಗಳು ನಾಕೌಟ್ ಅವಕಾಶದಿಂದ ಈ ಮೊದಲೇ ಹೊರಬಿದ್ದ ಕಾರಣ ಪಂದ್ಯ ಮಹತ್ವ ಕಳೆದುಕೊಂಡಿತ್ತು.

ಭಾರತ 'ಡಿ' ಗುಂಪಿನಲ್ಲಿ ಇದಕ್ಕೆ ಮೊದಲು ಆಡಿದ್ದ ಎರಡೂ ಪಂದ್ಯಗಳನ್ನು ಸೋತಿದ್ದರಿಂದ ನಾಕೌಟ್ ರೇಸ್‌ನಿಂದ ಹೊರಬಿದ್ದಿತ್ತು. ಷಾಮೆನ್‌ನ ಫೆಂಗ್‌ಹುವಾಂಗ್ ಜಿಮ್ನೇಷಿಯಂನಲ್ಲಿ ನಡೆದ ಮೊದಲ ಪಂದ್ಯದಲ್ಲಿ ಡೆನ್ಮಾರ್ಕ್ ಮತ್ತು ಎರಡನೇ ಪಂದ್ಯದಲ್ಲಿ ಇಂಡೊನೇಷ್ಯಾ ಎದುರು 1-4 ಸಮಾನ ಅಂತರದ ಸೋಲು ಕಂಡಿತ್ತು. ಇಂಗ್ಲೆಂಡ್ ಸಹ ಗುಂಪಿನ ಎರಡೂ ಪಂದ್ಯಗಳಲ್ಲಿ ಪರಾಭವಗೊಂಡಿತ್ತು.



ಸತೀಶ್ ಕುಮಾರ್ ಕರುಣಾಕರನ್

ಜೂನಿಯರ್ ಬಾಕ್ಸಿಂಗ್‌ಗೆ ತೆರೆ: ಭಾರತಕ್ಕೆ 43 ಪದಕ

ಅಮ್ಮಾನ್ (ಜೋರ್ಡನ್) (ಪಿಟಿಐ): ಭಾರತದ ಉದಯೋನ್ಮುಖ ಬಾಕ್ಸರ್‌ಗಳು ಇಲ್ಲಿ ನಡೆದ ಜೂನಿಯರ್ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಕೊನೆಯ ದಿನವಾದ ಗುರುವಾರ 17 ವರ್ಷದೊಳಗಿನವರ ವಿಭಾಗದಲ್ಲಿ ನಾಲ್ಕು ಚಿನ್ನದ ಪದಕಗಳನ್ನು ಗೆದ್ದು, ಪದಕ ಪಟ್ಟಿಯಲ್ಲಿ ಎರಡನೇ ಸ್ಥಾನದೊಂದಿಗೆ ಅಭಿಯಾನ ಮುಗಿಸಿದರು.

ಕೂಟದಲ್ಲಿ ಭಾರತವು 15 ಚಿನ್ನ, 6 ಬೆಳ್ಳಿ ಮತ್ತು 22 ಕಂಚಿನ ಪದಕವನ್ನು ಗೆದ್ದಿದೆ.

ಪದಕ ಪಟ್ಟಿಯಲ್ಲಿ ಕಜಕಸ್ತಾನ ಅಗ್ರಸ್ಥಾನ ಪಡೆದರೆ, ಉಜ್ಬೇಕಿಸ್ತಾನ ಮೂರನೇ ಸ್ಥಾನ ಗಳಿಸಿತು.

17 ವರ್ಷದೊಳಗಿನವರ ವಿಭಾಗದಲ್ಲಿ ಬಾಲಕಿಯರು ನಾಲ್ಕು ಚಿನ್ನ ಗೆದ್ದರು. ಖುಷಿ ಚಂದ್ (46 ಕೆ.ಜಿ), ಅಹಾನಾ ಶರ್ಮಾ (50 ಕೆ.ಜಿ) ಮತ್ತು ಜನ್ನತ್ (54 ಕೆ.ಜಿ), ಅನ್ನಿಕಾ (80 + ಕೆ.ಜಿ) ಸ್ವರ್ಣ ಗೆದ್ದರು. ಸಿಮ್ರನ್‌ಜೀತ್ ಕೌರ್ (60 ಕೆ.ಜಿ) ಮತ್ತು ಹರ್ಷಿಕಾ (63 ಕೆ.ಜಿ) ಬೆಳ್ಳಿ ಪದಕ ಗೆದ್ದರು.

ಬಾಲಕರ ವಿಭಾಗದಲ್ಲಿ ದೇವಾಂಶ್ (80 ಕೆ.ಜಿ) ಬೆಳ್ಳಿಗೆ ಕೊರಳೊಡ್ಡಿದರು.

15 ವರ್ಷದೊಳಗಿನವರ ವಿಭಾಗದಲ್ಲಿ ಭಾರತದ ಬಾಕ್ಸರ್‌ಗಳು 11 ಚಿನ್ನ, 3 ಬೆಳ್ಳಿ ಮತ್ತು 11 ಕಂಚು ಸೇರಿದಂತೆ ಒಟ್ಟು 25 ಪದಕಗಳನ್ನು ಬುಧವಾರ ಗೆದ್ದಿದ್ದರು.

ಸಂಕ್ಷಿಪ್ತ ಸುದ್ದಿ

ಹಾಕಿ: ಆಸ್ಟ್ರೇಲಿಯಾಕ್ಕೆ ಮಣಿದ ಭಾರತ

ಪರ್ತ್ (ಪಿಟಿಐ): ಭಾರತದ ವನಿತೆಯರು ಗುರುವಾರ ನಡೆದ ಹಾಕಿ ಪಂದ್ಯದಲ್ಲಿ 0-2ರಿಂದ ಆಸ್ಟ್ರೇಲಿಯಾ ವಿರುದ್ಧ ಪರಾಭವಗೊಂಡರು. ಮೂರು ಪಂದ್ಯಗಳ ಸರಣಿಯಲ್ಲಿ ಆತಿಥೇಯ ತಂಡವು 1-0 ಮುನ್ನಡೆಪಡೆಯಿತು.

ಪರ್ತ್ ಹಾಕಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಹರೇಂದ್ರ ಸಿಂಗ್ ಮಾರ್ಗದರ್ಶನದ ಭಾರತ ತಂಡವು ಕಠಿಣ ಹೋರಾಟ ನಡೆಸಿದರೂ, ಎದುರಾಳಿ ತಂಡದ ಸಾಂಘಿಕ ಆಟದ ಮುಂದೆ ಮಣಿಯಿತು.

ಪಂದ್ಯದ ಒಂಬತ್ತನೇ ನಿಮಿಷದಲ್ಲಿ ಕೋರ್ಟ್ನಿ ಸ್ಕೋನೆಲ್ ಅವರು ಫೀಲ್ಡ್ ಗೋಲು ಮೂಲಕ ಆತಿಥೇಯ ತಂಡಕ್ಕೆ ಮುನ್ನಡೆ ಒದಗಿಸಿದರು. ಕೊನೆಯ ಕ್ವಾರ್ಟರ್‌ನಲ್ಲಿ ಗ್ರೇಸ್ ಸ್ಟೀವರ್ಟ್ (52ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿ ಆಸ್ಟ್ರೇಲಿಯಾ ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

ಭಾರತಕ್ಕೆ 2 ಕಂಚು

ಲಿಮಾ(ಪೆರು), (ಪಿಟಿಐ): ಭಾರತ ತಂಡದ ವೇಟ್‌ಲಿಫ್ಟರ್‌ಗಳು ಐಡಬ್ಲ್ಯುಎಫ್ ಯೂತ್ ಮತ್ತು ಜೂನಿಯರ್ ವಿಶ್ವ ವೇಟ್‌ಲಿಫ್ಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಎರಡು ಕಂಚಿನ ಪದಕಗಳನ್ನು ಗೆದ್ದುಕೊಂಡರು.

ಜ್ಯೋತ್ಸ್ನಾ ಸಾಬರ್ ಅವರು ಯುವ ಬಾಲಕಿಯರ 40 ಕೆ.ಜಿ. ಕೆಟಗರಿಯಲ್ಲಿ ಒಟ್ಟು 129 ಕೆ.ಜಿ (56ಕೆಜಿ + 72 ಕೆಜಿ) ಭಾರ ಎತ್ತಿ ಕಂಚಿನ ಪದಕ ಗೆದ್ದುಕೊಂಡರು. ಅವರು ಬುಧವಾರ ನಡೆದ ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ಬೆಳ್ಳಿ ಪದಕ ಗೆದ್ದಿದ್ದರು.

ಯುವ ಬಾಲಕರ ವಿಭಾಗದ 49 ಕೆ.ಜಿ. ಕೆಟಗರಿಯಲ್ಲಿ ಹರ್ಷವರ್ಧನ್ ಸಾಹು ಒಟ್ಟು 197 ಕೆ.ಜಿ. ಭಾರ ಎತ್ತಿ ಮೂರನೇ ಸ್ಥಾನ ಪಡೆದರು. ಕ್ಲೀನ್ ಮತ್ತು ಜರ್ಕ್ ವಿಭಾಗದಲ್ಲಿ ಅವರು ಇದಕ್ಕೆ ಮೊದಲು ಕಂಚಿನ ಪದಕ ಪಡೆದಿದ್ದರು. ಒಲಿಂಪಿಕ್ಸ್ ಮಾದರಿಗೆ ಭಿನ್ನವಾಗಿ ವಿಶ್ವ ಚಾಂಪಿಯನ್‌ಷಿಪ್ಸ್‌ನಲ್ಲಿ ಸ್ನ್ಯಾಚ್, ಕ್ಲೀನ್ ಮತ್ತು ಜರ್ಕ್ ಮತ್ತು ಒಟ್ಟಾರೆ ತೂಕ ವಿಭಾಗದಲ್ಲಿ ಪ್ರತ್ಯೇಕವಾಗಿ ಪದಕಗಳನ್ನು ನೀಡಲಾಗುತ್ತದೆ.

ಸ್ನೈಪರ್ಸ್‌ಗೆ ಜಯ

ಬೆಂಗಳೂರು: ಸುಭೇಶ್ ಕೆ. ಅವರ ಅಮೋಘ ಆಟದ ನೆರವಿನಿಂದ ಸ್ನೈಪರ್ಸ್ ಎಫ್‌ಎಸ್ ತಂಡವು ಬಿಡಿಎಫ್‌ಎ ಎ ಡಿವಿಷನ್ ಫುಟ್‌ಬಾಲ್ ಲೀಗ್ ಪಂದ್ಯದಲ್ಲಿ 8-2 ಗೋಲುಗಳಿಂದ ಆರ್‌ಡಬ್ಲ್ಯುಎಫ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ಗುರುವಾರ ನಡೆದ ಪಂದ್ಯದಲ್ಲಿ ಸ್ನೈಪರ್ಸ್ ಪರ ಸುಭೇಶ್ (38ನೇ, 53ನೇ, 56ನೇ, 58ನೇ) ನಾಲ್ಕು ಗೋಲು ಗಳಿಸಿದರು. ಅಭಿಲ್ ಎ.ಟಿ. (17ನೇ, 33ನೇ), ಶಾಹಿಲ್ (67ನೇ, 83ನೇ) ತಲಾ ಎರಡು ಗೋಲು ತಂದಿತ್ತರು. ಆರ್‌ಡಬ್ಲ್ಯುಎಫ್ ಪರ ರಾಜೇಶ್ ಎಸ್. (20ನೇ, 59ನೇ) ಗೋಲು ದಾಖಲಿಸಿದರು.

ದಿನದ ಮತ್ತೊಂದು ಪಂದ್ಯದಲ್ಲಿ ಬ್ಲಿಟ್ಜ್ ಎಫ್‌ಸಿ 9-4ರಿಂದ ಯಂಗ್ ಚಾಲೆಂಜರ್ಸ್ ಎಫ್‌ಸಿ ತಂಡವನ್ನು ಸೋಲಿಸಿತು. ಬ್ಲಿಟ್ಜ್ ಪರ ವಿವೇಕ್ ಸಿಂಗ್ (2ನೇ, 61ನೇ, 70ನೇ, 81ನೇ) ನಾಲ್ಕು ಗೋಲು ದಾಖಲಿಸಿದರು. ಟೆನ್ಜಿನ್ ವೋಸರ್ (24ನೇ, 44ನೇ, 85ನೇ) ಮೂರು ಗೋಲು ಹೊಡೆದರು. ಆರ್ಯ ಎಸ್. ಶೆಟ್ಟಿ (13ನೇ) ಮತ್ತು ಪ್ರವರುತ್ ಬಿ ಎಚ್ (62ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಚಾಲೆಂಜರ್ಸ್ ಪರ ರಾಜು ಜಿ. (7ನೇ, 12ನೇ, 65ನೇ, 90 + 1ನೇ) ನಾಲ್ಕು ಗೋಲು ಬಾರಿಸಿದರು.